ಮುಕ್ಕುಂದಿ ಇತಿಹಾಸ

ಶಾಸನ ಮತ್ತು ದೇವಾಲಯಗಳನ್ನು ಅನುಲಕ್ಷಿಸಿ

(ಕನ್ನಡ ವಿಶ್ವವಿದ್ಯಾಲಯ, ಹಂಪಿ, ಶಾಸನಶಾಸ್ತ್ರ ವಿಭಾಗಕ್ಕೆ
ಎಂ.ಫಿಲ್.ಪದವಿಗಾಗಿ ಸಲ್ಲಿಸುತ್ತಿರುವ ನಿಬಂಧ)

ಸಂಶೋಧಕ
ಜಿ.ತಿರುಪತಿ

ಮಾರ್ಗದರ್ಶಕರು
ಡಾ.ಎಂ.ಕೊಟ್ರೇಶ್
ಅಧ್ಯಾಪಕರು, ಶಾಸನಶಾಸ್ತ್ರ ವಿಭಾಗ

ಶಾಸನಶಾಸ್ತ್ರ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಜೂನ್ ೨೦೦೭

173

173

173

(173)

ಮುಕ್ಕುಂದಿ ಇತಿಹಾಸ

ಶಾಸನ ಮತ್ತು ದೇವಾಲಯಗಳನ್ನು ಅನುಲಕ್ಷಿಸಿ

(ಕನ್ನಡ ವಿಶ್ವವಿದ್ಯಾಲಯ, ಹಂಪಿ, ಶಾಸನಶಾಸ್ತ್ರ ವಿಭಾಗಕ್ಕೆ
ಎಂ.ಫಿಲ್.ಪದವಿಗಾಗಿ ಸಲ್ಲಿಸುತ್ತಿರುವ ನಿಬಂಧ)

ಸಂಶೋಧಕ
ಜಿ.ತಿರುಪತಿ

ಮಾರ್ಗದರ್ಶಕರು
ಡಾ.ಎಂ.ಕೊಟ್ರೇಶ್
ಅಧ್ಯಾಪಕರು, ಶಾಸನಶಾಸ್ತ್ರ ವಿಭಾಗ

ಶಾಸನಶಾಸ್ತ್ರ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಜೂನ್ ೨೦೦೭

ಮಾರ್ಗದರ್ಶಕರ ಪ್ರಮಾಣಪತ್ರ

ಮುಕ್ಕುಂದಿ ಇತಿಹಾಸ (ಶಾಸನ ಮತ್ತು ದೇವಾಲಯಗಳನ್ನು ಅನುಲಕ್ಷಿಸಿ) ಎಂಬ ನಿಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್.ಪದವಿಗಾಗಿ ಜಿ.ತಿರುಪತಿ ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಎಂ. ಕೊಟ್ರೇಶ್

ಡಾ. ಎಂ. ಕೊಟ್ರೇಶ್
ಮಾರ್ಗದರ್ಶಕರು
ಶಾಸನಶಾಸ್ತ್ರ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸ್ಥಳ : ವಿದ್ಯಾರಣ್ಯ
ದಿನಾಂಕ : ೨೧-೨-೨೦೦೨.

ಪ್ರಮಾಣ ಪತ್ರ

ಮುಕ್ಕುಂದಿ ಇತಿಹಾಸ (ಶಾಸನ ಮತ್ತು ದೇವಾಲಯಗಳನ್ನು ಅನುಲಕ್ಷಿಸಿ) ಎಂಬ ನಿಬಂಧವನ್ನು ಡಾ. ಎಂ.ಕೊಟ್ರೇಶ್ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಎಂ.ಫಿಲ್ ಪದವಿಗಾಗಿ ಸಮಾಜ ವಿಜ್ಞಾನಗಳ ನಿಕಾಯದ ಶಾಸನಶಾಸ್ತ್ರ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ

ದಿನಾಂಕ : ೨೧-೨-೨೦೦೨

ಜಿ. ತಿರುಪತಿ
ಸಂಶೋಧಕ
ಶಾಸನಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕೃತಜ್ಞತೆಗಳು

ಕನ್ನಡ ವಿಶ್ವವಿದ್ಯಾಲಯದಲ್ಲಿ ಎಂ.ಫಿಲ್.ಪದವಿಗೆ ಅವಕಾಶ ಮಾಡಿಕೊಟ್ಟ ಮಾನ್ಯ ಕುಲಪತಿಗಳಾಗಿದ್ದ ಡಾ.ಬಿ.ಎ.ವಿವೇಕ ರೈ, ಡಾ.ಕೆ.ವಿ.ನಾರಾಯಣ, ಮಾನ್ಯ ಕುಲಸಚಿವರಾದ ಶ್ರೀ ವಿ.ಶಂಕರ್ ಹಾಗೂ ಅಧ್ಯಯನಾಂಗದ ನಿರ್ದೇಶಕರಾದ ಡಾ.ಟಿ.ಆರ್.ಚಂದ್ರಶೇಖರ, ಡಾ.ಡಿ. ಪಾಂಡುರಂಗಬಾಬು ಅವರಿಗೆ,

ಈ ಅಧ್ಯಯನದ ಕ್ರಮವನ್ನು ಬೋಧಿಸಿ ಪ್ರೀತಿಯಿಂದ ನನ್ನನ್ನು ಪ್ರೋತ್ಸಾಹಿಸಿ ಸೂಕ್ತ ಸಲಹೆ ಮಾರ್ಗದರ್ಶನ ಮತ್ತು ಪ್ರೇರಣೆಯನ್ನು ನೀಡಿದ ನನ್ನ ಗುರುಗಳು ಹಾಗೂ ಮಾರ್ಗದರ್ಶಕರಾದ ಡಾ.ಎಂ.ಕೊಟ್ರೇಶ್ ಅವರಿಗೆ,

ಶಾಸನಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಹಾಗೂ ನನಗೆ ಎಂ.ಫಿಲ್.ಪ್ರಬಂಧದ ವಿಷಯವನ್ನು ಸೂಚಿಸಿ ಸೂಕ್ತ ಸಲಹೆ ನೀಡಿದ ಗುರುಗಳಾದ ಡಾ.ಡಿ.ವಿ.ಪರಮಶಿವಮೂರ್ತಿ ಮತ್ತು ಪ್ರೀತಿಯಿಂದ ಸಲಹೆ ಸೂಚನೆಗಳನ್ನು ನೀಡಿದ ಗುರುಗಳಾದ ಡಾ.ದೇವರಕೊಂಡಾರೆಡ್ಡಿ, ಡಾ.ಕೆ.ಜಿ.ಭಟ್‌ಸೂರಿ, ಡಾ.ಕಲವೀರಮನ್ವಚಾರ್ ಹಾಗೂ ಆಡಳಿತ ಸಿಬ್ಬಂದಿಗಳಾದ ಶ್ರೀ ಎಲ್.ನಾರಾಯಣನಾಯಕ್, ಮಹಮ್ಮದ್ ಅಲಿ ಅವರುಗಳಿಗೆ,

ನನ್ನ ಅಧ್ಯಯನಕ್ಕೆ ಪ್ರೋತ್ಸಾಹವನ್ನಿತ್ತ ನನ್ನ ಪೂಜ್ಯ ತಂದೆಯವರಾದ ಬಸಪ್ಪಗುಡಗುಂಟಿ, ತಾಯಿ ಹಂಪಮ್ಮ, ಚಿಕ್ಕಪ್ಪ, ಚಿಕ್ಕಮ್ಮ, ಸಹೋದರಿಯರಾದ ಕರಿಬಸಮ್ಮ, ಬೋರಮ್ಮ, ಆದಿ, ಈರಮ್ಮ, ಸಿದ್ದು, ಸಹೋದರರಾದ ಶಿವಬಸಪ್ಪ, ಜಿ.ಅಮರೇಶ, ಅತ್ತಿಗೆಯವರಾದ ಶರಣಮ್ಮ, ಶಿವಬಸಮ್ಮ, ನಮ್ಮ ಕುಟುಂಬದ ಕಣ್ಮಣಿಗಳಾದ ನಂದಿ, ಅಮ್ಮು, ರಾಜಿ, ಚೇತನಾಕುಮಾರಿ, ಶೋಭಾ, ವಿಲಾಸ್, ಅಳಿಯ ಪಾಲಕ್ಷಗೌಡ ಅವರುಗಳಿಗೆ,

ಸ್ನೇಹಿತರಾದ ಗಾದೆಪ್ಪ, ಸರ್ವೋತ್ತಮ, ಛಾಯಾ, ಗಿರಿಜಾ, ಸೂಗಣ್ಣ, ಕೃಷ್ಣೇಗೌಡ, ಕೆ.ಶಂಕರ್, ನಿವೇದಿತಾ, ಚನ್ನಬಸಪ್ಪ, ವೆಂಕಟೇಶ, ಸರಕಾರಿ ಮಹಾವಿದ್ಯಾಲಯದ ಉಪನ್ಯಾಸಕರಿಗೆ ಹಾಗೂ ಪ್ರೀತಿಯ ಗೆಳೆಯರಾದ ಓ.ಬಿ.ಸಿ.ವಸತಿ ನಿಲಯದ ಎಲ್ಲ ನನ್ನ ಸ್ನೇಹಿತರಿಗೆ ಹಾಗೂ ಮುಕ್ಕುಂದಿ ಜನತಗೆ,

ಸಂಶೋಧನೆಗೆ ಪೂರಕವಾದ ಪುಸ್ತಕಗಳನ್ನು ಒದಗಿಸಿದ ಗ್ರಂಥಾಲಯದ ಡಾ.ಕೆ.ರಾಧಕೃಷ್ಣ, ಶ್ರೀಮತಿ ಎಚ್.ನಾಗವೇಣಿ ಹಾಗೂ ಸಿಬ್ಬಂದಿ ವರ್ಗದವರಿಗೆ,


ನನ್ನ ಸಂಪ್ರಬಂಧವನ್ನು ಅಂದವಾಗಿ ಅಕ್ಷರ ಸಂಯೋಜಿಸಿದ ಶ್ರೀಮತಿ ಬಿ.ರಶ್ಮಿಕೃಪಾಶಂಕರ್ ಅವರಿಗೆ

ಕೃತಜ್ಞತೆಗಳು

ಜಿ. ತಿರುಪತಿ


ರಾಯಚೂರು ಜಿಲ್ಲೆ






ಕೃಪೆ : ಡಾ. ದೇವರಕೊಂಡಾರೆಡ್ಡಿ

ಸಿಂಧನೂರು ತಾಲೂಕು
ರಾಯಚೂರು ಜಿಲ್ಲೆ



ಕೃಪೆ : ಡಾ. ದೇವರಕೊಂಡಾರೆಡ್ಡಿ

ಮುಕ್ಕುಂದಿ ಗ್ರಾಮದ ನಕಾಶೆ



೧. ಸಿಂಧನೂರು ರಸ್ತೆ

೨. ಭೈರವೇಶ್ವರ ಕ್ಯಾಂಪ್ ರಸ್ತೆ

೩. ಸಿಂಗಾಪುರ ರಸ್ತೆ

೪. ಮುರಹರಿ ದೇವಸ್ಥಾನ

೫. ಸೋಮಲಿಂಗೇಶ್ವರ

೬. ಪಾಪನಾಥೇಶ್ವರ

೭. ರಾಮಲಿಂಗೇಶ್ವರ

೮. ಕೋಟೆ

೯. ವೀರಭದ್ರೇಶ್ವರ

೧೦. ಅರಳಹಳ್ಳಿ

೧೧. ಕುರ್ತಕೋಟೆ

ಪರಿವಿಡಿ

ಅಧ್ಯಾಯ ೧

ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ

೧

ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ

ಭಾರತವು ಅನೇಕ ರೀತಿಯ ಪುರಾತನ ಸಂಸ್ಕೃತಿಯನ್ನೊಳಗೊಂಡ ಹಳ್ಳಿಗಳಿಂದ ಕೂಡಿದ ದೇಶವಾಗಿದೆ. ಭಾರತಕ್ಕೆ ಉಜ್ವಲ ಮತ್ತು ಸುದೀರ್ಘವಾದ ಇತಿಹಾಸವಿದ್ದು, ಸಮಗ್ರ ಅಧ್ಯಯನ ಇನ್ನೂ ಆಗಬೇಕಾಗಿದೆ. ಸಮಾಜವು ಬದಲಾದಂತೆಲ್ಲಾ ಸಾಮಾಜಿಕ ನಿರ್ಮಾಣಗಳು ಬದಲಾಗಿ ಕಾಲಗರ್ಭದಲ್ಲಿ ಹುದುಗಿಹೋಗುತ್ತವೆ. ಕರ್ನಾಟಕವೂ ಕೂಡಾ ತನ್ನ ಸುದೀರ್ಘವಾದ ಪರಂಪರೆಯನ್ನು ಕಾಲಗರ್ಭದಲ್ಲಿ ಅಡಗಿಸಿಕೊಂಡಿದೆ. ಪುರಾತನ ಸಂಸ್ಕೃತಿಯನ್ನುಳ್ಳ ಕರ್ನಾಟಕವು ಮೊದಲಿನಿಂದಲೂ ಸಹನೆ ವಿವಿಧತೆಯಲ್ಲಿ ಏಕತೆ. ಸಮನ್ವಯತೆಯನ್ನು ಪಾಲಿಸಿಕೊಂಡು ಬಂದಿದೆ. ಇಲ್ಲಿನ ಅರಸರು, ಸಂತರು ಕವಿಗಳು, ಬುದ್ಧಿ ಜೀವಿಗಳು, ಸುಧಾರಕರು, ಬೋಧಕರು, ಕಲಾಕಾರರು ಈ ಅಂಶವನ್ನು ಪೋಷಿಸಿಕೊಂಡು ಬಂದಿದ್ದಾರೆ. ಅದರಲ್ಲೂ ಉತ್ತರ ಕರ್ನಾಟಕ ಭಾಗದಲ್ಲಿ ಧರ್ಮ, ಸಂಸ್ಕೃತಿ, ಕಲೆ, ವಾಸ್ತುಶಿಲ್ಪ, ಸಾಹಿತ್ಯ ಮೊದಲಾದವುಗಳಿಗೆ ಸಮನ್ವಯವೆನಿಸಿದೆ. 'ಗಂಡುಭೂಮಿ', 'ಎಡದೊರೆ ನಾಡು' ಎಂದು ಪ್ರಖ್ಯಾತವಾದ ಜಿಲ್ಲೆ ರಾಯಚೂರು. ಜಿಲ್ಲೆಯು ಐತಿಹಾಸಿಕವಾಗಿ ತನ್ನದೇ ಆದ ಅಸ್ತಿತ್ವ ಪಡೆದು ಪ್ರಸಿದ್ಧವೆನಿಸಿದೆ.

ಪುರಾಣ ಪ್ರಸಿದ್ಧವೂ ಇತಿಹಾಸ ಪ್ರಸಿದ್ಧವೂ ಆಗಿರುವ ಮುಕ್ಕುಂದಿಯು ಸಿಂಧನೂರಿನಿಂದ ಪೂರ್ವಕ್ಕೆ ೩೦ ಕಿ.ಮೀ ದೂರದಲ್ಲಿದೆ. ಈ ಗ್ರಾಮವು ಅನೇಕ ವಿಷಯಗಳಲ್ಲಿ ಪ್ರಮುಖವಾಗಿದ್ದು, ತುಂಗಭದ್ರಾ ನದಿ ಮತ್ತು ಬೆಟ್ಟಗಳಿಂದ ಆವೃತ್ತವಾಗಿರುವ ಚಿಕ್ಕ ಗ್ರಾಮವಾಗಿದೆ. ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದ ಪ್ರೇಕ್ಷಣೀಯ ಹಾಗೂ ಪ್ರಮುಖ ಐತಿಹಾಸಿಕ ಸ್ಥಳ. ಮುಕ್ಕುಂದಿ ಇದು ಈ ಹಿಂದೆ ಪ್ರಸಿದ್ಧ ಅಗ್ರಹಾರಗಳಲ್ಲಿ ಒಂದಾಗಿತ್ತು. ಇಲ್ಲಿನ ಗತ ವೈಭವ ಅಂದಿನ ಸಂಸ್ಕೃತಿಯನ್ನು ಸಾರಿ ಹೇಳುವಂತೆ, ಶಾಸನಗಳು, ದೇವಾಲಯಗಳು, ಸುಂದರ ವಿಗ್ರಹಗಳು, ಕೋಟೆ, ಮಂಟಪ, ಸೇತುವೆ ಮತ್ತು ತುಂಗಭದ್ರಾನದಿಯ ವರಪ್ರಸಾದದಿಂದ ಉಂಟಾದ ಪ್ರಕೃತಿಯ ಸೌಂದರ್ಯಗಳಿಂದ ಕೂಡಿದ ಪ್ರಮುಖ ಸ್ಥಳವಿದು. ಇಲ್ಲಿ ಕಂಡುಬರುವ ದೇವಾಲಯಗಳು ಕೇವಲ ವಾಸ್ತು ರಚನೆಯಾಗಿರದೆ, ಕಲಾಪ್ರೌಢತೆಯಿಂದ ಕೂಡಿದ್ದು ಆಸಕ್ತರ ಮನಸ್ಸನ್ನು ಸೂರೆಗೊಳ್ಳುತ್ತವೆ.

ಇಲ್ಲಿ ಅನೇಕ ಶಾಸನಗಳು ದೇವಾಲಯಗಳು ಇಂದು ಊರ ಜನರ ನಿರ್ಲಕ್ಷ್ಯ ಹಾಗೂ ಅಸಡ್ಡೆಯಿಂದಾಗಿ ಮನೆಯ ತಳಪಾಯ, ಗೋಡೆಯ ಕಲ್ಲುಗಳಾಗಿಯೋ ಅಥವಾ ಬೀದಿಗೆ ಹಾಸುವ

ಕಲ್ಲುಗಳಾಗಿಯೋ ಬಳಕೆಯಾಗಿವೆ. ಇನ್ನೂ ಬಹಳಷ್ಟು ದೇವಾಲಯಗಳು ಹಾಳಾಗಿ ಇಂದು ಕಣ್ಣಿಗೆ ಕಾಣದಂತಾಗಿವೆ. ಮಿಕ್ಕವು ಪ್ರಕೃತಿಯ ವಿಕೋಪಕ್ಕೆ ಸಿಕ್ಕು ಕಾಲಗರ್ಭದಲ್ಲಿ ಅವಿತುಕೊಂಡು ಹೋಗಿವೆ. ಹೀಗಿದ್ದೂ ಕೂಡಾ ಗ್ರಾಮದಲ್ಲಿ ಕೆಲವು ದೇವಾಲಯಗಳು ಮತ್ತು ಶಾಸನಗಳು, ಕೋಟೆ, ಮಂಟಪ, ಬಾವಿ, ಅಗಸಿಗಳು ಮುಂತಾದ ಸ್ಮಾರಕಗಳು ಇಂದಿಗೂ ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡು ನೋಡುಗರ ಮನಗೆದ್ದಿವೆ.

ಒಂದು ದೇಶದ ಅಧ್ಯಯನ ಸಮಗ್ರವಾಗುವ ದೃಷ್ಟಿಯಿಂದ ಇಂದು ನಾಡು, ಗ್ರಾಮಗಳನ್ನು ಕುರಿತೇ ಅಧ್ಯಯನಕ್ಕೆ ಹೆಚ್ಚಿನ ಮಹತ್ವ ಪ್ರಾಪ್ತವಾಗಿದೆ. ಇದು ಇತಿಹಾಸದ ಹೊಸದೃಷ್ಟಿಗೆ ನಾಂದಿ ಹಾಡಿದಂತಾಗಿದೆ.ಹೀಗಾಗಿ ಇತಿಹಾಸದ ರಚನೆಯಲ್ಲಿ ಪ್ರಮುಖ ಬದಲಾವಣೆಗಳುಂಟಾಗಿವೆ. ಇತಿಹಾಸದ ಅರ್ಥವ್ಯಾಪ್ತಿಯೂ ವಿಸ್ತೃತಗೊಂಡಿದೆ.

ಕನ್ನಡ ನಾಡಿನ ಪ್ರತಿಯೊಂದು ಗ್ರಾಮವೂ ಚಾರಿತ್ರಿಕವಾಗಿ ಮತ್ತು ಸಾಂಸ್ಕೃತಿಕವಾಗಿ ವಿಪುಲ ಸಾಮಾಗ್ರಿಗಳನ್ನು ಒಳಗೊಂಡಿವೆ. ಅಲ್ಲಿಯ ಆಕರಗಳು ಕರ್ನಾಟಕದ ಸಮಗ್ರ ಇತಿಹಾಸ ರಚನೆಗೆ ಪೂರಕ ಸಾಮಾಗ್ರಿಯನ್ನೊದಗಿಸುತ್ತಿವೆ. ಹೀಗಿದ್ದರೂ ಈ ನಿಟ್ಟಿನಲ್ಲಿ ಆಗಿರುವ ಅಧ್ಯಯನಗಳು ಬಹಳ ಕಡಿಮೆ ಎಂದು ಹೇಳಬಹುದು. ಕರ್ನಾಟಕದಲ್ಲಿ ವಿಶ್ವವಿದ್ಯಾಲಯಗಳು ಸ್ಥಾಪನೆಯಾದ ನಂತರ ಐತಿಹಾಸಿಕ ಅಧ್ಯಯನಕ್ಕೆ ಹೆಚ್ಚಿನ ಪ್ರಾಶಸ್ತ್ಯ ಸಿಕ್ಕಿದೆ. ಈ ಭಾಗದ ಇತಿಹಾಸಕ್ಕೆ ಸಂಬಂಧಿಸಿದ ಅಧ್ಯಯನಗಳು ತೀವ್ರಗತಿಯಿಂದ ನಡೆಯುತ್ತಿದ್ದರು ಅವಕ್ಕೆ ಪೋಷಕವಾಗುವ ಲೇಖನ ಮತ್ತು ಗ್ರಂಥಗಳು ವಿಪುಲವಾಗಿ ಬರಬೇಕಾಗಿದೆ. ಈ ಕೊರತೆಯನ್ನು ನಿಗಿಸುವ ದೃಷ್ಟಿಯಿಂದ ಅನೇಕ ಪ್ರದೇಶಗಳಲ್ಲಿ ವ್ಯಾಪಕ ಅಧ್ಯಯನ ನಡೆಯಬೇಕಾಗಿದೆ.

ಇದುವರೆಗೆ ಡಾ.ಸಿ.ಎಸ್.ಪಾಟೀಲರ 'Temples of Raichur and Bellary Districts', ಎಂಬ ಗ್ರಂಥವು ಪ್ರಕಟವಾಗಿದ್ದರೂ ಮುಕ್ಕುಂದಿ ದೇವಾಲಯದ ಇನ್ನಿತರ ವಿಷಯಗಳಿಗೆ ಸಂಬಂಧಿಸಿದಂತೆ ಯಾವುದೇ ಚರ್ಚೆಯಾಗಿಲ್ಲ ಮತ್ತು ಡಾ.ವಿ.ಶಿವಾನಂದ ಇವರು 'ಹೈದರಾಬಾದು ಕರ್ನಾಟಕ ಭಾಗದ ಕನ್ನಡ ಶಿಲಾಶಾಸನಗಳು' ಎಂಬ ಕೃತಿಯಲ್ಲಿ ಮುಕ್ಕುಂದಿಯ ಯಾವ ಶಾಸನಗಳು ಚರ್ಚಿತವಾಗಿಲ್ಲ. ಚನ್ನಬಸವ ಹಿರೇಮಠ ಅವರ 'ರಾಯಚೂರು ಮತ್ತು ಕೊಪ್ಪಳ ಜಿಲ್ಲೆಯ ಶಾನನಗಳು' ಪುಸ್ತಕದಲ್ಲಿ ಮುಕ್ಕುಂದಿಯ ಒಂದು ಶಾಸನವನ್ನು ತೆಗೆದುಕೊಂಡಿರುವುದಿಲ್ಲ. ಭಾರತೀ ಬಸವರಾಜ ಅವರ 'ರಾಯಚೂರು ಜಿಲ್ಲೆಯ ಶಾಸನಗಳ: ಸಮಗ್ರ ಅಧ್ಯಯನ' ಎಂಬ ಪಿಎಚ್.ಡಿ.ಗ್ರಂಥದಲ್ಲಿ ಕೆಲವೊಂದು ಶಾಸನಗಳನ್ನು ಬಳಸಿಕೊಂಡಿದ್ದಾರೆ. ದೇವರಕೊಂಡಾರೆಡ್ಡಿ ಅವರ ಸಂಪಾದಕತ್ವದಲ್ಲಿ ಹೊರ ತಂದಿರುವ 'ರಾಯಚೂರು ಜಿಲ್ಲಾ ಶಾಸನ ಸಂಪುಟ'ದಲ್ಲಿ ಮುಕ್ಕುಂದಿ ಗ್ರಾಮದ ಶಾಸನಗಳು ಪ್ರಕಟವಾಗಿವೆ. ಡಾ.ಚನ್ನಬಸವ ಹಿರೇಮಠರವರ 'ಎಡದೊರೆ ನಾಡು', 'ಕುರಗೋಡಿನ ಸಿಂಧರ ಒಂದು ಅಧ್ಯಯನ'ಗಳಲ್ಲಿ ಕೆಲವೊಂದು ಶಾಸನಗಳನ್ನು ಆಧಾರವಾಗಿಟ್ಟುಕೊಂಡು ಅಧ್ಯಯನ ಮಾಡಿದ್ದಾರೆ. ಸುಜಾತ ಮಲ್ಲನಗೌಡರು 'ರಾಯಚೂರು

ಕೊಪ್ಪಳ ಜಿಲ್ಲೆಯ ಕೋಟೆ-ಕೊತ್ತಲಗಳು : ಒಂದು ಅಧ್ಯಯನ'ದಲ್ಲಿ ಮುಕ್ಕುಂದಿ ಕೋಟೆಯ ಕುರಿತು ಕೆಲವು ಅಂಶಗಳನ್ನು ಚರ್ಚಿಸಿದ್ದಾರೆ.

ಒಟ್ಟಿನಲ್ಲಿ ಮುಕ್ಕುಂದಿ ಕುರಿತು ಏನೇ ಅಧ್ಯಯನ ನಡೆದಿದ್ದರೂ, ಅವುಗಳಲ್ಲಿ ಕೆಲವೇ ಅಂಶಗಳು ಮಾತ್ರ ಉಲ್ಲೇಖಗೊಂಡಿವೆ. ಆದ್ದರಿಂದ ನಾನು ವಿಸ್ತಾರವಾದ, ಅಧ್ಯಯನ ಕೈಗೊಳ್ಳುವ ಉದ್ದೇಶದಿಂದ, ''ಮುಕ್ಕುಂದಿ ಇತಿಹಾಸ : ಒಂದು ವಿವೇಚನೆ''(ಶಾಸನ ಮತ್ತು ದೇವಾಲಯಗಳನ್ನು ಅನುಲಕ್ಷಿಸಿ) ಎಂಬ ಶೀರ್ಷಿಕೆಯ ಅಡಿಯಲ್ಲಿ ಶಾಸನಗಳು ಮತ್ತು ದೇವಾಲಯಗಳನ್ನು ಹಿನ್ನೆಲೆಯಾಗಿಟ್ಟುಕೊಂಡು ಗ್ರಾಮದ ಅಧ್ಯಯನವನ್ನು ಕೈಗೊಂಡಿರುವೆನು. ಈ ಪ್ರಬಂಧದಲ್ಲಿ ಆರು ಅಧ್ಯಾಯಗಳಿವೆ. ಮುಕ್ಕುಂದಿಯ ಭೌಗೋಳಿಕ ರಚನೆ, ಪದನಿಷ್ಪತ್ತಿಯ ಹಿನ್ನೆಲೆ ಈ ಗ್ರಾಮದ ಪ್ರಾಚೀನತೆ ಮತ್ತು ಚಾರಿತ್ರಿಕ ಅಂಶಗಳನ್ನು ಮೊದಲಬಾರಿಗೆ ಇಲ್ಲಿ ವಿವರವಾಗಿ ಚರ್ಚಿಸಲು ಪ್ರಯತ್ನಿಸಲಾಗಿದೆ.

ಶಾಸನಗಳನ್ನು ಆಧಾರವಾಗಿಟ್ಟುಕೊಂಡು, ದಾನದತ್ತಿ, ತ್ಯಾಗ ಬಲಿದಾನ, ಸಾಮಾಜಿಕ, ಧಾರ್ಮಿಕ, ಆರ್ಥಿಕ ವಿಚಾರಗಳು ಮತ್ತು ಶಾಸನ ಪಠ್ಯಗಳನ್ನು ಹಿನ್ನೆಲೆಯಾಗಿಟ್ಟುಕೊಂಡು ಹತ್ತನೇ ಶತಮಾನದ ಶಾಸನಗಳಲ್ಲಿ ಬಳಕೆಯಾದ ಸಾಹಿತ್ಯ, ಛಂದಸ್ಸು, ಕವಿ ಲಿಪಿಕಾರ ಕುರಿತು ದ್ವಿತೀಯ ಹಂತದಲ್ಲಿ ವಿವರವಾಗಿ ತಿಳಿಸುವ ಪ್ರಯತ್ನ ಮಾಡಲಾಗಿದೆ.

ಶಾಸನಗಳಲ್ಲಿ ಉಲ್ಲೇಖಿತರಾದ ಆಡಳಿತಾಧಿಕಾರಿಗಳು ಸಾಮಂತರು ರಾಣಿಯರು ಮಹಾಮಂಡೇಶ್ವರರು ಮುಂತಾದವರ ಕುರಿತು ಮತ್ತು ಅವರ ಆಳ್ವಿಕೆಯ ಪ್ರದೇಶಗಳ ವ್ಯಾಪ್ತಿ, ಆಡಳಿತ ವಿಭಾಗಗಳ ಕುರಿತು ಅಧ್ಯಯನಕ್ಕೊಳಪಡಿಸಲಾಗಿದೆ. ಕೊನೆಯ ಹಂತದಲ್ಲಿ ದೇವಾಲಯಗಳ ವಾಸ್ತು, ಮೂರ್ತಿಶಿಲ್ಪ, ಕೋಟೆ, ಮಂಟಪ, ಸೇತುವೆ, ಇವುಗಳ ಕುರಿತು ವಿವರವಾಗಿ ಅಧ್ಯಯನ ಮಾಡುವುದರ ಜೊತೆಗೆ ವಾಸ್ತುಶಾಸ್ತ್ರದ ಹಿನ್ನೆಲೆಯಲ್ಲಿ ಗಮನಿಸಲಾಗಿದೆ.

ಒಟ್ಟಾರೆಯಾಗಿ ನನ್ನ ಅಧ್ಯಯನಕ್ಕೆ ಈ ಗ್ರಾಮದಲ್ಲಿ ದೊರೆಯುವ ೧೫ ಶಾಸನಗಳು ಮತ್ತು ೩ ವೀರಗಲ್ಲುಗಳು ೬ ದೇವಾಲಯಗಳನ್ನು, ಕೋಟೆ, ಮಂಟಪ, ಸೇತುವೆ ಇವುಗಳ ನಿರ್ಮಾಣ ವಾಸ್ತುಶೈಲಿಯನ್ನು, ಶಾಸನಗಳಲ್ಲಿ ಬರುವ ವಿಷಯ ವೈವಿಧ್ಯತೆ ಮೊದಲಾದ ಅಂಶಗಳನ್ನು ಈ ಪ್ರಬಂಧದಲ್ಲಿ ವಿಸ್ತಾರವಾಗಿ ಅಧ್ಯಯನ ಮಾಡಲು ಪ್ರಯತ್ನಿಸಲಾಗಿದೆ.

ವ್ಯಾಪ್ತಿ

ಎಡದೊರೆ ನಾಡಿನ ಆಡಳಿತದಲ್ಲಿ ಅಗ್ರಹಾರವಾಗಿದ್ದ ಮುಕ್ಕುಂದಿಯು ಎರಡು ಪಾಳುಹಳ್ಳಿಗಳನ್ನು ಒಳಗೊಂಡ ಒಂದು ಚಿಕ್ಕ ಘಟಕ. ಇದರ ಭೌಗೋಳಿಕ ವ್ಯಾಪ್ತಿ ಸೀಮಿತವಾದುದಾದರೂ, ಇದು ಒಳಗೊಂಡಿರುವ ವಿಷಯ ಕರ್ನಾಟಕವನ್ನು ಪ್ರತಿನಿಧಿಸುವಂಥದ್ದು, ಈ ಗ್ರಾಮದ ಅಧ್ಯಯನದಿಂದ ಇಡೀ ಕರ್ನಾಟಕದ ಸಾಂಸ್ಕೃತಿಕ ಪರಂಪರೆಯನ್ನು ಕಾಣಲು ಇಲ್ಲಿ ಪ್ರಯತ್ನಿಸಲಾಗಿದೆ. ಈ ಗ್ರಾಮದ ಸುತ್ತಮುತ್ತ

ದೊರೆಯುವ ಪ್ರಾಚೀನ ಪುರಾತತ್ವ ನೆಲೆಗಳನ್ನು ಗಮನದಲ್ಲಿಟ್ಟುಕೊಂಡು ಪ್ರಾಗೈತಿಹಾಸಿಕ ಕಾಲದಿಂದ ೧೮ನೇ ಶತಮಾನದವರೆಗೆ ನನ್ನ ಅಧ್ಯಯನವು ವ್ಯಾಪ್ತಿಯನ್ನು ಹೊಂದಿದೆ. ಈ ಗ್ರಾಮದ ಪೂರ್ವಕ್ಕೆ ತುಂಗಭದ್ರಾ ನದಿ, ಪಶ್ಚಿಮಕ್ಕೆ ಮಾವಿ ಮಾವಿನ ಮಡ್ಡು, ಸಿದ್ಧರಾಂಪುರ ಮತ್ತು ದಕ್ಷಿಣಕ್ಕೆ ಸಿಂಗಾಪುರ, ಉತ್ತರಕ್ಕೆ ಭೈರವೇಶ್ವರ ಕ್ಯಾಂಪ್ ಹೊಂದಿದೆ. ದೊರಕಿರುವ ಎಲ್ಲಾ ಆಕರಗಳನ್ನು ಸಮರ್ಥವಾಗಿ ಪ್ರಾಮಾಣಿಕವಾಗಿ ಬಳಸಿಕೊಂಡು ಉತ್ತರ ಕರ್ನಾಟಕದ ಒಂದು ಸಾಂಸ್ಕೃತಿಕ ಐತಿಹಾಸಿಕ ಗ್ರಾಮವಾದ ಮುಕ್ಕುಂದಿಯನ್ನು ವಿವಿಧ ಮಗ್ಗಲುಗಳಿಂದ ನೋಡಲು ಪ್ರಯತ್ನಿಸಿರುವ ಪ್ರಬಂಧ ಇದಾಗಿದೆ.

ಅಧ್ಯಾಯ ೨

ಭೌಗೋಳಿಕ ಪರಿಸರ ಮತ್ತು ಚರಿತ್ರೆ

೨

ಮುಕ್ಕುಂದಿಯ ಭೌಗೋಳಿಕ ಪರಿಸರ ಮತ್ತು ಚರಿತ್ರೆ

೨.೧. ಭೌಗೋಳಿಕ ಪರಿಸರ

ಯಾವುದೇ ಒಂದು ಪ್ರದೇಶ ಅಥವಾ ಪರಿಸರದ ಬಗ್ಗೆ ಅಧ್ಯಯನ ಕೈಗೊಳ್ಳುವ ಮೊದಲು ಆಯ್ದುಕೊಂಡ ಪ್ರದೇಶದ ಭೌಗೋಳಿಕ ವಿವರಗಳನ್ನು ತಿಳಿದುಕೊಳ್ಳುವುದು ಮುಖ್ಯ ಮತ್ತು ಅವಶ್ಯಕ ಆದ್ದರಿಂದ ಮುಕ್ಕುಂದಿಯ ಐತಿಹಾಸಿಕ ವಿವೇಚನೆಯ ಸಂದರ್ಭದಲ್ಲಿ ಮುಕ್ಕುಂದಿ ಗ್ರಾಮದ ಭೌಗೋಳಿಕ ಪರಿಸರವನ್ನು ತಿಳಿಯಲು ಪ್ರಯತ್ನಿಸಿದೆ. ಈ ಪರಿಸರದಲ್ಲಿ ಕಂಡುಬರುವ ವಾಯುಗುಣ, ಉಷ್ಣಾಂಶ, ಮಳೆ ಮತ್ತು ಭೌತಿಕ ಲಕ್ಷಣಗಳನ್ನು ಅರಿಯದಿದ್ದರೆ, ನಾವು ಒಂದು ಪ್ರಧಾನ ನೆಲೆಯನ್ನು ನಿರ್ಲಕ್ಷಿಸಿದಂತಾಗುತ್ತದೆ. ಆದ್ದರಿಂದ ಐತಿಹಾಸಿಕ ಪ್ರಕ್ರಿಯೆ ಮತ್ತು ಭೌಗೋಳಿಕ ಸನ್ನಿವೇಶಗಳ ಪರಂಪರೆಯು ನಿಕಟ ಸಂಬಂಧ ಹೊಂದಿದ್ದು, ಭೌಗೋಳಿಕ ವೈಶಿಷ್ಟ್ಯಗಳನ್ನು ಹೊಂದಿದೆ. ಇತಿಹಾಸ ಪೂರ್ವಕಾಲದಲ್ಲಿ ಮಾನವನು ನದಿ, ಹಳ್ಳ, ಕೊಳ್ಳಗಳ ಅಕ್ಕಪಕ್ಕ, ಗುಡ್ಡಗಾಡು, ಅರಣ್ಯ ಪ್ರದೇಶದಲ್ಲಿ ವಾಸವಾಗಿದ್ದನು. ಈ ಕಾರಣಕ್ಕಾಗಿ ಐತಿಹಾಸಿಕ ಅಧ್ಯಯನ ಪೂರ್ವದಲ್ಲಿ ಭೌಗೋಳಿಕ ವೈಶಿಷ್ಟ್ಯತೆಗಳನ್ನು ಮರೆತು ಇತಿಹಾಸ ವಿವೇಚಿಸಲು ಸಾಧ್ಯವಿಲ್ಲವೆಂದು ಹೇಳಿದರೆ ತಪ್ಪಾಗಲಾರದು.

ಮೇಲ್ಮೈ ಲಕ್ಷಣ

ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕಿನಿಂದ ೩೦ ಕಿ.ಮೀ.ದೂರದಲ್ಲಿರುವ ಮುಕ್ಕುಂದಿ ಗ್ರಾಮವು ತುಂಗಭದ್ರಾ ತೀರದ ಎಡಭಾಗದಲ್ಲಿದೆ. ಈ ಗ್ರಾಮದ ವ್ಯಾಪ್ತಿಯಲ್ಲಿ ಅರಳಹಳ್ಳಿ, ಕುರ್ತುಕೋಟೆ ಎಂಬ ಎರಡು ಪಾಳುಗ್ರಾಮಗಳು ಬರುತ್ತವೆ. ಮುಕ್ಕುಂದಿ ಗ್ರಾಮ ಮತ್ತು ಪಾಳು ಗ್ರಾಮಗಳ ಮೇಲ್ಮೈ ಲಕ್ಷಣಗಳು ಬೇರೆ ಬೇರೆಯಾಗಿದ್ದು, ಅವು ಮುಕ್ಕುಂದಿ ಗ್ರಾಮದ ಕಂದಾಯ ವ್ಯಾಪ್ತಿಗೆ ಒಳಪಟ್ಟ ಗ್ರಾಮಗಳಾಗಿವೆ(ಸರ್ವೇವಿಭಾಗ ಅಥವಾ ಕಂದಾಯ ಇಲಾಖೆ).

ಮುಕ್ಕುಂದಿಯ ಒಟ್ಟು ವಿಸ್ತೀರ್ಣ ೬೫೭೧ ಎಕರೆ, ೩ಗುಂಟೆ ಇದ್ದು, ಸಾಗುವಳಿ ಕ್ಷೇತ್ರವು ೪೫೪೯ ಎಕರೆ. ೧೪ ಗುಂಟೆ. ೬೩೮ ಎಕರೆ, ೨೮ ಗುಂಟೆ. ಪೋಟೋಕಾರಬೂ ಇಸ್ನೂ ೩೩ ಎಕರೆ, ಗಾವುಂಠಾಣದ ವಿಸ್ತೀರ್ಣ, ನಾಲ ಪ್ರದೇಶವು ೬೪ ಎಕರೆ, ೩೯ ಗುಂಟೆ ಮತ್ತು ರೋಡ್ ೧೮ ಎಕರೆ, ೨೮ ಗುಂಟೆ. ರುದ್ರಭೂಮಿಗಾಗಿ ೧ ಎಕರೆ, ೧೩ ಗುಂಟೆ ವಿಸ್ತೀರ್ಣವನ್ನು ಹೊಂದಿದೆ. ಅಕ್ಷಾಂಶ ೧೫.೩೫° ಉತ್ತರ

ಮತ್ತು ರೇಖಾಂಶ ೭೬.೪೨° ಪೂರ್ವದಲ್ಲಿರುವ ಚಿಕ್ಕಗ್ರಾಮ. ಐತಿಹಾಸಿಕ ಪ್ರಸಿದ್ಧವಾದ ಈ ಊರಿನಲ್ಲಿ ಕೋಟೆ ದೇವಾಲಯ ಮತ್ತು ಶಾಸನಗಳಿವೆ.

ಅರಳಹಳ್ಳಿ

ಇದೊಂದು ಪಾಳು ಬಿದ್ದ ಗ್ರಾಮವಾಗಿದ್ದು, ಒಟ್ಟು ವಿಸ್ತೀರ್ಣ ೧೫೪೯ ಎಕರೆ ಇದ್ದು, ೧೪೪೧ ಎಕರೆ ೧೮ ಗುಂಟೆ ಸಾಗೂ ವಿಸ್ತೀರ್ಣವಾದರೆ ೧೪ ಎಕರೆ, ೩೯ ಗುಂಟೆ. ಪೋಟೋಕಾರಬೂ ಇನ್ನೂ ೪೨ ಎಕರೆ ೩೨ ಗುಂಟೆ ನಾಲಪ್ರದೇಶವಾಗಿದೆ. ಇಲ್ಲಿ ಜನವಸತಿ ಇರುವುದಿಲ್ಲ. ಆದರೆ ಮನೆಗಳ ನಿರ್ಮಾಣ ಮಾಡಿದ ಕುರಹು ದೊರೆಯುತ್ತದೆ. ಈ ಗ್ರಾಮ ತುಂಗಭದ್ರಾ ನದಿಗೆ ಹೊಂದಿಕೊಂಡಿದ್ದರಿಂದ ಹಲವಾರು ಸಲ ಕೊಚ್ಚಿಕೊಂಡು ಹೋಗಿರಬಹುದು ಎಂದು ಊಹಿಸಬಹುದಾಗಿದೆ. ಈ ಗ್ರಾಮದಲ್ಲಿ ಮಂಟಪ, ಅಂಜನೇಯ ಸ್ವಾಮಿ ದೇವಾಲಯವಿದ್ದು, ಈಗ ನಿರ್ಲಕ್ಷಕ್ಕೆ ಒಳಗಾಗಿದೆ. ಹಾಗೆಯೇ ಮುಕ್ಕುಂದಿಯ ಶಾಸನವೊಂದರಲ್ಲಿ ಈ ಹಳ್ಳಿಯನ್ನು ದಾನವಾಗಿ ನೀಡಿದ್ದು, ಉಲ್ಲೇಖಗೊಂಡಿದೆ. ಸಿದ್ಧವೀರಣದೇವನ ಶಿಷ್ಯನಾದ ಭಂಡಾರಿ ಸಿಧರಾಮ ದೇವನಿಗೆ ಅರೆಯಹಳ್ಳಿ ಗ್ರಾಮವನ್ನು ಪುರವರ್ಗವಾಗಿ ದಾನನೀಡುತ್ತಾನೆ.[೧]

ಕುರ್ತುಕೋಟೆ

ಈ ಗ್ರಾಮವು ತುಂಗಭದ್ರಾ ನದಿಯ ನಡುಗಡ್ಡೆ ಪ್ರದೇಶವಾಗಿದೆ. ತುಂಗಭದ್ರಾನದಿಯು ಕಂಪ್ಲಿಯ ಮುಖಾಂತರ ಈಶಾನ್ಯ ಭಾಗಕ್ಕೆ ಹರಿಯುತ್ತಿದೆ. ಸಿಂಗಾಪೂರ (ಸಿಂಧನೂರು ತಾ.) ಗ್ರಾಮದ ಕೊನೆ ಭಾಗದ ಮುಕ್ಕುಂದಿ ಪ್ರದೇಶದಲ್ಲಿ ನದಿ ಏಳು ಭಾಗಗಳಾಗಿ ವಿಭಾಗ ಹೊಂದಿದೆ. ಆರು ವಿಭಾಗಗಳು ಮುಕ್ಕುಂದಿಗೆ ಹೊಂದಿಕೊಂಡು ಹರಿಯುತ್ತವೆ. ಒಂದು ಕವಲು ಸಿರುಗುಪ್ಪ ತಾಲೂಕಿನ ಕೆಂಚನ ಗುಡ್ಡಗ್ರಾಮಕ್ಕೆ ಹೊಂದಿಕೊಂಡು ಹರಿಯುತ್ತದೆ. ಈ ಪ್ರದೇಶದಲ್ಲಿಯೇ ಕುರ್ತಕೋಟೆ ಎಂಬ ನಡುಗಡ್ಡೆ ಇದ್ದು, ಅದು ಮುಕ್ಕುಂದಿ ವ್ಯಾಪ್ತಿಗೆ ಒಳಪಟ್ಟ ಪ್ರದೇಶವಾಗಿದೆ. ಇಲ್ಲಿ 'ಗಡ್ಡೆ ಖಾದರಲಿಂಗ' ಅಥವಾ 'ಗಡ್ಡೆ ಖಾದರ' ಭಾಷಾ ಮುಸ್ಲಿಂ ಸಂತನ ದರ್ಗಾವಿದೆ. 'ಭಂಡಾರ ಖಾನೆ' ಎಂದು ಕರೆಯಲ್ಪಡುವ ಹಳೆಯ ದೇವಾಲಯದ ಸ್ಮಾರಕವಿದೆ. ಹಾಗೂ ಕುರದಮ್ಮ ಎಂದು ಕರೆಯಲ್ಪಡುವ ಗಂಗಾ ಮತಸ್ಥರ ದೇವಾಲಯವಿದೆ. ಈ ಗ್ರಾಮವು ಮುಕ್ಕುಂದಿಯ ವ್ಯಾಪ್ತಿಗೆ ಒಳಪಟ್ಟ ಪ್ರದೇಶವಾಗಿದೆ. ಅದರ ಭೌಗೋಳಿಕ ವಿಸ್ತೀರ್ಣ ೩೪೩ ಎಕರೆ ೧೯ ಗುಂಟೆ ಇದ್ದು, ಸಾಗುವಳಿ ಕ್ಷೇತ್ರವು ೨೦೦ ಎಕರೆ ೧೬ ಗುಂಟೆ. ಇನ್ನು ನಾಲಪ್ರದೇಶವು ೫೦ ಎಕರೆ ೩೪ ಗುಂಟೆ ಹಾಗೂ ಸ್ಮಶಾನ ಭೂಮಿಯು ೨ ಎಕರೆ ೨೦ ಗುಂಟೆ ಇದೆ. ಕುರ್ತಕೋಟೆ ಗ್ರಾಮವು ನಿರ್ವವಸತಿ ಪ್ರದೇಶವಾಗಿದೆ.

ಕುರ್ತಕೋಟೆ ಪಾಳುಗ್ರಾಮದಲ್ಲಿ ಭಂಡಾರಖಾನೆ ಎಂಬ ಪಾಳುಬಿದ್ದ ದೇವಾಲಯ ಸ್ವರೂಪವನ್ನು ಹೊಂದಿದ ಕಟ್ಟಡವಿದ್ದು, ಮುಕ್ಕುಂದಿಯ ಸಮೀಪದ ರಾಮಲಿಂಗೇಶ್ವರ ದೇವಾಲಯದ ಶಾಸನವು

ನಿಟ್ಟುರವೆಯ ಬಳಿಯ ಮುಕ್ಕುಂದಿ ಅಗ್ರಹಾರದ ಬಳಿ ಹೊಳೆಯಲ್ಲಿ ಅಕ್ಷಯ ನಿಧಿ ಭಂಡಾರವನ್ನು ಸೇನಭೋವ ಛಾವಣ್ಣಯ್ಯ ದೇವಾಲಯದ ನೈವೇದ್ಯಕ್ಕೆ, ಹೂಮಾಲೆಗೆ ನಂದಾದೀವಿಗೆಗೆ ದಾನ ನೀಡಿದಂತೆ ಹೇಳಿದೆ. ಈ ಶಾಸನವು ಹೊಳೆಯ ಮಧ್ಯದಲ್ಲಿ 'ಭಂಡಾರವನ್ನು' ಎಂದು ಉಲ್ಲೇಖಿಸುವುದರಿಂದ ಹಾಗೂ ಸ್ಥಳೀಯ ಜನರು ಈ ಪಾಳುಬಿದ್ದ ದೇವಾಲಯವನ್ನು ಭಂಡಾರ ಖಾನೆ ಎಂದು ಕರೆಯುತ್ತಾರೆ. ಇದನ್ನು ಛಾಯ ಚಿತ್ರದಲ್ಲಿ ಗುರುತಿಸಬಹುದು. ಹಾಗೆ ಇಲ್ಲಿ ಮಸೀದಿ ಮತ್ತು ಖಾದರಲಿಂಗ ಅಥವಾ ಖಾದರ ಬಾಷಾ ಎಂಬ ಮುಸ್ಲಿಂ ಸಂತನ ದರ್ಗಾವಿದೆ. ಪ್ರತಿ ಫೆಬ್ರವರಿ ತಿಂಗಳು ಇಲ್ಲಿ ಊರಸ್ ಜರಗುತ್ತದೆ.

ವಾಯುಗುಣ

ಮುಕ್ಕುಂದಿಯ ವಾಯುಗುಣವು ತೇವರಹಿತ ಹವೆಯಿಂದ ಕೂಡಿದ್ದು ನವಂಬರ್ ನಿಂದ ಮೇ ತಿಂಗಳವರೆಗೆ ಶುಷ್ಕ ಹವೆ ಇರುತ್ತದೆ. ಬೇಸಿಗೆಯಲ್ಲಿ ಹೆಚ್ಚು ಉಷ್ಣತೆಯಿಂದ ಕೂಡಿದ್ದು, ಫೆಬ್ರವರಿಯಿಂದ ಬೇಸಗೆ ಕಾಲ ಆರಂಭವಾಗಿ ಮೇ ತಿಂಗಳವರೆಗೆ ಮುಂದುವರೆಯುತ್ತದೆ. ಜೂನ್ ತಿಂಗಳಿಂದ ಮಳೆಗಾಲ ಪ್ರಾರಂಭವಾಗಿ ಅಕ್ಟೋಬರ್ ತಿಂಗಳವರೆಗೂ ಸಾಮಾನ್ಯ ಮಳೆ ಇರುತ್ತದೆ. ಸಿಂಧನೂರು ತಾಲೂಕಿನ ಸರಾಸರಿ ಮಳೆ ೬೩೩-೩ ಮಿ.ಮೀ. ವಾಸ್ತವಿಕ ಸರಾಸರಿ ಮಳೆ, ೭೦೭.೬ ಮಿ.ಮೀ.ಗಳು ಇಲ್ಲಿಯ ವಾರ್ಷಿಕ ಮಳೆ ೭೨೬.೨.ಮಿ.ಮೀ ಬೀಳುತ್ತದೆ.

ಬೆಟ್ಟಗಳು

ಮುಕ್ಕುಂದಿಯು ಸುತ್ತಲೂ ಗುಡ್ಡಗಳಿಂದ ಅವೃತ್ತವಾಗಿದೆ. ಹಾಗೂ ಇದರ ಸುತ್ತಮುತ್ತಲ ಗ್ರಾಮಗಳು ಕೂಡಾ ಗುಡ್ಡಗಳಿಂದ ಆವೃತ್ತವಾಗಿದ್ದು, ಗುಡ್ಡಗಳಿಂದಲೇ ಆ ಗ್ರಾಮಗಳ ಹೆಸರು ಸೂಚಿತವಾಗುತ್ತದೆ. ಉದಾ : ಸಾಲುಗುಡ್ಡಗಳನ್ನು ಹೊಂದಿರುವ ಗ್ರಾಮವನ್ನು ಸಾಲಗುಂದ ಎಂದು ಕರೆಯುತ್ತಾರೆ. (ಗುಂದ ಅಥವಾ ಕುಂದೆ ಎಂದರೆ ಬೆಟ್ಟ ಎಂದು ಅರ್ಥ) ಹಾಗೇ ರೌವುಡಕುಂದ ಗ್ರಾಮ ದೊಡ್ಡ ದೊಡ್ಡ ಗುಡ್ಡಗಳ ಹತ್ತಿರ ಇರುವುದರಿಂದ ಇದಕ್ಕೆ ರೌವುಡಕುಂದ ಎಂದು ಕರೆಯಲಾಗಿದೆ. ಇದೇ ಗುಡ್ಡದಲ್ಲಿಯೇ ಶಿಲಾಯುಗದ ಕುರಹು ದೊರೆತಿದ್ದು, ಇದನ್ನು ಪೂರ್ವ ಇತಿಹಾಸದಲ್ಲಿ ಚರ್ಚಿಸಲಾಗಿದೆ.

ನನ್ನ ಅಧ್ಯಯನದ ವ್ಯಾಪ್ತಿಗೆ ಬರುವ ಗುಡ್ಡಗಳಿಗೆ ಇಲ್ಲಿನ ಜನರು ಹಲವಾರು ಹೆಸರುಗಳಿಂದ ಸಂಭೋದಿಸುತ್ತಿರುವುದು ಕಂಡುಬರುತ್ತದೆ. ಉದಾ : ಭೈರವೇಶ್ವರ ಗುಡ್ಡ, ಕರಿಗುಡ್ಡ, ಕರಡಿಗುಡ್ಡ, ಗುಬ್ಬಿಗುಡ್ಡ, ಮಾನೇಗುಡ್ಡ, ಮಾದಲಿಂಗನ ಮಟ್ಟಿ, ಎಕ್ಕಲೆ ಮಟ್ಟಿ ಎನ್ನುವ ಗುಡ್ಡಗಳು ಇವೆ.

ಭೈರವೇಶ್ವರ ಗುಡ್ಡ

ಇದು ಮುಕ್ಕುಂದಿ ಗ್ರಾಮದ ಉತ್ತರಕ್ಕೆ ಇದ್ದು ಅತ್ಯಂತ ದೊಡ್ಡ ಬೆಟ್ಟವಾಗಿದೆ. ಸುಮಾರು ೨೫೦ ರಿಂದ ೩೦೦ ಅಡಿ ಎತ್ತರವಿರಬಹುದು. ಈ ಬೆಟ್ಟವು ಅತ್ಯಂತ ಕಡಿದಾದ ಮತ್ತು ಮುಕ್ಕುಂದ

ಸುತ್ತಮುತ್ತಲೂ ಇರುವ ಗುಡ್ಡಗಳಿಗಿಂತಲೂ ದೊಡ್ಡದಾಗಿದೆ. ಈ ಬೆಟ್ಟದ ಮೇಲುಗಡೆ ಭೈರವೇಶ್ವರ ದೇವಾಲಯವಿದ್ದು, ಈ ದೇವಾಲಯದ ಜಾತ್ರೆಯು ಪ್ರತಿ ಶ್ರಾವಣ ಮಾಸದ ಕೊನೆಯ ಸೋಮವಾರದಂದು ನಡೆಯುತ್ತದೆ. ದೇವಾಲಯದ ಮುಂದೆ (ಬೆಟ್ಟದ ಮೇಲೆ) ವಿಶಾಲವಾದ ಜಾಗೆಯನ್ನು ಹೊಂದಿದ್ದು, ದೇವಾಲಯದ ಹಿಂದುಗಡೆ ಬಂಡೆಯ ಸಂದುಗಳಲ್ಲಿ ಭೈರವೇಶ್ವರ ಬಾವಿ ಎಂದು ಕರೆಯಲ್ಪಡುವ ಚಿಕ್ಕ ಬಾವಿ ಇದೆ. ಹಾಗೆಯೇ ಇದು ಎತ್ತರದ ಪ್ರದೇಶದಲ್ಲಿ ಇದ್ದು ಎಂದೂ ಬತ್ತದ ಮತ್ತು ಬಳಸಿದರೆ ಕಡಿಮೆಯಾಗದ ಬಾವಿಯಾಗಿರುವುದು ಪ್ರಕೃತಿಯ ವಿಸ್ಮಯವಾಗಿದೆ. ಸ್ಥಳೀಯರ ಪ್ರಕಾರ ಈ ಬಾವಿಯ ಆಳ ಎಷ್ಟು ಇದೆ ಎಂಬುದು ತಿಳಿದುಬಂದಿಲ್ಲ. ತುಂಗಭದ್ರಾ ನದಿಯು ಸಂಪೂರ್ಣವಾಗಿ ಬತ್ತಿದರೆ ಇಲ್ಲಿಯ ನೀರು ಸ್ವಲ್ಪ ಕಡಿಮೆಯಾಗುತ್ತದೆ ಎಂದು ಅಲ್ಲಿಯ ಜನರು ಸ್ಪಷ್ಟಪಡಿಸುತ್ತಾರೆ.

ಈ ಬೆಟ್ಟಕ್ಕೆ ಹೊಂದಿಕೊಂಡು ಪೂರ್ವಕ್ಕೆ ಕರಿಗುಡ್ಡವಿದೆ. ಈ ಗುಡ್ಡದ ತಳಭಾಗದಲ್ಲಿ ಆಂಜನೇಯ ಸ್ವಾಮಿ ದೇವಾಲಯವಿದೆ. ಇದು ದೊಡ್ಡ ಬಂಡೆಗಳಿಂದ ಕೂಡಿದ ಬೆಟ್ಟವಾಗಿದೆ. ಪಶ್ಚಿಮಕ್ಕೆ ಕರಡಿಗುಡ್ಡವಿದ್ದು ಇಲ್ಲಿರುವ ಗುಂಡುಗಳು ದೂರದಿಂದ ನೋಡಿದಾಗ ಕಪ್ಪಾಗಿ ಕಾಣುತ್ತದೆ. ಹಾಗಾಗಿ ಈ ಗುಡ್ಡಕ್ಕೆ ಕರಡಿಗುಡ್ಡ ಎಂದು ಹೆಸರು ಬಂದಿರುವ ಸಾಧ್ಯತೆ ಇದೆ. ತುಂಗಭದ್ರಾನದಿಯು ಈ ಬೆಟ್ಟಕ್ಕೆ ಹೊಂದಿಕೊಂಡಿರುವುದರಿಂದ ಇದು ಕರಡಿ ವಾಸಸ್ಥಾನವು ಆಗಿರಬಹುದು. ಗುಬ್ಬಿಗುಡ್ಡವು ಸಣ್ಣ ಸಣ್ಣ ಗುಡ್ಡಗಳಿಂದ ಕೂಡಿದ ಗುಡ್ಡವಾಗಿದೆ. ಅದರ ಪಕ್ಕದಲ್ಲಿಯೇ ಮಾನೇಗುಡ್ಡವಿದೆ. ಹಾಗೂ ಮೊದಲಿಂಗನ ಮಟ್ಟಿ, ಎಕ್ಕಲೆ ಮಟ್ಟಿ ಎನ್ನುವ ಗುಡ್ಡಗಳೂ ಇವೆ.

ಮುಕ್ಕುಂದಿ ಗುಡ್ಡ

ಮುಕ್ಕುಂದಿ ಗುಡ್ಡವು ಗ್ರಾಮಕ್ಕೆ ಹೊಂದಿಕೊಂಡಿದ್ದು, ಸುಮಾರು ೧೦೦ ರಿಂದ ೧೫೦ ಅಡಿ ಎತ್ತರವಿರುವ ಬೆಟ್ಟವಾಗಿದೆ. ಈ ಬೆಟ್ಟದ ಮೇಲೆ ಐತಿಹಾಸಿಕ ಕೋಟೆಯಿದೆ. ಈ ಕೋಟೆಯ ಉತ್ತರ ಭಾಗದಲ್ಲಿ ಪಾಳುಬಿದ್ದಿರುವ ದೇವಾಲಯದ ಅವಶೇಷಗಳು ದೊರೆಯುತ್ತವೆ. ಭಗ್ನಗೊಂಡಿರುವ ಬಸವಣ್ಣ ಮೂರ್ತಿ, ಈಶ್ವರಲಿಂಗದ ಪೀಠ ಇದೆ. ಈ ಭಗ್ನಗೊಂಡಿರುವ ದೇವಾಲಯದ ಕಂಬವೊಂದರಲ್ಲಿ ಶಾಸನವಿದೆ. ಇದು ಕ್ರಿ.ಶ.೧೦೨೧ರ ಕಾಲವನ್ನು ಸೂಚಿಸುತ್ತದೆ. ಕಣ್ಣರಸ ಎಂಬುವನ ಉಲ್ಲೇಖವಿದೆ.[೩] ಒಟ್ಟಾರೆಯಾಗಿ ಇಲ್ಲಿ ಮೂರು ಶಾಸನಗಳು ದೊರೆಯುತ್ತದೆ. ಅದರಲ್ಲಿ ಒಂದು ಕ್ರಿ.ಶ.೧೫೫೬ ಕಾಲವನ್ನು ಸೂಚಿಸುತ್ತದೆ.[೪] ಪಶ್ಚಿಮಕ್ಕೆ ಬೆನಕನಗುಡ್ಡ ಉತ್ತರಕ್ಕೆ ಅಲಕಂದಿಗುಡ್ಡ ಪೂರ್ವಕ್ಕೆ ಮುಕ್ಕುಂದಿಗುಡ್ಡಗಳಿಂದ ಈ ಗ್ರಾಮ ಆವೃತ್ತವಾಗಿದೆ.

ನದಿ-ಕೆರೆ-ಭಾವಿ

ತುಂಗಭದ್ರಾ ನದಿಯು ಪಶ್ಚಿಮ ಘಟ್ಟಗಳಲ್ಲಿ ಗಂಗಾ ಮೂಲದಲ್ಲಿ ಸುಮಾರು ೧೪೭೮ ಮೀಟರ್ ಎತ್ತರದಲ್ಲಿ ಹುಟ್ಟುವ ತುಂಗಾ ಮತ್ತು ಭದ್ರಾ ಅವಳಿ ನದಿಗಳು ಶಿವಮೊಗ್ಗದ ಉತ್ತರದಲ್ಲಿ ಸುಮಾರು

೬೧೦ ಮೀಟರ್ ಎತ್ತರ ಪ್ರದೇಶದಲ್ಲಿ ಸಂಧಿಸಿ ತುಂಗಭದ್ರಾ ಎನಿಸುತ್ತದೆ. ತುಂಗಭದ್ರಾ ಮುಂದೆ ಈಶಾನ್ಯ ಕಡೆ ೫೩೧ ಕಿ.ಮೀಟರ್ ವರೆಗೂ ಕರ್ನಾಟಕ ಮತ್ತು ಆಂಧ್ರಪ್ರದೇಶಗಳಲ್ಲಿ ಹರಿದು ಸುಮಾರು ೨೬೪ ಮೀಟರ್ ಎತ್ತರದ ಪ್ರದೇಶದಲ್ಲಿ ಕರ್ನೂಲ್ ನಿಂದ ಮುಂದೆ ಕೃಷ್ಣನದಿಯನ್ನು ಸೇರುತ್ತದೆ. ತುಂಗಭದ್ರಾದ ಒಟ್ಟು ನೀರುಣ್ಣುವ ಪ್ರದೇಶವು ೭೧.೪೧೭ ಚದರ ಕಿ.ಮೀ. ಅದರಲ್ಲಿ ೫೭.೬೭೧ ಚ.ಕಿ.ಮೀ ಪ್ರದೇಶ ನಮ್ಮ ರಾಜ್ಯದಲ್ಲಿದೆ.[೫] ತುಂಗಭದ್ರಾ ನದಿಯು ಈಶಾನ್ಯ ಅಭಿಮುಖವಾಗಿ ಹರಿದು ಹಲವಾರು ಪ್ರದೇಶಗಳಲ್ಲಿ ಹಲವಾರು ಕ್ಷೇತ್ರಗಳಿಗೆ, ವಿದ್ಯುತ್ ಸ್ಥಾವರಗಳನ್ನು, ನೀರಾವರಿ ವ್ಯವಸ್ಥೆಯನ್ನು ಪುಣ್ಯಸ್ಥಳಗಳನ್ನು ನಿರ್ಮಾಣ ಮಾಡುತ್ತಾ ಬಂದಿದೆ.

ಮುಖ್ಯವಾಗಿ ವಿಜಯನಗರ ಸಾಮ್ರಾಜ್ಯವು ಈ ನದಿಯ ದಂಡೆಯ ಮೇಲಿರುವುದು ಪ್ರತ್ಯಕ್ಷ ಸಾಕ್ಷಿಯಾಗಿದೆ. ಹಂಪಿಯಿಂದ ಮುಂದೆ ಸಾಗಿದ ನದಿಯು ನೀರಾವರಿ ವ್ಯವಸ್ಥೆಗೆ ತನ್ನದೇ ಆದ ಕೊಡುಗೆಯನ್ನು ನೀಡಿದೆ. ಮುಕ್ಕುಂದಿ ಗ್ರಾಮವು ತುಂಗಭದ್ರಾ ನದಿಯ ಎಡಭಾಗದಲ್ಲಿದೆ. ನದಿಯು ಈ ಗ್ರಾಮದ ಸಮೀಪದಲ್ಲಿ ಹರಿಯುತ್ತದೆ. ಸಿಂಗಾಪುರ(ಸಿಂಧನೂರು ತಾ.)ದಿಂದ ಮುಕ್ಕುಂದಿಯವರೆಗೆ ಏಕಪ್ರಕಾರವಾಗಿ ಹರಿದುಬರುವ ನದಿಯು ಮುಕ್ಕುಂದಿ ಪ್ರದೇಶದಲ್ಲಿ ಏಳು ಕವಲುಗಳಾಗಿ ವಿಭಜನೆ ಹೊಂದುತ್ತದೆ. ಆ ಏಳು ಕವಲುಗಳಲ್ಲಿ ಆರು ಕವಲುಗಳು ಮುಕ್ಕುಂದಿಯ ಕಡೆಗೆ ಮತ್ತು ಒಂದು ಕೆಂಚನಗುಡ್ಡದ(ಸಿರಗುಪ್ಪ ತಾ.) ಕಡೆಗೆ ಹರಿಯುತ್ತದೆ. ಮುಕ್ಕುಂದಿ ಕಡೆಗೆ ಹರಿದುಬರುವ ಆರು ಕವಲುಗಳಿಗೆ ಆಣೆಕಟ್ಟನ್ನು ನಿರ್ಮಿಸಿ ನೀರಾವರಿಗೆ ಬಳಸಿಕೊಳ್ಳಲಾಗುತ್ತಿದೆ. ಅದು ಹಿಂದಿನ ಕಾಲದ ಸೇತುವೆಯಾಗಿತ್ತು ಎಂಬುದನ್ನು ಊಹಿಸಬಹುದು. ಆದರೆ ಈಗ ನೀರಾವರಿ ವ್ಯವಸ್ಥೆಗೆ ಅಣೆಕಟ್ಟಾಗಿ ಪರಿವರ್ತನೆ ಆಗಿದೆ. ಕೆಂಚನ ಗುಡ್ಡದ ಕಡೆಗೆ ಹೋಗುವ ನದಿಯ ಕವಲಿಗೂ ಅಣೆಕಟ್ಟನ್ನು ನಿರ್ಮಿಸಿ ನೀರಾವರಿ ಮತ್ತು ವಿದ್ಯುತ್ ಉತ್ಪಾದನೆ ಮಾಡಲಾಗುತ್ತಿದ್ದು, ದೇವಸೂಗೂರು ಸಕ್ಕರೆ ಕಾರ್ಖಾನೆಗೆ ಈ ನೀರು ಬಳಸಲಾಗುತ್ತಿದೆ.

ಮುಕ್ಕುಂದಿಯ ಕಡೆಗೆ ಹರಿಯುವ ಆರು ಕವಲುಗಳಲ್ಲಿ ಒಂದು ಕವಲು ಪಶ್ಚಿಮಾಭಿಮುಖವಾಗಿ (ಸುಮಾರು ೨ ಕಿಲೋ ಮೀಟರ್) ಹರಿಯುತ್ತದೆ. ಗ್ರಾಮಕ್ಕೆ ಹೊಂದಿಕೊಂಡು ಈ ಕವಲು ಹರಿಯುತ್ತಿದ್ದು, ಇದರ ದಂಡೆಗೆ ಹೊಂದಿಕೊಂಡು 'ಕರಿವೀರೇಶ್ವರ ಗದ್ದಗೆ', 'ರಾಮಲಿಂಗೇಶ್ವರ' ದೇವಸ್ಥಾನ ಮತ್ತು ಪಾಪನಾಥೇಶ್ವರ ದೇವಸ್ಥಾನವಿದೆ. ಪ್ರತಿ ಸಂಕ್ರಾಂತಿಯಂದು ಪುಣ್ಯಸ್ನಾನ ಮಾಡಲು ಬೇರೆ ಬೇರೆ ಗ್ರಾಮದ ಜನರು ಈ ದೇವಸ್ಥಾನಕ್ಕೆ ಬರುತ್ತಾರೆ.

ಮುಕ್ಕುಂದಿ ಗ್ರಾಮದಲ್ಲಿ ಕೆರೆಯನ್ನು ಕಟ್ಟಿದ ವಿವರವನ್ನು ಶಾಸನವೊಂದರಲ್ಲಿ ಹೇಳಲಾಗಿದೆ. ಅವುಗಳು ಗೌಡ ಸೇನಭೋವರ ಕೆರೆ ಅಯಿತರಡ್ಡಿಕೆರೆ, ಸೂಗರುಸಾಗಪ್ಪಕೆರೆ, ಅತುಲ ಪರುವತನ ಕೆರೆ, ಕೋಟೆಗಾರ ತಿಪರಂಗನ ಕೆರೆ, ಯಿಸೂರಯ್ಯನ ಕಾಲುವೆ ಎಂದು ಮುಕ್ಕುಂದಿ ಶಾಸನದಿಂದ ತಿಳಿದು ಬರುತ್ತದೆ.[೬] ಅಂತಹ ಹೆಸರಿನ ಕೆರೆಗಳು ಈಗ ಯಾವುದು ಕಂಡುಬರುವುದಿಲ್ಲ. ಈಗಿರುವ ಕೆಲವು

ಜಮೀನುಗಳಿಗೆ ಯಾರು ಯಜಮಾನರಾಗಿರುತ್ತಾರೋ ಅವರ ಹೆಸರನ್ನು ಸೇರಿಸಿ ಕೆರೆಯ ಹೊಲಗಳು ಎಂದು ಹೆಸರು ಇರುವುದು ಕಂಡುಬರುತ್ತದೆ. ಶ್ರೀ ಕಾಂತೇಗೌಡರ ಕೆರೆ ಹೊಲ, ಕಾಮಣ್ಣಕೆರೆ ಹೊಲ, ನಗಳಿಕೆ ಈರಣ್ಣ ಕೆರೆ ಹೊಲ, ಪಟೇದ ಅಮರೇಶಪ್ಪ ಕೆರೆ ಹೊಲಗಳು ಎಂದು ಗ್ರಾಮದ ಜನರು ತಿಳಿಯಪಡಿಸುತ್ತಾರೆ.

ಈ ಗ್ರಾಮದಲ್ಲಿ ಸುಮಾರು ಆರು ಬಾವಿಗಳು ಇವೆ. ಅವುಗಳಲ್ಲಿ ಅಳಗಾಡರ ಬಾವಿ ಮಾದಿಗೇರಿಯ ಬಾವಿ, ಕೊರವರ ಬಾವಿ, ವಕ್ಕು ತುಂಬವ ಬಾವಿ. ಈ ಬಾವಿಗಳು ಬಳಕೆಯಲ್ಲಿದ್ದು ನೀರು ಮೇಲ್ಭಾಗದಲ್ಲಿದೆ. ವಕ್ಕು ತುಂಬುವ ಬಾವಿಯಲ್ಲಿ ಕೈ ಯಿಂದಲೇ ನೀರನ್ನು ತುಂಬಿಕೊಳ್ಳುತ್ತಿರುವುದರಿಂದ ವಕ್ಕು ತುಂಬುವ ಬಾವಿಯೆಂದು ಕರೆಯಲಾಗಿದೆ. ಈ ಎಲ್ಲಾ ಬಾವಿಗಳ ಸಾಧಾರಣ ಶೈಲಿಯಿಂದ ಕೂಡಿದೆ. ಗಣೇಶ ಬಾವಿಯು ವಿಶೇಷ ಕಟ್ಟಡದಿಂದ ಅಲಂಕೃತಗೊಂಡಿದ್ದು, ಗ್ರಾಮದ ಪೂರ್ವಕ್ಕೆ ರಾಮಲಿಂಗೇಶ್ವರ ದೇವಾಲಯಕ್ಕೆ ಹೋಗುವ ದಾರಿಯಲ್ಲಿ ಇದೆ. ಆದರೆ ಇದನ್ನು ಸಂಪೂರ್ಣವಾಗಿ ಮುಚ್ಚಿ ಹಾಕಲಾಗಿದೆ.

ಬೆಳೆಗಳು

ಮುಕ್ಕುಂದಿಯ ಭೂಮಿಯು ಫಲವತ್ತತೆಯಿಂದ ಕೂಡಿದ್ದು, ಕೆಂಪು ಮಣ್ಣು, ಕಪ್ಪು ಮಣ್ಣು(ಎರೆ), ಮರಳು ಮಿಶ್ರಿತ ಕೆಂಪುಮಣ್ಣು, ಸವಳು ಮಣ್ಣುಗಳಿವೆ. ಅತಿ ಹೆಚ್ಚಾಗಿ ಕೆಂಪು ಮತ್ತು ಕಪ್ಪು ಭೂಮಿ ಇದೆ. ಹಾಗೆಯೇ ಮರಳು ಮಿಶ್ರಿತ ಭೂಮಿ ಇದೆ. ಈ ಸವಳು ಮಣ್ಣು ಭೂಮಿಯಲ್ಲಿ ಅತೀ ಹೆಚ್ಚಾಗಿ ಭತ್ತ ಬೆಳೆದಿದ್ದರಿಂದ ಸವಳು ಭೂಮಿಯಾಗಿರಬಹುದು.

ಒಟ್ಟಾರೆಯಾಗಿ ಗುಡ್ಡಗಳನ್ನು ಹೊರತುಪಡಿಸಿದರೆ, ಸಮತಟ್ಟಾದ ಪ್ರದೇಶವಾಗಿದ್ದು, ಭೂಮಿಯಲ್ಲಿ ನೀರು; ಮೇಲ್ಭಾಗದಲ್ಲಿದೆ. ಹಾಗೆ ಈ ಭೂಮಿಗಳಿಗೆ ತುಂಗಭದ್ರಾ ನದಿಯ ನೀರನ್ನು ಏತ ನೀರಾವರಿ ಪದ್ಧತಿಯಿಂದ ಮತ್ತು ಕಾಲುವೆ ಮುಖಾಂತರ ತುಂಗಭದ್ರಾ ನೀರು ಈ ಗ್ರಾಮಕ್ಕೆ ಬರುತ್ತದೆ.

ಈ ಗ್ರಾಮದಲ್ಲಿ ಪ್ರಮುಖವಾಗಿ ಬಾಳೆ, ತೆಂಗು, ಭತ್ತ, ಕಬ್ಬು, ಜೋಳ, ಸೂರ್ಯಕಾಂತಿ, ಹತ್ತಿ, ಮೆಕ್ಕೆಜೋಳ, ಹೈಬ್ರಿಡ್ ಜೋಳ, ಒಣಗಡಲೆ ಮತ್ತು ತೋಟಗಾರಿಕೆಯಲ್ಲಿ ಕಾಯಿಪಲ್ಯ, ಹೂವು ಇನ್ನಿತರ ಬೆಳೆಗಳನ್ನು ಬೆಳೆಯುತ್ತಾರಲ್ಲದೆ ನೀರಾವರಿ ಬೆಳೆಗಳಿಗೆ ಆದ್ಯತೆ ಹೆಚ್ಚಾಗಿ ನೀಡಲಾಗಿದೆ.

೨.೨. ಪದನಿಷ್ಪತ್ತಿ

ಮುಕ್ಕುಂದಿ ಗ್ರಾಮವು ತುಂಗಭದ್ರಾ ನದಿಯ ದಂಡೆಗೆ ಹೊಂದಿಕೊಂಡಿರುವ ಚಿಕ್ಕ ಗ್ರಾಮ. ಇಲ್ಲಿಯ ಪ್ರಕೃತಿ ಸೌಂದರ್ಯ, ವಿಶಾಲವಾದ ಗುಡ್ಡಗಳು, ಫಲವತ್ತಾದ ಭೂಮಿ, ತುಂಗಭದ್ರಾ ನದಿಯ ವರ ಪ್ರಸಾದಿಂದ ಇದೊಂದು ಪುಣ್ಯಸ್ಥಳವಾಗಿ ಕಂಗೊಳಿಸುತ್ತದೆ. 'ಮುಕ್ಕುಂದಿಯಂತ ಊರಿಲ್ಲಾ

ಮುರಪರಿಯಂತಹ ದೇವರಿಲ್ಲ' ಎನ್ನುವ ಗಾದೆಯ ಮಾತು ಗ್ರಾಮದ ಜನರ ನಾಲಿಗೆಯ ಮೇಲೆ ಸದಾ ಸಲಿದಾಡುತ್ತಿರುವುದೇ ಇದಕ್ಕೆ ಸಾಕ್ಷಿಯಾಗಿದೆ. ತುಂಗಭದ್ರಾನದಿ ಮತ್ತು ಮೂರು ಗುಡ್ಡಗಳಿಂದ ಆವೃತ್ತವಾಗಿರುವ ಈ ಗ್ರಾಮಕ್ಕೆ ಪ್ರಕೃತಿಯೇ ರಕ್ಷಣಾ ಕೋಟೆಯನ್ನು ನಿರ್ಮಿಸಿದಂತಿದೆ.

'ಮುಕ್ಕುಂದಿ' ಎಂಬ ಪದಕ್ಕೆ ಕನ್ನಡ ನಿಘಂಟಿನಲ್ಲಿ 'ಮೂರುವರ್ಷ' 'ಮೂರು ವರ್ಷದ'ಎಂಬ ಅರ್ಥವಿದೆ. 'ಮುಕುಂದ' ಎಂಬ ಪದಕ್ಕೆ ವಿಷ್ಣು, ಕೃಷ್ಣ, ಒಂದು ತರಹದ ವಾದ್ಯ ಎಂಬ ಅರ್ಥಗಳಿವೆ. 'ಕುಂದ' ಎಂಬ ಪದಕ್ಕೆ 'ಬೆಟ್ಟ', 'ಗುಡ್ಡ' ಎಂಬ ಅರ್ಥವಿದೆ.

'ಮುಕ್ಕುಂದಿ' ಎಂಬ ಪದವನ್ನು ವಿಭಾಗಿಸಿದಾಗ ಮೂರುಕುಂದಿ ಎಂಬ ಅರ್ಥಗಳು ದೊರೆಯುತ್ತವೆ. ಇಲ್ಲಿ ಮೂರು ಎನ್ನುವುದು ಸಂಖ್ಯಾವಾಚಿ, ಸಂಖ್ಯಾವಾಚಿಯು ಇನ್ನೊಂದು ನಾಮಪದದೊಡನೆ ಬರುವಾಗ ಆಯಾ ನಾಮಪದದ ಆರಂಭದ ಧ್ವನಿಯು ಅನುಸ್ವಾರವಾಗಿ ಬದಲಾಗುತ್ತದೆ. 'ಕ' ಕಾರದ ಹಿಂದೆ ಬರುವಾಗ ಅದು 'ಮುಕ್' ಎಂದಾಗುತ್ತದೆ. 'ಮೂರು', 'ಕುಂದ' ಬಹುಶಃ ಮುಕ್ಕುಂದ, ಮುಕ್ಕುಂದಿ ಆಗಿರಬಹುದು. ಇಂತಹದ್ದೇ ಹಲವು ಊರುಗಳು ಇರುವುದು ಈ ಪ್ರದೇಶಗಳಲ್ಲಿ ಕಾಣಬಹುದು. ರೌವುಡಕುಂಡ, ಸಾಲಗುಂದ ಎಂಬ ಊರುಗಳು ಇವೆ. ಈ ಗ್ರಾಮಕ್ಕೆ ಬೆಟ್ಟಗಳಿಂದಲೆ ಈ ಹೆಸರು ಬಂದಿರಬಹುದು. ಉದಾ. ಮೂರು+ಕಾಲು ಸೇರಿ ಮುಕ್ಕಾಲು, ಮೂರು+ಕಣ್ಣು ಸೇರಿ ಮುಕ್ಕಣ್ಣ ಎಂದಾಗುತ್ತದೆ. ಪ್ರಸ್ತುತ ಈ ಪದದಲ್ಲಿಯೂ 'ಮೂರು', 'ಕುಂದ' ಎಂಬುದು ಮುಕ್ಕುಂದ ಆಗಿ ಆಡುಮಾತಿನಲ್ಲಿ ಮುಕ್ಕುಂದಿ ಆಗಿರಬಹುದು.

ಈ ಗ್ರಾಮವನ್ನು ಶಾಸನಗಳು 'ಮುಕ್ಕನ್ದೆ', 'ಮುಕನ್ದೆ', 'ಮುಕುಂದೆ' ಎಂಬುದಾಗಿ ಉಲ್ಲೇಖಿಸುತ್ತವೆ. ಸದಾಶಿವದೇವರಾಯನ ಕಾಲದ ಎರಡು ಶಾಸನಗಳು ಮುಕ್ಕುಂದಿಗೆ ವರದರಾಜ ಅಂಮಪುರ, 'ವರದಾಜಂಮಪುರ' ವೆಂಬ ಪ್ರತಿ ನಾಮವಿತ್ತೆಂದು ತಿಳಿಸುತ್ತದೆ. ಇದು ಅಚ್ಚುತ ದೇವರಾಯನ ಹೆಂಡತಿಯ ಹೆಸರಾಗಿದೆ.[೬] ಮುಕ್ಕಂದಿಯು ಕುಮಾರ ರಾಮನ ತಾಯಿ ರತ್ನಮ್ಮಳ ತವರೂರು ಆಗಿತ್ತು. ಕುಮಾರ ರಾಮನು ಕೆಲಕಾಲ ಇಲ್ಲಿ ತಂಗಿ ದೇವಾಲಯಗಳ ಜೀರ್ಣೋದ್ಧಾರ ಮಾಡಿರಬಹುದು ಎಂಬುದಾಗಿ ಸ್ಥಳೀಯರು ತಿಳಿಸುತ್ತಾರೆ. ಈ ವಿಚಾರಕ್ಕೆ ಸಂಬಂಧಿಸಿದಂತೆ ಮುಕ್ಕುಂದಿ ಕಾಲಗರ್ಭದಲ್ಲಿ ಅಡಗಿರುವ ಶಾಸನಗಳೇ ಮಾಹಿತಿಯನ್ನು ಒದಗಿಸಬೇಕಾಗಿದೆ. ಹೀಗೆಯೇ ಮುಕ್ಕುಂದಿ ಗ್ರಾಮದ ಪದದ ನಿಷ್ಪತ್ತಿಯನ್ನು ಈ ಗ್ರಾಮದಲ್ಲಿರುವ ಐತಿಹ್ಯವನ್ನು ಗಮನಿಸಬಹುದಾಗಿದೆ.

೨.೩. ಪ್ರಾಚೀನತೆ

ಮಾನವ ತನ್ನ ಜೀವನದ ಮೊದಲ ಹಂತದಲ್ಲಿ ಬಂಡೆಗಳ ಆಸರೆಯಲ್ಲಿ ಅಥವಾ ಗುಹೆಗಳಲ್ಲಿ ವಾಸಿಸುತ್ತಿದ್ದ. ಗಡ್ಡೆ ಗೆಣಸುಗಳ ಜೊತೆಗೆ ಬೇಟೆಯಿಂದಲೂ ತನ್ನ ಆಹಾರವನ್ನು ಗಳಿಸುತ್ತಿದ್ದ. ಪ್ರಾಣಿಗಳ ಚರ್ಮ ಗಿಡಗಳ ತೊಗಟೆಗಳೇ ಅವನ ವಸ್ತ್ರಗಳಾಗಿದ್ದವು. ಈ ಸಾಧನೆ ಗಳಿಕೆಯಲ್ಲಿ ಕಲ್ಲಿನ ಆಯುಧಗಳನ್ನು

ಅಧಿಕವಾಗಿ ಬಳಕೆಯಲ್ಲಿ ತಂದಿದ್ದ ಆದ್ದರಿಂದ ಮನುಷ್ಯನ ಬದುಕಿನ ಈ ಕಾಲವನ್ನು ಶಿಲಾಯುಗವೆಂದು ಕರೆಯಲಾಗಿದೆ. ಪ್ರಾಗ್ಮಾನವನು ಬಿಟ್ಟು ಹೋದ ಕಲ್ಲಿನ ಆಯುಧಗಳು ಮತ್ತು ಇತರ ಉಪಕರಣಗಳು ಮತ್ತು ಇತರೆ ಆಧಾರಗಳ ಮೇಲೆ ಅವನ ಜೀವನ ಕ್ರಮ ಇತ್ಯಾದಿಗಳನ್ನು ತಿಳಿಯಬಹುದು. ಐತಿಹಾಸಿಕ ಅವಶೇಷಗಳು ಸೂಕ್ಷ್ಮ ಅಧ್ಯಯನದ ಪ್ರಕಾರ ಮತ್ತು ಭೌಗೋಳಿಕ ಲಕ್ಷಣ ರಚನೆಯ ಪ್ರಕಾರ ಮಾನವ ಜೀವನವು ರೂಪಗೊಂಡಿರುತ್ತದೆ. ಈ ಹಿನ್ನೆಲೆಯಲ್ಲಿಯೇ ಪ್ರಾಗ್ಮನವನ ಇತಿಹಾಸವನ್ನು ಅರಿಯಬಹುದಾಗಿದೆ.

ಮಾನವನ ಇತಿಹಾಸವನ್ನು ಪ್ರಮುಖವಾಗಿ ಎರಡು ಮುಖ್ಯ ವಿಭಾಗಗಳನ್ನಾಗಿ ಮಾಡಲಾಗಿದೆ. ಮೊದಲನೆಯದು ಅಕ್ಷರ ಜ್ಞಾನವಿಲ್ಲದ ಹಂತ ಅಥವಾ ಪ್ರಾಗಿತಿಹಾಸ ಅಥವಾ ಪೂರ್ವೇತಿಹಾಸ. ಎರಡನೆಯದು ಅಕ್ಷರ ಜ್ಞಾನವಿದ್ದ ಹಂತ ಅಥವಾ ರಾಜಮಹಾರಾಜರ ಕಾಲ ಅಥವಾ ಇತಿಹಾಸ ಕಾಲವೆಂದೂ ಹೇಳಬಹುದು.[೮] ಪ್ರಾಗಿತಿಹಾಸದ ಕಾಲಮಾನವನ್ನು ಆಗ ನಿತ್ಯ ಬಳಕೆಯಲ್ಲಿದ್ದ ವಸ್ತುವಿನ ಆಧಾರದಿಂದ ಶಿಲಾಯುಗ ಸಂಸ್ಕೃತಿ ಮತ್ತು ಲೋಹಯುಗ ಸಂಸ್ಕೃತಿ ಎಂದು ಎರಡು ವಿಭಾಗಗಳನ್ನಾಗಿ ವಿಂಗಡಿಸಿಕೊಂಡು ಪ್ರಾಚೀನ ಕಾಲದ ಮಾನವನ ಇತಿಹಾಸವನ್ನು ಅರಿಯಬಹುದಾಗಿದೆ.

ಮುಕ್ಕುಂದಿ ಮತ್ತು ಸುತ್ತಮುತ್ತಲ ಪ್ರದೇಶವು ಪ್ರಕೃತಿಯ ತಾಣವಾಗಿದ್ದು, ಪ್ರಾಚೀನ ಮಾನವ ಜೀವಿಸಲು ಬೇಕಾಗುವ ಮೂಲಭೂತ ಸೌಲಭ್ಯಗಳನ್ನು ಪ್ರಕೃತಿಯೇ ಒದಗಿಸಿದೆ. ಮುಕ್ಕುಂದಿ ಪ್ರದೇಶದಲ್ಲಿ ಆದಿ ಮಾನವನ ನೆಲೆ ದೊರೆಯದೆ ಇದ್ದರೂ ಸಮೀಪದ ರೌಡಕುಂದ ಗ್ರಾಮದಲ್ಲಿ ನೂತನ ಶಿಲಾಯುಗ ಸಂಸ್ಕೃತಿಯ ನೆಲೆಯಿರುವುದನ್ನು ಗುರುತಿಸಲಾಗಿದೆ.

ನೂತನ ಶಿಲಾಯುಗ ಸಂಸ್ಕೃತಿಯಲ್ಲಿ ಅತಿ ಸೂಕ್ಷ್ಮ ಚೆಕ್ಕೆ ಕಲ್ಲಿನ ಉಪಕರಣಗಳು, ದ್ವಿಮುಖ ಅಲಗುಳ್ಳ, ತೇಳು ನೀಳಚಕ್ಕೆ ಕಿರುನಿಳಚಕ್ಕೆ ತ್ರಿಭುಜಾಕಾರದ ಮೊನೆ, ಕೊಕ್ಕುಳ್ಳ ಮೊನೆ, ಎಲೆಯಾಕಾರದ ಮೊನೆ, ಒಬ್ಬದಿ ಮತ್ತು ಇಬ್ಬದಿ ಹೆರೆಚೆಕ್ಕೆ, ಒಳಭಾಗದಂಚಿನ ಹರೆಚೆಕ್ಕೆ, ಮೂಲಗಟ್ಟಿ, ಕೊರೆಗ, ಅರ್ಧಚಂದ್ರಾಕೃತಿಯ ಮೊದಲಾದ ಉಪಕರಣಗಳಬಳಕೆ ಇದ್ದುದು ತಿಳಿಯುತ್ತದೆ.[೯] ರೌವುಡಕುಂದ ಗ್ರಾಮದ ಪ್ರದೇಶದಲ್ಲಿ ಉಜ್ಜಿ ನಯಗೊಳಿಸಿದ ಕೊಡಲಿಗಳು ಬಟ್ಟತಲೆಯನ್ನು ಹೊಂದಿವೆ.

ಮುಕ್ಕುಂದಿ ಗ್ರಾಮಕ್ಕೆ ಸಮೀಪವಿರುವ 'ಗೊಬ್ಬರಕಲ್ಲು' ಗ್ರಾಮದಲ್ಲಿ ಶಿಲಾ ತಾಮ್ರಯುಗ ಸಂಸ್ಕೃತಿಯ ನೆಲೆಯೂ ದೊರಕುತ್ತಿದೆ. ಈ ಹಂತದ ಸಂಸ್ಕೃತಿಯಲ್ಲಿ ಮಡಕೆಯ ಮಾದರಿಯು ವಿಶಿಷ್ಟವಾಗಿದ್ದುದು ಕಂಡುಬರುತ್ತದೆ. ಇವುಗಳಲ್ಲಿ ವರ್ಣರೇಖಾ ಚಿತ್ರಮಯವಾದ ಪಾತ್ರೆಗಳು ಕಂಡುಬಂದಿವೆ. ಕೆಲವೊಮ್ಮೆ ಪ್ರಾಣಿಗಳ ಚಿತ್ರಗಳನ್ನು ಬಿಡಿಸಲಾಗಿದೆ. ಇಂತಹ ಮಣ್ಣಿನ ಪಾತ್ರೆಗಳನ್ನು ಜೋರ್ವೆ ಮತ್ತು ಸಾವಳದ ಮಡಿಕೆ ಮಾದರಿಗಳೆಂದು ಕರೆಯಲಾಗುತ್ತದೆ. ಶಿಲಾ ತಾಮ್ರಯುಗದ ಜನರು ಸೌಂದರ್ಯ ಪ್ರಜ್ಞೆಯುಳ್ಳವರಾಗಿದ್ದರೆಂದು ಅವರ ಮಣ್ಣಿನ ಗೊಂಬೆ ಹಾಗೂ ದೊರೆತ ವರ್ಣ ಚಿತ್ರಗಳಿಂದ ತಿಳಿಯಬಹುದಾಗಿದೆ.[೧೦] ಗೊಬ್ಬರ ಕಲ್ಲು ಗ್ರಾಮದಲ್ಲಿ ದೊರೆತ ನೆಲೆಯು ಕಲ್ಲಿನ ಉಪಕರಣ ನೆಲೆಯಾಗಿದ್ದು, ತಾಮ್ರ ಶಿಲಾಯುಗದ್ದಿರಬಹುದೆಂದು ತಿಳಿಯಲಾಗಿದೆ.

ತುಂಗಭದ್ರಾ ನದಿಯ ಬಲಭಾಗದಲ್ಲಿ ನಿಟ್ಟೂರು(ಸಿರುಗುಪ್ಪ ತಾಲ್ಲೂಕು) ಗ್ರಾಮದಲ್ಲಿ ಆದಿ ಹಳೆಯ ಶಿಲಾಯುಗ, ನೂತನ ಶಿಲಾಯುಗ, ಬೃಹತ್ ಶಿಲಾಯುಗ ಸಂಸ್ಕೃತಿಯ ನೆಲೆಗಳು ದೊರೆತಿದ್ದು, ಪ್ರಾಚೀನ ಮಾನವನ ನೆಲೆಯಾಗಿದೆ.

ಪ್ರಸ್ತುತ ಸಂದರ್ಭದಲ್ಲಿ ಮುಕ್ಕುಂದಿ ಗ್ರಾಮದಲ್ಲಿ ಯಾವುದೇ ಪ್ರಾಚೀನ ಸಂಸ್ಕೃತಿಯ ನೆಲೆಯು ದೊರೆಯದೆ ಇದ್ದರು ಈ ಗ್ರಾಮವು ಪುರಾತತ್ವ ನೆಲೆಯಾಗಿರುವ ಸಾಧ್ಯತೆ ಅತಿ ಹೆಚ್ಚಾಗಿದೆ. ಇದಕ್ಕೆ ಕಾರಣ ಇಲ್ಲಿಯ ಪ್ರಕೃತಿ ಮತ್ತು ಭೌಗೋಳಿಕ ಲಕ್ಷಣಗಳು ಮಾನವನ ಜೀವನಕ್ಕೆ ಪೂರಕವಾದವುಗಳಾಗಿವೆ.

೨.೪. ಚರಿತ್ರೆ

ಐತಿಹಾಸಿಕ ಘನತೆಯಿಂದ ಪ್ರಸಿದ್ಧವಾದ ಪ್ರದೇಶ ರಾಯಚೂರು ಜಿಲ್ಲೆ. ಕರ್ನಾಟಕದ ಚರಿತ್ರೆಯಲ್ಲಿ ಈ ಜಿಲ್ಲೆವಹಿಸಿದ ಪಾತ್ರವು ಸ್ಮರಣೀಯವಾಗಿದೆ. ಕರ್ನಾಟಕದ ಸಂಸ್ಕೃತಿಯ ವೈಭವ ಮತ್ತು ವೈಶಿಷ್ಟ್ಯತೆಗಳನ್ನು ಎತ್ತಿ ಹಿಡಿದ ಹಲವು ಪ್ರದೇಶಗಳಲ್ಲಿ ಈ ಜಿಲ್ಲೆಯೂ ಒಂದಾಗಿದೆ. ಚರಿತ್ರೆಯ ದೃಷ್ಟಿಯಿಂದ ನೋಡಿದರೆ ಕರ್ನಾಟಕದ ಎಲ್ಲಾ ಮುಖ್ಯ ಅರಸು ಮನೆತನಗಳ ಆಳ್ವಿಕೆಗೆ ಈ ಜಿಲ್ಲೆ ಒಳಪಟ್ಟಿತ್ತು ಎಂದು ತಿಳಿದು ಬರುತ್ತದೆ. ಇವರು ಸಾಧಿಸಿದ ಸಾಧನೆಗಳು, ಅನುಸರಿಸಿದ ಜೀವನದ ಮೌಲ್ಯಗಳು, ನಮ್ಮ ಪ್ರಾಚೀನ ಜನಾಂಗದ ಸಾಮಾಜಿಕ, ಆರ್ಥಿಕ, ಧಾರ್ಮಿಕ ಜೀವನದ ಪರಿಚಯ ಶಾಸನಗಳಿಂದ ತಿಳಿದುಬರುತ್ತದೆ.

ಮೌರ್ಯರು

ಕರ್ನಾಟಕವನ್ನು ಆಳಿದ ಪ್ರಮುಖ ಅರಸು ಮನೆತನಗಳಲ್ಲಿ ಮೌರ್ಯರದು ಮೊದಲನೆಯದು ರಾಜಕೀಯ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಚರಿತ್ರೆಯ ದೃಷ್ಟಯಿಂದ ಕರ್ನಾಟಕಕ್ಕೆ, ಕನ್ನಡ ನಾಡಿಗೆ ಹಿರಿಯ ಸ್ಥಾನವನ್ನು ಗಳಿಸಿಕೊಟ್ಟ ಕೀರ್ತಿ ಇವರಿಗೆ ಸಲ್ಲುತ್ತದೆ. ಕರ್ನಾಟಕದ ಇತಿಹಾಸಕ್ಕೆ ತನ್ನದೇ ಆದ ಪ್ರಾಚೀನತೆ ಇದ್ದರೂ, ಇತಿಹಾಸ ಆರಂಭವಾಗುವುದು ಕ್ರಿ.ಪೂ.೩೦೦ರ ನಂತರ, ಕರ್ನಾಟಕದಲ್ಲಿ ಇತಿಹಾಸ ಯುಗ ಪ್ರಾರಂಭವಾಗುವುದು ಸದ್ಯ ನಮಗೆ ತಿಳಿದಂತೆ ಕ್ರಿ.ಪೂ.೩-ಆನೇ ಶತಮಾನಗಳಿಂದ. ಉತ್ತರ ಭಾರತದಲ್ಲಿ ಆಳುತ್ತಿದ್ದ ಮೌರ್ಯವಂಶದ ಅರಸರು ಕರ್ನಾಟಕದ ಉತ್ತರ ಭಾಗದಲ್ಲಂತೂ ತಮ್ಮ ರಾಜ್ಯವನ್ನು ವಿಸ್ತರಿಸಿದ್ದರೆಂಬುದಕ್ಕೆ ಸಾಕ್ಷ್ಯಧಾರಗಳಿವೆ. ಕರ್ನಾಟಕದಲ್ಲಿ ಬ್ರಹ್ಮಗಿರಿ, ಸಿದ್ಧಾಪುರ, ಜಟಿಂಗ ರಾಮೇಶ್ವರ(ಚಿತ್ರದುರ್ಗ), ಮಸ್ಕಿ(ರಾಯಚೂರು), ಕೊಪ್ಪಳ, ಉದಯಗೊಳಂ, ನಿಟ್ಟೂರು(ಬಳ್ಳಾರಿ ಜಿ.) ಸನ್ನತಿ(ಗುಲ್ಬರ್ಗಾ)ಯಲ್ಲಿ[೨೦] ದೊರೆತ ಶಾಸನಗಳಿಂದ ಈ ಪ್ರದೇಶಗಳು ಮೌರ್ಯರ ಆಳ್ವಿಕೆಗೆ ಒಳಪಟ್ಟಿದ್ದವೆಂದು ತಿಳಿದುಬರುತ್ತದೆ. ಶಾಸನಗಳೇ ಕರ್ನಾಟಕದ ಐತಿಹಾಸಿಕ ಸ್ಪಷ್ಟತೆಗೆ ಮೊಟ್ಟ ಮೊದಲನೆಯ ಸಾಕ್ಷಿಗಳೆನ್ನಬಹುದು.[೨೧]

ಮೌರ್ಯ ಸಾಮ್ರಾಜ್ಯವು ಚಂದ್ರಗುಪ್ತ, ಬಿಂದುಸಾರ ಮತ್ತು ಅಶೋಕರಂತಹ ಮಹಾನ್ ದೊರೆಗಳನ್ನು ನಮ್ಮ ದೇಶಕ್ಕೆ ಕೊಟ್ಟಿತು. ಅಶೋಕ ಮಹಾಚಕ್ರವರ್ತಿಯ ಆಳ್ವಿಕೆಯಲ್ಲಿ ಮೌರ್ಯ

ಸಾಮ್ರಾಜ್ಯವು ತನ್ನ ವೈಭವದ ಉನ್ನತ ಸ್ಥಾನವನ್ನು ತಲುಪಿತ್ತು. ಮೌರ್ಯರು ಆಡಳಿತ ಕಲೆ ಮತ್ತು ಸಂಸ್ಕೃತಿಯ ಕ್ಷೇತ್ರಗಳಲ್ಲಿ ಸಾಧಿಸಿದ ಸಾಧನೆ ಸ್ಮರಣೀಯವಾದದ್ದಾಗಿದೆ. ಮೌರ್ಯ ಸಾಮ್ರಾಜ್ಯವು ವಿಶಾಲವಾದ ಪ್ರದೇಶವನ್ನು ಒಳಗೊಂಡಿದ್ದು, ಮುಕ್ಕುಂದಿಯು ಈ ಪ್ರದೇಶದಲ್ಲಿ ಸೇರಿತ್ತು ಎಂಬುದು ಸ್ಪಷ್ಟವಾಗುತ್ತದೆ.

ಶಾತವಾಹನರು

ಸುಮಾರು ನಾಲ್ಕು ಶತಮಾನಗಳ ಕಾಲ ಮೌರ್ಯರ ಸುದೀರ್ಘ ಆಡಳಿತದ ನಂತರ ದಕ್ಷಿಣಾ ಪಥದ ರಾಜಕೀಯದಲ್ಲಿ ಪ್ರಬಲರಾಗಿದ್ದ ಶಾತವಾಹನರು ಕರ್ನಾಟಕದ ಇತಿಹಾಸದಲ್ಲಿಯೂ ಮಹತ್ವವಾದ ಪಾತ್ರವನ್ನು ವಹಿಸಿದರು.[೧೩] ಕೆಲವು ಇತಿಹಾಸಕಾರರು ಕರ್ನಾಟಕದಲ್ಲಿ ಶಾತವಾಹನರ ಆಳ್ವಿಕೆಯ ಬಗ್ಗೆ ಗುರುತಿಸಿದ್ದಾರೆ. ಅದರಲ್ಲಿ ಪ್ರಮುಖವಾಗಿ ಬಳ್ಳಾರಿಯ ಪ್ರದೇಶವು ಶಾತವಾಹನರ ಮೂಲ ನಿವಾಸವೆಂದೆ ಅನೇಕ ವಿದ್ವಾಂಸರು ಭಾವಿಸಿದ್ದಾರೆ. ಬಳ್ಳಾರಿ ಜಿಲ್ಲೆಯ ಮ್ಯಾಕದೋಣಿ ಮತ್ತು ಹಿರೇ ಹಡಗಲಿಯ ಪ್ರಾಕೃತ ಶಾಸನಗಳು ಈ ಪ್ರದೇಶವನ್ನು ಗುರುತಿಸುವುದು 'ಶಾತವಾಹನೀಹಾರ' ಮತ್ತು ಶಾತವಾಹನನೀರಷ್ಮೀ (ಶಾತವಾಹನೀರಾಷ್ಟ್ರಿ) ಎಂಬ ಪ್ರಯೋಗಗಳಿಂದ[೧೪] ಕರೆಯಲಾಗಿದೆ. ಅಷ್ಟೇ ಅಲ್ಲದೇ ಚಂದ್ರವಳ್ಳಿ, ವಡಗಾಂವ, ಮಾಧವಪುರ, ಬನವಾಸಿ, ಪಟ್ಟದ ಕಲ್ಲುಗಳಲ್ಲಿ ನಡೆದಿರುವ ಉತ್ಖನನಗಳು ಸನ್ನತಿ(ಗುಲ್ಬರ್ಗಾ) ವಾಸನ್ (ಧಾರವಾಡ) ಕರ್ನಾಟಕದ ಇತರಕಡೆ ಶಾತವಾಹನರಿಗೆ ಸಂಬಂಧಿಸಿದ ಅವಶೇಷಗಳು ದೊರೆತಿವೆ. ಕರ್ನಾಟಕದ ಬಳ್ಳಾರಿ ಜಿಲ್ಲೆಯಲ್ಲಿ ಶಾತವಾಹನರ ಶಾಸನಗಳು ದೊರೆಯುವುದರಿಂದ ಮುಕ್ಕುಂದಿ ಬಳ್ಳಾರಿ ಜಿಲ್ಲೆಯ ಗಡಿಭಾಗಕ್ಕೆ ಸಮೀಪವಿರುವುದರಿಂದ ಇದು ಇವರ ಆಡಳಿತ ವ್ಯವಸ್ಥೆಯಲ್ಲಿ ಸೇರಿಕೊಂಡಿದೆ ಎಂಬುದು ಸ್ಪಷ್ಟವಾಗುತ್ತದೆ.

ಬನವಾಸಿ ಕದಂಬರು (ಕರಡಿಕಲ್ ಕದಂಬರು)

ಶಾತವಾಹನರು ಮತ್ತು ಅವರ ಸಾಮಂತರ ಪತನಾನಂತರ ಕರ್ನಾಟಕದ ಉತ್ತರ ಭಾಗವು ಕದಂಬರಿಗೆ ಮತ್ತು ದಕ್ಷಿಣ ಭಾಗವು ಗಂಗರ ಆಳ್ವಿಕೆಗೆ ಸೇರಿತ್ತು. ಕದಂಬ ಎಂಬ ವಂಶದ ಹೆಸರನ್ನು ಹೊಂದಿದ್ದ ಅನೇಕ ರಾಜಮನೆತನಗಳು ಇದ್ದವು.[೧೫] ಅವುಗಳಲ್ಲಿ ಬನವಾಸಿಯನ್ನು ರಾಜಧಾನಿಯನ್ನಾಗಿ ಹೊಂದಿದ್ದ ರಾಜ ಮನೆತನವೇ ಪ್ರಮುಖವಾದ್ದು. ಜಿಲ್ಲೆಯ ಲಿಂಗಸೂಗೂರು ತಾಲೂಕಿನ ಕರಡಕಲ್ಲನ್ನು ಕೇಂದ್ರವನ್ನಾಗಿ ಮಾಡಿಕೊಂಡು ಆಳ್ವಿಕೆ ನಡೆಸಿದ ಇವರನ್ನು ಕರಡಿಕಲ್ಲು ಕದಂಬರೆಂದು ಕರೆಯಲಾಗಿದೆ. ಕ್ರಿ.ಶ.೧೦೬೬ರ ಶಾಸನವೂ ಕದಂಬ ಅರಸ ನಾಗವರ್ಮನು ಇವನು ತ್ರೈಲೋಕ್ಯಮಲ್ಲನ ಸಾಮಂತನಾಗಿ ಕರಡಕಲ್ಲು ಮುನ್ನೂರನ್ನು ಆಳುತ್ತಿದ್ದನೆಂದು ಉಲ್ಲೇಖಿಸುತ್ತದೆ. ಇದಲ್ಲದೆ ಇವರ ಅನೇಕ ಶಾಸನಗಳು ಕರಡಕಲ್ಲು ಮತ್ತು ಮುದಗಲ್ಲಗಳಲ್ಲಿ ದೊರೆತಿವೆ. ಸಿಂಧನೂರು ತಾಲೂಕಿನ ಹೀರೇಬೇರಿಗೆಯ ಕ್ರಿ.ಶ. ೧೧೦೦ರ ಶಾಸನದಲ್ಲಿ (ಸಿಂ ೨೪)ಕದಂಬ ಬಾಚರಸನು ವಿಕ್ರಮಾದಿತ್ಯನ ಸಾಮಾಂತನಾಗಿ ಆಳುತ್ತಿದ್ದಂತೆ

ತಿಳಿಯುತ್ತದೆ. ಒಟ್ಟಾರೆಯಾಗಿ ಕದಂಬರ ಮೂಲ ನೆಲೆ ಬನವಾಸಿಯಾಗಿದ್ದು, ಕರಡಿಕಲ್ಲು ಕದಂಬರು ಎಂಬುದು ಒಂದು ಶಾಖೆಯಾಗಿದೆ. ಅವರ ಸಾಮಂತರಾಗಿ ಆಳ್ವಿಕೆಯನ್ನು ನಡೆಸಿದ್ದಾರೆ. ಮುಕ್ಕುಂದಿ ಗ್ರಾಮದಲ್ಲಿ ಇವರ ಶಾಸನ ದೊರೆಯುವುದಿಲ್ಲ. ಇದರಿಂದ ಕರಡಿಕಲ್ಲು ಕದಂಬರ ಆಳ್ವಿಕೆಗೆ ಈ ಗ್ರಾಮ ಒಳಪಟ್ಟಿರುವ ಸಾಧ್ಯತೆ ಕಡಿಮೆ. ಇದೇ ಸಮಯದಲ್ಲಿ ವಿಕ್ರಮಾದಿತ್ಯನ ಸಾಮಂತನಾಗಿ ಸಾಲಗುಂದೆಯ ಸಿಂಧರು ಮುಕ್ಕುಂದಿ ಗ್ರಾಮವನ್ನು ಆಳುತ್ತಿದ್ದರು ಎಂದು ಶಾಸನಗಳು ಉಲ್ಲೇಖಿಸುತ್ತವೆ.

ಪಲ್ಲವರು ಮತ್ತು ಬಾದಾಮಿ ಚಾಲುಕ್ಯರು

ಕರ್ನಾಟಕದ ಇತಿಹಾಸದಲ್ಲಿ ಪಲ್ಲವರು ಮತ್ತು ಬಾದಾಮಿ ಚಾಲುಕ್ಯರು ಆಳ್ವಿಕೆ ನಡೆಸಿರುವುದಕ್ಕೆ ವಿಪುಲವಾದ ಮಾಹಿತಿ ಇದೆ. ಆದರೆ ರಾಯಚೂರು ಜಿಲ್ಲೆಯಲ್ಲಿ ಇವರ ಆಳ್ವಿಕೆಯ ಕುರಿತು ಯಾವುದೇ ಶಾಸನಗಳು ದೊರೆತಿರುವುದಿಲ್ಲ. ಬಳ್ಳಾರಿ ಜಿಲ್ಲೆಯಲ್ಲಿ ಬಾದಾಮಿ ಚಾಲುಕ್ಯರ ಶಾಸನಗಳು ದೊರೆತಿವೆ. ಆದರೂ ಮುಕ್ಕುಂದಿಯು ತುಂಗಭದ್ರಾ ಎಡದಂಡೆಯ ಮೇಲಿದೆ. ಹಾಗಾಗಿ, ಪಲ್ಲವರ ಮತ್ತು ಬಾದಾಮಿ ಚಾಲುಕ್ಯರ ಆಳ್ವಿಕೆಗೆ ಮುಕ್ಕುಂದಿ ಪ್ರದೇಶ ಸೇರಿಲ್ಲವೆಂದೂ ಹೇಳಬಹುದು.

ರಾಷ್ಟ್ರಕೂಟರು

ಬಾದಾಮಿ ಚಾಲುಕ್ಯರ ನಂತರ ಕರ್ನಾಟಕದ ಸಾರ್ವಭೌಮತ್ವವು ರಾಷ್ಟ್ರಕೂಟರ ಕೈಸೇರಿತು. ಸುಮಾರು ಎರಡುವರೆ ಶತಮಾನಗಳ ಕಾಲ ವಿಶಾಲ ಸಾಮ್ರಾಜ್ಯವನ್ನು ಇವರು ಆಳಿದರು. ಇಂದಿನ ಗುಲ್ಬರ್ಗಾ ಜಿಲ್ಲೆಯನ್ನು ರಾಜಧಾನಿಯನ್ನಾಗಿಸಿ ಕೊಂಡು ಆಳಿದ ರಾಜವಂಶ ರಾಷ್ಟ್ರಕೂಟ ವಂಶ, ಬಾದಾಮಿ ಚಾಲುಕ್ಯ ವಿನಯಾದಿತ್ಯನನ್ನು ಮೂಲೆಗೆ ತಳ್ಳಿ ಆಳಿದ ರಾಜವಂಶ ರಾಷ್ಟ್ರಕೂಟ ವಂಶ. ಮಾನ್ಯಖೇಟವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ರಾಜ್ಯ ಸ್ಥಾಪನೆ ಮಾಡಿದರು.[೧೬] ೮ನೇ ಶತಮಾನದಿಂದ ೧೦ನೇ ಶತಮಾನವರೆಗೆ ರಾಷ್ಟ್ರಕೂಟರು ಬೃಹತ್ ಸಾಮ್ರಾಜ್ಯವನ್ನು ಕಟ್ಟಿ ಕನ್ನಡ ಸಂಸ್ಕೃತಿ ನಾಡುನುಡಿಗೆ ಅಪಾರವಾದ ಸೇವೆಸಲ್ಲಿಸಿ ಅಮರವಾಗಿದ್ದಾರೆ. ಅವರ ಶಾಸನಗಳಲ್ಲಿ ಅವರನ್ನು 'ಲಟ್ಟಲೂರ ಪುರಾವ ರಾಧೀಶ್ವರ' ಎಂದು ಹೇಳಿರುವುದರಿಂದ, ಲಟ್ಟಲೂರು ಅವರ ಮೂಲ ನಿವಾಸವಾಗಿತ್ತೆಂದು ಗೊತ್ತಾಗುತ್ತದೆ. ಲಾತೂರು ಎನ್ನುವ ಹೆಸರೇ ಸೂಚಿಸುವಂತೆ ಅದು ಆಗಿನ ಕಾಲದಲ್ಲಿ ಕನ್ನಡ ನಾಡಿನ ಭಾಗವಾಗಿದ್ದಿತು. ಅಲ್ಲಿಂದ ರಾಷ್ಟ್ರಕೂಟರು ದೇಶದ ವಿವಿಧ ಭಾಗಗಳಿಗೆ ಹೋಗಿ ರಾಜ್ಯವಾಳಿದರು.[೧೭] ರಾಷ್ಟ್ರಕೂಟರ ರಾಜ್ಯಸ್ಥಾಪಕನಾದ ದಂತಿದುರ್ಗನು ಬಾದಾಮಿ ಚಾಲುಕ್ಯರ ಕೊನೆಯ ಅರಸ ಎರಡನೆಯ ಕೀರ್ತಿವರ್ಮನನ್ನು ಸೋಲಿಸಿ ರಾಜ್ಯವನ್ನು ವಶಪಡಿಸಿಕೊಂಡು ಕ್ರಿ.ಶ.೭೫೩ರಲ್ಲಿ ಅಧಿಕಾರಕ್ಕೆ ಬಂದನು. ದಂತಿದುರ್ಗನಿಗಿಂತ ಮೊದಲೇ ಹಲವಾರು ಜನರು. ಆಳಿದ್ದರೆಂದು ವಿದ್ವಾಂಸರು ವಾದಿಸಿದ್ದರೂ ಅವರಿಗೆ ಸಂಬಂಧಿಸಿದ ಯಾವುದೇ ಆಧಾರಗಳು ದೊರೆಯದೇ ಇದ್ದುದರಿಂದ ದಂತಿದುರ್ಗನೇ ರಾಷ್ಟ್ರಕೂಟರ ಮೂಲ ಪುರುಷ ನೆಂದು ನಿರ್ಧರಿಸಲಾಗಿದೆ.

ರಾಷ್ಟ್ರಕೂಟರು ಅನೇಕ ವಿಜಯಗಳಿಂದ ರಾಜ್ಯವಿಸ್ತಾರಗೊಳಿಸಿ ತಮ್ಮ ಮೇಲ್ಮೈಯನ್ನು ಸ್ಥಾಪಿಸಿಕೊಳ್ಳುವ ನೂತನ ರಾಜ್ಯಭಾಗಗಳಲ್ಲಿ ತಮ್ಮ ಆಳ್ವಿಕೆಯನ್ನು ಶಾಸನಬದ್ಧಗೊಳಿಸಿಕೊಳ್ಳುವ ಅಗತ್ಯವನ್ನು ಮನಗಂಡರು ದೈವಿಕ ವಂಶದ ಮೂಲವನ್ನು ಹೇಳಿಕೊಳ್ಳುವುದರಿಂದ ತಮ್ಮ ಪಾರಮ್ಯಕ್ಕೆ ಇವರು ಸಮರ್ಥನೆಯನ್ನು ನೀಡಲೆತ್ನಿಸಿದರು. ಇದಕ್ಕೆ ಅವರು ಕೃಷ್ಣನನ್ನೇ ಮೂಲ ಪುರುಷನನ್ನಾಗಿ ಇರಿಸಿಕೊಂಡರು.[೧೮]

ಕದಂಬರು ಮತ್ತು ಚಾಲುಕ್ಯರಂತೆ ರಾಷ್ಟ್ರಕೂಟರು ಕನ್ನಡಿಗರಾಗಿದ್ದರೂ ಈಗಿನ ಲಾತೂರು ಅಂದಿನ ಕನ್ನಡ ಪ್ರದೇಶದ ಒಂದು ಭಾಗವಾಗಿದ್ದಿತೆಂದು ಅದರ ಹೆಸರಿನಿಂದ ತಿಳಿದುಬರುತ್ತದೆ. ಇವರ ಆಶ್ರಯದಲ್ಲಿ ಕನ್ನಡ ಸಾಹಿತ್ಯ ಅಭಿವೃದ್ಧಿ ಹೊಂದಿತು. ದಂತಿದುರ್ಗನು ಚಾಲುಕ್ಯರ ಅಧಿಕಾರವನ್ನು ಕಿತ್ತೊಗೆದು ರಾಷ್ಟ್ರಕೂಟರ ಸ್ವತಂತ್ರ ರಾಜ್ಯವನ್ನು ಸ್ಥಾಪಿಸಿದನು. ದಂತಿದುರ್ಗನು ಸುಮಾರು ಕ್ರಿ.ಶ.೭೫೬ರಲ್ಲಿ ಮಡಿದ ನಂತರ ಆತನ ಕಕ್ಕನಾದ ಒಂದನೇ ಕೃಷ್ಣನು ಪಟ್ಟಕ್ಕೆ ಬಂದನು. ಕೃಷ್ಣನ ಧರ್ಮ ನಿಷ್ಠೆ ಆಡಳಿತದ ನಂತರ ಆತನ ಮಗ ಒಂದನೆಯ ಗೋವಿಂದನು ಆಳಿದನು. ಈತನು ತನ್ನ ಅಧಿಕಾರ ವ್ಯಾಮೋಹಕ್ಕೆ ಕರ್ತವ್ಯರಹಿತನಾಗಿ ಬಲಿಯಾದಾಗ ತನ್ನ ತಮ್ಮ ಧೃವನಿಗೆ ಅಧಿಕಾರ ಬಿಟ್ಟುಕೊಟ್ಟನು.

ಅತ್ಯಂತ ಬಲಿಷ್ಟ ಅರಸನಾದ ಧೃವನು ಕ್ರಿ.ಶ.೭೮೦ ರಿಂದ ೭೯೩ರವರೆಗೆ ಆಡಳಿತ ನಡೆಸಿ ಯಶಸ್ವಿ ಅರಸನೆನಿಸಿಕೊಂಡನು. ಈತನ ನಂತರ ಜಗತ್ತುಂಗ ಮೂರನೆಯ ಗೋವಿಂದನು ತನ್ನ ತಂದೆಯಂತೆಯೇ ಅತ್ಯಂತ ಪರಾಕ್ರಮಶಾಲಿಯಾಗಿದ್ದನು. ತನ್ನ ಯಶಸ್ವಿ ಅಧಿಕಾರವಧಿಯ ನಂತರ ಒಂದನೆಯ ಅಮೋಘವರ್ಷ ನೃಪತುಂಗನು ಕ್ರಿ.ಶ.೮೧೪ರಲ್ಲಿ ಪಟ್ಟಕ್ಕೆ ಬರುತ್ತಾನೆ. ಈತನು ಸಾಹಿತ್ಯಾರಾಧಕನಾಗಿದ್ದನೆಂಬುದು ಈತನೆ ರಚಿಸಿರುವ ಸಂಸ್ಕೃತ ಕೃತಿ ಹಾಗೂ ತನ್ನ ಆಶ್ರಯದಲ್ಲಿ ರಚಿತವಾದ ಶ್ರೀವಿಜಯನ ಕವಿರಾಜಮಾರ್ಗ ಕೃತಿಗಳಿಂದ ತಿಳಿದು ಬರುತ್ತದೆ. ಅಮೋಘವರ್ಷನ ನಂತರ ಮೂರನೆಯ ಕೃಷ್ಣ, ಖೊಟ್ಟಿಗ ಮತ್ತು ಎರಡನೆಯ ಕರ್ಕ ಕ್ರಮವಾಗಿ ಆಳ್ವಿಕೆ ನಡೆಸುತ್ತಾರೆ.

ನನ್ನ ಅಧ್ಯಯನದ ವ್ಯಾಪ್ತಿಯಲ್ಲಿ ರಾಷ್ಟ್ರಕೂಟರ ಶಾಸನ ದೊರೆಯದೆ ಇದ್ದರೂ ಮುಕ್ಕುಂದಿ ಗ್ರಾಮದ ಪಕ್ಕದ ಗ್ರಾಮ ಸಿಂಗಾಪುರದಲ್ಲಿ ರಾಷ್ಟ್ರಕೂಟರ ಶಾಸನ(ಸಿಂಧ ೨೧) ದೊರೆತಿದೆ. ಅಲ್ಲದೆ ಬನ್ನಿಗನೂರು(ಸಿಂಧ ೪೩) ದಿದ್ದಿಗೆ (ಸಿಂಧ ೪೨) ಮುಂತಾದ ಶಾಸನಗಳು ಸಿಂಧನೂರು ತಾಲೂಕಿನಲ್ಲಿ ದೊರೆತಿವೆ.

ಒಟ್ಟಾರೆಯಾಗಿ ರಾಯಚೂರು ಜಿಲ್ಲೆಯ ಶಾಸನಗಳನ್ನು ಗಮನಿಸಿದಾಗ ಮೊದಲು ಬಾದಾಮಿ ಚಾಲುಕ್ಯರ ಸಂಬಂಧಿಗಳು ಮಾಂಡಳಿಕರೂ ಆಗಿದ್ದ ತಲಕಾಡಿನ ಗಂಗರು ರಾಷ್ಟ್ರಕೂಟರ ಈ ಆಳ್ವಿಕೆಯನ್ನು ಮೊದಲು ವಿರೋಧಿಸಿದ್ದಲ್ಲದೆ ಅವರ ಮೇಲೆ ಇಂದಿನ ಕಂಪ್ಲಿ(ಬಳ್ಳಾರಿ ಜಿ.) ಬಳಿಯಲ್ಲಿ ಯುದ್ಧ ಮಾಡುತ್ತಾರೆ. ಹೀಗಾಗಿ ರಾಷ್ಟ್ರಕೂಟರ ದಂಡು ಮಾನ್ಯಖೇಟದಿಂದ ಈ ಜಿಲ್ಲೆಯ ಮೇಲೆ ಹಾದು ಗಡಿಭಾಗದಲ್ಲಿರುವ ಕಂಪ್ಲಿ ಕಡೆಗೆ ಸಾಗಿರಬೇಕು.[೧೯] ಕ್ರಿ.ಶ.೯-೧೦ನೆಯ ಶತಮಾನದ ಶಾಸನಗಳು ಈ

ಜಿಲ್ಲೆಯಲ್ಲಿ ದೊರೆತಿದ್ದು, ರಾಷ್ಟ್ರಕೂಟರ ಆಳ್ವಿಕೆಯನ್ನು ಉಲ್ಲೇಖಿಸುತ್ತವೆ. ಈ ಪ್ರದೇಶದಲ್ಲಿ ಆಳ್ವಿಕೆ ನಡೆಸಿದ ಅಕಾಲವರ್ಷನ (ಕ್ರಿ.ಶ.೮೭೮-೯೧೪) ಅಂದರೆ ಇಮ್ಮಡಿ ಕೃಷ್ಣನ ಆಳ್ವಿಕೆಯಲ್ಲಿ ಅವರ ಮಗನಾದ ಜಗತ್ತುಂಗನು ಎಡದೊರೆ ೨೦೦೦ವನ್ನು ಆಳುತ್ತಿದ್ದ. ಈತನು ತನ್ನ ತಂದೆಯ ರಾಜ್ಯಭಾರದ ಅವಧಿಯಲ್ಲಿಯೇ ತೀರಿಹೋಗಿದ್ದರಿಂದ ಇವನು ಪಟ್ಟಕ್ಕೆ ಬರಲಿಲ್ಲ. ಆದರೂ ಬೇರೆಡೆ ದೊರತಿರುವ ಇವನ ಶಾಸನಗಳ ಆಧಾರದಿಂದ ಇವನು ಕ್ರಿ.ಶ.೮೯೦ - ೯೦೦ರವರೆಗೆ ಆಳಿರಬೇಕು. ಜಗತ್ತುಂಗನು ಕ್ರಿ.ಶ.೮೯೨ರಲ್ಲಿ ಎಡದೊರೆ ೧೨ ಆಳುತ್ತಿದ್ದಂತೆ ತಿಳಿಯುತ್ತದೆ. (ಮಾನ್ವಿ ೧೯) ನಿತ್ಯವರ್ಷ ಕನ್ನರದೇವ ಹಿರಣ್ಯವರ್ಷ ಮುಂತಾದವರ ಆಳ್ವಿಕೆಯ ಶಾಸನಗಳು ದೊರೆಯುತ್ತವೆ. ಕ್ರಿ.ಶ.೯೨೭ರ ಶಾಸನದಲ್ಲಿ ಹಿರಣ್ಯ ವರ್ಷನ ಹೆಸರನ್ನು ಸೂಚಿಸುತ್ತಿದ್ದು, ಈ ಬಿರುದು ಮುಮ್ಮಡಿ ಇಂದ್ರನಿಗೆ ಇರುತ್ತದೆ.(?) ಇದೇ ಇಂದ್ರನ, ಅಂದರೆ ನಿತ್ಯವರ್ಷ ಪೃಥ್ವಿವಲ್ಲಭನ ಉಲ್ಲೇಖವಿರುವ ಇನ್ನೆರಡು ಶಾಸನಗಳು ದೊರೆತಿದ್ದು ಚಾಲುಕ್ಯ ಸಾಮಂತನೊಬ್ಬ ಇವನ ಕೈಕೆಳಗೆ ಇದ್ದಂತೆ ಹೇಳಿದೆ.[೨೦](ಮಾನ್ವಿ ೮೪, ರಾಯ ೪) ಕ್ರಿ.ಶ.೯೪೦ರ ಶಾಸನದಲ್ಲಿ ರಟ್ಟಕುಲದ ಕನ್ನರದೇವನ ಉಲ್ಲೇಖಬಂದಿದೆ. ಈ ಕನ್ನರದೇವ ಮುಮ್ಮಡಿ ಅಮೋಘವರ್ಷನ ಮಗನಾದ ಇತಿಹಾಸ ಪ್ರಸಿದ್ಧ ಮುಮ್ಮಡಿ ಕೃಷ್ಣನು(ಕ್ರಿ.ಶ.೯೩೯-೯೬೭) ಪಟ್ಟಕ್ಕೆ ಬಂದ ಆರಂಭ ವರ್ಷದ ಶಾಸನ ಇದಾಗಿದೆ. ಹೀಗೆ ರಾಷ್ಟ್ರಕೂಟರ ಆಡಳಿತವನ್ನು ರಾಯಚೂರು ಜಿಲ್ಲೆಯಲ್ಲಿ ಸುತ್ತಮುತ್ತಲ ಪರಿಸರದಲ್ಲಿ ಗುರುತಿಸಬಹುದಾದರೂ ಇವರ ಶಾಸನಗಳು ಅಪೂರ್ಣ ವಿವರಗಳನ್ನು ಒಳಗೊಂಡಿವೆ.

ಕಲ್ಯಾಣ ಚಾಲುಕ್ಯರು

ಕರ್ನಾಟಕವನ್ನಾಳಿದ ಪ್ರಮುಖ ರಾಜ ಮನೆತನಗಳಲ್ಲಿ ಕಲ್ಯಾಣ ಚಾಲುಕ್ಯರ ಮನೆತನವು ಒಂದಾಗಿದೆ. ೧೦ನೇ ಶತಮಾನದಲ್ಲಿ ಪುನಃ ರಾಷ್ಟ್ರಕೂಟರಿಂದ ಅಧಿಕಾರವನ್ನು ಕಸಿದುಕೊಂಡು ತಮ್ಮ ಆಳ್ವಿಕೆಯನ್ನು ಪ್ರಾಬಲ್ಯಗೊಳಿಸಿದರು. ಇವರು ಬಾದಾಮಿ ಚಾಲುಕ್ಯರ ವಂಶದವರೇ ಎಂದು ಅನೇಕ ಆಧಾರಗಳಿಂದ ಖಚಿತವಾಗುತ್ತದೆ. ಜಯಸಿಂಹನು ಕ್ರಿ.ಶ.೧೦೨೧ರಲ್ಲಿ (ಸಿಂಧ ೧೨) ಆಳ್ವಿಕೆ ನಡೆಸಿದ್ದನ್ನು ತಿಳಿಸುತ್ತದೆ. ಕ್ರಿ.ಶ.೧೦೨೨ ಮತ್ತು ೧೦೩೧ರ ಶಾಸನಗಳು ಅಸ್ಪಷ್ಟವಾಗಿದ್ದು ಜಯಸಿಂಹನ ಆಳ್ವಿಕೆಯನ್ನು ಉಲ್ಲೇಖಿಸುತ್ತವೆ.

ತ್ರೈಲೋಕ್ಯಮಲ್ಲನ ಆಳ್ವಿಕೆಯ ಶಾಸನಗಳು ಸಿಂಧನೂರು ಮತ್ತು ಮುಕ್ಕುಂದಿ ಗ್ರಾಮಗಳಲ್ಲಿ ದೊರೆತಿವೆ. ಕ್ರಿ.ಶ.೧೦೩೩ರ ಶಾಸನವು ಸಿಂಧನೂರು ತಾಲೂಕಿನಲ್ಲಿ ದೊರೆತ ಪ್ರಥಮ ಶಾಸನವಾಗಿದೆ. ಚಾಳುಕ್ಯ ಅರಸ ತ್ರೈಳೋಕ್ಯಮಲ್ಲನು ರಾಜ್ಯಭಾರದಲ್ಲಿ ಎಡದೊರೆ ಎರಡು ಸಾವಿರದ ಪೆರ್ಗಡೆ ಮಾರಸಿಂಘನ ತಮ್ಮ ಮಾಡಸಿರವಾರದ ದೇವಸ್ಥಾನ ಒಂದಕ್ಕೆ ದಾನನೀಡಿದ ಉಲ್ಲೇಖವಿದೆ.[೨೧]

ಕ್ರಿ.ಶ.೧೦೪೯ರ ಶಾಸನವು ತ್ರೈಲೋಕ್ಯಮಲ್ಲನ ಕಾಲದ ಉಲ್ಲೇಖವಿದ್ದು ಸಿಂಧವಂಶದ ಗೋನರಸನು ದಂಡನಾಯಕ ಮಾರ್ತಂಡಯ್ಯನು ಮಾಡಿಸಿದ ಸತ್ರಕ್ಕೆ ದಾನನೀಡಿದ್ದನ್ನು ತಿಳಿಸುತ್ತದೆ.[೨೨] ಈ ಶಾಸನವು

ಮುಕ್ಕುಂದಿ ಗ್ರಾಮದಲ್ಲಿದ್ದು ಇದೇ ಗ್ರಾಮದ ನದಿಯ ದಂಡೆಯ ಮೇಲಿರುವ ಮಂಟಪಕ್ಕೆ ದಾನ ನೀಡಿದ್ದನ್ನು ತಿಳಿಸುತ್ತದೆ.

ಕ್ರಿ.ಶ.೧೦೫೩ರ ಶಾಸನವು ತ್ರೈಲೋಕ್ಯಮಲ್ಲನ ಆಳ್ವಿಕೆಯಲ್ಲಿ ಮಂಡಳೇಶ್ವರ ಅಮ್ಮಣ್ಣದೇವನು ನಿಟ್ಟರವೆಯನ್ನು ಆಳುತ್ತ ಕರಹಡ ನೆಲೆವಿಡಿನಲ್ಲಿದರಂತೆ ಈತನ ಸಾಮಂತನಾಗಿ ಸಿಂಧವಂಶದ ನೆಲಗುತ್ತಿಗ ಕಣ್ಣರಸನು ಮುಕ್ಕುಂದಿಯಲ್ಲಿ ಆಳ್ವಿಕೆ ನಡೆಸುತ್ತಿದ್ದನೆಂದು ಸ್ಪಷ್ಟವಾಗಿ ಉಲ್ಲೇಖಿಸುತ್ತದೆ.[೨೩]

ಕ್ರಿ.ಶ.೧೦೬೮ರ ಶಾಸನವು (ಸಿಂಧ ೨೦) ಕಲ್ಯಾಣದಲ್ಲಿ ತ್ರೈಳೋಕ್ಯ ಮಲ್ಲನು ರಾಜ್ಯಭಾರ ಮಾಡುತ್ತಿದ್ದಾಗ ಇವನ ಪತ್ನಿ ತ್ರೈಳೋಕ್ಯ ಮಹಾದೇವಿ ಮುಕ್ಕುಂದಿಯನ್ನು ತ್ರಿಭೋಗ್ಯಾಭ್ಯಂತರವಾಗಿ ಆಳುತ್ತಿದ್ದಳು.[೨೪] ಕಪಾಳೇಶ್ವರ ದೇವರಿಗೆ ದಾನ ನೀಡಿದ ಉಲ್ಲೇಖವಿದೆ. ಈಕೆಯ ಉಲ್ಲೇಖ ಈ ಒಂದು ಶಾಸನದಲ್ಲಿ ಮಾತ್ರ ದೊರೆತಿದೆ. ೧೧೨೪ರಲ್ಲಿ ಕಾಲವನ್ನು ಉಲ್ಲೇಖಿಸುವ ಲಿಂಗಸೂರಿನ ಶಾಸನವು (ಲಿಂಗ ೧) ತ್ರಿಭುವನಮಲ್ಲನು ಕಲ್ಯಾಣ ಪುರದ ನೆಲೆವಿಡಿನಲ್ಲಿದ್ದಾಗ ಅವನ ರಾಣಿ ಅಬ್ಬಲದೇವಿಯು ಕರಡಿಕಲ್ಲು ೨೦೦ ಬಳಿಯ ಲಿಂಗವನ್ನು ಆಳುತ್ತಿದ್ದಳು ಎಂಬುದು ತಿಳಿಸುತ್ತದೆ.[೨೫] ಇದಲ್ಲದೆ ಅನೇಕ ಶಾಸನಗಳು ಕಲ್ಯಾಣ ಚಾಳುಕ್ಯರ ರಾಜರಲ್ಲದೆ. ಅವರ ರಾಣಿಯರು ಕೂಡಾ ಆಳ್ವಿಕೆಯನ್ನು ನಡೆಸುತ್ತಿರುವುದನ್ನು ಶಾಸನಗಳು ತಿಳಿಸುತ್ತವೆ.

ಸಾಲಗುಂದೆಯಲ್ಲಿ ದೊರೆಯುವ ಕ್ರಿ.ಶ.೧೦೬೩ರ ಶಾಸನದ ಆರಂಭದಲ್ಲಿ ನೊರ್ಮಡಿ ತೈಲನಿಂದಾ ರಂಭಿಸಿ ವಿಕ್ರಮಾದಿತ್ಯನವರೆಗೆ ಚಾಳುಕ್ಯ ವಂಶಾವಳಿಯನ್ನು ತಿಳಿಸುತ್ತದೆ. ತ್ರಿಭುವನಮಲ್ಲ ವಿಕ್ರಮಾದಿತ್ಯನು ಮಾಂಡಳೀಕನಾಗಿ ನಾಗದೇವನೆಂಬುವವನು. ಎಡದೊರೆ ನಾಡಿನ ನಿಟ್ಟರವೆ ೭೦ ಆಳುತ್ತಿದ್ದನೆಂದು ತಿಳಿಸುತ್ತದೆ.[೨೬] ಮುಕ್ಕುಂದಿಯು ಈ ನಿಟ್ಟರವೆ ೭೦ರಲ್ಲಿ ಒಂದು ಅಗ್ರಹಾರವಾಗಿತ್ತು.

ಕ್ರಿ.ಶ.೧೦೮೮ರ ಶಾಸನವು ಮುಕ್ಕುಂದಿ ಗ್ರಾಮದ ಸೋಮಲಿಂಗೇಶ್ವರ ದೇವಾಲಯದ ಎಡಭಾಗದಲ್ಲಿದ್ದು, ಚಾಳುಕ್ಯ ತ್ರಿಭುವನ ಮಲ್ಲದೇವನು ಕಲ್ಯಾಣ ಪುರದ ನೆಲೆವೀಡಿನಲ್ಲಿದ್ದಾಗ ಆತನ ಮಾಂಡಳೀಕ ಬಾಚರಸ (ಸಿಂಧ ವಂಶ)ನು ಮುಕ್ಕುಂದಿಯನ್ನು ಆಳುತ್ತಿದ್ದನು. ಈತನ ವಂಶಾವಳಿಯನ್ನು ಈ ಶಾಸನದಲ್ಲಿ ನೀಡಲಾಗಿದೆ.[೨೭]

ಕ್ರಿ.ಶ.೧೦೯೭ರ ಶಾಸನ ಚಾಳುಕ್ಯ ಆರನೆಯ ವಿಕ್ರಮಾದಿತ್ಯ ಕಲ್ಯಾಣಪುರದ ನೆಲೆವಿಡಿನಿಂದ ರಾಜ್ಯಭಾರ ಮಾಡುತ್ತಿದ್ದಾಗ, ಮಹಾ ಮಂಡಳೇಶ್ವರ ಸಿಂಧಕುಲದ ಬಾಚರಸನು ಆಳುತ್ತಿದ್ದನೆಂದು ತಿಳಿಸುತ್ತದೆ. ಈಗೆ ಸಿಂಧನೂರಿನ ಬಹುತೇಕ ಶಾಸನಗಳು ಚಾಳುಕ್ಯ ಆರನೇ ವಿಕ್ರಮಾದಿತ್ಯನನ್ನು ನೇರವಾಗಿ ಮತ್ತು ಆತನ ಬಿರುದುಗಳಿಂದ ಶಾಸನಗಳು ಉಲ್ಲೇಖಿಸುತ್ತವೆ. ಇದರಿಂದ ಆರನೇ ವಿಕ್ರಮಾದಿತ್ಯನ ಆಳ್ವಿಕೆಯ ದೀರ್ಘಕಾಲವನ್ನು ಅರಿಯಬಹುದಾಗಿದೆ.[೨೮]

ಭೂಲೋಕಮಲ್ಲನನ್ನು ಕುರಿತು ಮುಕ್ಕುಂದಿಯ ೧೧೩೪ರ ಶಾಸನವು ಉಲ್ಲೇಖಿಸುತ್ತದೆ. ಮುಕ್ಕುಂದಿಗ್ರಾಮದ ಮುರಹರಿ ದೇವಾಲಯದಲ್ಲಿರುವ ಬಲಗಡೆಯ ಶಾಸನವು ಚಾಳುಕ್ಯ ಭೂಲೋಕಮಲ್ಲನು ಕಲ್ಯಾಣಪುರದ ನೆಲೆವೀಡಿನಿಂದ ಆಳ್ವಿಕೆಯನ್ನು ನಡೆಸುತ್ತಿದ್ದು, ಇತನ ಸಾಮಂತ ಸಿಂಧವಂಶದ ಕಣ್ಣರಸ ಆಡಳಿತವನ್ನು ನೋಡಿಕೊಂಡಿದ್ದನು. ೧೧೩೪ರ ಕಾಲವನ್ನು (ಸಿಂಧ ೫ ಮತ್ತು ೬) ಎರಡು ಶಾಸನಗಳು ಉಲ್ಲೇಖಿಸುತ್ತಿದ್ದು ದಾನದ ವಿಚಾರದಲ್ಲಿ ವ್ಯತ್ಯಾಸ ಕಂಡುಬರುತ್ತದೆ.[೩೯]

ಜಗದೇಕ ಮಲ್ಲನನ್ನು ಕುರಿತು ೧೧೪೩ರ (ಸಿಂಧ ೨೭) ಶಾಸನ ಉಲ್ಲೇಖಿಸುತ್ತದೆ. ಹೀಗೆ ಕಲ್ಯಾಣ ಚಾಲುಕ್ಯರು ಆಡಳಿತ ನಡೆಸಿದ್ದನ್ನು ಸಿಂಧನೂರು ತಾಲೂಕಿನ ಶಾಸನಗಳು ಮತ್ತು ರಾಯಚೂರು ಜಿಲ್ಲೆಯ ಬಹುತೇಕ ಎಲ್ಲಾ ತಾಲೂಕಿನ ಶಾಸನಗಳು ಕಲ್ಯಾಣ ಚಾಲುಕ್ಯ ಅರಸರ ಉಲ್ಲೇಖವನ್ನು ಇರಿವ ಬೆಂಡಂಗನಿಂದ ಆರಂಭಿಸಿ ವಿಕ್ರಮಾದಿತ್ಯ V, ಅಹವಮಲ್ಲ, ಜಯಸಿಂಹ, ತ್ರೈಳೋಕ್ಯಮಲ್ಲ ಭುವನೈಕಮಲ್ಲ, ವಿಕ್ರಮಾದಿತ್ಯ VI, ಭೂಲೋಕಮಲ್ಲ, ಜಗದೇಕಮಲ್ಲ, ವಿಕ್ರಮಚಕ್ರವರ್ತಿ, ರಕ್ಕಸಗಂಗಿದೇವ, ಮಲ್ಲಿಕಾರ್ಜುನ, ತ್ರೈಳೋಕ್ಯಮಲ್ಲ, ಸೋಮೇಶ್ವರ VI ರವರೆಗಿನ ರಾಜರ ಶಾಸನಗಳು ರಾಯಚೂರು ಜಿಲ್ಲೆಯಲ್ಲಿ ಮತ್ತು ಸುತ್ತಮುತ್ತ ತಾಲ್ಲೂಕಿನ ಗ್ರಾಮಗಳಲ್ಲಿ ದೊರೆಯುತ್ತವೆ.

ಕಲ್ಯಾಣ ಚಾಳುಕ್ಯ ಅರಸರಲ್ಲಿಯೇ ಅತ್ಯಂತ ಕುಶಾಗ್ರಮತಿಯೂ, ಅಪ್ರತಿಮ ಪರಾಕ್ರಮಿಯೂ, ನಿಪುಣ ಆಡಳಿತಗಾರನೂ ಆದ ಆರನೆಯ ವಿಕ್ರಮಾದಿತ್ಯನು ಕರ್ನಾಟಕದ ಅಗ್ರಗಣ್ಯ ಅರಸರ ಮಾಲಿಕೆಯಲ್ಲಿ ಸೇರಿದ್ದಾನೆ. ಕ್ರಿ.ಶ.೧೦೭೬ರಲ್ಲಿ ಪಟ್ಟಾಭಿಷೇಕ ಮಾಡಿಕೊಂಡ ಈತನು ಅಂದಿನಿಂದಲೇ ಚಾಳುಕ್ಯ ವಿಕ್ರಮ ಶಕ ಎಂಬ ಹೊಸ ಸಂವತ್ಸರವನ್ನು ಆರಂಭಿಸಿದನು. ಆರನೆ ವಿಕ್ರಮಾದಿತ್ಯನ ಆಳ್ವಿಕೆಯು ಕಲ್ಯಾಣ ಚಾಳುಕ್ಯರ ಆಡಳಿತದಲ್ಲಿ ಎಲ್ಲಾ ವಿಧದಲ್ಲೂ ಸ್ಮರಣೀಯವಾಗಿದೆ. ಸುಮಾರು ೫೦ ವರ್ಷಗಳಿಗೂ ಹೆಚ್ಚು ಕಾಲ ರಾಜ್ಯವಾಳಿದ ಈತನು ಕಲ್ಯಾಣ ಚಾಳುಕ್ಯ ಅರಸರಲ್ಲಿಯೇ ಅತ್ಯಂತ ಶ್ರೇಷ್ಠ ಅರಸನೆನಿಸಿಕೊಂಡಿದ್ದಾನೆ. ಕಲ್ಯಾಣ ಚಾಲುಕ್ಯರ ಆಳ್ವಿಕೆಯ ಅವಧಿಯಲ್ಲಿ ಅತಿ ಹೆಚ್ಚಿನ ಪ್ರಮಾಣದಲ್ಲಿ ದೊರೆತ ಶಾಸನಗಳೆಂದರೆ ಚಾಳುಕ್ಯ ಅರಸ ೬ನೇ ವಿಕ್ರಮಾದಿತ್ಯನ ಶಾಸನಗಳೇ ಆಗಿವೆ.[೪೦]

ಒಟ್ಟಾರೆಯಾಗಿ ಕಲ್ಯಾಣ ಚಾಳುಕ್ಯರ ಆಡಳಿತವು ಶಾಸನಗಳ ಪ್ರಕಾರ ಕ್ರಿ.ಶ.೯೯೨ ರಿಂದ (ಸಿಂಧ ೪೯) ಪ್ರಾರಂಭವಾಗಿ ಕ್ರಿ.ಶ.೧೧೯೬ (ಮಾನ್ವಿ ೧೦೨)ರವರೆಗಿನ ಸೋಮೇಶ್ವರ ಅರಸನ ಆಳ್ವಿಕೆಯಲ್ಲಿ ಕೊನೆಗೊಂಡಿರುವುದು ಕಂಡುಬರುತ್ತದೆ.[೪೧] ಮುಕ್ಕುಂದಿ ಐತಿಹಾಸಿಕ ವಿವೇಚನೆಯಲ್ಲಿ ಕಲ್ಯಾಣ ಚಾಳುಕ್ಯರ ಆಳ್ವಿಕೆ ಅತಿ ಹೆಚ್ಚಿನ ಮಹತ್ವ ಪಡೆದಿದೆ ಎಂದು ಹೇಳಬಹುದಾಗಿದೆ.

ಕಳಚುರಿಯರು

ಕರ್ನಾಟಕದ ಇತಿಹಾಸದಲ್ಲಿ ಕಳಚೂರಿಯರ ಆಳ್ವಿಕೆಯ ಕಾಲವು ವಿಶೇಷ ಮಹತ್ವವನ್ನು ಪಡೆದಿದೆ. ಕಲ್ಯಾಣ ಚಾಳುಕ್ಯರ ಮುಖ್ಯ ಸಾಮಂತ ಅರಸರಲ್ಲಿ ಒಬ್ಬರಾದ ಕಳಚೂರಿಗಳು ಸ್ವತಂತ್ರರಾಗಿ

ರಾಜ್ಯಭಾರ ನಡೆಸಿದುದು ಬಹುಕಡಿಮೆ ಕಾಲ. ಕಲ್ಯಾಣ ಚಾಲುಕ್ಯ ಅರಸ ೬ನೇ ವಿಕ್ರಮಾದಿತ್ಯನು ದೀರ್ಘ ಮತ್ತು ಸಮರ್ಥ ಆಳ್ವಿಕೆಯ ನಂತರ ಅವನ ಮಗ ಮೂರನೆಯ ಸೋಮೇಶ್ವರ ಮತ್ತು ಮೊಮ್ಮಗ ಎರಡನೆಯ ಜಗದೇಕ ಮಲ್ಲನ ಆಳ್ವಿಕೆ ಯಾವ ವಿಶೇಷ ಘಟನೆಗಳಿಲ್ಲದೆ ಕೊನೆಗೊಂಡಿತು. ಚಾಳುಕ್ಯರ ಮೂರನೇ ತೈಲಪ ಅಧಿಕಾರಕ್ಕೆ ಬರುತ್ತಲೇ(ಕ್ರಿ.ಶ.೧೧೪೯) ಬಿಜ್ಜಳನ ಒಳಸಂಚು ಒಮ್ಮೆಲೇ ಲಾವರಸವಾಗಿ ಹೊರಹೊಮ್ಮಿತು. ತತ್ಪರಿಣಾಮವಾಗಿ ಕಳಚೂರಿ ಎರಡನೆಯ ಬಿಜ್ಜಳ ಆಂತರಿಕ ಕ್ರಾಂತಿಯ ಕೇಂದ್ರ ಬಿಂದುವಾಗಿ ದಂಗೆಯೆದ್ದು, ಚಾಳುಕ್ಯ ಸಿಂಹಾಸನದ ಉತ್ತರಾಧಿಕಾರಿಯಾದ.[೩೨]

ಮುಕ್ಕುಂದಿಯ ಐತಿಹಾಸಿಕ ವಿವೇಚನೆಯಲ್ಲಿ ಕಲಚೂರಿಯ ಅರಸರ ಶಾಸನ ದೊರೆಯದೆ ಇದ್ದರೂ ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಸಿಂಧುಕುಲ ವಂಶದವರು ಸಾಮಂತರಾಗಿದ್ದರು. ಆದರೆ ಆಕಸ್ಮಿಕವಾಗಿ ಅಧಿಕಾರ ವಹಿಸಿಕೊಂಡ ಬಿಜ್ಜಳ ಅರಸನ ಸಾಮಂತರಾಗಿ ಇರಲು ಇವರು ಒಪ್ಪಿದರೋ ಅಥವಾ ಒಪ್ಪಲಿಲ್ಲವೋ ಎಂಬುದು ಸ್ಪಷ್ಟವಾಗಿ ತಿಳಿದುಬರುವುದಿಲ್ಲ. ಆದರೂ ನನ್ನ ಅಧ್ಯಯನದ ವ್ಯಾಪ್ತಿಯಲ್ಲಿ ಯಾವುದೇ ಶಾಸನ ದೊರೆಯದಿದ್ದರೂ, ಸಿಂಧನೂರು ತಾಲೂಕಿನ ಬಳಗಾನೂರು ಮುಕ್ಕುಂದಿಗೆ ಸು.೪೦.ಕಿ.ಮೀ. ದೂರದಲ್ಲಿರುವ ಈ ಗ್ರಾಮದಲ್ಲಿ ಕಲಚೂರಿ ಅರಸರ ಮೂರು ಶಾಸನಗಳು ದೊರೆತಿವೆ. ಕ್ರಿ.ಶ.ಸು.೧೧೭೫ರ ಶಾಸನವು ಕಳಚುರಿ ಚಕ್ರವರ್ತಿ ರಾಯಮುರಾರಿ ಸೋವಿದೇವನ ಆಳ್ವಿಕೆಯನ್ನು ತಿಳಿಸುತ್ತದೆ.[೩೩] ಕ್ರಿ.ಶ.೧೧೮೨ರ ಶಾಸನ ಕಳಚೂರ್ಯ ಚಕ್ರವರ್ತಿ ಅಹವಮಲ್ಲನ ಆಳ್ವಿಕೆಯನ್ನು ತಿಳಿಸುತ್ತದೆ. ದಿಗ್ಗೆಗೆ(ದಿದ್ದಿಗಿ)ಯಲ್ಲಿ ವೈಷ್ಣವ ಸರ್ವದೇವ ಶೆಟ್ಟಿ ದೇವರ ಸೇವೆ ಮಾಡಿದವರಿಗೆ ಭೂದಾನ ಮಾಡಿದ ಉಲ್ಲೇಖವಿದೆ.[೩೪]

ಕ್ರಿ.ಶ.೧೧೭೫ರ ಶಾಸನ ಕಲಚೂರ್ಯ ರಾಯಮುರಾರಿ ಸೋವಿದೇವನ ಆಳ್ವಿಕೆಯನ್ನು ಉಲ್ಲೇಖಿಸುವುದರೊಂದಿಗೆ[೩೫] ಇದೇ ಶಾಸನದಲ್ಲಿ ಕಳಚುರಿ ಅಹವಮಲ್ಲನ ನಾಲ್ಕನೆಯ ವರ್ಷದ ಶುಭಕೃತ್, ಜೇಷ್ಠ ಬ ೨, ಬೃಹಸ್ಪತಿ ವಾರದಂದು ಕ್ರಿ.ಶ.೧೧೮೨ರಂದು ವ್ಯಕ್ತಿಗಳಿಗೆ ದಾನ ನೀಡಿದ ಉಲ್ಲೇಖವಿದೆ. ಹೀಗೆ ಇವರ ಆಡಳಿತದ ಅವಧಿಯಲ್ಲಿ ದೊರೆತ ಶಾಸನಗಳನ್ನು ಗಮನಿಸಬಹುದಾಗಿದೆ. ಮುಂದೆ ಕ್ರಿ.ಶ.೧೧೮೪ರಲ್ಲಿ ಮತ್ತೆ ಕಲ್ಯಾಣ ಚಾಳುಕ್ಯ ೪ನೆಯ ಸೋಮೇಶ್ವರನು ಅಧಿಕಾರಕ್ಕೆ ಬರುವುದರೊಂದಿಗೆ ಕಲಚೂರಿಗಳ ಅಲ್ಪಕಾಲದ ಆಳ್ವಿಕೆ ಕೊನೆಗೊಂಡಿತು.

ವಿಜಯನಗರ ಸಾಮ್ರಾಜ್ಯ

ವಿಜಯನಗರ ಸಾಮ್ರಾಜ್ಯದ ಸ್ಥಾಪನೆ ಭಾರತದ ಇತಿಹಾಸದಲ್ಲಿ ಚಿರಸ್ಮರಣೀಯವಾದುದು. ಕ್ರಿ.ಶ.೧೪ನೆಯ ಶತಮಾನದಲ್ಲಿ ಭಾರತವು ಮುಸಲ್ಮಾನರ ಆಕ್ರಮಣದಿಂದ ತತ್ತರಿಸಿದ ಸಮಯದಲ್ಲಿ ಹಿಂದೂ ಧರ್ಮದ ಶ್ರೀರಕ್ಷೆಯಾಗಿ ಉದಯವಾದ ವಿಜಯನಗರ ಸಾಮ್ರಾಜ್ಯವು ಕ್ರಿ.ಶ.೧೩೩೬ರಲ್ಲಿ ತನ್ನ ಮಹತ್ವದ ಆಳ್ವಿಕೆಯನ್ನು ಪ್ರಾರಂಭಿಸಿತು.

ಮುಕ್ಕುಂದಿಯ ಶಾಸನಗಳಲ್ಲಿ ಕೃಷ್ಣದೇವರಾಯನ ಆಳ್ವಿಕೆಯನ್ನು ಕ್ರಿ.ಶ.೧೫೨೫ರ ಶಾಸನವೊಂದು ಉಲ್ಲೇಖಿಸುತ್ತದೆ. ಈ ಶಾಸನದ ಪ್ರಕಾರ ರೌಡಕುಂದ ಸೀಮೆಯ ಸಾಲಗುಂದ ಗ್ರಾಮವು ಅಬ್ಬರಾವು ಅಯ್ಯನ ಕುದರೆ ನಾಯಕನ ಒಡೆತನಕ್ಕೆ ಸೇರಿತ್ತು ಎಂದು ಹೇಳಿದೆ.

ಮುಕ್ಕುಂದ ಗ್ರಾಮದ ಶಾಸನವೊಂದರಲ್ಲಿ (ಕ್ರಿ.ಶ. ೧೫೫೬, ಸಿಂ.೧೪)ಸದಾಶಿವದೇವನು ಆಳುತ್ತಿದ್ದಾಗ ಆನೆಗೊಂದಿಗೆ ಸಲುವ ಕೆಳವಡಿನಾಡಿನ ರವುಡಕುಂದಯ ಸೀಮೆಗೆ ಸೇರುವ ತುಂಗಭದ್ರಾ ತೀರದ ಮಕ್ಕುಂದ ಗ್ರಾಮಕ್ಕೆ ವರದರಾಜಮ್ಮ ಪುರವೆಂಬ ಪ್ರತಿನಾಮವಿತ್ತೆಂದು ಶಾಸನ ತಿಳಿಸುತ್ತದೆ. ಇದು ಅಚ್ಚುತರಾಣಿಯ ಹೆಸರಾಗಿದೆ. ಇದು ಸರ್ವಮಾನ್ಯ ಅಗ್ರಹಾರವೆಂದು ಉಲ್ಲೇಖಿಸುತ್ತದೆ.[೩೬]

ಕ್ರಿ.ಶ.೧೫೫೧ಕ್ಕೆ ಸರಿಹೊಂದುವ ತಾಮ್ರ ಪಟಗಳು ದೊರೆತಿವೆ. ಇವು ಸಿಂಧನೂರು ತಾಲೂಕಿನ ಬೇವನಹಳ್ಳಿ ಗ್ರಾಮಕ್ಕೆ ದಾನ ನೀಡಿದ್ದನ್ನು ಉಲ್ಲೇಖಿಸುತ್ತದೆ.[೩೭] ಕ್ರಿ.ಶ.೧೫೬೧ರ ಕಾಲದ ಶಾಸನವು ಮುಕ್ಕುಂದಿಗೆ ವರದರಾಜಅಂಮಪುರವೆಂಬ ಪ್ರತಿನಾಮವಿದ್ದಂತೆ ತಿಳಿಸುತ್ತದೆ. ಇದು ಸರ್ವಮಾನ್ಯ ಅಗ್ರಹಾರವೆಂದೂ ಹೇಳಿಕೆ ಆದರೆ ರಾಜನ ಹೆಸರಾಗಲಿ, ಸಾಮಂತರ ಹೆಸರಾಗಲಿ ಇದರಲ್ಲಿ ಉಲ್ಲೇಖಿಸಿಲ್ಲ.[೩೮]

ಒಟ್ಟಾರೆಯಾಗಿ ವಿಜಯನಗರ ಸಾಮ್ರಾಜ್ಯದ ಆಡಳಿತ ವ್ಯವಸ್ಥೆಯಲ್ಲಿ ಮುಕ್ಕುಂದಿ ಗ್ರಾಮವು ಆಳ್ವಿಕೆ ಒಳಪಟ್ಟಿದ್ದು ಕೃಷ್ಣದೇವರಾಯ ಮತ್ತು ಸದಾಶಿವದೇವರಾಯನ ಕಾಲದ ಶಾಸನಗಳು ಈ ಗ್ರಾಮದಲ್ಲಿ ಮತ್ತು ಸಿಂಧನೂರು ತಾಲೂಕಿನಲ್ಲಿ ಕಾಣಸಿಗುತ್ತವೆ.

ಬಹುಮನಿ ಸಾಮ್ರಾಜ್ಯ : ಬಹುಮನಿ ಸುಲ್ತಾನರು ಕರ್ನಾಟಕದಲ್ಲಿ ಸುಮಾರು ೩ ಶತಮಾನಗಳಿಗೂ ಹೆಚ್ಚು ಕಾಲ ಆಳಿದರು. ಬಹುಮನಿ ಸಾಮ್ರಾಜ್ಯವು ಅಲ್ಲಾವುದ್ದೀನ್ ಬಹುಮನ್ ಷಾನ ಆಳ್ವಿಕೆಯಿಂದ ಪ್ರಾರಂಭವಾಗುತ್ತದೆ.

ಬಹುಮನಿ ಸುಲ್ತಾನರ ಆಶ್ರಯಕ್ಕೆ ಬಂದ ಹಲವಾರು ಷಾ ಬೆಂಬಲಿಗರನ್ನು ಸೇರಿಸಿಕೊಂಡು ಕ್ರಿ.ಶ.೧೪೮೯ರ ವೇಳೆಯಲ್ಲಿ ಮಹಮ್ಮದ್ ಆದಿಲ್ ಷಾ ಸ್ವತಂತ್ರರಾಗಿ ರಾಜ್ಯಭಾರ ಮಾಡತೊಡಗಿದ ಈತನ ನಂತರ ಇಸ್ಮಾಯಿಲ್ ಹಾಗೂ ಮುಂದೆ ಒಂದನೆ ಇಬ್ರಾಹಿಂ ರಾಜ್ಯಭಾರ ಮಾಡಿದರು. ಎರಡನೆ ಇಬ್ರಾಹಿಂನು ಒಂದನೇ ಇಬ್ರಾಹಿಂನ ನಂತರ ಆಳ್ವಿಕೆ ನಡೆಸಿ ಒಳ್ಳೆ ಆಡಳಿತಗಾರನೆನಿಸಿದ್ದನು. ಈತನ ಅವಧಿಯ ನಂತರ ಮಹಮ್ಮದ್ ಗವಾನನು ಆಳ್ವಿಕೆ ನಡೆಸಿದ್ದರೆ ಮುಂದೆ ಅಧಿಕಾರಕ್ಕೆ ಬಂದ ೨ನೇ ಅಲಿ ಕ್ರಿ.ಶ.೧೬೫೭ ರಿಂದ ೧೬೭೨ರವರೆಗೆ ಅನಂತರ ಸಿಕಂದರ್ ಕ್ರಿ.ಶ.೧೬೭೨ ರಿಂದ ೧೬೮೬ರವರೆಗೆ ಆಳ್ವಿಕೆ ನಡೆಸಿದನು. ರಾಯಚೂರು ಜಿಲ್ಲೆಯ ಲಿಂಗಸೂಗೂರು, ಮಾನ್ವಿ ತಾಲೂಕಿನ ಶಾಸನಗಳಿಂದ ಇವರ ಆಡಳಿತದ ಅವಧಿಯನ್ನು ಗುರುತಿಸಬಹುದಾಗಿದೆ. ಆದರೆ ಸಿಂಧನೂರು ತಾಲೂಕಿನಲ್ಲಿ ಇವರ ಆಳ್ವಿಕೆಯ ಯಾವುದೇ ಶಾಸನ ದೊರೆಯುವುದಿಲ್ಲ. ಅಧಿಕಾರ ವ್ಯಾಪ್ತಿಯ ಕುರಿತು ಯಾವುದೇ ಮಾಹಿತಿ ಲಭ್ಯವಾಗಿಲ್ಲ.

ಸ್ಥಳೀಯ ಅರಸರು

ಕರ್ನಾಟಕ ಆಡಳಿತ ವ್ಯವಸ್ಥೆಯಲ್ಲಿ ಪ್ರಸಿದ್ಧ ಸಾಮ್ರಾಜ್ಯದ ವಂಶಗಳ ಜೊತೆಗೆ ನಾನಾ ದಿಗ್ವಿಜಯಗಳಲ್ಲೂ ರಾಜಭಾರದಲ್ಲೂ ಸಾಮಾಜಿಕ ಕಾರ್ಯದಲ್ಲೂ ಸಕ್ರಿಯವಾಗಿ ಭಾಗವಹಿಸಿ ಅವರ ವಿಖ್ಯಾತಿಯು ದಿಗಂತದಲ್ಲಿ ವಿಶ್ರಾಂತವಾಗಲೂ ಕಾರಣೀಭೂತವಾದ ಸ್ಥಳೀಯ ಅರಸರು ಕೆಲವರಿದ್ದಾರೆ.[೩೯] ಅವರು ವಂಶಪಾರಂಪರ್ಯವಾಗಿ ವಿವಿಧ ರಾಜಮನೆತನಗಳಲ್ಲಿ ಮಹಾ ಮಂಡಳೇಶ್ವರರಾಗಿ ಸಾಮಂತರಾಗಿ ದಂಡ ನಾಯಕರಾಗಿ ಪಾಳೆಪಟ್ಟೆಯ ಅರಸರಾಗಿ ಸೇವೆ ಸಲ್ಲಿಸಿದ್ದಾರೆ. ಪ್ರಮುಖವಾಗಿ ಮುಕ್ಕುಂದಿ ಶಾಸನಗಳಲ್ಲಿ ಸಾಲಗುಂದೆಯ ಸಿಂಧರು ಅತಿ ಹೆಚ್ಚಾಗಿ ಉಲ್ಲೇಖಿತರಾಗಿದ್ದಾರೆ. ಇದಲ್ಲದೆ, ಸಗರನಾಡಿನ ಹೈಹಯರು ಅಯ್ಯವಾಡಿಯ ಹೈಹಯರು, ಎಡದೊರೆ ನಾಡಿನ ಹೈಹಯರು, ಮೊರಟದ ಹೈಹಯರು ಕರಡಕಲ್ಲಿನ ಕದಂಬ ಅರಸರ ಕುರಿತು ಸಿಂಧನೂರಿನ ತಾಲೂಕಿನ ಶಾಸನಗಳು ಸೂಚಿಸುತ್ತವೆ.

ವಿವಿಧ ಪ್ರಾಂತ್ಯಗಳಿಗೆ ಒಡೆಯರಾಗಿ ಆಳುತ್ತಿದ್ದವರು ಸಾಮಂತರು. ಆಳುವ ದೃಷ್ಟಿಯಿಂದ ಇವರು ಸ್ವತಂತ್ರರಾಗಿದ್ದರೂ ತಮ್ಮ ಮೇಲಿನ ಒಡೆಯರಿಗೆ ನಿಷ್ಠೆಯಿಂದ ಇರಬೇಕಾಗಿತ್ತು ಕಾಲಕಾಲಕ್ಕೆ ಕಪ್ಪಕಾಣಿಕೆಗಳನ್ನು ಸಲ್ಲಿಸುವುದು ಜೊತೆಗೆ ಚಕ್ರವರ್ತಿಯು ಯುದ್ಧಕ್ಕೆ ಹೊರಟಾಗ ಸೈನ್ಯದ ನೆರವನ್ನು ಒದಗಿಸಬೇಕಾಗಿತ್ತು. ತಮ್ಮ ನಿಷ್ಠೆ ಮತ್ತ ಪ್ರಾಮಾಣಿಕತೆಯಿಂದ ಇವರು ಆರಂಭದಲ್ಲಿ ಸಾಮಂತರಾಗಿದ್ದು ಮಹಾಮಂಡಳೇಶ್ವರರಾಗಿ ಪದೋನ್ನತಿಯನ್ನು ಪಡೆಯುತ್ತಿದ್ದರು.[೪೦]

ಸಾಲಗುಂದಿಯ ಸಿಂಧರು

ಸಾಲಗುಂದಿಯು ಸಿಂಧನೂರು ತಾಲೂಕಿನ ಒಂದು ಚಿಕ್ಕಗ್ರಾಮ. ಇದು ಎಡೆದೊರೆ ೨೦೦೦ ನಾಡಿನ ಉಪವಿಭಾಗವಾದ ನಿಟ್ಟರವೆ-೭೦ ರಲ್ಲಿಯ ಒಂದು ಅಗ್ರಹಾರವಾಗಿತ್ತು. ಈ ಅಗ್ರಹಾರವ ನ್ನೊಳಗೊಂಡು ಅದರ ಸುತ್ತಮುತ್ತಲಿನ ಕೆಲವು ಹಳ್ಳಿಗಳನ್ನು ಸಿಂದರಸರು ಆಳುತ್ತಿದ್ದರು. ಆದ್ದರಿಂದ ಈ ಮನೆತನಕ್ಕೆ ಸಾಲಗುಂದಿಯ ಸಿಂಧರು ಎಂದು ಕರೆಯಬಹುದು.[೪೧] ಈ ಮನೆತನವು ಕರ್ನಾಟಕ ಹಾಗೂ ಇತರಡೆಗಳಲ್ಲಿ ಅಸ್ಥಿತ್ವದಲ್ಲಿದ್ದ ಇತರೆ ಮನೆತನಗಳಿಗಿಂತ ಭಿನ್ನವಾದದ್ದು. ಕ್ರಿ.ಶ.೧೦೨೪ರ ಶಾಸನ ಸಿಂಧ ಮನೆತನದ ಆಳ್ವಿಕೆಯ ಪ್ರಥಮ ಶಾಸನವಾಗಿದೆ. ಈ ಶಾಸನ ಕಣ್ಣರಸನನ್ನು ಉಲ್ಲೇಖಿಸುತ್ತದೆ.[೪೨]

ಸಾಲಗುಂದೆಯ ಸಿಂದರು ತಮ್ಮವಂಶದ ಮೂಲಪುರುಷ ನಾಗೇಂದ್ರ ಮತ್ತು ನಾಗಣೆಯರೆಂದು ಹೇಳಿಕೊಂಡಿದ್ದಾರೆ.[೪೩] ಈ ನಾಗೇಂದ್ರ ಮತ್ತು ನಾಗಣೆಯರಿಂದ ಎಡೆವರಿದು ಬಂದ ಸಾಲಗುಂದೆ ಸಿಂಧಮನೆತನದಲ್ಲಿ ಮುಂದೆ ಕಾಲಿಗಾನ ಭೂಪನೆಂಬ ಅರಸನು ರಾಜ್ಯಭಾರ ಮಾಡಿದನು. ನಂತರ ಈತನ ಮಗ ಕಣ್ಣರಸನು ಅಧಿಕಾರಕ್ಕೆ ಬಂದನು.

ಕ್ರಿ.ಶ.೧೦೫೩ರ ರೌಡಕುಂದೆಯ ಶಾಸನವು ಮಹಾಸಾಮಂತ ಕಣ್ಣರಸನನ್ನು ಉಲ್ಲೇಖಿಸುತ್ತದೆ.[೪೪] ಅವನು ಇಳಾವಿಖ್ಯಾತ, ಶಿಷ್ಟೇಷ್ಟದಾತ, ಭೂಪಭಯೋದ್ಭೂತ, ಶೌರ್ಯದೊಳುಪಮಾತೀತನೂ ಆಗಿದ್ದನು.[೪೫]

ಈತನ ರಾಣಿ ಕಾವಬ್ಬರಸಿ ಅಥವಾ ಕಾಮಲದೇವಿ ಅವಳು ಗುಣವತಿ, ರೂಪವತಿ ಯಶೋವತಿ, ಬೋಗಾವತಿ, ವಿಳಾಸತಿ, ಮಹಿಮಾನ್ವಿತ ಎನಿಸಿದ್ದಳು. ಇವರಿಗೆ ಕಾಲಿಗಾಸ ಭೋಪ ಮತ್ತು ಬಾಚಿರಾಜಭೂಪರೆಂಬ ಇಬ್ಬರು ಮಕ್ಕಳು ಜನಿಸಿದರು. ಕಣ್ಣರಸನು ಶೌರ್ಯ ಮಾಹೇಶ್ವರ ವಿದ್ಯಾವಿರಿಂಚನ ಸಿಂಧಶಿಖಾಮಣಿ, ವಿಬುಧ ಚಿಂತಾಮಣಿ, ಶೌಚಗಾಂಗೇಯ, ಸತ್ಯರಾಧೇಯ, ಗುಣಗಣೋತ್ತುಂಗ, ಗೋಸ ಸಿಂಗ ಮೊದಲಾದ ಬಿರುದುಗಳನ್ನು ಧರಿಸಿದ್ದನು.[೪೬] ಆದರೆ ಶಾಸನಗಳು ಇತನು ಆಳುತ್ತಿದ್ದ ಪ್ರದೇಶದ ಉಲ್ಲೇಖವನ್ನು ತಿಳಿಸುವುದಿಲ್ಲ.

ಕಾಲಿಗಾನ ಭೋಪ : ಕಣ್ಣರಸನ ನಂತರ ಹಿರಿಯಮಗ, ಕಾಲಿಗಾನ ಭೂಪನು ಅಧಿಕಾರಕ್ಕೆ ಬಂದನು. ಬಹುಶಃ ಅವನು ಅಧಿಕಾರಕ್ಕೆ ಬಂದ ಕೆಲವೇ ವರ್ಷಗಳಲ್ಲಿ ಅಕಾಲ ಮೃತ್ಯುವಿಗೆ ಗುರಿಯಾಗಿದ್ದರಿಂದ ಶಾಸನಗಳು ಅವನ ಆಳ್ವಿಕೆಯನ್ನು ಉಲ್ಲೇಖಿಸುವುದಿಲ್ಲ. 'ಕಣ್ಣರಸ ನಂಕಕಾರ'ನೆಂಬ ಬಿರುದನ್ನು ಧರಿಸಿದ್ದ ಕಾಲಿಗಾನ ಭೂಪನನ್ನು ಬಣ್ಣಿಸಿದೆ.[೪೭]

ಬಾಚಿಭೂಪ(೧೦೬೩ ರಿಂದ ೧೦೮೮) ಸಾಲುಗುಂದೆ ಮನೆತನದ ಅತ್ಯಂತ ಪ್ರಬಲ ಅರಸ ಭಾಚಿಭೂಪ ಅವನ ಮೊದಲ ಉಲ್ಲೇಖ ಕ್ರಿ.ಶ.೧೦೬೩ರ ಸಾಲಗುಂದೆ ಶಾಸನದಲ್ಲಿದೆ.[೪೮] ಇವನನ್ನು ಬಾಚರಸ, ಬಾಚಿಭೂಪ, ಬಾಚಿರಂಗ ಮುಂತಾಗಿ ಕರೆಯಲಾಗಿದೆ. ತನ್ನ ತಂದೆ "ಕಣ್ಣರಸನ ಸಿಂಗ"ನೆನಿಸಿದ್ದ ಅವನು ಚಾಳುಕ್ಯ ವಿಕ್ರಮಾದಿತ್ಯನ ಅತ್ಯಂತ ನಿಷ್ಠಾವಂತ ಸಾಮಂತನಾಗಿದ್ದನೆಂಬುದು "ಪೇರ್ಮಾಡಿ ಬಲ್ಟು" ಎಂಬ ಬಿರುದಿನಿಂದ ಸ್ಪಷ್ಟವಾಗುತ್ತದೆ. ಬಾಚಿಭೂಪನು ನಾಗರಾಜ ವಂಶೋದ್ಭವ ಉನ್ನತಿಮತಿ ತೇಜೋನಿಧಿ ವಿಕ್ರಮ ವಿಭಾಸಿ "ರಿಪುನ್ರಿಪಜಳದಿಮದನ ಸಂಜಾತ, ವೀರ ಲಕ್ಷ್ಮಿಲಕ್ಷಿತ, ದಕ್ಷಿಣದೋರ್ದ್ದಣ್ಡ, ಸಿಂದರೊಳ್ಗಂಡ, ವಿಜಯಪಟ್ಟರುಹವಿಶೇಷ, ಲೋಕೈಯ್ಕಭಾಸ್ಕರ, ಚಲದಂಕರಾಮ ಅಳ್ಗೆನಲ್ಲಾತ, ವೈರಿ ನಿರ್ಗ್ಘಾತ, ಭ್ರಿತ್ಯಚಿಂತಾಮಣಿ, ಸುಭಟ ಶಿರೋಮಣಿ, ಶೌರ್ಯಪ್ರಭಾವ, ಮಂಡಲಗಾವ, ಗಾಂಡಬೇರುಂಡ, ಸೂದ್ರಕವಿಚಾರಣ, ಬುಧಜನಸ್ತುತ್ಯ, ಕಲಿಯಸೆಳೆವ, ಕಣ್ಣಂಗಾನಸಿಂಗ ಮುಂತಾದ ಬಿರುದುಗಳನ್ನು ಧರಿಸಿದ್ದನು.[೪೯] ಇವು ಇವನ ಶೌರ್ಯ ಸಾಹಸಗಳ ಪ್ರತೀಕಗಳಾಗಿವೆ. ಈತನ ಆಳ್ವಿಕೆಯ ಕೊನೆಯ ಉಲ್ಲೇಖ ೧೦೮೮ರ ಮುಕ್ಕುಂದಿ ಶಾಸನದಲ್ಲಿದೆ. ಕ್ರಿ.ಶ.೧೧೩೪ರ ಶಾಸನದಲ್ಲಿ ಕಣ್ಣರಸನ ಮಗ ಬಾಚರಾಜನ ಉಲ್ಲೇಖವಿದೆ.[೫೦] ಕ್ರಿ.ಶ.೧೦೯೭ರ ಶಾಸನದಲ್ಲಿ ಬಾಚರಸ (ಸಿಂಧಕುಲ) ಉಲ್ಲೇಖವಿದೆ.[೫೧]

ಮಹಾಸಾಮಂತ ಬಾಚಿದೇವ ಸಾಲಗುಂದೆ ಸಿಂಧರಸ ಬಾಚಿಭೂಪನ ನಂತರ ಬಾಚಿದೇವನೆಂಬುವವನು ಬಹಳ ದೀರ್ಘಕಾಲದ ಮೇಲೆ ಅಂದರೆ ಕ್ರಿ.ಶ.೧೧೫೩ರಲ್ಲಿ ಕಾಣಿಸಿಕೊಳ್ಳುತ್ತಾನೆ.[೫೨] ಇವನು ಎಡದೊರೆ ೨೦೦೦ರಲ್ಲಿ ಸಾಲಗುಂದೆ ೭೦ನ್ನು ಆಳುತ್ತಿದ್ದನು. ಆದರೆ ಶಾಸನವು ಅವನು ಸಿಂಧವಂಶನೆಂಬುವುದನ್ನು ಸ್ಪಷ್ಟಪಡಿಸುವುದಿಲ್ಲ.[೫೩] ಆದ್ದರಿಂದ ಸದ್ಯದ ಸ್ಥಿತಿಯಲ್ಲಿ ಈತನ ಕುರಿತು ಏನೂ ಹೇಳಲು ಸಾಧ್ಯವಿಲ್ಲ. ಒಂದು ವೇಳೆ ಸಿಂಧು ವಂಶದವನೆಂದು ಒಪ್ಪಿಕೊಂಡರೆ ಕ್ರಿ.ಶ.೧೦೮೮ ಮತ್ತು ಕ್ರಿ.ಶ.೧೧೩೪ರ ಶಾಸನವನ್ನು

ಹೊರತುಪಡಿಸಿ ಕ್ರಿ.ಶ.೧೧೫೩ರವರೆಗಿನ ಅವಧಿಯಲ್ಲಿ ಯಾರು ಆಳುತ್ತಿದ್ದರು ಎಂಬುದಕ್ಕೆ ಕಾಲವೇ ಉತ್ತರಿಸಬೇಕಾಗಿದೆ. ಹೀಗೆ ಮುಕ್ಕುಂದಿಯ ಐತಿಹಾಸಿಕ ವಿವೇಚನೆಯಲ್ಲಿ ಸಿಂಧರ ಕುರಿತು ಉಲ್ಲೇಖವಾಗಿರುವುದನ್ನು ಶಾಸನಗಳಿಂದ ತಿಳಿಯಬಹುದಾಗಿದೆ. ಇವರು ಕಲ್ಯಾಣ ಚಾಲುಕ್ಯರ ಆಡಳಿತ ವ್ಯವಸ್ಥೆಯಲ್ಲಿ ಸಿಂಧವಂಶದವರು ಸಾಮಂತರಾಗಿ ಮಹಾಮಂಡಳೇಶ್ವರರಾಗಿ ಅಧಿಕಾರ ನಡೆಸಿದ್ದಾರೆ.

ಹಂಡೆ ಪಾಳೆಯಗಾರರು

ಸ್ಥಳೀಯ ಪಾಳೆಯ ಪಟ್ಟುಗಳಲ್ಲಿ ಹಂಡೆ ಅರಸು ಮನೆತನವೂ ಒಂದು. ಅವರು ವೀರಶೈವ ಧರ್ಮವನ್ನು ಸ್ವೀಕರಿಸಿದ ಹಾಗೂ ವೀರಶೈವ ಧರ್ಮದ ಗುರುಗಳಿಗೆ ಭಕ್ತರಾಗಿ ನಡೆದುಕೊಂಡ ಬಗ್ಗೆ ಮಾಹಿತಿಗಳು ತಿಳಿಯಬರುತ್ತವೆ. ಹಂಡೆ ಪಾಳೆಗಾರರ ಆಳ್ವಿಕೆಯ ಬಗೆಗೆ ಸ್ಪಷ್ಟವಾಗಿ ತಿಳಿಯುತ್ತದೆಯಾದರೂ ಅವರ ಇತಿಹಾಸ ಇನ್ನೂ ಪರಿಪೂರ್ಣವಾಗಿಲ್ಲ ಈ ಪಾಳೆಯಗಾರರ ಚರಿತ್ರೆಯನ್ನು ರೂಪಿಸುವಲ್ಲಿ ಶಾಸನಗಳು ಕೈಫಿಯತ್ತಗಳು ಸಾಹಿತ್ಯ ಕೃತಿಗಳು ಇತ್ತೀಚೆಗೆ ದೊರೆತಿದ್ದರೂ, ಆ ಆಕರಗಳಲ್ಲಿ ಪರಸ್ಪರ ತೊಡಕು ಹಾಗೂ ಅಸ್ಪಷ್ಟತೆ ತುಂಬಿರುವುದು ಕಂಡುಬರುತ್ತದೆ.[೫೪]

"ಹಂಡೆಯ ಅನಂತ ಪುರದ ಕೈಫಿಯತ್ತಿನ ಪ್ರಕಾರ ಬಾಗೇವಾಡಿ ವಿಭಾಗದ ಮುತ್ತಿಗೆ ಹಾಗೂ ವಡವಡಿಕೆಗಳಲ್ಲಿದ್ದ ಲಕ್ಕಿನಾಯಕನು ಹಂಡೆ ಪಾಳೆಗಾರರ ಮೂಲ ಪುರುಷನಾಗಿದ್ದಾನೆ. ಇವನ ಮಕ್ಕಳು ಬಾಲದ ಹನುಮಪ್ಪನಾಯಕ, ನಾಗಿ ಬಳಗನಾಯಕ, ಬಾಲದ ಹನುಮಪ್ಪ ನಾಯಕ ಹಾಗೂ ಅವನ ಮುಂದಿನ ವಂಶಜರು ಬಳ್ಳಾರಿಯನ್ನು ಕೇಂದ್ರವಾಗಿ ಮಾಡಿಕೊಂಡು ಆಳ್ವಿಕೆಯನ್ನು ನಡೆಸಿದರು.[೫೫] ಬಳ್ಳಾರಿಯ ಪರಿಸರಕ್ಕೆ ಹೊಂದಿಕೊಂಡಿದ್ದ ರಾಯಚೂರು ಜಿಲ್ಲೆಯ ಕೆಲವು ಭಾಗಗಳಲ್ಲಿ ಹಂಡೆಯ ಪಾಳೆಗಾರರಲ್ಲಿ ಕೆಲವರು ಆಳ್ವಿಕೆ ನಡೆಸಿದ್ದರ ಬಗ್ಗೆ ರಾಯಚೂರು ಜಿಲ್ಲೆಯ ಶಾಸನಗಳಲ್ಲಿ ಉಲ್ಲೇಖವಿದೆ.

ಮುಕ್ಕುಂದಿ ಶಾಸನವು ಕ್ರಿ.ಶ.೧೬೦೩ ರಲ್ಲಿ ಆಳ್ವಿಕೆ ನಡೆಸಿದ ಹಂಡೆ ಮಲಕಪ್ಪ ನಾಯಕನು ಶಿವಾಚಾರ ಸಂಪನ್ನನಾದ ಬೆಂಡೆಗೆರೆಯ ಸಿದ್ಧವೀರಣ್ಣ ದೇವನ ಶಿಷ್ಯನಾದ ಭಂಡಾರಿ ಸಿದ್ಧರಾಮ ದೇವನಿಗೆ ಅರೆಯಹಳ್ಳಿ ಗ್ರಾಮವನ್ನು ತನ್ನ ತಂದೆ ತಾಯಿಗಳಿಗೆ ಪುಣ್ಯವಾಗಬೇಕೆಂಬ ಉದ್ದೇಶದಿಂದ ಪುರವರ್ಗವಾಗಿ ದಾನ ನೀಡಿದ ವಿವರವನ್ನು ಶಾಸನ ತಿಳಿಸುತ್ತದೆ.[೫೬] ಈ ಪರಾಕ್ರಮಿ ಧರ್ಮಿಷ್ಟ ಜನೋಪಕಾರಿ, ಒಳ್ಳೆಯ ವ್ಯಕ್ತಿತ್ವ ಹೊಂದಿದವನಾಗಿದ್ದನೆಂದು ಈತನು ವೀರಶೈವ ಧರ್ಮದ ಅನುಯಾಯಿಯಾಗಿದ್ದನೆಂದು ತಿಳಿಸುತ್ತದೆ. ನಂತರದ ಕಾಲದಲ್ಲಿ ಹಂಡೆ ಹನುಮಪ್ಪ ನಾಯಕನನ್ನು ಕುರಿತು ಕ್ರಿ.ಶ.೧೬೫೭ರ ಬಾದರ್ಲಿ ಶಾಸನ ಉಲ್ಲೇಖಿಸುತ್ತದೆ.[೫೭] ಕ್ರಿ.ಶ.೧೭ನೇ ಶತಮಾನಕ್ಕೆ ಸೇರಿದ ಮರಳಿ ಶಾಸನ ಹಂಡೆ ಪಾಳೆಯ ಅರಸ ಹನುಮನಾಯಕ ಅಂಕುಶ ರಾಯನನ್ನು ಉಲ್ಲೇಖಿಸುತ್ತದೆ. ಈತನು ತನ್ನ ಗುರು ಕರಡಿಲಿಂಗ ಬಸಪ್ಪಯ್ಯ ರಾಜದೇವರಿಗೆ ತಾವರಗೇರಾ ಸೀಮೆಗೆ ಸಲ್ಲುವ ಮರಳಿ ಗ್ರಾಮವನ್ನು ದಾನವಾಗಿ ನೀಡಿದುದ್ದಾಗಿ ತಿಳಿಸುತ್ತದೆ.

ಹಂಡೆಯ ಪಾಳೆಗಾರರ ಪರಂಪರೆಯಲ್ಲಿ ಬಂದ ಅರಸರು ರಾಯಚೂರು ಜಿಲ್ಲೆಯವರೆಗೂ ರಾಜ್ಯವಿಸ್ತಾರ ಮಾಡಿದ್ದರ ಬಗೆಗೆ ರಾಯಚೂರು ಜಿಲ್ಲಯ ಶಾಸನಗಳಲ್ಲಿ ಉಲ್ಲೇಖವಿದೆ. ಇವರು ತಮ್ಮ ಆಳ್ವಿಕೆಯ ಉದ್ದಕ್ಕೂ ವೀರಶೈವ ಮಠಮಾನ್ಯಗಳಿಗೆ ವ್ಯಕ್ತಿಗಳಿಗೆ ನಡೆದುಕೊಂಡವರಾಗಿದ್ದಾರೆ. ಸಾಂಸ್ಕೃತಿಕ ಚಟುವಟಿಕೆಗಳತ್ತ ಗಮನ ಹರಿಸಿದ್ದಾರೆ. ಜನಹಿತ ಕಾರ್ಯಗಳನ್ನು ಕೈಗೊಂಡವರಾಗಿದ್ದಾರೆ.[೫೮]

ದೇಶಗತ್ತಿ ಮನೆತನಗಳು

ವಿಜಯನಗರ ಸಾಮ್ರಾಜ್ಯ ಪತನವಾದ ನಂತರ ಕರ್ನಾಟಕದ ಉತ್ತರ ಭಾಗದಲ್ಲಿ ಒಂದು ಕೇಂದ್ರ ಸರಕಾರವಿಲ್ಲದೆ, ಧರ್ಮ, ಭಾಷೆ ಮತ್ತು ಸಂಸ್ಕೃತಿಗಳು ನಾಶವಾಗುತ್ತಿರುವ ಕಠಿಣ ಪರಿಸ್ಥಿತಿಯಲ್ಲಿ ಅವುಗಳನ್ನು ರಕ್ಷಿಸಲೆಂದೇ ಅನೇಕ ಸಣ್ಣಪುಟ್ಟ ದೇಶಗತ್ತಿ, ನಾಡಗೌಡತಿ ಮೊದಲಾದ ದೇಶಿಯ ಸಂಸ್ಥಾನಗಳು ಹುಟ್ಟಿಕೊಂಡವು. ಈ ಸಂಸ್ಥಾನಗಳು ಬಿಜಾಪುರದ ಆದಿಲ್‌ಶಾಹಿ, ಹೈದರಾಬಾದ್‌ನ ನಿಜಾಮ್ ಮತ್ತು ಬ್ರಿಟಿಷರ ಅಂಕಿತದಲ್ಲಿ ಇದ್ದುಕೊಂಡು ಹಿಂದೂ ಧರ್ಮ ಸಾಹಿತ್ಯ ಸಂಸ್ಕೃತಿಗಳನ್ನು ಕಾಪಾಡಿಕೊಂಡು ಬಂದವು. ಕನ್ನಡ ಭಾಷೆ, ಸಂಸ್ಕೃತಿಗಳು ಇವರ ಆಶ್ರಯದಲ್ಲಿ ಬೆಳೆದು ಬಂದವು. ದೇಶಗತಿಯ ದರ್ಬಾರ್ ದೌಲತ್ ಯುದ್ಧ ವಿಲಾಸಗಳು ಪರಿಭ್ರಮಣದ ಜೀವನದಲ್ಲಿಯು ಸಂಸ್ಥಾನಗಳು ನಾಡಿನ ಸಂಸ್ಕೃತಿಯನ್ನು ಪೋಷಿಸಿಕೊಂಡು ಬರುವಲ್ಲಿ ಬಹುಮುಖ್ಯ ಪಾತ್ರವನ್ನು ವಹಿಸಿದವು.

ಸಿಂಧನೂರು ತಾಲ್ಲೂಕಿನಲ್ಲಿ ಹಲವಾರು ದೇಶಗತ್ತಿ ಮನೆತನದವರ ಹೆಸರು ಕೇಳಿ ಬರುತ್ತಿದ್ದು, ಈ ಮನೆತನಗಳಿಗೆ ಧಣಿಯರು, ಜಾಗೀರುದಾರರು ನಾಡಗೌಡರು ಎಂಬುದಾಗಿ ಕರೆಯುತ್ತಿದ್ದಾರೆ. ಇವರು ತಮ್ಮ ಪರಾಕ್ರಮ ಪೌರುಷಗಳಿಗೆ ಹಾಗೂ ಸಂಸ್ಕೃತಿಯ ಸಂವರ್ಧನೆಗೆ ಪ್ರಸಿದ್ಧವಾಗಿದ್ದಾರೆ. ಅಲ್ಲದೆ ಸಾಮಾಜಿಕ ಕಾರ್ಯ, ದಾನಧರ್ಮಕ್ಕೆ ಈ ದೇಸಾಯಿಗಳು ಹೆಸರು ವಾಸಿಯಾಗಿದ್ದಾರೆ. ಮುಕ್ಕುಂದಿ ಗ್ರಾಮದಲ್ಲಿಯ ಕ್ರಿ.ಶ.೧೮ನೇ ಶತಮಾನದ(ಸಿಂಧ ೧೨)ಲಿಪಿ ಹೊಂದಿದ ಶಾಸನವೊಂದು ದೇಸಾಯಿ ಮನೆತನವನ್ನು ಕುರಿತು ಪರಗಣೆಯ ಗದಗು ರವುಡ-ಕುಂದ.......ವಿಯದೇಸಾಯಿ ಸಂಮಂದ ಸರದೇಸಾಯಿಗಳ ಅಣ್ಣಪ್ಪೆಯ್ಯನವರು ದೇವಾತಾಸ್ಯೇವಿಗೋಸ್ಕರ ಮುಕ್ಕುಂದಿ ಗ್ರಾಮದ ತೀರದಲ್ಲಿ ಮಂಟಪ ಕಟ್ಟಿಸಿದ ಸೇವೆ ಎಂದು ಉಲ್ಲೇಖಿಸುತ್ತದೆ. ಈ ಶಾಸನವನ್ನು ಗಮನಿಸಿದಾಗ ದೇಸಾಯಿ ಮನೆತನದವರ ಆಳ್ವಿಕೆಗೆ ಮುಕ್ಕುಂದಿ ಗ್ರಾಮವು ಒಳಪಟ್ಟಿತ್ತು ಎಂಬುದು ತಿಳಿದುಬರುತ್ತದೆ.

ಒಟ್ಟಾರೆಯಾಗಿ ಮುಕ್ಕುಂದಿಯ ಇತಿಹಾಸವು ಪ್ರಾಗೈತಿಹಾಸಿಕ ಕಾಲದಿಂದ ಹಿಡಿದು ಮೌರ್ಯರು ಆಳ್ವಿಕೆಗೆ ಒಳಪಟ್ಟಿರಬಹುದಾದರು ಅಧಿಕೃತವಾಗಿ ರಾಷ್ಟ್ರಕೂಟರು ಕಲ್ಯಾಣಿ ಚಾಲುಕ್ಯರು, ವಿಜಯನಗರ ಅರಸರು ಆಳ್ವಿಕೆ ನಡೆಸಿದರೆಂದು ಶಾಸನಗಳು ದಾಖಲಿಸುತ್ತವೆ.

ಅಡಿಟಿಪ್ಪಣಿಗಳು

೧. ದೇವರಕೊಂಡಾರೆಡ್ಡಿ(ಸಂ), ೨೦೦೩, ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೭, ಪು.೩೭೩

೨. ಅದೇ, ಪು.೩೭೨

೩. ಅದೇ, ಪು.೩೬೮

೪. ಅದೇ, ಪು.೩೬೯-೩೭೦

೫. ಸೂರ್ಯನಾಥ ಯು.ಕಾಮತ್(ಸಂ), ೧೯೮೪, ಕರ್ನಾಟಕ ರಾಜ್ಯ ಗ್ಯಾಜೆಟಿಯರ್, ಭಾಗ ೧, ಪು.೧೫೦

೬. ದೇವರಕೊಂಡಾರೆಡ್ಡಿ(ಸಂ), ೨೦೦೩, ಪೂರ್ವೋಕ್ತ, ಪು.೩೭೩

೭. ಅದೇ, ಪು.೩೭೦

೮. ಶಿವತಾರಕ್ ಕೆ.ಬಿ., ೨೦೦೧, ಕರ್ನಾಟಕದ ಪುರಾತತ್ವನೆಲೆಗಳು, ಪು.೩

೯. ಅದೇ, ಪು.೧೭

೧೦. ಅದೇ, ಪು.೧೮-೧೯

೧೧. ಸುಂದರ ಅ., ೧೯೯೭, ಕರ್ನಾಟಕ ಚರಿತ್ರೆ ಸಂಪುಟ ೧, ಪು.೨೮೬

೧೨. ತಿಪ್ಪೇರುದ್ರಸ್ವಾಮಿ, ೧೯೯೭, ಕರ್ನಾಟಕ ಸಾಂಸ್ಕೃತಿಕ ಸಮೀಕ್ಷೆ, ಪು.೭೫

೧೩. ಸೂರ್ಯನಾಥ ಯು.ಕಾಮತ್(ಸಂ), ೧೯೮೪, ಪೂರ್ವೋಕ್ತ, ಪು.೧೬೪

೧೪. ಲಕ್ಷ್ಮಣ್ ತೆಲಗಾವಿ, ೨೦೦೪, ಮೌರ್ಯ ಮತ್ತು ಶಾತವಾಹನರ ಯುಗ, ಪು.೮೬-೮೭

೧೫. ಸೂರ್ಯನಾಥ ಯು.ಕಾಮತ್(ಸಂ), ೧೯೮೪, ಪೂರ್ವೋಕ್ತ, ಪು.೧೬೬

೧೬. ದೇವರಕೊಂಡಾರೆಡ್ಡಿ(ಸಂ), ೨೦೦೩, ಪೂರ್ವೋಕ್ತ, ಪು.xxx

೧೭. ಸೂರ್ಯನಾಥ ಯು.ಕಾಮತ್(ಸಂ), ೧೯೮೪, ಪೂರ್ವೋಕ್ತ, ಪು.೧೮೪

೧೮. ಸುರೇಂದ್ರರಾವ್(ಸಂ), ೧೯೯೭, ಕರ್ನಾಟಕ ಚರಿತ್ರೆ, ಸಂಪುಟ ೨, ಪು.೮

೧೯. ದೇವರಕೊಂಡಾರೆಡ್ಡಿ(ಸಂ), ೨೦೦೩, ಪೂರ್ವೋಕ್ತ, ಪು.xxx

೨೦. ಅದೇ, ಪು.xxi

೨೧. ಅದೇ, ಪು.೪೧೮

೨೨. ಅದೇ, ಪು.೩೬೫

೨೩. ಅದೇ, ಪು.೩೪೪

೨೪. ಅದೇ, ಪು.೩೭೬

೨೫. ಅದೇ, ಪು.೧೨೩

೨೬. ಅದೇ, ಪು.೩೪೯

೨೭. ಅದೇ, ಪು.೩೬೨

೨೮. ಅದೇ, ಪು.೩೫೮

೨೯. ಅದೇ, ಪು.೩೫೩-೩೫೬

೩೦. ಭಾರತಿ ಬಸವರಾಜ, ೨೦೦೫, ರಾಯಚೂರು ಜಿಲ್ಲೆಯ ಶಾಸನಗಳ ಸಮಗ್ರ ಅಧ್ಯಯನ, ಪು.೩೭

೩೧. ದೇವರಕೊಂಡಾರೆಡ್ಡಿ(ಸಂ), ೨೦೦೩, ಪೂರ್ವೋಕ್ತ, ಪು.xxi-xxii

೩೨. ಕೊಪ್ಪಾ ಎಸ್.ಕೆ., ತರ್ದವಾಡಿನಾಡಿನ ಒಂದು ಅಧ್ಯಯನ, ಪು.೬೪

೩೩. ದೇವರಕೊಂಡಾರೆಡ್ಡಿ(ಸಂ), ೨೦೦೩, ಪೂರ್ವೋಕ್ತ, ಪು.೩೯

೩೪. ಅದೇ, ಪು.೪೦೧

೩೫. ಅದೇ, ಪು.೪೦೯

೩೬. ಅದೇ, ಪು.೩೭೦

೩೭. ಅದೇ, ಪು.೪೨೪

೩೮. ಅದೇ, ಪು.೩೭೧

೩೯. ಕೃಷ್ಣರಾವ್ ಎಂ.ವಿ., ಮತ್ತು ಕೇಶವಭಟ್ಟ ಎಂ., ೧೯೭೦, ಕರ್ನಾಟಕ ಇತಿಹಾಸದರ್ಶನ, ಪು.೩೦೩

೪೦. ಚನ್ನಬಸವ ಹಿರೇಮಠ, ೨೦೦೦, ಎಡದೊರೆ ನಾಡು, ಪು.೧೧

೪೧. ಚನ್ನಬಸವ ಹಿರೇಮಠ, ೧೯೯೫, ಕುರುಗೋಡಿನ ಸಿಂಧರು ಒಂದು ಅಧ್ಯಯನ, ಪು.೫೬

೪೨. ದೇವರಕೊಂಡಾರೆಡ್ಡಿ(ಸಂ), ೨೦೦೩, ಪೂರ್ವೋಕ್ತ, ಪು.xi

೪೩. ಅದೇ, ಪು.೩೬೨

೪೪. ಅದೇ, ಪು.೩೪೪

೪೫. ಅದೇ, ಪು.೩೬೨

೪೬. ಅದೇ, ಪು.೩೪೫

೪೭. ಅದೇ, ಪು.೩೬೩

೪೮. ಅದೇ, ಪು.೩೫೧

೪೯. ಚನ್ನಬಸವ ಹಿರೇಮಠ, ೧೯೯೫, ಪೂರ್ವೋಕ್ತ, ಪು.೫೬

೫೦. ದೇವರಕೊಂಡಾರೆಡ್ಡಿ(ಸಂ), ೨೦೦೩, ಪೂರ್ವೋಕ್ತ, ೩೫೪-೩೫೬

೫೧. ಅದೇ, ಪು.೩೫೮

೫೨. ಚನ್ನಬಸವ ಹಿರೇಮಠ, ೧೯೯೫, ಪೂರ್ವೋಕ್ತ, ಪು.೫೨

೫೩. ಭಾರತಿ ಬಸವರಾಜ, ೨೦೦೫, ಪೂರ್ವೋಕ್ತ, ಪು.೪೯

೫೪. ನಾಗಭೂಷಣ ಸಿ., ೧೯೯೯, ಕನ್ನಡ ಸಾಹಿತ್ಯ ಸಂಸ್ಕೃತಿ ಶೋಧನೆ, ಪು.೧೮೬

೫೫. ದೇವರಕೊಂಡಾರೆಡ್ಡಿ(ಸಂ), ೨೦೦೩, ಪೂರ್ವೋಕ್ತ, ೩೭೩-೩೭೪

೫೬. ಅದೇ, ಪು.೪೨೧

೫೭. ಅದೇ, ಪು.೨೨೦

೫೮. ನಾಗಭೂಷಣ ಸಿ., ೧೯೯೯, ಪೂರ್ವೋಕ್ತ, ಪು.೧೮೩

ಅಧ್ಯಾಯ ೩

ಶಾಸನಗಳು

೩.೧. ದಾನ ದತ್ತಿ

೩.೨. ತ್ಯಾಗ ಬಲಿದಾನ

೩.೩. ಆರ್ಥಿಕ ವ್ಯವಸ್ಥೆ

೩.೪. ಆಡಳಿತ ಅಧಿಕಾರಿಗಳು ಮತ್ತು ವಿಭಾಗಗಳು

ಶಾಸನಗಳು

ಮುಕ್ಕುಂದಿಯ ಪರಿಸರದಲ್ಲಿ ಹಲವಾರು ಅರಸು ಮನೆತನದವರು ಹಾಕಿಸಿರುವ ಅನೇಕ ಶಿಲಾ ಶಾಸನಗಳು ವೀರಗಲ್ಲುಗಳು ದೊರೆತಿವೆ. ಈ ಶಿಲಾ ಶಾಸನಗಳು ವಿವಿಧ ವಿಷಯಗಳ ಕುರಿತು ಮಾಹಿತಿಯನ್ನು ಒದಗಿಸುತ್ತವೆ. ಇವು ಪ್ರಮುಖವಾಗಿ ರಾಜಕೀಯ, ಆರ್ಥಿಕ, ಧಾರ್ಮಿಕ, ಸಾಮಾಜಿಕ ಮೌಲ್ಯಗಳನ್ನು ತಿಳಿಸುತ್ತವೆ. ಈ ಗ್ರಾಮದಲ್ಲಿ ದೊರೆತಿರುವ ಶಾಸನಗಳಲ್ಲಿ ಪ್ರಮುಖವಾಗಿ ದಾನದತ್ತಿ ಶಾಸನಗಳು, ವಿಶೇಷವಾಗಿರುವುದು ಕಂಡುಬರುತ್ತದೆ.

ಶಾಸನ ಎಂಬುದು ಮೂಲತಃ ಸಂಸ್ಕೃತಪದ ರಾಜಾಜ್ಞೆ, ಆದೇಶ ಎಂದರ್ಥ. ಇಂದಿಗೂ ಶಾಸನ ಎಂಬ ಪದಕ್ಕೆ ಕಾನೂನು ಎಂಬ ಅರ್ಥವೂ ಪ್ರಚಲಿತವಿದೆ.[1] ಶಾಸನಕ್ಕೆ ಸಮಾನಾರ್ಥವಾಗಿ ಬಳಕೆಯಾಗುತ್ತಿರುವ ಆಂಗ್ಲ ಶಬ್ದ "Inscription" ಇದಕ್ಕೆ "Epigraph" ಎಂಬ ಪದ ಪ್ರಯೋಗವೂ ಇದೆ. ಇದರಿಂದಲೇ 'Epigraphy' ಎಂಬ ಶಬ್ದ ಬಳಕೆಯಲ್ಲಿದೆ. "Inscription" ಎಂಬ ಪದವು Inscribere ಎಂಬ ಲ್ಯಾಟಿನ್ ಭಾಷೆಯ ಪದದಿಂದ ಬಂದಿದ್ದು 'ಮೇಲೆ ಬರೆ' ಎಂಬ ಅರ್ಥವನ್ನು ಹೊಂದಿದೆ. ಹಾಗೆಯೇ "Epigraphy ಎಂಬ ಪದವು "epi"(ಮೇಲೆ) ಮತ್ತು 'graphie'(ಬರೆ ಸಂಕೇತ) ಎಂಬೆರಡು ಗ್ರೀಕ್ ಪದಗಳಿಂದ ಹುಟ್ಟಿಕೊಂಡಿದೆ.

'Inscription' ಎಂದರೆ ಬಹುಕಾಲ ನಿಲ್ಲಬಲ್ಲ, ಶಾಶ್ವತವಾಗಿ ಉಳಿಯಬಲ್ಲ ವಸ್ತುಗಳ ಮೇಲೆ ಕೊರೆಯಲ್ಪಟ್ಟ ಬರಹ ಕಲ್ಲು ತಾಮ್ರ ಬೆಳ್ಳಿ ಮೊದಲದವುಗಳ ಮೇಲೆ ಕೊರೆಯಲ್ಪಟ್ಟ ಬರಹಗಳು ಶಾಸನಗಳು.[2] ಶುಕ್ರನೀತಿಸಾರದಲ್ಲಿ ಕೌಟಿಲ್ಯನ 'ಅರ್ಥಶಾಸ್ತ್ರ'ದಲ್ಲಿ 'ಬೃಹತ್‌ಸ್ಮೃತಿ'ಯಲ್ಲಿ ಇನ್ನು ಅನೇಕ ಗ್ರಂಥಗಳಲ್ಲಿ ಶಾಸನ ಎಂಬ ಪದ ರಾಜಾಜ್ಞೆ ಎಂಬ ಅರ್ಥದಲ್ಲೇ ಉಪಯೋಗಿಸಲ್ಪಟ್ಟಿದೆ.

ಭಾರತೀಯರು ಶಾಸನ ಎಂಬ ಪದಕ್ಕೆ ವಿಶಾಲ ಅರ್ಥವನ್ನು ನೀಡುವುದರ ಸಲುವಾಗಿ ಅವುಗಳ ಆಂತರಿಕ ವಿಷಯಗಳನ್ನು ಗಮನದಲ್ಲಿರಿಸಿಕೊಂಡು ವ್ಯಾಖ್ಯಾನಿಸಿದರು. ಹೀಗಾಗಿ ಶಾಸನವೆಂಬುದು ಆಜ್ಞೆ ಪ್ರಜೆಗಳೆಲ್ಲರೂ ಪಾಲಿಸಬೇಕಾದ ಒಂದು ಸಂಹಿತೆ, ಸಂವಿಧಾನ. ನೀತಿ ನಿಯಮಗಳನ್ನು ಉಲ್ಲಂಘಿಸಿದರೆ, ಶಿಕ್ಷೆಗೆ ಗುರಿಯಾಗುತ್ತಿರೆಂಬ ಎಚ್ಚರಿಕೆಯ ನೀತಿ ಸಂಹಿತೆಗಳು ಎಂಬ ಅರ್ಥ ಪಡೆದುಕೊಂಡಿತು.

ಅಶೋಕನು ತಾನು ಹಾಸಿದ ಶಾಸನಗಳನ್ನು 'ಧರ್ಮಲಿಪಿ'ಗಳೆಂದು ಕರೆದುಕೊಂಡಿದ್ದಾನೆ. ಅಂದರೆ 'Inscribe' ಎಂಬುದರಿಂದ ಹೊರಟ ಕೆತ್ತು, ಕೊರೆ, ಕಂಡರಿಸು ಎಂಬ ಅರ್ಥಕ್ಕಿಂತ ಭಿನ್ನವಾಗಿ ಆಡಳಿತ, ಪ್ರಭುತ್ವ, ಆಜ್ಞೆ, ಅಪ್ಪಣೆ, ಕಾನೂನು, ಕಟ್ಟಳೆ, ವಿಧಿ, ನಿಗ್ರಹ, ಹಿಡಿತ, ಶಿಕ್ಷೆ, ದಂಡನೆ, ಶಾಸ್ತಿ, ಒಪ್ಪಂದ ಮತ್ತು ಕರಾರು ಎಂಬ ವ್ಯಾಪಕ ಅರ್ಥ ಪಡೆದುಕೊಂಡಿತು.[೩] ರಾಜನ ಸಹಿ, ಮುದ್ರೆ, ದಿನಾಂಕದೊಂದಿಗೆ ಅಧಿಕೃತವಾಗಿ ಹೊರಟ ಶಾಸನಗಳು ಶಿಲೆ, ತಾಮ್ರ, ಕಬ್ಬಿಣ ಇತ್ಯಾದಿ ಮಾಧ್ಯಮಗಳಲ್ಲಿ ಬರೆದಿರುವ ರಾಜಾಜ್ಞೆಗಳಾಗಿದ್ದಂತೆ, ರಾಜರಲ್ಲದವರು ಕುರಿತು ಬರೆಯಿಸಿದಾಗಲೂ ಅವು ಶಾಸನಗಳೆಂದು ಕರೆಯಿಸಿಕೊಂಡವು, ವೀರರ ಮಹಾಸತಿಯರ, ಸನ್ಯಾಸಿಗಳ ಮರಣ ವೃತ್ತಾಂತವನ್ನು ಉಲ್ಲೇಖಿಸುವ ವೀರಗಲ್ಲು ಮಾಸ್ತಿಗಲ್ಲು ನಿಸದಿಗಲ್ಲುಗಳು ಸಹ ಶಾಸನದ ಪರಂಪರಗೆ ಸೇರಿದವು ಇವುಗಳನ್ನು ಹೊರತುಪಡಿಸಿ ಶುದ್ಧಕಾವ್ಯ, ನಾಟಕ, ವ್ಯಾಕರಣ, ಸಂಗೀತ ಮುಂತಾದ ಯಾವ ಪ್ರಕಾರವೇ ಆಗಲಿ ಶಿಲೆಯ ಮೇಲಿದ್ದರೆ, ಅದು ಶಾಸನವೆಂಬ ಹೆಸರು ಪಡೆಯಿತು.

ಹೀಗೆ ರಾಜಪ್ರಭುತ್ವದ ಪರಿಸರದಲ್ಲಿ ಬೆಳೆದು ಬಂದ ಶಾಸನಗಳು ದಂಡನೆ, ಶಿಕ್ಷೆ, ಕರಾರು, ಕಟ್ಟಳೆ ಎಂಬ ಸಂಕುಚಿತ ಅರ್ಥದಿಂದ ಹೊರಬಂದು, ಅಂದಂದಿನ ಜೀವನ ಪದ್ಧತಿಯ ಎಲ್ಲಾ ಮುಖಗಳನ್ನು ಕಾಯ್ದಿಟ್ಟುಕೊಂಡು ಬಂದ ದಾಖಲೆಗಳೆಂಬ ವಿಶಾಲಾರ್ಥವನ್ನು ಪಡೆದುಕೊಂಡವು.

ಮುಕ್ಕುಂದಿ ಗ್ರಾಮದಲ್ಲಿ ೧೫ ಶಾಸನಗಳು ದೊರೆತಿದ್ದು ಅವುಗಳಲ್ಲಿ ಪ್ರಮುಖವಾಗಿ ದೇವಸ್ಥಾನಕ್ಕೆ ನೀಡಿದ ದಾನ, ವ್ಯಕ್ತಿದಾನ, ವಿವಿಧ ವಿಷಯಗಳಿಗೆ ಸಂಬಂಧಿಸಿದ ವ್ಯಾಪಾರ ವಹಿವಾಟಗಳು ಸಾಮಾಜಿಕತೆಗೆ ಸಂಬಂಧಿಸಿದಂತೆ ವಿಷಯ ಪ್ರಸ್ತಾಪವಾಗಿದೆ. ತ್ಯಾಗ ಮತ್ತು ಬಲಿದಾನಕ್ಕೆ ಸಂಬಂಧಿಸಿದಂತೆ. ೩ ವೀರಗಲ್ಲುಗಳು ಇವೆ. ಅದರಲ್ಲಿ ಒಂದು ವೀರಗಲ್ಲು ಮೂರು ಪಟ್ಟಿಕೆಯ ವೀರಗಲ್ಲಾಗಿದೆ.

೩.೧. ದಾನ ದತ್ತಿ

ದಾನ ಶಾಸನಗಳು ಹೆಚ್ಚಿನ ಮಟ್ಟಿಗೆ ಧಾರ್ಮಿಕ ದತ್ತಿಯ ಉದ್ದೇಶವುಳ್ಳ ಶಾಸನಗಳಾಗಿವೆ. ಈ ಶಾಸನಗಳು ಧಾರ್ಮಿಕ ದತ್ತಿಯನ್ನು ಉದ್ದೇಶಿಸುವುದರ ಜೊತೆಗೆ ಖಾಸಗಿ ವ್ಯಕ್ತಿಗಳಿಗೆ ನೀಡಿದ ಲೌಕಿಕ ದಾನಗಳನ್ನು ದಾಖಲು ಮಾಡಿದ ಉದಾಹರಣೆಗಳಿವೆ. ಶಾಸನ ಅಧ್ಯಯನದ ಪುಟಗಳನ್ನು ತಿರುವಿ ನೋಡಿದರೆ ಹೆಚ್ಚಿನ ಮಟ್ಟಿಗೆ ದಾನ ಶಾಸನಗಳ ಸಂಖ್ಯೆಯೇ ಹೆಚ್ಚಾಗಿವೆ.[೪]

ದಾನ ಧರ್ಮಗಳು ಈ ಶಾಸನಗಳಿಗೆ ಪ್ರೇರಕ ಶಕ್ತಿ ಇದರಿಂದಲೇ ದಾನ ಶಾಸನಗಳ ಸಂಖ್ಯೆಯು ಅಧಿಕವಾಗಿರುವುದು ಕಾಣಬಹುದು.[೫] ಧರ್ಮಶಾಸ್ತ್ರದಲ್ಲಿ ಹದಿನಾರು ರೀತಿಯ ಮಹಾದಾನಗಳನ್ನು ಉಲ್ಲೇಖಿಸಲಾಗಿದೆ. ಪುರಾಣಗಳು ಕೂಡಾ ದಾನ ಶಾಸನಗಳ ಕುರಿತು ಮಾಹಿತಿ ನೀಡುತ್ತವೆ.[೬] ಒಟ್ಟಾರೆ ದೇವಾಲಯಗಳಿಗೆ, ಮಠಗಳಿಗೆ, ವಿದ್ವಾಂಸರಿಗೆ, ಗುರುಗಳಿಗೆ, ಹೊಲವನ್ನು ಹಣವನ್ನು ಆದಾಯದ ಭಾಗವನ್ನು ಬಿಟ್ಟುಕೊಟ್ಟ, ವಿಷಯ ನಿರೂಪಿಸುವುದೇ ಈ ದಾನಶಾಸನಗಳ ಉದ್ದೇಶವಾಗಿದೆ.[೭] ಇವು

ಕರ್ನಾಟಕ ಸಂಸ್ಕೃತಿಯ ಪ್ರಧಾನವಾದ ಅಂಶಗಳನ್ನು ಎತ್ತಿ ತೋರಿಸುತ್ತವೆ. ಜೀವನದ ಮೌಲ್ಯಗಳಲ್ಲಿ ಧರ್ಮಕ್ಕೆ ಪ್ರಪ್ರಥಮ ಸ್ಥಾನವನ್ನಿತ್ತ ಧಾರ್ಮಿಕ ಸಂಸ್ಕೃತಿಯ ಸ್ವರೂಪ ಈ ಶಾಸನಗಳಲ್ಲಿ ಪ್ರತಿಬಿಂಬಿತವಾಗಿದೆ. ಶಾಸನಗಳ ಉಗಮಕ್ಕೆ ಈ ಮನೋಧರ್ಮವೇ ಪ್ರೇರಕ ಶಕ್ತಿಯೆನ್ನಬಹುದು. ದೇವಾಲಯಗಳನ್ನು ಕಟ್ಟಿಸುವುದು ಅವುಗಳ ವ್ಯವಸ್ಥೆಗಾಗಿ ಮತ್ತು ಮಠಗಳಿಗಾಗಿ ಮಹಾವ್ಯಕ್ತಿಗಳಿಗಾಗಿ, ಇಲ್ಲವೆ ಅನ್ನ ಸತ್ರಾದಿ ಧರ್ಮಕಾರ್ಯಗಳಿಗಾಗಿ, ವಿದ್ಯಾಭ್ಯಾಸಕ್ಕಾಗಿ ದಾನ ದತ್ತಿಗಳನ್ನು ಕೊಡುವುದು ಲೌಕಿಕ ಸಂಪತ್ತಿನ ಗಳಿಕೆಯ ಸಾರ್ಥಕತೆ ಎಂದು ಜನ ಭಾವಿಸಿದ್ದರು. ರಾಜಾಧಿರಾಜರಿಂದ ಹಿಡಿದು ಜನ ಸಾಮಾನ್ಯರವರೆಗೂ ಈ ಧಾರ್ಮಿಕ ಭಾವನೆ ಜೀವನದ ಸಹಜ ಗುಣವಾಗಿ ಪರಿಣಮಿಸಿತ್ತು. ಅದರ ಫಲವಾಗಿ ಊರೂರಿಗೂ ದೇವಾಲಯ ತಲೆಯೆತ್ತಿದ್ದವು. ದಾನ ಧರ್ಮಗಳು ಜೀವನದ ತಳಹದಿಯಾದವು. ಇದನ್ನು ದಾನ ಶಾಸನಗಳಲ್ಲಿ ಸ್ಪಷ್ಟವಾಗಿ ಕಾಣಬಹುದಾಗಿದೆ.[೮]

ಒಬ್ಬ ವ್ಯಕ್ತಿ ಯಾವುದಾದರೂ ಒಂದು ಸಾರ್ಥಕವಾದ ಉದ್ದೇಶದೊಂದಿಗೆ ಒಬ್ಬ ವ್ಯಕ್ತಿಗೋ, ಒಂದು ಸಂಸ್ಥೆಗೋ ನೀಡುವ ಆರ್ಥಿಕ ಮೂಲವಾದ ನೆರವನ್ನು ದಾಖಲು ಮಾಡುವುದು ಈ ಬಗೆಯ ಶಾಸನಗಳ ಉದ್ದೇಶವಾಗಿದೆ.[೯] ತಾನು ಕೊಟ್ಟಿರುವ ದತ್ತಿಯು ಶಾಶ್ವತವಾಗಿ ಸದುಪಯೋಗವಾಗಿ ಮುಂದುವರಿಯಬೇಕೆಂಬ ಉದ್ದೇಶದಿಂದ ಈ ರೀತಿಯ ಶಾಸನಗಳನ್ನು ಬರೆಯಿಸ ತೊಡಗಿದರು. ದತ್ತಿಯನ್ನು ಪಡೆದವನು ನೀಡಿದವರ ಸಂಪೂರ್ಣ ವಿವರಣೆಯನ್ನು ನೀಡಿ ತನ್ನ ಉದ್ದೇಶವನ್ನು ಸಾರ್ಥಕ ಪಡೆಸಬೇಕೆಂದು ಈ ಶಾಸನಗಳಲ್ಲಿ ದಾನಿಯು ಪ್ರಾರ್ಥಿಸಿರುವುದನ್ನು ಗಮನಿಸಬಹುದು. ಈ ದಾನ ಶಾಸನಗಳು ಶಿಲಾಶಾಸನವಾಗಿರಬಹುದು ಅಥವಾ ತಾಮ್ರಶಾಸನವಾಗಿರಬಹುದು. ಮುಕುಂದಿಯಲ್ಲಿ ದೊರೆತಿರುವ ಶಾಸನಗಳಲ್ಲಿ ಈ ಮೇಲಿನ ಎಲ್ಲಾ ಅಂಶಗಳನ್ನು ಕಾಣಬಹುದು.

ಗ್ರಾಮದ ಮುರಹರಿ ದೇವಾಲಯದ ಬಲಗಡೆ ಗೋಡೆಗೆ ನಿಲ್ಲಿಸಿರುವ ಶಾಸನದಲ್ಲಿ ಕ್ರಿ.ಶ.೧೧೩೪ರ ಕಾಲದ ಉಲ್ಲೇಖವಿದ್ದು ಚಾಲುಕ್ಯ ಭೂಲೋಕಮಲ್ಲನು ರಾಜ್ಯಭಾರ ಮಾಡುತ್ತಿದ್ದಾಗ ಆತನ ಸಾಮಂತನಾಗಿ ಸಿಂಧುವಂಶದ ಕಣ್ಣರಸನ ಮಗ ಬಾಚಿರಾಜ ಆಳುತ್ತಿದ್ದ. ಇವನ ಪ್ರಧಾನವಾಗಿ ಬೆನಚಿಮಯ್ಯ ಎಂಬ ಬ್ರಾಹ್ಮಣನಿದ್ದ. ಮೇಲೆ ಉಲ್ಲೇಖಿಸಿರುವ ಕಾಲದಲ್ಲಿ ಕುಱುವಡದ ರಾಯನಾದ ಬಾಚಿದೇವರಸನು ಬೆನಚಿಮಯ್ಯ ಮಾಡಿಸಿದ ಕೇಶವ ದೇವರ ದೇವಾಲಯದ ರಂಗಭೋಗ, ತೆರೆದ ದೇವರ ಮಂದಿರದ ಖಂಡಸ್ಪುಟಿತ ಜೀರ್ಣೋದ್ಧಾರ, ಪೂಜಾರಿಗಳ ಜೀವಿತಕ್ಕೆಂದು ಭೂದಾನ ಹಾಗೂ ತೆಂಕಕಲಕಯ್ಯಗಲದ ನಿವೇಶನ ನೀಡಿರುವುದಾಗಿ ಹೇಳುತ್ತದೆ.[೧೦]

ಮುರಹರಿ ದೇವಾಲಯದ ನವರಂಗದ ಗೋಡೆಯಲ್ಲಿರುವ ಶಾಸನವು ಕಾಲ ಕ್ರಿ.ಶ.೧೧೩೪ರಲ್ಲಿ ಭೂಲೋಕಮಲ್ಲನು ಕಲ್ಯಾಣ ಪುರದ ನೆಲೆವೀಡಿನಲ್ಲಿದ್ದಾಗ ಸಿಂಧಕುಲದ ಬಾಚರಸನು ಮಂಡಳೇಶ್ವರನಾಗಿದ್ದನು ಎಂದು ಉಲ್ಲೇಖಿಸಿದೆ. ಇವನ ಪೆರ್ಗಡೆಯಾಗಿ ಬೆನಿವಣನೆಂಬುವನಿದ್ದ. ಬೆನಿಮಯನು ಕೇಶವ ದೇವರ ದೇವಾಲಯವನ್ನು ಕಟ್ಟಿಸಿದನು. ಇವನು ಕಟ್ಟಿಸಿದ ಕೇಶವದೇವರ

ದೇವಾಲಯಕ್ಕೆ ಮಹಾಮಂಡಳೇಶ್ವರ ಬಾಚರಸ ದೇವಾಲಯದ ಅಂಗಭೋಗ ಮಂದಿರದ ಖಿಣ್ಣಸ್ಫುಟಿತ ಜೀರ್ಣೋದ್ಧಾರಕ್ಕೆ ಪೂಜಾರಿಗಳ ಜೀವಿತಕ್ಕೆಂದು ಮತ್ತು ದೇವರ ನಂದಾದೀಪಕ್ಕೆಂದು ಭೂಮಿದಾನ ಮಾಡಿದನ್ನು ತಿಳಿಸುತ್ತದೆ.[೧೧] ಈ ಎರಡು ಶಾಸನಗಳು ಒಂದೇ ಕಾಲದ ಉಲ್ಲೇಖವಿದ್ದರೂ, ದಾನದ ರೂಪದಲ್ಲಿ ನೀಡಿರುವ ಭೂಮಿಯ ಮತ್ತರುಗಳಲ್ಲಿ ನೀಡುವಾಗ ಹೆಚ್ಚು, ಕಡಿಮೆ ನೀಡಿರುವುದನ್ನು ಗಮನಿಸಬಹುದಾಗಿದೆ. ಮೇಲಿನ ಶಾಸನದಲ್ಲಿ ಸಳ್ಳಕಬ್ಬಯ ಅಳತೆಯಲ್ಲಿ ೪೮ ಗೇಣಘಳೆಯಲ್ಲಿ ಅಳೆದು ಕರಿನೆಲ ಮತ್ತರು ೪ರ ಅಳತೆಯಲ್ಲಿ ನಂದಾದೀಪಕ್ಕೆ ಭೂಮಿದಾನ ಕಲಕಯ್ಯಗಲದ ಅಳತೆಯಲ್ಲಿ ೧ ನಿವೇಶನ ಬಿಡಲಾಗಿದೆ. ಇನ್ನೊಂದು(ಸಿಂ.೬) ಸಳ್ಳಕಬ್ಬೆಯ ಆ ಗೇಣ ಘಳೆಯಲ್ಲಿ ಅಳೆದು ಕರಿಯ ನೆಲ ಮತ್ತರು ೬ರ ಅಳತೆಯಲ್ಲಿ ಭೂಮಿ ದೇವರ ನಂದಾದೀಪಕ್ಕೆ ತೆಂಕಲ ಕೈಯಗಲದ ನಿವೇಶವನ್ನು ದಾನ ಮಾಡಿದಾಗಿ ತಿಳಿಸುತ್ತದೆ.

ಈ ಎರಡು ಶಾಸನಗಳನ್ನು ಗಮನಿಸಿದಾಗ ಒಂದೇ ವರ್ಷದಲ್ಲಿ ಬೆನಚಿಮಯ್ಯನು ಮಾಡಿಸಿದ 'ಕೇಶವ ದೇವರ' ದೇವಾಲಯಕ್ಕೆ ಎರಡು ಸಲ ದಾನ ನೀಡಿರಬಹುದು ಎಂಬುದನ್ನು ಊಹಿಸಬಹುದಾಗಿದೆ. ಹಾಗೆಯೇ ನಿವೇಶನದ ದಾನದಲ್ಲಿ ಅಳತೆಯಗೋಲುಗಳ ಪ್ರಮಾಣ ಬದಲಾಗಿದೆ. ಒಂದರಲ್ಲಿ ಕಲಕಯ್ಯಗಲ ಎಂದು ಉಲ್ಲೇಖಿತವಾದರೆ ಇನ್ನೊಂದರಲ್ಲಿ ತೆಂಕಲಕೈಯಗಲ ಎಂಬುದಾಗಿದೆ. ಇವೆರಡು ಶಾಸನಗಳು ದೇವಸ್ಥಾನಕ್ಕೆ ಭೂಮಿ ದಾನ ಕೊಟ್ಟಿರುವುದನ್ನು ತಿಳಿಸುತ್ತವೆ. ಈ ಮೇಲಿನ ಎರಡು ಶಾಸನಗಳು ಕೇಶವ ದೇವರಿಗೆ ದಾನಕೊಟ್ಟಿರುವುದನ್ನು ಉಲ್ಲೇಖಿಸುತ್ತವೆ. ಆದರೆ ಈ ಕೇಶವದೇವರು ಮುಕ್ಕುಂದಿಯಲ್ಲಿ ಎಲ್ಲಿದೆ ಎಂಬುದಾಗಿ ತಿಳಿಯಲು ಸಾಧ್ಯವಾಗಿಲ್ಲ ಈ ಗ್ರಾಮದಲ್ಲಿ ಪ್ರಾಚೀನ ಕಾಲದ ಎರಡು ಪಾಳು ದೇವಾಲಯಗಳ ಅವಶೇಷಗಳು ದೊರೆತಿವೆ.

ಸೋಮಲಿಂಗೇಶ್ವರ ದೇವಾಲಯದ ಎಡಭಾಗದಲ್ಲಿ ನಿಲ್ಲಿಸಿರುವ ಶಾಸನದಲ್ಲಿ ಕ್ರಿ.ಶ.೧೦೯೭ರ ಕಾಲದ ಉಲ್ಲೇಖವಿದೆ.[೧೨] ಚಾಲುಕ್ಯ ಆರನೇ ವಿಕ್ರಮಾದಿತ್ಯನ ಆಳ್ವಿಕೆಯಲ್ಲಿ ಮಾಂಡಳಿಕನಾದ ಮಹಾ ಮಂಡಳೇಶ್ವರ ಸಿಂಧು ಕುಲದ ಬಾಚರಸ ಅಗ್ರಹಾರ ಮುಕ್ಕುಂದಿಯಲ್ಲಿ ಆಳ್ವಿಕೆ ನಡೆಸುತ್ತಿದ್ದನು. ಮೇಲೆ ಉಲ್ಲೇಖಿಸಿದ ಕಾಲದಲ್ಲಿ ತಾನು ಕಟ್ಟಿಸಿದ ಬಾಚೇಶ್ವರ ದೇವರ ದೇವಾಲಯಕ್ಕೆ ಗಬ್ಬೂರ (ಸಿಂಧನೂರು ತಾ.) ಉತ್ತರಕ್ಕೆ ಗಣ್ಡಬೇರುಂಡನ ಅಳತೆಯಲ್ಲಿನ ನಲ್ವತ್ತೆರಡು ಗೇಣಗಳೆಯಲ್ಲಿ ೬೩ ಮತ್ತರು ಭೂಮಿ ದಾನ ಬಿಡುತ್ತಾನೆ. ಇದೆ ಶಾಸನದಲ್ಲಿ ಸಾಲುಗುಂದೆಯ ಕಲಿಯಮಗೆಜೆಯ ಸ್ಥಳದ ಕೋಲು ಮಾಣಿಕೇಶ್ವರದ ೨೪ ಗೇಣ ಕೋಲು ಭೂಮಿದಾನ ಮಾಡಿದ್ದಾನೆ. ಈ ದೇವಾಲಯದ ಸ್ಥಾನಿಕನಾದ ಪರ್ವತಾವಳಿಯ ಸಿರೆಯಂಗಲ್ಲ ವಾದಿ ಕೋಲಾಹಳ ಪಂಡಿತದೇವ, ಇವನಿಗೆ ದೇವರ ಪೂಜಾ ವ್ಯವಸ್ಥೆಗಾಗಿ ೧೫ ನಿವೇಶನಗಳನ್ನು ಒಂದು ಮತ್ತರು ಅಳತೆಯಲ್ಲಿ ಹೂತೋಟವನ್ನು ನಂದಾದೀಪಕ್ಕೆ ಒಂದು ಗಾಣ ಬಿಟ್ಟಿದ್ದಾಗಿ ಹೇಳಿದೆ. ಇದೇ ಶಾಸನದಲ್ಲಿ ಕ್ರಿ.ಶ.೧೩೪೩ ರಂದು ಮೊರಟನಾಡಿನ ಒಡೆಯ ಬಾಚೇಶ್ವರ ದೇವರ ಪ್ರತಿಷ್ಠಾಪನೆ ಮಾಡಿದಂತೆ ಹೇಳೀದೆ. ಆದರೆ ಪ್ರಸ್ತುತದಲ್ಲಿ ಈ ದೇವಾಲಯ ಮುಕ್ಕುಂದಿಯಲ್ಲಿ

ಎಲ್ಲಿದೆ ಎಂಬುದನ್ನು ತಿಳಿದುಬಂದಿಲ್ಲ. ಈ ಶಾಸನವನ್ನು ಗಮನಿಸಿದಾಗ ಕ್ರಿ.ಶ.೧೦೯೭ರಲ್ಲಿ ದಾನ ನೀಡಿದ ಉಲ್ಲೇಖವಿದೆ. ಬಾಚೇಶ್ವರನು ತಾನು ಕಟ್ಟಿಸಿದ ದೇವಾಲಯಕ್ಕೆ ಜೀರ್ಣೋದ್ಧಾರ ಮಾಡಿಸಿ ಕ್ರಿ.ಶ.೧೩೮೩ ಕಾಲದಲ್ಲಿ ಬಾಚೇಶ್ವರ ದೇವರ ಹೊಸ ಮೂರ್ತಿಯನ್ನು ಮೊರಟನಾಡಿನ ಒಡೆಯರಿಂದ ಪ್ರತಿಷ್ಠಾಪನೆ ಮಾಡಿಸಿದನೆಂದು ಈ ಶಾಸನದಿಂದ ಅರ್ಥೈಸಿಕೊಳ್ಳಬಹುದಾಗಿದೆ. ಆದರೆ ಕ್ರಿ.ಶ.೧೦೯೨ರ ಕಾಲಕ್ಕೂ ಕ್ರಿ.ಶ.೧೩೮೩ರ ಕಾಲಕ್ಕೂ ತುಂಬ ಅಂತರವಿದೆ. ಬಹುಶಃ ಈ ಶಾಸನವನ್ನು ಕಂಡರಿಸಿದವರ ದೋಷವಾಗಿರಬೇಕು ಅಥವಾ ಇಮ್ಮಡಿ ಬಾಚರಸ ಮೊರಟನಾಡಿನ ಒಡೆಯರಿಂದ ಹೊಸ ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡಿಸಿರಬಹುದೆಂದು ಊಹಿಸಬಹುದಾಗಿದೆ. ಆದರೆ ಕೊನೆಯ ಭಾಗ ತ್ರುಟಿತವಾಗಿದೆ.

ಸೋಮಲಿಂಗೇಶ್ವರ ದೇವಾಲಯದ ಗೋಡೆಗೆ ನಿಲ್ಲಿಸಿರುವ ಶಾಸನ ೧೦೮೮ರ ಕಾಲವನ್ನು ಉಲ್ಲೇಖಿಸುತ್ತಿದ್ದು,[೧೩] ಚಾಳುಕ್ಯ ತ್ರಿಭುವನ ಮಲ್ಲದೇವನು ಕಲ್ಯಾಣದಲ್ಲಿ ಇದ್ದಾಗ ಆತನ ಮಾಂಡಳೀಕನಾದ ಬಾಚರಸ ಮುಕ್ಕುಂದಿಯನ್ನು ಆಳುತ್ತಿದ್ದ ಇವನ ತಮ್ಮ ಬಾಚಿಭೂಪ, ವಿಷ್ಣು ದೇವಾಲಯವನ್ನು ಮತ್ತು ಸಭಾವಾಸದೊಂದಿಗೆ ಬಾಚೇಶ್ವರ ದೇವಾಲಯ ಮಾಡಿಸಿದ ಎಂದಿದೆ.

ಮೇಲೆ ತಿಳಿಸಿದ ಕಾಲದಂದು ತ್ರಿಭುವನ ಮಲ್ಲನು ಗಂಗೆ ಗೋದಾವರಿ ಪುರಣಿ ಸಂಗಮದ ಕಂಠೇಶ್ವರದ ತೀರ್ಥಸ್ನಾನದಲ್ಲಿ ದಾನಗಳನ್ನು ಮಾಡುವ ಸಂದರ್ಭದಲ್ಲಿ ಬಾಚರಸನು ಇದ್ದು, ಸರ್ವ್ವನಮಸ್ಯದಗ್ರಹಾರ ಮುಕುನ್ದೆಯ 'ಮುನ್ನೂರು' ಮಹಾಜನರ ಕಾಲನ್ನು ತೊಳೆದು ಮನ್ನೆಯದ ತೇಜಸ್ವಾಮ್ಯದ ಆದಾಯದ ೧೫೦ ಗದ್ಯಾಣವನ್ನು ದಾನಬಿಟ್ಟನು. ಹಣದ ದಾನವನ್ನು ತಿಳಿಸುವ ಶಾಸನ ಇದಾಗಿದೆ.

ಮಾದೇಗೌಡರ ಜಮೀನಿನಲ್ಲಿರುವ ಶಾಸನದಲ್ಲಿ ಕಾಲದ ಉಲ್ಲೇಖವಿಲ್ಲ.[೧೪] ಇದು ತ್ರುಟಿತ ಶಾಸನವಾಗಿದೆ. ಪ್ರಚಂಡ ದಂಡನಾಯಕ ಮಾರ್ತಂಡಯ್ಯನ ಉಲ್ಲೇಖವಿದೆ. ಇದರಲ್ಲಿ ೬೩ ಮತ್ತರು ಭೂಮಿದಾನ ನೀಡಿದಂತೆ ತಿಳಿಸುತ್ತದೆ.

ಇದೇ ಶಾಸನದ ನಂತರ ಇನ್ನೊಂದು ಭಾಗದಲ್ಲಿ ಕ್ರಿ.ಶ.೧೦೪೯ರ ಕಾಲದ ಉಲ್ಲೇಖವಿದೆ. ಸಿಂಧವಂಶದ ಗೋನರಸನು ದಂಡನಾಯಕ ಮಾರ್ತಣ್ಡಯ್ಯನು ಮಾಡಿಸಿದ ಸತ್ರಕ್ಕೆ ಮಣ್ಡಲ ಗಾವನ ನಲ್ವತ್ತು ಗೇಣಘಳೆಯಲ್ಲಿ ಐವತ್ತು ಮತ್ತರು ಭೂಮಿಯನ್ನು ದಾನವಾಗಿ ನೀಡುತ್ತಾನೆ. ಛತ್ರದ ಮೇಲ್ವಿಚಾರಣೆಯನ್ನು ಚಂದ್ರಭಟ್ಟ ಎಂಬುವವನು ನೋಡಿ ಕೊಳ್ಳುತ್ತಿದ್ದನು. ಈ ಶಾಸನವು ಸಾಮಾಜಿಕ ಕಾರ್ಯಕ್ಕಾಗಿ ದಾನ ಬಿಟ್ಟದ್ದನ್ನು ತಿಳಿಸುತ್ತದೆ. ಸತ್ರಗಳು ನದಿದಂಡೆಯ ಮೇಲಿದ್ದು ದಣಿದುಬರುವ ಪ್ರವಾಸಿಗರಿಗೆ ಮತ್ತು ನಿರ್ಗತಿಕರಿಗೆ ಊಟ ಮತ್ತು ವಸತಿಗಳನ್ನು ಕಲ್ಪಿಸಲು ಸತ್ರಗಳನ್ನು ನಿರ್ಮಿಸುತ್ತಿದ್ದರು. ಇಂತಹ ಸತ್ರಗಳಿಗೆ ರಾಜರು ಸಾಮಂತರು ದಾನವನ್ನು ನೀಡುತ್ತಿದ್ದರು.

ರಾಮಲಿಂಗೇಶ್ವರ ದೇವಾಲಯದ ಬಳಿ ಬೇಲಿಯೊಳಗಿರುವ ಶಾಸನವು ೧೨ನೇ ಶತಮಾನದ ಲಿಪಿಯನ್ನು ಒಳಗೊಂಡಿದೆ. ಇದು ತ್ರುಟಿತ ಶಾಸನ[೧೫] ಬಾಳ್ಗುಳಿ ಕಲಿದೇವ ಸ್ವಾಮಿಯ ಸನ್ನಿಧಿಯಲ್ಲಿ

ತುಲಾಪುರುಷ ದಾನವನ್ನು ಸಂಧಿವಿಗ್ರಹಿ ದಂಡನಾಯಕನೊಬ್ಬನು ದಾನಬಿಟ್ಟಂತೆ ಹೇಳಿದೆ. ನಿಟ್ಟರವೆ ಬಳಿಯ ಮುಕ್ಕುಂದೆ ಅಗ್ರಹಾರದ ಬಳಿ ಹೊಳೆಯಲ್ಲಿ ಅಕ್ಷಯ ನಿಧಿ ಭಂಡಾರವನ್ನು ಕಟ್ಟಿಸಿ ಸೇನ ಭೋವ ಭಾವಣಯ್ಯ ದೇವಾಲಯದ ನೈವೇದ್ಯಕ್ಕೆ ಹೂಮಾಲೆ ನಂದಾದೀಪಗಳಿಗೆ ದಾನ ನೀಡಿದಂತೆ ಹೇಳಿದೆ. ದೇವರ ಸತ್ರ ಸೇನಕಬ್ಬೆಯ ಗಡಿಕಂಬದ ಕೋಲಿನ ಅಳತೆಯಲ್ಲಿ ದಾನ ನೀಡಲಾಗಿದೆ. ಈ ಶಾಸನದಲ್ಲಿ ಅಕ್ಷಯನಿಧಿ ಭಂಡಾರ ಎಂದು ಉಲ್ಲೇಖಿವಾಗಿರುವುದು ಈ ಗ್ರಾಮದಲ್ಲಿ ಪಾಳುಬಿದ್ದಿರುವ ಈಗ ಜನಗಳಿಂದ ಭಂಡಾರ ಖಾನೆ ಎಂದು ಕರೆಯಲ್ಪಡುವ ದೇವಾಲಯವಾಗಿರಬಹುದೆಂದು ಊಹಿಸಬಹುದಾಗಿದೆ.

ಪಾಪನಾಥೇಶ್ವರ ದೇವಾಲಯದ ಮುಂಭಾಗದಲ್ಲಿ ನೆಟ್ಟಿರುವ ಶಾಸನ ಕ್ರಿ.ಶ.೧೦೬೮ರ ಕಾಲವನ್ನು ಉಲ್ಲೇಖಿಸುತ್ತದೆ.[೧೬] ಕಲ್ಯಾಣದಲ್ಲಿ ತ್ರೈಲೋಕ್ಯಮಲ್ಲನು ರಾಜ್ಯಭಾರ ಮಾಡುತ್ತಿದ್ದಂತೆ ಈತನ ಪತ್ನಿ ತ್ರೈಲೋಕ್ಯ ಮಹಾದೇವಿ ನಿಟ್ಟರವೆ ಎಪ್ಪತ್ತರ ಬಳಿಯ ಅಗ್ರಹಾರ ಮುಕ್ಕುಂದೆಯನ್ನು ತ್ರಿಭೋಗ್ಯಾಭ್ಯಂತರವಾಗಿ ಈಕೆ ಆಳುತ್ತಿದ್ದು ತುಂಗಭದ್ರಾ ನದಿಯ ತೀರದ ಕಪಾಳೇಶ್ವರ ದೇವರಿಗೆ ಮೇಲೆ ಉಲ್ಲೇಖಿಸಿರುವ ಕಾಲದಂದು ೧೨ ಮತ್ತರು ಕರಿಯ ಭೂಮಿಯನ್ನು ಸೆಟ್ಟಿಕಬ್ಬೆಯ ಗಡಿಂಬದ ಕೋಲಿನಿಂದ ಅಳೆದು ದಾನ ನೀಡಿದ್ದಾಳೆ ಹಾಗೆ ಒಂದು ತೋಟ ನಂದಾದೀಪಕ್ಕಾಗಿ ಒಂದು ಗಾಣವನ್ನು ದಾನ ಬಿಡುತ್ತಾಳೆ.

ಮುಕ್ಕುಂದಿಯ ಗ್ರಾಮದ ನದಿ ತೀರದ ಸಂಜೀವರೆಡ್ಡಿಯವರ ಹೊಲದಲ್ಲಿರುವ ತೋಟದ ಮಂಟಪದ ಕಂಬದಲ್ಲಿರುವ ಶಾಸನವು ಭೂಮಿಯನ್ನು ಸಾಗುವಳಿ ನೀಡುವ ಪದ್ಧತಿಯನ್ನು ತಿಳಿಸುತ್ತದೆ. ಈ ಶಾಸನವು ಕ್ರಿ.ಶ.೧೫೬೧ರ ಕಾಲವನ್ನು ಉಲ್ಲೇಖಿಸುತ್ತಿದ್ದು, "ಅಶೇಷಯದಂ ಮಹಾಜನಗಳು ಸವಈಗಳ ಹಾರುವಂತ ಅವರಿಗೆ" ಎಂಬುದಾಗಿ ಶಾಸನದಲ್ಲಿ ಸ್ಪಷ್ಟಪಡಿಸುತ್ತದೆ.[೧೭] ಇಲ್ಲಿ ಮಹಾಜನಗಳು ಸವಈಗಳಿಗೆ(ಸಮಯಿಗಳಿಗೆ) ಸಾಗುವಳಿಗಾಗಿ ಕೆಲವು ವರ್ಷಗಳ ಕಾಲ ಭೂಮಿಯನ್ನು ಬಿಟ್ಟಿರುತ್ತಾರೆ. ಇದನ್ನು ವಾಮನ ಮುದ್ರೆ ಕಲ್ಲಿನಿಂದ ಮೇರೆಯನ್ನು ಗುರುತಿಸಿ ದಾನ ಬಿಟ್ಟಿರುವುದಾಗಿ ತಿಳಿಸುತ್ತದೆ.

ಮುಕ್ಕುಂದಿ ಗ್ರಾಮದ ಸಮೀಪದಲ್ಲಿ ಅರಳಹಳ್ಳಿಯೆಂಬ ಗ್ರಾಮದ ಶಾಸನವು ವ್ಯಕ್ತಿದಾನವನ್ನು ತಿಳಿಸುತ್ತದೆ. ಕ್ರಿ.ಶ.೧೬೦೩ರಲ್ಲಿ ಹಂಡೆಮಲ್ಲಪ್ಪ ನಾಯಕನ ಆಳ್ವಿಕೆಯಲ್ಲಿ[೧೮] ಸಿದ್ದವೀರಣ್ಣ ದೇವನ ಶಿಷ್ಯನಾದ ಭಂಡಾರಿ ಸಿದ್ಧರಾಮದೇವನಿಗೆ ಅರೆಯಹಳ್ಳಿ ಗ್ರಾಮವನ್ನು ದಾನವಾಗಿ ನೀಡಿದ್ದಾನೆ. ತನ್ನ ತಂದೆ ತಾಯಿಗಳಿಗೆ ಪುಣ್ಯವಾಗಬೇಕೆಂದು ನೀಡಿದ ಈ ಗ್ರಾಮಕ್ಕೆ ಮೇರೆಯನ್ನಾಗಿ ಉತ್ತರಕ್ಕೆ ಮುಕ್ಕುಂದಿ, ಪೂರ್ವಕ್ಕೆ ತುಂಗಭದ್ರಾ ನದಿ, ದಕ್ಷಿಣಕ್ಕೆ ಸಿಂಗಾಪುರ, ಪಶ್ಚಿಮಕ್ಕೆ ಮುಕ್ಕುಂದಿ ಹೊಲಗಳನ್ನು ಮೇರೆಗಳಾಗಿ ಹೇಳಿದೆ.

ಮುಕ್ಕುಂದಿ ಗ್ರಾಮದ ಶಾಸನಗಳಲ್ಲಿ ಅತಿ ಹೆಚ್ಚು ಶಾಸನಗಳು ದಾನ ಶಾಸನಗಳೆ ಆಗಿವೆ. ಈ ಶಾಸನಗಳನ್ನು ಹೊರತುಪಡಿಸಿ ಕುಲಾಚಾರ ಕಟ್ಟಳೆ ಸಂಬಂಧಿಸಿದ ಒಂದು ಶಾಸನ ದೊರೆತಿದ್ದು, ಅದನ್ನು ಈ ಭಾಗದಲ್ಲಿಯೇ ಚರ್ಚಿಸಲಾಗಿದೆ. ಕುಲಾಚಾರ ಕಟ್ಟಳೆಗೆ ಸಂಬಂಧಿಸಿದಂತೆ ತಾಲೂಕಿನ ಶಾಸನಗಳಲ್ಲಿ

ಉಲ್ಲೇಖವಾಗಿದ್ದರೂ, ನನ್ನ ಅಧ್ಯಯನದ ವ್ಯಾಪ್ತಿ ಗ್ರಾಮಕ್ಕೆ ಸೀಮಿತವಾಗಿರುವುದರಿಂದ ಕುಲಾಚಾರಕ್ಕೆ ಸಂಬಂಧಿಸಿದ ಈ ಒಂದು ಶಾಸನದಿಂದಲೇ ಇಲ್ಲಿ ವರ್ಣವ್ಯವಸ್ಥೆ ಇತ್ತು ಎಂಬುದನ್ನು ಅರಿತುಕೊಳ್ಳುವುದಕ್ಕೆ ಈ ಶಾಸನ ಸೂಕ್ಷ್ಮವಾಗಿ ಮಾಹಿತಿಯನ್ನು ಒದಗಿಸುತ್ತದೆ.

ಕ್ರಿ.ಶ.೧೫೮೫ರ ಕಾಲವನ್ನು ಸೂಚಿಸುವ ಮುಕ್ಕುಂದಿ ಗ್ರಾಮದ ಶಾಸನ ಕುಲಾಚಾರ ಕಟ್ಟಳೆ ಕುರಿತು ತಿಳಿಸುತ್ತದೆ. ಭರಿಗೆ ಬೆಳಗಾವಿ ನಾಯಕನ ಮಗ ಪರುವಪ್ಪ, ಹಟಗಾರಪ್ಪನವರು, ವೀರುಪ್ಪನ ಗೌಡ ಯಿಂದ್ರಯ ನಿರುಗಪಗೌಡ ಮುಂತಾದ ಹಟಗಾರರು ರವುಡಕುಂದ ಸೀಮೆಗೆ ಸೇರಿದ ಮುಕ್ಕುಂದಿಯ ಸಂತೆಯನ್ನು ಬರೆಯಿಸಿಕೊಡುತ್ತಾರೆ. ಇದಕ್ಕೆ ಪ್ರತಿಯಾಗಿ ರೌಡಕುಂದೆಯ ಗೌಡ ಸೇನಭೋವ ಮುಂತಾದವರ ಭಿನ್ನಹದೇ ಮೇರೆಗೆ ಮೇಲೆ ಹೇಳಿದ ಹಟಗಾರರು ಮುಕ್ಕುಂದಿಯ ಪೇಟೆಯನ್ನು ಹೊಸದಾಗಿ ಮಾಡಿಸಿ ಮಳಿಗೆ ಮನೆಗಳನ್ನು ಕಟ್ಟಿಸಿಕೊಡುತ್ತಾರೆ. ಇದಕ್ಕೆ ಪ್ರತಿಯಾಗಿ ಸೋಮಬೀದಿಯ ಮರೆವಣಿಗೆಯ ಹಕ್ಕನ್ನು ಅವರಿಗೆ ನೀಡುತ್ತಾರೆ. ಈ ಬೀದಿಯಲ್ಲಿ ಶುಭಕಾರ್ಯಗಳಲ್ಲಿ ಮದುವೆಯಲ್ಲಿ ಮಂಗಳ ಕಳಸ ಸಮೇತ ಮೆರವಣಿಗೆ ಬರಬಹುದಾಗಿತ್ತು ಎಂದು ಉಲ್ಲೇಖಿಸುತ್ತದೆ.[೧೯] ಈ ಶಾಸನವನ್ನು ಸೂಕ್ಷ್ಮವಾಗಿ ಗಮನಿಸಿದಾಗ ಮುಕ್ಕುಂದಿಯಲ್ಲಿ 'ರಥಬೀದಿ ಮತ್ತು ಸೋಮಬೀದಿ ಎಂಬ ಎರಡು ಬೀದಿಗಳಿದ್ದು, ಹಟಗಾರರು ಒಂದು ಜಾತಿಯವರಾಗಿದ್ದು, ರವುಡಕುಂದೆಯ ಗೌಡ ಸೇನಬೋವರ ಮುಂತಾದವರ ಬಿನ್ನಹಕ್ಕೆ ಮಣಿದು ಮುಕ್ಕುಂದಿಯ ಪೇಟೆಯನ್ನು ಹೊಸದಾಗಿ ಮಾಡಿಸುತ್ತಾರೆ. ಇದಕ್ಕೆ ಪ್ರತಿಯಾಗಿ ಮೇಲುವರ್ಗದವರು ವಾಸುತ್ತಿದ್ದ ಸೋಮಬೀದಿಯಲ್ಲಿ ಮೆರವಣಿಗೆ ಬರಲು ಹಟಗಾರರಿಗೆ ಅನುಮತಿ ನೀಡಲಾಗುತ್ತದೆ ಎಂಬುದನ್ನು ಈ ಶಾಸನದಿಂದ ಊಹಿಸಬಹುದಾಗಿದೆ. ಒಟ್ಟಾರೆಯಾಗಿ ಮುಕ್ಕುಂದಿ ಗ್ರಾಮದಲ್ಲಿ ದೊರೆಯುವ ಶಾಸನಗಳಲ್ಲಿ ದೇವಾಲಯಗಳಿಗೆ ಮತ್ತು ಸಾಮಾಜಿಕ ಕಾರ್ಯಗಳಿಗೆ ದಾನಬಿಟ್ಟಿರುವುದನ್ನು ಗಮನಿಸಬಹುದಾಗಿದೆ.

೩.೨. ತ್ಯಾಗ ಬಲಿದಾನ

ದಾನ ಶಾಸನಗಳ ತುಲನಾತ್ಮಕ ಅಧ್ಯಯನ ಮಾಡಿ ನೋಡಿದರೆ, ವೀರಗಲ್ಲು ಶಾಸನಗಳು ದ್ವಿತೀಯ ಸ್ಥಾನಪಡೆಯುತ್ತವೆ. ದಾನ ಶಾಸನಗಳು ಯಾವುದೇ ಉದ್ದೇಶಕ್ಕಾಗಿ ತ್ಯಾಗವನ್ನು ತಿಳಿಸಿದರೆ. ವೀರಗಲ್ಲು ಶಾಸನಗಳು ದೇಹ ಮತ್ತು ಪ್ರಾಣಗಳನ್ನು ತ್ಯಾಗ ಮಾಡಿದ ವಿಷಯವನ್ನು ಸಾರುತ್ತವೆ. ಗತಿಸಿದ ಮಾನವನ ಸಮಾಧಿ ಮಾಡಿ, ಮಡಿದವನು ಸ್ಮರಣೆಗೆ ಬರುವಂತೆ ಸಂಕೇತಕ್ಕಾಗಿ ನಿಲ್ಲಿಸಿದ ಶಿಲೆಯೇ ವೀರಗಲ್ಲು ಶಾಸನ.[೨೦]

ಸಂಕೇತಕ್ಕಾಗಿ ನಿಲ್ಲಿಸಿದ ಶಿಲೆ ಅವನ ಜೀವನ ವಿಧಾನವನ್ನು ಆತನ ಧೋರಣೆಗಳನ್ನು ಅಂದಿನ ನಾಗರಿಕತೆಯನ್ನು ಮತ್ತು ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತವೆ. ನಿಧನ ಹೊಂದಿದ ವ್ಯಕ್ತಿಯ ನೆನಪನ್ನು ಅಭಿವ್ಯಕ್ತಿಗೊಳಿಸುವ ಸಾಧನ ಇದೆಂದು ಹೇಳಬಹುದು. ವೇದಗಳಲ್ಲಿ ಶತಪಥ ಬ್ರಾಹ್ಮಣದಲ್ಲಿ ಇಂತಹ ಸ್ಮಾರಕಗಳ ಉಲ್ಲೇಖವಿದೆ.[೨೧]

ವೀರಗಲ್ಲು ಎಂಬ ಪದ ಮೂಲತಃ ಸಂಸ್ಕೃತ ಭಾಷೆ. ಈ ಪದ ವ್ಯಕ್ತಿಯ ಪರಾಕ್ರಮ ಶಕ್ತಿ ಮುಂತಾದ ದೈಹಿಕ ಗುಣಗಳನ್ನು ಸೂಚಿಸುವ ಪದ.[೨೨] ಆಂಗ್ಲ ಭಾಷೆಯ ಸಮಾನಾರ್ಥ ಪದ 'Hero' ಎಂಬುದು ರೋಢಿಗತ ವೀರ ವೀರತ್ವ ಇದು ವ್ಯಕ್ತಿಯ ಸ್ವಾಭಿಮಾನ ಮಹಾತ್ವಾಕಾಂಕ್ಷೆಯನ್ನು ಶೌರ್ಯ ಪರಾಕ್ರಮವನ್ನು ಪ್ರತಿಬಿಂಬಿಸುವ ಪದ. ವೀರಗಲ್ಲನ್ನು ನಡೆಸುವ ಅಥವಾ ನಿಲ್ಲಿಸುವ ಉದ್ದೇಶ ಎರಡು ರೀತಿಯದು.

೧. ಲೌಕಿಕ ಉದ್ದೇಶ - ವೀರ ಪರಾಕ್ರಮವನ್ನು ಮೆಚ್ಚಿ ಲೋಕಕ್ಕೆ ತಿಳಿಯಲಿ ಎಂದು

೨. ಪಾರಮಾರ್ಥಿಕ ಉದ್ದೇಶ - ವೀರಗಲ್ಲು ನಿಲ್ಲಿಸುವುದರ ಮೂಲಕ ಅತನಿಗೆ ವೀರಸ್ವರ್ಗ ಪ್ರಾಪ್ತವಾಗಲೆಂದು ನಿಲ್ಲಿಸುವುದು.[೨೩]

ಒಟ್ಟಾರೆಯಾಗಿ ಯಾವುದೇ ಹೋರಾಟದಲ್ಲಿ ಮಡಿದ ವೀರರ ದ್ಯೋತಕವಾಗಿ ನಿಲ್ಲಿಸಿದ ಈ ಶಿಲೆಯೇ ವೀರಗಲ್ಲು ಸಾಮಾನ್ಯವಾಗಿ ವೀರಗಲ್ಲಿನಲ್ಲಿ ಮೂರು ಹಂತಗಳಿರುತ್ತವೆ. ಕೆಳಗಿನ ಹಂತದಲ್ಲಿ ವೀರ ತನ್ನ ಶತ್ರುಗಳೊಡನೆ ಹೋರಾಡುತ್ತಿರುವಂತೆಯೂ, ಮಧ್ಯದ ಹಂತದಲ್ಲಿ ಮಡಿದ ಅವನನ್ನು ಅಪ್ಸರೆಯರು ಸ್ವರ್ಗ ಲೋಕಕ್ಕೆ ಒಯ್ಯುತ್ತಿರುವಂತೆಯೂ, ಮೇಲಿನ ಹಂತದಲ್ಲಿ ಅವನು ಭಗವಂತನ ಸಾನಿಧ್ಯವನ್ನು ಪಡೆದು ಭಗವಂತನ ಪೂಜೆ ಮಾಡುವಂತೆ ತೋರಿಸಲಾಗುತ್ತದೆ. ಕೆಲವು ವೀರಗಲ್ಲುಗಳ ಮೇಲೆ ೪-೫-೬ ಹಂತಗಳೂ ದೊರಕುತ್ತವೆ. ಯಾವುದೇ ಹಂತವಿರದೆ ಕುದುರೆ ಸವಾರಿ ಮಾಡುತ್ತಿರುವ ಅಥವಾ ಯುದ್ಧ ಮಾಡುತ್ತಿರುವ ಅಥವಾ ಬಿಲ್ಲನ್ನು ಖಡ್ಗವನ್ನೂ ಹಿಡಿದು ನಿಂತಿರುವ ಯುದ್ಧವನ್ನೋ ರಣರಂಗವನ್ನೋ ಸೂಚಿಸುತ್ತಿರುವ ಚಿತ್ರವನ್ನು ವೀರಗಲ್ಲು ಎಂದು ಕರೆಯಬಹುದು.[೨೪]

ಮುಕ್ಕುಂದಿಯ ಐತಿಹಾಸಿಕ ವಿವೇಚನೆಯ ವ್ಯಾಪ್ತಿಯಲ್ಲಿ ವೀರಗಲ್ಲುಗಳು ದೊರೆತ್ತಿದ್ದು, ಇದು ಮುಕ್ಕುಂದಿ ಗ್ರಾಮದ ಉತ್ತರ ದಿಕ್ಕಿನಲ್ಲಿದ್ದು, ಪಾಪನಾಥೇಶ್ವರ ದೇವಾಲದ ಪ್ರಕಾರದಲ್ಲಿದೆ. (ಹೊರ ಆವರಣ) ಇದು ರಾಯಚೂರು ಜಿಲ್ಲೆಯಲ್ಲಿ ದೊರೆಯುವ ಏಕೈಕ ಮೂರು ಪಟ್ಟಿಕೆಯ ವೀರಗಲ್ಲಾಗಿದೆ.[೨೫] ಸುಮಾರು ನೆಲದಿಂದ ಈ ವೀರಗಲ್ಲು ೪ ಅಡಿ ಎತ್ತರದಲ್ಲಿದೆ. ಕೆಳಭಾಗದ ಪಟ್ಟಿಕೆಯಲ್ಲಿ ವೀರರಿಬ್ಬರ ಚಿತ್ರಣವಿದೆ. ಕೈಯಲ್ಲಿ ಬಿಲ್ಲು ಹಿಡಿದುಕೊಂಡು ಹೋರಾಟ ನಡೆಸುವ ದೃಶ್ಯವಿದೆ. ವೀರನ ಕಾಲಲ್ಲಿ ಕಾಲಗಡವನ್ನು ಧರಿಸಿದ್ದಾನೆ. ವೀರನ ಹಿಂದುಗಡೆ ಸೈನ್ಯವಿರುವ ಚಿತ್ರಣವಿದೆ. ಆದರೆ ಸ್ಪಷ್ಟವಾಗಿಲ್ಲ. ಎರಡನೆಯ ಹಂತದಲ್ಲಿ ಸೈನಿಕನು ಇಬ್ಬರು ಅಪ್ಸರ ಸ್ತ್ರೀಯರ ಜೊತೆಯಲ್ಲಿ ಮೇಲಕ್ಕೆ ಹಾರುವುದನ್ನು ತೋರಿಸಲಾಗಿದೆ. ಮೇಲ್ಭಾಗದ ಪಟ್ಟಿಕೆಯಲ್ಲಿ ವೀರನು ಶಿವಲಿಂಗದ ಬಳಿಯಲ್ಲಿ ಪದ್ಮಾಹಸನದಲ್ಲಿ ಕೈಮುಗಿದು ಬಲಭಾಗದಲ್ಲಿ ಕುಳಿತಿದ್ದಾನೆ. ಮಧ್ಯದಲ್ಲಿ ಶಿವಲಿಂಗವಿದ್ದು, ಅಪ್ಸರೆಯೊಬ್ಬಳು ಚಾಮರಬಿಸುತ್ತಿರುವ ದೃಶ್ಯವಿದೆ. ಸೂರ್ಯ ಚಂದ್ರರ ಚಿತ್ರಣವಿದೆ. ಈ ವೀರಗಲ್ಲಿಗೆ ಕಪ್ಪುಶಿಲೆ ಬಳಸಲಾಗಿದೆ.

ಮುಕ್ಕುಂದಿ ಗ್ರಾಮದ ಮಧ್ಯಭಾಗದಲ್ಲಿರುವ ವೀರಭದ್ರೇಶ್ವರ ದೇವಾಲಯದ ಪಶ್ಚಿಮ ಭಾಗಕ್ಕೆ ಇರುವ ಕಂಪೌಂಡ ಗೋಡೆಗೆ ನಿಲ್ಲಿಸಿರುವ ಒಂದ ಹಂತದ ವೀರಗಲ್ಲ ಇದಾಗಿದೆ. ಒಂದೇ ಹಂತದಲ್ಲಿ ಇರುವ ಈ ವೀರಗಲ್ಲು ಸುಮಾರು ೪ ಅಡಿ ಎತ್ತರದಲ್ಲಿದೆ. ಸೈನಿಕನೊಬ್ಬನು ನಿಂತಿರುವ ದೃಶ್ಯವಿದ್ದು, ಕಾಲಿನಲ್ಲಿ ಕಾಲಗಡವನ್ನು, ಸೊಂಟದಲ್ಲಿ ಕತ್ತಿಯನ್ನು ಮತ್ತು ಎರಡು ಕೈಯಲ್ಲಿ ಬಂದೂಕು(ಕೋವಿ) ಹಿಡಿದಿರುವ ದೃಶ್ಯವಿದೆ. ಎರಡು ಕೈಯಲ್ಲಿ ಕಡಗಳನ್ನು ಧರಿಸಿದ್ದಾನೆ. ಮತ್ತು ಬಲತೋಳಿನಲ್ಲಿ ತೋಳಕಟ್ಟು ಇದೆ. ಸೈನಿಕನು ದಪ್ಪವಾದ ಮೀಸೆಯನ್ನು ಬಿಟ್ಟು, ತಲೆಯ ಮೇಲೆ ಟೋಪಿಯನ್ನು ಧರಿಸಿದ್ದಾನೆ. ಬಲಭಾಗದಲ್ಲಿ ನಾಗರಹಾವಿನ ಚಿತ್ರವನ್ನು ಕೆತ್ತಲಾಗಿದೆ. ಇದು ವಿಜಯನಗರದ ಕಾಲದ ಅಥವಾ ನಂತರ ಕಾಲದ ವೀರಗಲ್ಲು ಎಂದು ಸ್ಪಷ್ಟವಾಗಿ ಗುರುತಿಸಬಹುದು. ಬಿಳಿ ಶಿಲೆಯ ಕಲ್ಲನ್ನು ಬಳಸಲಾಗಿದೆ.

ಮುಕ್ಕುಂದಿ ಗ್ರಾಮದ ತುಂಗಭದ್ರಾ ನದಿಯ ಮಧ್ಯದಲ್ಲಿರುವ ಕುರದಮ್ಮ ದೇವಸ್ಥಾನದ ಹತ್ತಿರ ತುಂಡಾಗಿರುವ ವೀರಗಲ್ಲು ಇದೆ. ಸೈನಿಕನೊಬ್ಬನು. ಕುದರೆಯ ಮೇಲೆ ಕುಳಿತು ಯುದ್ಧ ಮಾಡುತ್ತಿರುವ ದೃಶ್ಯವಿದೆ. ಕುದುರೆಯ ಮುಂಭಾಗದಲ್ಲಿ ವೀರನಿಗೆ ಎದುರಾಗಿ ಸೈನಿಕನೊಬ್ಬನು ನೆಲದ ಮೇಲೆ ನಿಂತು ಹೋರಾಡುತ್ತಿರುವ ಚಿತ್ರ ಅಸ್ಪಷ್ಟವಾಗಿದೆ. ಇದು (ತ್ರುಟಿತ ವೀರಗಲ್ಲು) ಕಪ್ಪುಶಿಲೆಯನ್ನು ಬಳಸಲಾಗಿದೆ.

ಹೀಗೆ ಇಲ್ಲಿ ಕಂಡುಬರುವ ವೀರಗಲ್ಲುಗಳು ಶತ್ರುಗಳೊಡನೆ ಹೋರಾಡಲು ಸಜ್ಜಾಗಿರುವ, ಸ್ವಾಮಿನಿಷ್ಟರ ಪರಾಕ್ರಮವನ್ನು ವರ್ಣಿಸುವ ಶಿಲ್ಪಗಳು, ಮೂರು ಪಟ್ಟಿಕೆಗಳಿರುವ ವೀರರ ಶಿಲ್ಪಗಳು ಹಾಗೂ ತಮ್ಮ ನಾಡಿನ ಮತ್ತು ಪ್ರಾಣಿಗಳ ರಕ್ಷಣೆಗಾಗಿ ಹೋರಾಡಿ ಮಡಿದ ವೀರರ ಶಿಲ್ಪಗಳನ್ನು ಅವರ ಬಂಧುಗಳು ಅಥವಾ ಅಭಿಮಾನಿಗಳು ಕಟ್ಟಿಸಿರಬಹುದೆಂದು ಹೇಳಬಹುದಾಗಿದೆ.

೩.೩. ಆರ್ಥಿಕ ವ್ಯವಸ್ಥೆ

ನಮ್ಮ ಪ್ರಾಚೀನ ಇತಿಹಾಸವನ್ನು ಅಧ್ಯಯನ ಮಾಡುವಾಗ ರಾಜಕೀಯ ಚರಿತ್ರೆಯ ಒಂದು ಭಾಗವಾಗಿ ಆರ್ಥಿಕ ವ್ಯವಸ್ಥೆ ಇರುವುದನ್ನು ನಾವು ಗುರುತಿಸಬಹುದಾಗಿದೆ. ಹಿಂದಿನಿಂದಲೂ ನಾವು ಒಂದು ವ್ಯವಸ್ಥಿತವಾದ ರಾಜ್ಯದ ಪರಿಕಲ್ಪನೆಯನ್ನು ಕಾಣುವುದು ಅರ್ಥ ವ್ಯವಸ್ಥೆಯ ಹಿನ್ನೆಲೆಯಲ್ಲಿಯೇ. ಈ ಅರ್ಥ ವ್ಯವಸ್ಥೆಯು ಅಂದಿನ ಸಾಮಾಜಿಕ ಜೀವನದ ಕೃಷಿ ಪದ್ಧತಿ ಹಾಗೂ (ಅವರ) ವ್ಯಾಪಾರ ವೃತ್ತಿಯನ್ನು ಅವಲಂಬಿಸಿತ್ತು. 'ವೃತ್ತಿ'ಗೆ ಮಾನವನ ಇತಿಹಾಸದಷ್ಟೇ ಪ್ರಾಚೀನತೆಯಿದೆ. ವ್ಯಕ್ತಿಯ ಜೀವನಾಧಾರ ವೃತ್ತಿ. ವೃತ್ತಿಯಿಲ್ಲದೆ, ಬಾಳುವುದು ಬದುಕುವುದು ಮಾನವನಿಗೆ ಕಷ್ಟಸಾಧ್ಯ. ಹೀಗಾಗಿ ಮನುಕುಲದ ಚರಿತ್ರೆಯ ಆರಂಭದಿಂದಲೂ ಒಂದಿಲ್ಲೊಂದು ವೃತ್ತಿಯನ್ನು ಕೈಗೊಳ್ಳುವುದು ಅವನಿಗೆ ಅನಿವಾರ್ಯ ಅಗತ್ಯವೆನಿಸಿದ್ದಿತ್ತು.[೨] ಮಾನವನ ಆರಂಭದ ವೃತ್ತಿಗಳು ಹೆಚ್ಚು ನೈಸರ್ಗಿಕವಾಗಿದ್ದರಿಂದ ಅಲ್ಲಿನ ಜನರ ದುಡಿಮೆಯ ಪರಿಶ್ರಮವೂ ಗಣನೀಯವೂ ಆಗಿತ್ತು. ಅಂತೆಯೇ ಅವರು ಅಲ್ಲಿನ ನೈಸರ್ಗಿಕ

ಸಂಪನ್ಮೂಲಗಳನ್ನು ಅಧಿಕವಾಗಿ ಸದುಪಯೋಗ ಪಡಿಸಿಕೊಂಡಿದ್ದನ್ನು ಕಾಣುತ್ತೇವೆ. ಮಾನವನು ನೈಸರ್ಗಿಕ ವೃತ್ತಿಗಳೊಂದಿಗೆ ಕ್ರಮೇಣವಾಗಿ ಸಾಮಾಜಿಕ ವೃತ್ತಿಗಳಲ್ಲಿ ತೊಡಗಿದ್ದು, ಈ ವೃತ್ತಿಗಳ ಗುಣಮಟ್ಟ ಹಾಗೂ ಅವುಗಳನ್ನು ಬಳಸಿಕೊಳ್ಳುವ ಸಾಮರ್ಥ್ಯಗಳಿಗನುಗುಣವಾಗಿ ಆ ನಾಡಿನ ಆರ್ಥಿಕಾಭಿವೃದ್ಧಿ ನಿರ್ಧರಿತವಾಗುತ್ತದೆ. ಸಮಾಜದ ಮಹತ್ವದ ಭಾಗವೆಂದರೆ ಆರ್ಥಿಕ ವ್ಯವಸ್ಥೆ. "ವ್ಯಕ್ತಿ ಶ್ರಮ ಜೀವಿಯೂ ವೃತ್ತಿ ಜೀವಿಯೂ ಆದುದರಿಂದ 'ಶ್ರಮ' ಮತ್ತು 'ವೃತ್ತಿಗಳು' ಅವನ ಬದುಕಿನಲ್ಲಿ ಬೆಲೆಯುಳ್ಳ ಅಂಶಗಳಾಗಿವೆ. ಇವು (ಶ್ರಮ, ವೃತ್ತಿ) ಒಂದಕ್ಕೊಂದು ಪೂರಕವೂ, ಪ್ರೇರಕವಾಗಿಯೂ ನಿಂತು ಅವನ ಆರ್ಥಿಕ ಚಟುವಟಿಕೆಗಳನ್ನು ಚುರುಕುಗೊಳಿಸಿವೆ. ಪ್ರತಿಯೊಂದು ವೃತ್ತಿಗೂ, ಶ್ರಮವೇ ಮೂಲ. ಆದುದರಿಂದ ಶ್ರಮವಿಲ್ಲದ, ವೃತ್ತಿಗಳೇ ಇಲ್ಲವೆಂದು ಹೇಳಬಹುದು. ಶ್ರಮಭೇದದಿಂದ ವೃತ್ತಿ ಭೇದಗಳು ಉಂಟಾಗಿವೆ. ಈ ವೃತ್ತಿಗಳೇ ಗೌರವ ಸಂಪ್ರಾಪ್ತವಾಗುವುದಕ್ಕೆ "ಶ್ರಮ ಗೌರವ" ಕಾರಣವಾಗಿರಬೇಕು.[೨೨] ಒಟ್ಟಿನಲ್ಲಿ ಶ್ರಮ ಮತ್ತು ವೃತ್ತಿಗಳು ನಾಡಿನ ಆರ್ಥಿಕ ಜೀವನದ ನಾಡಿ ಎನಿಸಿದ್ದವು. ಈ ದೃಷ್ಟಿಯಿಂದ ಮುಕ್ಕುಂದಿ ಪ್ರದೇಶದ ಆರ್ಥಿಕ ವ್ಯವಸ್ಥೆಯು ಕರ್ನಾಟಕದ ಆರ್ಥಿಕ ವ್ಯವಸ್ಥೆಗೆ ಹೊರತಾಗಿಲ್ಲವೆಂದು ಹೇಳಬಹುದು.

ಕರ್ನಾಟಕದ ಹಲವು ರಾಜಮನೆತನಗಳು ನಡೆಸಿಕೊಂಡು ಬಂದ ಆರ್ಥಿಕ ವ್ಯವಸ್ಥೆಯನ್ನೇ ಮುಕ್ಕುಂದಿ ಪ್ರದೇಶವನ್ನಾಳಿದ ಅರಸು ಮನೆತನಗಳು ಮುಂದುವರೆಸಿಕೊಂಡು ಬಂದವರಾಗಿದ್ದಾರೆ. ಕರ್ನಾಟಕದ ಆರ್ಥಿಕ ವ್ಯವಸ್ಥೆಯನ್ನು ಅರಿಯಲು ನಮಗೆ ಶಾಸನಗಳು ಹೇರಳವಾಗಿ ಮಾಹಿತಿಯನ್ನು ಒದಗಿಸುತ್ತವೆ. ಈ ದೃಷ್ಟಿಯಿಂದ ಮುಕ್ಕುಂದಿ ಪ್ರದೇಶದ ಆರ್ಥಿಕ ವ್ಯವಸ್ಥೆಯನ್ನು ಅರಿಯಲು ನಮಗೆ ಶಾಸನಗಳು ಸಹಕಾರಿಯಾಗಿ ನಿಂತಿವೆ.

ಅಂದಿನ ಆರ್ಥಿಕ ವ್ಯವಸ್ಥೆಯಲ್ಲಿ ಸಂತೆ, ಪೇಟೆ ಇತ್ಯಾದಿಗಳ ಮೇಲಿನ ತೆರಿಗೆಯ ಪ್ರಾಮುಖ್ಯತೆಯನ್ನು ಹೇಳಲಾಗಿದೆ. ವ್ಯಾಪಾರವರ್ಗ, ಸಂತೆ, ಸುಂಕ ಹಾಗೂ ಸಾಮಾಜಿಕ, ಆರ್ಥಿಕ ಅಭಿವೃದ್ಧಿಗಾಗಿ ವ್ಯಾಪಾರೋದ್ಯಮವನ್ನು ಬೆಳೆಸುವಲ್ಲಿ ಅವರಿಗಿದ್ದ ಹೊಣೆಗಾರಿಕೆಯನ್ನು ಇಲ್ಲಿ ಅಧ್ಯಯನ ಮಾಡಲಾಗಿದೆ.

ಭೂ ಸಂಪತ್ತು

ಸಮಾಜದ ಪ್ರತಿಯೊಬ್ಬ ಜನತೆ ತಮ್ಮ ಜೀವನದ ನಿರ್ವಹಣೆಗಾಗಿ ಆರ್ಥಿಕ ಭದ್ರತೆಯನ್ನು ಹೊಂದಿರಬೇಕಾಗುತ್ತದೆ. ಪ್ರಾಚೀನ ಕಾಲದಲ್ಲಿ ಆರ್ಥಿಕ ಭದ್ರತೆಗಾಗಿ ನಿಸರ್ಗ ಸಂಪತ್ತಾದ ಭೂಮಿಯನ್ನು ಆಶ್ರಯಿಸಿರಬೇಕಾಗುತ್ತಿತ್ತು. ಆಧುನಿಕ ಅರ್ಥಶಾಸ್ತ್ರದ ಪ್ರಕಾರ ಪ್ರಕೃತಿದತ್ತವಾದ ಮಣ್ಣು, ನೀರು, ಖನಿಜ, ಅರಣ್ಯ ಸಂಪತ್ತುಗಳಾದ ಈ ಎಲ್ಲಾ ಕೊಡುಗೆಗಳು ಭೂ ಸಂಪತ್ತಿನಲ್ಲಿ ಸಮಾವೇಶವಾಗುತ್ತವೆ. ಈ ದೃಷ್ಟಿಯಿಂದ ಭೂಮಿಯು ಅತ್ಯಂತ ಮಹತ್ವದ ನಿಸರ್ಗ ಸಂಪತ್ತೆಂದು ಹೇಳಬೇಕಾಗುತ್ತದೆ. "ಭೂಮಿಯನ್ನು ಸ್ಥೂಲವಾಗಿ ವ್ಯವಸಾಯ ಯೋಗ್ಯ ಮತ್ತು ಬೀಳು ಭೂಮಿ ಎಂದು ವಿಭಾಗಿಸಬಹುದು. ಹೊಸ

ಊರುಗಳು ನಿರ್ಮಾಣವಾಗುವುದರೊಂದಿಗೆ ಅವುಗಳ ಸುತ್ತಲೂ ವ್ಯವಸಾಯ ಯೋಗ್ಯವಾದ ಭೂಮಿಯ ನಿರ್ಮಾಣವೂ ಆಗುತ್ತಿತ್ತು. ಬೀಳು ಭೂಮಿಯನ್ನು ಸಾಮಾನ್ಯವಾಗಿ ಪಶುಪಾಲನೆಗೆ ಹುಲ್ಲುಗಾವಲೆಂದು ಉಪಯೋಗಿಸಲಾಗುತ್ತಿತ್ತು. ಒಂದು ವೇಳೆ ಬೀಳು ಭೂಮಿ ಇರದಿದ್ದರೆ ಅಂಥ ಊರುಗಳಲ್ಲಿ ನೂರು ಬಿಲ್ಲಳತೆಯ ಭೂಮಿಯನ್ನು ಕಾಯ್ದಿಡಬೇಕೆಂದು 'ಯಾಜ್ಞವಲ್ಕಸ್ಮೃತಿ' ಹೇಳುತ್ತದೆ.[೨೮]

ಪ್ರಾಚೀನ ಕಾಲದಲ್ಲಿ ಬೀಳು ಬಿದ್ದ ಭೂಮಿಗಳಿದ್ದು, ಅವು ದನಕರುಗಳಿಗೆ ಹುಲ್ಲನ್ನು ಮೇಯಿಸುವುದಕ್ಕಾಗಿಯೇ ಭೂಮಿಯನ್ನು ಮೀಸಲಿಡಲಾಗುತ್ತಿತ್ತು. "ಈಗಲೂ ಪ್ರತಿಯೊಂದು ಊರಿಗೆ 'ಗೋಮಾಳ' ಎಂಬ ಭೂಮಿಯನ್ನು ಕಾಯ್ದಿಡುವ ನಿಯಮವಿದೆ. ಇಂತಹ ಭೂಮಿಯನ್ನು ವ್ಯವಸಾಯ ಯೋಗ್ಯ ಭೂಮಿಯನ್ನಾಗಿಸಲು ಯಾವ ತೊಂದರೆಯು ಇರಲಿಲ್ಲ. ಆದರಿಂದಾಗಿ ರಾಜ್ಯಾದಾಯಕ್ಕೆ ಹೆಚ್ಚಿನ ತೆರಿಗೆ ಸಂದಾಯವಾಗುತ್ತಿತ್ತು.[೨೯] ರಾಯಚೂರು[೩೦] ನಾಡಿನ ಶಾಸನಗಳು ಬೀಳುಬಿದ್ದ ಹೊಲಗಳನ್ನು ಉತ್ತುಕೊಂಡು ಪರಂಪರೆಯಾಗಿ ಅನುಭವಿಸಬಹುದೆಂದು ಕವಲು ನೀಡುತ್ತದೆ. ಆದರೆ ಮುಕ್ಕುಂದಿ ಪರಿಸರದ ಶಾಸನಗಳಲ್ಲಿ ಕವಲು ನೀಡಿದ. ಅಥವಾ ಗೋಮಾಳಕ್ಕೆ ಬಿಟ್ಟದ್ದಕ್ಕಾಗಿ ಎಂದು ಶಾಸನಗಳು ಉಲ್ಲೇಖಿಸುವುದಿಲ್ಲ. 'ದಾನ ಪ್ರಸಂಗಗಳಲ್ಲಿ ಬೆಳೆಯುವ ಕೆಯ್ 'ಗಳಂತೆ ಇಂತ ಬಂಜರು ಭೂಮಿಯನ್ನು ಪ್ರತಿಯೊಂದು ಊರುಗಳಲ್ಲಿ ಬಿಡುತ್ತಿರುವುದನ್ನು ನೋಡಿದರೆ ಅವೆಲ್ಲ ಗೋಮಾಳಗಳಾಗಿರಬೇಕೆಂಬುದು ಸ್ಪಷ್ಟ ಇನ್ನು ಹೆಚ್ಚುವರಿ ಬೀಳೂ ಭೂಮಿಯನ್ನು ವ್ಯವಸಾಯ ಯೋಗ್ಯವನ್ನಾಗಿ ಮಾಡಲಾಗುತ್ತಿತ್ತು. ಕಷ್ಟದಿಂದ ಕೂಡಿದ ಬೀಳು ಭೂಮಿಯನ್ನು ಸಾಗುವಳಿಯ ಮೇಲೆ ಕರ ವಿನಾಯಿತಿಯನ್ನು ಕೊಟ್ಟು ಪ್ರೋತ್ಸಾಹಿಸುತ್ತಿದ್ದರ ಪ್ರಸ್ತಾಪ ಕೌಟಿಲ್ಯನ ಅರ್ಥಶಾಸ್ತ್ರದಲ್ಲಿದೆ.[೩೧]

ಭೂಮಿಯ ಪ್ರಕಾರಗಳು

ಪ್ರಾರಂಭದಲ್ಲಿ ಗೆಡ್ಡೆ ಗೆಣಸುಗಳನ್ನು ತಿಂದು ಬದುಕುತ್ತಿದ್ದ ಮಾನವನು ನಾಗರಿಕತೆ ಬೆಳೆದಂತೆಲ್ಲಾ ವಿವಿಧ ಪ್ರಕಾರದ ಬೆಳೆಗಳನ್ನು ಬೆಳೆಯಲಾರಂಭಿಸಿದನು. ಮೊದಮೊದಲು ಮೊನಚಾದ ಲಗುಡ(ಕೋಲು)ದಿಂದ ಭೂಮಿಯನ್ನು ಹಳ್ಳ ಕುತ್ತಿ ಕಾಳನ್ನು ಬಿತ್ತಲಾರಂಭಿಸಿದ ಕ್ರಮೇಣ ನೇಗಿಲು ಬಳಕೆಗೆ ಬಂತು.[೩೨] ಈ ರೀತಿ ಕಾಳುಗಳನ್ನು ಬಿತ್ತುವಾಗ ಯಾವ ಭೂಮಿಯಲ್ಲಿ ಬೆಳೆ ಚೆನ್ನಾಗಿ ಬರುತ್ತದೆಯೋ ಅಂತಹ ಭೂಮಿಯಲ್ಲೇ ಬೆಳೆ ತೆಗೆಯುತ್ತಿದ್ದರು. ಅಂತಹ ಭೂಮಿಯಲ್ಲಿ ಕೆಲವು ಪ್ರಕಾರಗಳಿವೆ.

ಒಂದನೆಯ ಪ್ರಕಾರ : ಉತ್ತಮ, ಮರಳು ಮಿಶ್ರಿತವಾದ ಎರೆಮಣ್ಣು

ಎರಡನೆಯ ಪ್ರಕಾರ : ಕೆಂಪು (ಕೆಮ್ಮಣ್ಣು ತರಹ) ಮಿಶ್ರಮಣ್ಣು

ಮೂರನೆಯ ಪ್ರಕಾರ : ಕನಿಷ್ಠ ವರಲೆಂದು ನೀರಿನ ಚಿಲುಮೆ

ನಾಲ್ಕನೆಯ ಪ್ರಕಾರ : ಇರುರ್ವರಿ ಶಾಮಲವರ್ಣದ ಮರಳು ಮಿಶ್ರಿತವಾದ ಮಣ್ಣು

ಅಧಮಾಧಮ, ಉರಿಮಂಡಲ, ಬಿಸಿ ಮರಳು ಒಣಕಲು ನೀರಿಸ ಮಟ್ಟದ ಮೇಲಿರತಕ್ಕದ್ದು[೩೩] ಇದರಲ್ಲಿ ಎರೆಗದ್ದೆ ಇಂದಿಗೂ ವಾಡಿಕೆಯಲ್ಲಿರುವ ಫಲವತ್ತಾದ ಕಪ್ಪು ಮಿಶ್ರಿತ ಮಣ್ಣನ್ನು ಹೊಂದಿರುವಂತಹದ್ದಾಗಿದೆ. ಇದನ್ನು ಶಾಸನಗಳು ಎರೆ, ಕರಿಯ ನೆಲ ಎಂದು ಕರೆದಿದೆ.

'ಸಾಗುವಳಿಯ ಜಮೀನನ್ನು ದೇವಮಾತೃಕ ಮತ್ತು ನದಿ ಮಾತೃಕಗಳೆಂದು ಸ್ಥೂಲವಾಗಿ ವಿಂಗಡಿಸಬಹುದು. ಕೇವಲ ಮಳೆಯ ನೀರನ್ನೇ ಆಶ್ರಯಿಸಿ ಬೆಳೆಯುವ ಹೊಲಗಳು ದೇವಮಾತೃಕೆಗಳು ನದಿ ಕೆರೆ ಮುಂತಾದವುಗಳನ್ನು ಆಶ್ರಯಿಸುವ ಹೊಲಗಳು ನದಿ ಮಾತೃಕೆಗಳು ಈ ವಿಭಜನೆಯನ್ನೇ ಕನ್ನಡ ಶಾಸನಗಳಲ್ಲಿ 'ಬಿದ್ವಲೆ'(ಬೆದ್ದಲೆ), ಮತ್ತು ಗಳ್ದೆ(ಗದ್ದೆ)ಗಳೆಂದು ಕರೆದಿರುವುದು. 'ಬೆದೆಮಣ್ '(ಬೆದೆ+ನೆಲ್ +ಮಣ್ ನೆಲ್ =ಬತ್ತ) ಇವು ನೀರು ನಿಲ್ಲುವಂತೆ ಕಟ್ಟೆಯನ್ನು ಕಟ್ಟಿ, ಮಳೆಯ ನೀರನ್ನು ಸಂಗ್ರಹಿಸಿ ಬತ್ತವನ್ನು ಬೆಳೆಯಬಹುದಾದ ತಾತ್ಕಲಿಕ ಗದ್ದೆಗಳಿಗೆ ಕಟ್ಟೆ ಇದ್ದರೆ ಅವುಗಳು ಗದ್ದೆಗಳು. ಕಟ್ಟೆಯೊಡೆದರೆ ಬೆದ್ದಲು ಭೂಮಿಗಳು.[೩೪] ಈ ನಾಡಿನಲ್ಲಿ ನದಿ ಕೆರೆಗಳನ್ನು ಆಶ್ರಯಿಸುವ ಭೂಮಿ ತೋಟಗಳಿದ್ದು, ಅವುಗಳಲ್ಲಿ ಕಲ್ಯಾಣ ಚಾಳುಕ್ಯರ ಕಾಲದಲ್ಲಿ ಕೆರೆಯ ಕೆಳಗಿನ ಭೂಮಿಯಲ್ಲಿಯೇ ತೋಟವಿದ್ದುದು ಕಂಡುಬರುತ್ತದೆ.[೩೫]

ಮುಕ್ಕುಂದಿ ಪರಿಸರದ ಮತ್ತು ತಾಲೂಕಿನ ಶಾಸನಗಳನ್ನು ಗಮನಿಸಿದಾಗ ಇಲ್ಲಿ ದೊರೆತ ಭೂಮಿಯ ಪ್ರಕಾರಗಳಲ್ಲಿ ಕೆಲವು ವಿಧಗಳಿವೆ. ಎರೆಭೂಮಿ, ಕರಿಭೂಮಿ ಅಥವಾ ಕಪ್ಪುಭೂಮಿ ಎಂದು ಗುರುತಿಸಿವೆ. ರೌವುಡಕುಂದೆ ಶಾಸನ, ೨೫ ಮತ್ತರು ಕರಿಯ ನೆಲವನ್ನು ತೋಟವನ್ನು ಬಿಟ್ಟಂತೆ ಹೇಳಿದೆ.[೩೬] ಅದೇ ಗ್ರಾಮದ ಇನ್ನೊಂದು ಕರಿಯ ಕೆರೆಯಕೆಳಗಿನ ಭೂಮಿ ದಾನ ಬಿಟ್ಟದನ್ನು ತಿಳಿಸುತ್ತದೆ.[೩೭]

ಒಟ್ಟಾರೆಯಾಗಿ ಮುಕ್ಕುಂದಿ ಗ್ರಾಮದ ಶಾಸನಗಳಲ್ಲಿ ತಾಲೂಕಿನ ಶಾಸನಗಳಲ್ಲಿ ದೇವರಗುಡಿ.[೩೮] ಸಿಂಧನೂರು,[೩೯] ಸುಂಕನೂರು,[೪೦] ಹಿರೇಬೇರಿಗೆ,[೪೧] ಈ ಶಾಸನಗಳಲ್ಲಿ ಕರಿಯ ಭೂಮಿ ಕಪ್ಪು ಭೂಮಿ ಎರೆಭೂಮಿಯನ್ನು ದಾನ ನೀಡಿದ್ದನ್ನು ತಿಳಿಸುತ್ತವೆ. ಅಂದಿನ ಕಾಲದಲ್ಲಿ ಈ ಪ್ರದೇಶದಲ್ಲಿ ವ್ಯವಸಾಯ ಯೋಗ್ಯವಾದ ಕಪ್ಪ ಭೂಮಿಯಿದ್ದುದು ಈ ಮೂಲಕ ತಿಳಿದುಬರುತ್ತದೆ. ಉತ್ತಮ ಹಾಗೂ ಹೆಚ್ಚು ಇಳುವಳಿ ನೀಡುವ ಭೂಮಿ ಕಪ್ಪುಭೂಮಿಯಾಗಿದ್ದರಿಂದ ಆ ಕಾಲದ ವ್ಯವಸಾಯ ಪದ್ಧತಿ ಬಗ್ಗೆ ರೈತ ವರ್ಗಕ್ಕೆ ಸೂಕ್ಷ್ಮವಾದ ಜ್ಞಾನ ಎಷ್ಟಿತ್ತು ಎಂಬುದು ತಿಳಿಯುತ್ತದೆ.

ಮುಕ್ಕುಂದಿಯ ಪರಿಸರದಲ್ಲಿ ಭೂಮಿಯನ್ನು ದಾನ ಕೊಟ್ಟ ಶಾಸನಗಳನ್ನು ಗಮನಿಸಿದಾಗ ತಮ್ಮ ಹಿರಿಯರಿಗೆ ಪುಣ್ಯವಾಗಬೇಕೆನ್ನುವ ಉದ್ದೇಶವನ್ನು ಅವರು ಹೊಂದಿದ್ದನ್ನು ಕಾಣುತ್ತೇವೆ. ಭೂದಾನವೇ ಅತ್ಯಂತ ಶ್ರೇಷ್ಟವಾದುದೆಂದು ಅಂದಿನವರು ಭಾವಿಸಿದ್ದರು. ಭೂದಾನವಾಗಿ ಕೊಟ್ಟ ಭೂಮಿಯನ್ನು ಕಾಪಾಡಿಕೊಂಡು ಹೋಗುವುದು ಅಷ್ಟೇ ಮುಖ್ಯವಾದ ವಿಷಯವಾಗಿತ್ತು. ಶಾಸನಗಳ ಫಲಶೃತಿಗಳಲ್ಲಿ ಬರುವ 'ಸಾಮಾನ್ಯೋಯಂ ಧರ್ಮಸೇತು ನೃಪಾಣಾಂ ಕಾಲೇಕಾಲೇ ಪಾಲನೀಯೋಭವದ್ಭಿ[೪೨] ಎನ್ನುವ

ಮಾತು ದಾನವಾಗಿ ಪಡೆದ ಭೂಮಿಯನ್ನು ಕಾಪಾಡಿದವರಿಗೆ ಪುಣ್ಯ ಮತ್ತು ಕೆಡಸುವವರಿಗೆ ಪಾಪ ತಪ್ಪಿದ್ದಲ್ಲ ಎಂಬ ಅಂಶದಲ್ಲಿ ಒಕ್ಕಲುತನದ ಬಗ್ಗೆ ಇದ್ದ ದೃಢ ನಂಬಿಕೆ ಎಂತಹದ್ದು ಎಂಬುದನ್ನು ತಿಳಿಯಬಹುದಾಗಿದೆ.

ನೀರಾವರಿ

ಪ್ರಾಚೀನ ಕಾಲದಲ್ಲಿ ಜಲಸಂಗ್ರಹಣೆಗಾಗಿ ಹೆಚ್ಚು ಪ್ರಾಮುಖ್ಯತೆಯನ್ನು ನೀಡಿದ್ದರು. ನೀರಾವರಿಯು ಮುಖ್ಯವಾಗಿ ನದಿ, ಕೆರೆ, ಬಾವಿಗಳನ್ನು ಅವಲಂಬಿಸಿದ್ದಿತು. ಕೇವಲ ಮಳೆಯನ್ನು ಅವಲಂಬಿಸದೆ, ಹೆಚ್ಚಿನ ಕೃಷಿ ಉತ್ಪದಾನೆಗೆ ನೀರಾವರಿ ಸಂಪನ್ಮೂಲಗಳ ಅತ್ಯವಶ್ಯಕವಾಗಿದ್ದವು. ಕೆರೆ ಬಾವಿಗಳಲ್ಲಿ ಸದಾ ನೀರು ತುಂಬಿರುತ್ತಿದ್ದರಿಂದ ಕೃಷಿ, ಉತ್ಪನ್ನಕ್ಕೆ ಇವು ಸಹಕಾರಿಯಾಗಿರುತ್ತಿದ್ದವು. ನೀರಿನ ತೀವ್ರತೆ ಸಮಸ್ಯೆಯನ್ನು ನೀಗಿಸಲು ಪೂರ್ವಜರು ಇಂಥ ಕೆರೆ, ಕಟ್ಟೆ, ಬಾವಿಗಳನ್ನು ಕಟ್ಟಿಸುವುದು ಶ್ರೇಯಸ್ಕರವೆಂದು ಭಾವಿಸಿದ್ದರು.

ಮುಕ್ಕುಂದಿ ಗ್ರಾಮದ ಕ್ರಿ.ಶ.೧೬೪೬ರ ಶಾಸನ,[೪೩] ಅಬೆಸಾಣಿ ಅಯ್ಯನ ಕಾರ್ಯಕರ್ತನಾದ ಜೊಂಮರಾಹತನೆಂಬುವವನು ಮುಕ್ಕುಂದಿಯ ಗವುಡ, ಸೇನಭೋವ ಮೊದಲಾದವರಿಗೆ ಕೆಜೆಯನ್ನು ಕಟ್ಟಿಸಿದುದಕ್ಕೆ ದಸವಂದವಾಗಿ ಕಟುಮಾನ್ಯ(ಆಜ್ಞೆ) ನೀಡುತ್ತಾನೆ. ಈ ಗೌಡ ಸೆನಭೋವರು ಕಟ್ಟಿಸಿದ ಕೆರೆಗಳೆಂದರೆ ಗೌಡ ಸೇನಬೋವರ ಕೆರೆ, ಆಯಿತಿರಡ್ಡಿ ಕೆರೆ, ಸೂಗೂರ ಸಾಗಪ್ಪನ ಕೆರೆ ಆಟಲು ಪರುವತನ ಕೆರೆ ಕೋಟೆಗಾರ ತಿಪರಂಗ ಕೆರೆ, ಮುಕ್ಕುಂದಿ ಯಿಸೂರಯ್ಯ ಕಾಲುವೆ ೧, ಒಟ್ಟಿಗೆ ೫ ಕೆರೆ, ೨ ಕುಂಟೆ ಮತ್ತು ಒಂದು ಕಾಲುವೆಯನ್ನು ಮಾಡಿಸಿದನ್ನು ಈ ಶಾಸನ ತಿಳಿಸುತ್ತದೆ. ಇದರಲ್ಲಿ ಕೆಳಗೆ ಬರುವ ಆದಾಯದಲ್ಲಿ ಕುಳಪಾಲು ಎರಡು ಮತ್ತು ರಾಜ್ಯಪಾಲು ಒಂದರ ಲೆಕ್ಕದಲ್ಲಿ ಹಂಚಿಕೊಳ್ಳಬೇಕೆಂದು ಹೇಳಲಾಗಿದೆ.

ಹಾಗೆಯೇ ಮುಕ್ಕುಂದಿ ಗ್ರಾಮವು ತುಂಗಭದ್ರಾ ತೀರದ ಪ್ರದೇಶವಾಗಿದ್ದರಿಂದ ಈ ನದಿಯು ಹಲವಾರು ಶಾಸನಗಳಲ್ಲಿ ಉಲ್ಲೇಖವಾಗಿದ್ದು. ಕ್ರಿ.ಶ.೧೬೦೩ರ ಶಾಸನವು ತುಂಗಭದ್ರಾ ತೀರದ, ಕ್ರಿ.ಶ. ೧೫೫೬ ಶಾಸನವು ತುಂಗಭದ್ರಾ ತೀರದಲ್ಲಿ, ಕ್ರಿ.ಶ.೧೦೬೬ ಶಾಸನವು ತುಂಗಭದ್ರಾನದಿ ಎಂಬುದಾಗಿ ಈ ನದಿ ಉಲ್ಲೇಖವಿದೆ. ಆದ್ದರಿಂದ ತುಂಗಭದ್ರಾ ನದಿ ನೀರು ವ್ಯವಸಾಯಕ್ಕೆ ಬಳಸಿಕೊಳ್ಳುತ್ತಿದ್ದರು ಎಂಬುದು ಸ್ಪಷ್ಟವಾಗುತ್ತದೆ. ಹಾಗೆಯೇ ಗಂಗಾ ಗೋದಾವರಿ ನದಿಗಳ ಉಲ್ಲೇಖ[೪೪] ಬಂದಿದ್ದು, ಈ ನದಿಗಳ ವ್ಯವಸಾಯಕ್ಕೆ ಬಳಸಿಕೊಂಡಿದ್ದಕ್ಕೆ ಶಾಸನಗಳಲ್ಲಿ ಆಧಾರಗಳಿಲ್ಲ.

ಕೈಗಾರಿಕೆಗಳು

ಪ್ರಾಚೀನ ಕಾಲದಿಂದಲೂ ಮಾನವನು ದಿನನಿತ್ಯದ ಬದುಕಿಗೆ ಅವಶ್ಯಕವಾದ ವಸ್ತುಗಳನ್ನು ತಯಾರಿಸಲು ಕೆಲವೊಂದು ಕೈಗಾರಿಕೆಗಳನ್ನು ಸ್ಥಾಪಿಸಿಕೊಂಡಿದ್ದ. ಅಂತಹ ಪ್ರಮುಖ ಕೈಗಾರಿಕೆಗಳಲ್ಲಿ

ಗಾಣದೆಣ್ಣೆಯೂ ಒಂದು. ಅತಿ ಹೆಚ್ಚು ಎಣ್ಣೆಯನ್ನು ಆಹಾರ ಪದಾರ್ಥ ಹಾಗೂ ದೀವಿಗೆಗೆ ಬಳಸಲ್ಪಡಲಾಗುತ್ತಿತ್ತು. ಎಣ್ಣೆ ತೆಗೆಯುವ ವೃತ್ತಿಯವರನ್ನು ಶಾಸನಗಳು ಗಾಣಿಗರು ಎಂದು ಕರೆದಿವೆ.

ಎಣ್ಣೆಯು ಅತ್ಯಗತ್ಯವಾದುದರಿಂದ ಬಹುಶಃ ಪ್ರತಿಯೊಂದು ಊರುಗಳಲ್ಲಿಯೂ ಗಾಣಗಳಿದ್ದವೆಂದೂ ಹೇಳಬಹುದು. "ತಲ್ಲಿಗರು ಎಣ್ಣೆಯ ಬೀಜಗಳನ್ನು ಗಾಣಗಳಲ್ಲಿ ಹಾಕಿ ಎಣ್ಣೆಯನ್ನು ಹಿಂಡುತ್ತಿದ್ದರು ಎತ್ತುಗಾಣ, ಕೈಗಾಣ ಎಂಬ ಎರಡು ರೀತಿಯ ಗಾಣಗಳಿದ್ದವು.[೪೫] ಗಾಣಿಗರು ತಮ್ಮದೇ ಆದ ಸಂಘವನ್ನು ಕಟ್ಟಿಕೊಂಡಿದ್ದರು. ಇವರು ಕಟ್ಟಿಕೊಂಡ ಸಂಘ ತಲ್ಲಿಗೆರೈವತ್ತೊಕ್ಕಲು ಇದು ತೆಲ್ಲಗರ ಕೊತ್ತಳಿ, ತೆಲ್ಲಿಗೆ ಸೇಣಿ, ಐವತ್ತೊಕ್ಕಲು, ಗಾಣಿಗರೊಕ್ಕಲು, ಉರ್ರೈವತ್ತೊಕ್ಕಲು ಎಂಬ ಹೆಸರಿನಿಂದ ಕರೆಯಲ್ಪಡುತ್ತಿದ್ದಿತು.[೪೬] ಸಿಂಧನೂರಿನ ಸಾಲಗುಂದಿ,[೪೭] ಮುಕ್ಕುಂದಿ,[೪೮] ಜಾಲಿಹಾಳು,[೪೯] ದೇವರಗುಡಿ[೫೦] ಈ ಸ್ಥಳಗಳಲ್ಲಿ ಗಾಣಗಳಿದ್ದುದು ಶಾಸನಗಳಿಂದ ತಿಳಿಯುತ್ತದೆ. ಮುಕ್ಕುಂದಿಯ ಕ್ರಿ.ಶ.೧೦೬೮ರ ಶಾಸನ[೫೧] ತ್ರೈಳೋಕ್ಯಮಲ್ಲನ ಹೆಂಡತಿ ತ್ರೈಳೋಕ್ಯ ಮಹಾದೇವಿ, ಕಪಾಳೇಶ್ವ ದೇವರಿಗೆ ನಂದಾ ದೀಪಕ್ಕಾಗಿ ಒಂದು ಗಾಣ ಬಿಡುತ್ತಾಳೆ.

ಮುಕ್ಕುಂದಿಯ ಶಾಸನಗಳು ದೇವಾಲಯದ ನಂದಾದೀವಿಗೆ ಗಾಣಬಿಟ್ಟರೆ, ಪುಣ್ಯಪ್ರಾಪ್ತವಾಗುತ್ತೆಂಬ ಭಾವನೆ ಅವರಲ್ಲಿದ್ದಿತು. ದೇವರ ನಂದಾ ದೀವಿಗೆಗೆ ದಾನವಾಗಿ ಬಿಟ್ಟು ಕೊಟ್ಟ ಗಾಣಗಳನ್ನು ಮೇಲೆ ಉಲ್ಲೇಖಿಸಿದ ಶಾಸನಗಳು ತಿಳಿಸುತ್ತವೆ.

ನಾಣ್ಯಗಳು

ನಾಣ್ಯಚಲಾವಣೆ ಆರ್ಥಿಕ ಅಭಿವೃದ್ಧಿಯನ್ನು ಅರಿಯಲು ಸಹಕಾರಿಯಾಗಿದೆ. ನಾಣ್ಯ ಚಲಾವಣೆ ಇನ್ನು ವಿಕಸಿತವಾಗದ ಸಮಯದಲ್ಲಿ ಕೊಡುಕೊಳ್ಳುವ ವ್ಯವಹಾರಕ್ಕೆ ವಸ್ತುಗಳನ್ನೇ ಬಳಸಲಾಗುತ್ತಿತ್ತು. ಜನರು ತಾವು ಬೆಳೆದ ಜೋಳವನ್ನು ತಂದು ಅದರ ಪ್ರಮಾಣದ ಬೆಲೆಗನುಗುಣವಾಗಿ ಅಂಗಡಿಯಿಂದ ತಮಗೆ ಬೇಕಾದ ವಸ್ತುಗಳನ್ನು ಕೊಂಡುಕೊಳ್ಳುತ್ತಿದ್ದರು.

ಮುಕ್ಕುಂದಿಯ ಕ್ರಿ.ಶ.೧೦೮೮ರ ಶಾಸನದಲ್ಲಿ ೧೫೦ ಗದ್ಯಾಣ ಎಂಬುದಾಗಿ ಉಲ್ಲೇಖಿತವಾಗಿದೆ.[೫೨] ಮತ್ತೊಂದು ಶಾಸನ ಕ್ರಿ.ಶ.೧೫೫೬ ಸದಾಶಿವದೇವರಾಯನ ಕಾಲದಾಗಿದ್ದು,[೫೩] 'ಹೊನ್ನು' ದಾನ ನೀಡಿದ್ದಾಗಿಯು ಹೇಳಿದೆಯಾದರೂ ಶಾಸನ ತ್ರುಟಿತವಾಗಿದೆ. ಈ ಎರಡು ಶಾಸನಗಳು ಮುಕ್ಕುಂದಿ ಅಧ್ಯಯನದ ವ್ಯಾಪ್ತಿಗೆ ಒಳಪಡುತ್ತವೆ. ಕ್ರಿ.ಶ.೧೧೭೫ರ ಅಹಮಲ್ಲನ ಶಾಸನದಲ್ಲಿ 'ವೀಸ' ಎಂಬುದಾಗಿ ಬಳಕೆಯಾಗಿದೆ.[೫೪]

ಒಟ್ಟಾರೆಯಾಗಿ ರಾಯಚೂರು ಜಿಲ್ಲೆಯ ಮತ್ತು ತಾಲೂಕುಗಳಲ್ಲಿ ಪ್ರಾಚೀನ ಕಾಲದಲ್ಲಿ ಹೊನ್ನ, ವರಹ, ಗದ್ಯಾಣ, ವೀಸ, ಹಣ, ಪೊಸ, ಹಾಗ ಮುಂತಾದ ನಾಣ್ಯಗಳು ಬಳಕೆಯಾಗಿವೆ. ನಾಣ್ಯಗಳಲ್ಲಿ ಪ್ರಸಿದ್ಧವಾದುದು ಗದ್ಯಾಣ ಅಥವಾ ಪೊನ್ ಎಂಬ ಹೆಸರಿನ ನಾಣ್ಯ. ಇದರ ತೂಕ ಸುಮಾರು ೯೬

grs ಎಂದೂ ಡಾ. ಅಲ್ಟೇಕರರೂ ಸುಮಾರು ೬೩ grs.(ಗ್ರೇನು) ಎಂದು ಡಾ. ಅಪ್ಪಾದೊರೈ ಅವರು ಅಭಿಪ್ರಾಯಪಡುತ್ತಾರೆ.[೫೫] ನಾಣ್ಯಗಳ ತೂಕದಲ್ಲಿ ಏನೇ ಭಿನ್ನತೆಗಳು ಇದ್ದರೂ, ಈ ಮೇಲ್ಕಾಣಿಸಿದ ನಾಣ್ಯಗಳು, ಶಾಸನಗಳಲ್ಲಿ ಉಲ್ಲೇಖವಾಗಿವೆ.

ತೂಕ ಮತ್ತು ಅಳತೆಗಳು (ಭೂಮಾಪನ)

ಪ್ರಾಚೀನ ಕರ್ನಾಟಕದಲ್ಲಿ ಬಳಸುತ್ತಿದ್ದ ಅಳತೆ ಮತ್ತು ತೂಕಗಳು ಮುಕ್ಕುಂದಿ ಪ್ರದೇಶದಲ್ಲಿಯೂ ಸಹ ಪ್ರಚಲಿತದಲ್ಲಿತ್ತೆಂದು ಹೇಳಬಹುದು. ಶಾಸನಗಳಲ್ಲಿ ಬೇರೆ ಬೇರೆ ಪ್ರಮಾಣದ ಅಳತೆ ಗೋಲುಗಳು ಕಂಡುಬರುತ್ತವೆ. ಅವುಗಳನ್ನು ಈ ಕೆಳಗಿನಂತೆ ಪಟ್ಟಿ ಮಾಡಲಾಗಿದೆ.

ಕ್ರ.ಸಂ.	ಅಳತೆಯ ಹೆಸರು	ಶಾಸನದ ಕಾಲ(ಕ್ರಿ.ಶ.)	ಗ್ರಾಮ	ಉಲ್ಲೇಖ
೧.	ಮಂಡಲಗಾವನಗಳ	೧೦೩೫	ರೌಡಕುಂದೆ	ಸಿಂ.೧
೨.	ಸಳ್ಳಕಬ್ಬಯ	೧೧೩೪	ಮುಕ್ಕುಂದಿ	ಸಿಂ.೫
೩.	ಸಳ್ಳಕಬ್ಬಯ	೧೧೩೪	ಮುಕ್ಕುಂದಿ	ಸಿಂ.೬
೪.	ಗಂಡಭೇರುಂಡನ ೪೨ ಗೇಣಗಳ	೧೧೯೭	ಮುಕ್ಕುಂದಿ	ಸಿಂ.೭.
೫.	ಸಾಲಗುನ್ದೆಯ ಕಲಿಯ ಮಗೆಜಿಯ ಕೋಲು	೧೧೯೭	ಮುಕ್ಕುಂದಿ	ಸಿಂ.೭.
೬.	ಮಾಣಿಕೇಶ್ವರನ ೨೪ ಗೇಣಕೋಲು	೧೧೯೭	ಮುಕ್ಕುಂದಿ	ಸಿಂ.೭.
೭.	ಮಣ್ಣಲಗಾವನ ನಲ್ವತ್ತು ಗೇಣ ಘಳೆಯಲ್ಲಿ	೧೦೪೯	ಮುಕ್ಕುಂದಿ	ಸಿಂ.೯.
೮.	ದೇವರಸತ್ರ ಸಟ್ಟಿಕಬ್ಬೆಯ ಗಡಿಂಬದ ಕೋಲು	೧೨ನೇ ಶತಮಾನ	ಮುಕ್ಕುಂದಿ	ಸಿಂ.೧೬.
೯.	ಸಟ್ಟಿಕಬ್ಬೆಯ ಗಡಿಂಬದ ಕೋಲು	೧೦೬೬	ಮುಕ್ಕುಂದಿ	ಸಿಂ.೨೦.
೧೦.	ಹಿರಿಯಕೋಲು	೧೧೦೦	ಹಿರೇಬೇರಿಗೆ	ಸಿಂ.೨೪
೧೧.	೩೬ ಗೇಣಗಳು	೧೧೦೬	ಜಾಲಿಹಾಳು	ಸಿಂ.೨೩
೧೨.	ಬೆಂಕೊಳ್ಳ ಭೂಮಿ	೧೧೮೨	ಬಳಾಗನೂರು	ಸಿಂ.೩೮
೧೩.	ಅದಿತ್ಯದೇವರ ಗಡಿಂಬ	೧೧೦	ಬೇವಿನಹಳ್ಳಿ	ಸಿಂ.೫೪

ಈ ಮೇಲ್ಕಾಣಿಸಿರುವ ಅಳತೆ ಮಾಪನಗಳು ಮುಕ್ಕುಂದಿಯ ಮತ್ತು ಸುತ್ತಮುತ್ತ ದೊರತ ಶಾಸನಗಳಲ್ಲಿ ಉಲ್ಲೇಖಿತವಾಗಿವೆ

"ಹೊಲಗಳನ್ನು ಎರಡು ರೀತಿಯಲ್ಲಿ ಅಳೆಯುತ್ತಿದ್ದರು. ಒಂದು ಅದರಲ್ಲಿ ಬಿತ್ತಬಹುದಾದ ಬೀಜದ ಪ್ರಮಾಣದ ಮೇಲೆ ಉದಾ : 'ಎರಡ ಸಲಗೆ ಗದ್ದೆ' ಎಂದರೆ ಎರಡು ಸಲಗೆಯಷ್ಟು ಬೀಜವನ್ನು

ಬಿತ್ತಬಹುದಾದ ಗದ್ದೆ ಎಂದರ್ಥ. ಎರಡು ಖಂಡುಗ ಬೀಜವನ್ನು ಹಿಡಿಸುವ ಹೊಲ 'ಇಕ್ಕುಂಡುಗ ಬೆದ್ದಲ್ ' ಈ ರೀತಿಯಲ್ಲದೆ, ಮತ್ತೊಂದು ರೀತಿಯ ಅಳತೆಯ ವಿಧಾನವೂ ಇದ್ದಿತು. ಅದು ಅಳತೆ ಗೋಲುಗಳ ಸಹಾಯದಿಂದ ಅಳೆಯುತ್ತಿದ್ದ ವಿಧಾನ.[೫೬] ಶಾಸನಗಳಲ್ಲಿ ಬೇರೆ ಬೇರೆ ಅಳತೆಗೋಲುಗಳ ಹೆಸರುಗಳು ಕಂಡುಬರುತ್ತಿದ್ದು, ಮೂವತ್ತೆರಡು ಗೇಣಘಳೆ,[೫೭] ಅದಿತ್ಯದೇವರ ಗಡಿಂಬ,[೫೮] ಸಟ್ಟಿಕಬ್ಬೆಯ ಗಡಿಂಬ,[೫೯] ಸೇನಕಬ್ಬೆಯ ಗಡಿಂಬ[೬೦] ಹೀಗೆ ಈ ಅಳತೆಗಳನ್ನು ಕೋಲು, ಗಳೆ, ಗಡಿಂಬ, ಗಡಿಬ ಎಂದು ಮುಂತಾಗಿ ಕರೆಯಲಾಗಿದೆ. ರಾಜ್ಯಾದಿತ್ಯನು ಹೊಲಗಳನ್ನಳೆಯಲು 'ಗಳೆ'ಗಳನ್ನು ಬಳಸಬೇಕೆಂದೂ ಒಂದೊಂದು ಊರಿಗೂ ಪ್ರತ್ಯೇಕವಾದ ಗಳೆಯಿರಬಹುದೆಂದೂ ಹೇಳುತ್ತಾನೆ.[೬೧]

ಭೂಮಿಯನ್ನು ದಾನ ಮಾಡುವಾಗ ಪ್ರಾಚೀನ ಕರ್ನಾಟಕದಲ್ಲಿ ಮತ್ತರಿನ ಲೆಕ್ಕದಲ್ಲಿ ನೀಡುತ್ತಿದ್ದರು. ಇದಕ್ಕೆ ಕಡಿಮೆ ಅಳತೆಯೆಂದರೆ ಕಮ್ಮ ಎಂಬುದು. ರಾಯಚೂರು ಜಿಲ್ಲೆಯ ಶಾಸನಗಳಲ್ಲಿ ತಿಳಿದುಬರುವಂತೆ ೯೦೦ ಕಮ್ಮ(ಕಂಬ)ಗಳಿಗೆ ಒಂದು ಮತ್ತರು ಅಳತೆ[೬೨] ನಿವೇಶನಗಳನ್ನು ದಾನ ಮಾಡುವಾಗ ಕೈ ಅಳತೆಯಲ್ಲಿ ನೀಡಿರುತ್ತಾರೆ. ಇಲ್ಲಿ ಕೈ ಎಂದರೆ ಹಸ್ತ ಎನ್ನುವುದಕ್ಕಿಂತ ಮಾರು ಎಂದು ಅರ್ಥೈಸುವುದು ಸೂಕ್ತ. ಏಕೆಂದರೆ ೧೦ ಕೈ x ೧೫ಕೈ ಅಗಲವೆಂದಾಗ ಮೊಳದ ಲೆಕ್ಕದಲ್ಲಿ ನೀಡಿದಾಗಲೂ ಅದು ಚಿಕ್ಕದೇ ಆಗಿರುತ್ತದೆ. ಇಂತಹ ಕಡೆ ಎರಡೂ ಕೈಗಳನ್ನು ಉದ್ದ ಮಾಡಿದಾಗ ಬರುವ ಅಳತೆಯೆಂದು ಅರ್ಥೈಸಬೇಕಾಗುವುದು. ಇಂದಿಗೂ ಭೂಮಾನಕ್ಕಾಗಿ ಸರಪಳಿಯನ್ನು ಬಳಸುತ್ತೇವೆ. ಒಂದು ಸರಪಳಿ ಎಂದರೆ ಅನೇಕ ಲಿಂಕ್ ಗಳನ್ನು ಹೊಂದಿರುತ್ತದೆ.

ಮುಕ್ಕುಂದಿಯ ಅನೇಕ ಶಾಸನಗಳು ಮತ್ತರು, ಕಲಕೈಯಗಲ ಎಂಬುದಾಗಿ ಉಲ್ಲೇಖಿಸುತ್ತವೆ. ೨೫ ಮತ್ತರು[೬೩] ಎರಡು ಮತ್ತರು,[೬೪] ಎರಡು ಕುಳಗ,[೬೫] ೧೨ ಮತ್ತರು,[೬೬] ಎಂಬುವುದಾಗಿ ಮುಕ್ಕುಂದಿಯಲ್ಲಿ ಭೂಮಿ ದಾನ ನೀಡಿದ ಎಲ್ಲಾ ಶಾಸನಗಳು ಮತ್ತರು ಅಳತೆಯಲ್ಲಿ ಅಳೆದಿರುವುದು ತಿಳಿಯುತ್ತದೆ. ಹಾಗೆ ವಾದಿಕೋಲಾಹಳ ಪಂಡಿತದೇವನಿಗೆ ದೇವರ ಪೂಜಾವ್ಯವಸ್ಥೆಗಾಗಿ ೧೫ ನಿವೇಶನ ನೀಡಿರುವುದಾಗಿ ಶಾಸನ ತಿಳಿಸುತ್ತದೆ.[೬೭] ಹೀಗೆ ಮುಕ್ಕುಂದಿ ಶಾಸನಗಳಲ್ಲಿ ಮತ್ತು ಆ ಪ್ರದೇಶದ ಸುತ್ತ ದೊರೆಯುವ ಶಾಸನಗಳಿಂದ ಮುಕ್ಕುಂದಿಯ ಆರ್ಥಿಕ ವ್ಯವಸ್ಥೆಯನ್ನು ಭೂಸಂಪತ್ತಿನಿಂದ ನೀರಾವರಿ, ಉತ್ಪಾದನೆಯ ಕೈಗಾರಿಕೆಯಾದ ಗಾಣ ಮತ್ತು ಅಲ್ಲಿ ಬಳಕೆಯಲ್ಲಿರುವ ನಾಣ್ಯಗಳು ಪ್ರಾಚೀನ ಕಾಲದಲ್ಲಿ ತೂಕ ಮತ್ತು ಅಳತೆ ಪ್ರಮಾಣಗಳು ಇವೆಲ್ಲವೂ ಆರ್ಥಿಕ ವ್ಯವಸ್ಥೆಯ ಮೂಲ ಸಂಪತ್ತಾಗಿತ್ತೆಂದು ಹೇಳಬಹುದಾಗಿದೆ. ಒಂದು ಪ್ರದೇಶದ ಅಭಿವೃದ್ಧಿ ಮತ್ತು ಸುಭದ್ರತೆಗಳು ಆ ನಾಡಿನ ಹಣಕಾಸಿನ ವ್ಯವಸ್ಥೆಯನ್ನು ಅವಲಂಬಿಸಿರುತ್ತವೆ. ರಾಜ್ಯದ ಸಪ್ತಾಂಗಗಳಲ್ಲಿ ಕೋಶವು ಒಂದಾಗಿದ್ದು, ಭಾರತದ ಪ್ರಾಚೀನ ರಾಜಕೀಯ ವೆತ್ತರು ಅದಕ್ಕೆ ಬಹಳಷ್ಟು ಮನ್ನಣೆಯನ್ನು ಕೊಟ್ಟಸಿದ್ದಾರೆ. ರಾಜನು ದೇಶವನ್ನು ಸಂರಕ್ಷಿಸುವುದಕ್ಕೆ ಕೋಶವನ್ನು ಸಂಗ್ರಹಿಸುತ್ತಿದ್ದನು. ಈ ಕೋಶವು ಪ್ರಜೆಗಳು ಹಿಂದುರಿಗಿ ಕೊಡುವ ಪ್ರತಿಫಲವಾಗಿದ್ದು,

ಆ ಕೋಶವು ಹಣವನ್ನು ಸಂಗ್ರಹಿಸುವ ಮಾರ್ಗವೇ ತೆರಿಗೆಯಾಗಿತ್ತು.[೧೯] ಆದರೆ ಮುಕ್ಕುಂದಿಯ ಶಾಸನಗಳು ಅರಸರಿಗೆ ಸುಂಕ(ತೆರಿಗೆ) ನೀಡಿದ್ದನ್ನು ಉಲ್ಲೇಖಿಸುವುದಿಲ್ಲ. ಸಮೀಪದಲ್ಲಿರುವ ಸಾಲಗುಂದೆ ಶಾಸನ[೨೧] ಮ್ಮುಮ್ಮರಿದಂಡ ಸೆಟ್ಟಿಗುತ್ತರು, ಗವರೆಗಳು ಮುಂತಾದವರು ಸುಂಕ ಬಿಡುತ್ತಾರೆ ಎಂದು ಹೇಳುತ್ತದೆ. ಮುಕ್ಕುಂದಿ ಶಾಸನ ಎರಡು ಕುಳಪಾಲು ಎರಡು ರಾಜಪಾಲು ಒಂದರ ಲೆಕ್ಕದಲ್ಲಿ ಹಂಚಿಕೊಳ್ಳಬೇಕು ಎಂದು ತಿಳಿಸುತ್ತದೆ. ಮುಕ್ಕುಂದಿಯ ಗ್ರಾಮದಲ್ಲಿ ದೊರೆತಿರುವ ಶಾಸನದಲ್ಲಿ ತೆರಿಗೆಯನ್ನು ಮತ್ತು ಸುಂಕ ವಿಧಿಸಿರುವುದು ತಿಳಿದುಬರುತ್ತದೆ. ಆದರೆ ಅದು ಅರಸರಿಗೆ ಹೇಗೆ ತಲುಪುತ್ತಿತ್ತು ಎಂಬುದು ತಿಳಿಯುವುದಿಲ್ಲ.[೨೦] ಈ ಮೇಲಿನ ಶಾಸನದಲ್ಲಿ ಬರುವ ಆದಾಯವನ್ನು ಹಂಚಿಕೊಳ್ಳಬೇಕು ಎಂದು ಹೇಳಿದೆ.

ಹೀಗೆ ಮುಕ್ಕುಂದಿ ಗ್ರಾಮದಲ್ಲಿ ದೊರೆತಿರುವ ಶಾಸನಗಳಲ್ಲಿ ಕರ್ನಾಟಕ ಎಲ್ಲ ಅರಸು ಮನೆತನದವರು ತೆರಿಗೆಯನ್ನು ಸಂಗ್ರಹಿಸುವ ಪದ್ಧತಿಯ ರೀತಿಯಲ್ಲಿಯೇ ಮುಕ್ಕುಂದಿಯಲ್ಲಿಯ ತೆರಿಗೆಯನ್ನು ಸಂಗ್ರಹಿಸಲಾಗಿದೆ ಎಂಬುದನ್ನು ಊಹಿಸಬಹುದಾಗಿದೆ. ಒಟ್ಟಾರೆಯಾಗಿ ಮುಕ್ಕುಂದಿಯ ಶಾಸನಗಳಲ್ಲಿ ಉಲ್ಲೇಖಗೊಂಡಿರುವ ಶಾಸನಗಳಿಂದ ಮುಕ್ಕುಂದಿಯ ಆರ್ಥಿಕ ವ್ಯವಸ್ಥೆಯನ್ನು ನೋಡಲಾಗಿದೆ.

೩.೪. ಆಡಳಿತ ಅಧಿಕಾರಿಗಳು ಮತ್ತು ವಿಭಾಗಗಳು

ರಾಯಚೂರು ಜಿಲ್ಲೆಯ ಸಿಂಧನೂರು ತಾಲೂಕಿನ ಮುಕ್ಕುಂದಿ ಗ್ರಾಮದ ಐತಿಹಾಸಿಕ ವಿವೇಚನೆಯ ಅಧ್ಯಯನದ ವ್ಯಾಪ್ತಿಗೆ ಒಳಪಡುವ ಶಾಸನಗಳನ್ನು ಪರಿಶೀಲಿಸಿದಾಗ ಈ ಗ್ರಾಮವನ್ನು ಅನೇಕ ಪ್ರಭುವರ್ಗದವರು ಆಳಿದ್ದುದು ತಿಳಿದುಬರುತ್ತದೆ. ಅವರೆಂದರೆ ಚಕ್ರವರ್ತಿಗಳು, ರಾಣಿಯರು, ಮಹಾ ಮಂಡಳೇಶ್ವರರು, ಮಹಾಸಾಮಂತರು, ಮಹಾಪ್ರಧಾನರು ಮತ್ತು ಇತರ ಕೆಳವರ್ಗದ ಅಧಿಕಾರಿಗಳು ಶಾಸನಗಳಲ್ಲಿ ಉಲ್ಲೇಖಿತವಾಗಿರುವ ಇಂತಹ ಪ್ರಭುಗಳನ್ನು ಕುರಿತು, ಈ ಕೆಳಕಂಡಂತೆ ವಿವೇಚಿಸಬಹುದು.

ಚಕ್ರವರ್ತಿ

ರಾಜನ ಅಧಿಕಾರವು ಆದರ್ಶ ತುಂಬಿದ ಉತ್ತಮ ಮಟ್ಟದಾಗಿತ್ತು. ತನ್ನ ಎಲ್ಲಾ ಮಹತ್ವದ ಆಡಳಿತದ ನಿಯಮಗಳನ್ನು ಪಾಲಿಸಬೇಕೆಂದು ತನ್ನ ಅಧಿಕಾರಿಗಳಿಗೆ ಆಜ್ಞಾಪಿಸುತ್ತಿದ್ದನು. ರಾಜನು ಸಾಮ್ರಾಜ್ಯದ ಬೇರೆ ಬೇರೆ ವಿಭಾಗ(ಭಾಗ)ಗಳಿಂದ ಆಡಳಿತವನ್ನು ನಡೆಸುತ್ತಿದ್ದನು. ಬೇರೆ ಬೇರೆ ವಿಭಾಗಗಳಲ್ಲಿ ನಿಯೋಜಿತಗೊಂಡಿರುವ ಅಧಿಕಾರಿಯ ಕಾರ್ಯವೈಖರಿಯ ಮೇಲೆ ನಿಗಾವಹಿಸುತ್ತಿದ್ದನು. ಪ್ರಜೆಗಳನ್ನು ತನ್ನ ಧರ್ಮದ ಜೊತೆಗೆ ಪರಧರ್ಮಗಳನ್ನು ರಕ್ಷಿಸುವುದು ರಾಜ್ಯಾಡಳಿತದ ಮುಖ್ಯ ಹೊಣೆಯಾಗಿತ್ತು. ಅರಸರು ತಮ್ಮ ಪ್ರಜೆಗಳನ್ನು ವೈರಿಗಳ ದಾಳಿಗಳಿಂದ ರಕ್ಷಿಸುವುದರ ಜೊತೆಗೆ ರಾಜ್ಯವನ್ನು ವಿಸ್ತರಿಸುವುದು ತಮ್ಮ ಆದ್ಯ ಕರ್ತವ್ಯವೆಂದು ತಿಳಿದಿದ್ದರು.

"ಪ್ರಾಚೀನರ ಪ್ರಕಾರ ರಾಜ್ಯ ಎನ್ನುವುದು ರಾಜನಿಗೆ ಸೇರಿದುದು. ಅದರ ರಕ್ಷಣೆ ಅವನ ಹೊಣೆ. ಸೋಮದೇವನ 'ನೀತಿ ವ್ಯಾಕ್ಯಾಮೃತದ' ಪ್ರಕಾರ ಪ್ರಜೆಗಳನ್ನು ರಕ್ಷಿಸದವನು ರಾಜನೇ ಅಲ್ಲ, ಪ್ರಜಾಪಾಲನೆಯೇ ರಾಜನ ನಿಜವಾದ ಯಜ್ಞವೆಂದೂ ಭಾವಿಸಿದ್ದರು. ಹೀಗೆ ರಾಜನಿರುವುದು ಪ್ರಜೆಗಳಿಗಾಗಿ, ಅವರ ಯೋಗಕ್ಷೇಮಕ್ಕಾಗಿ ಎಂಬ ಭಾವನೆ ಸಾರ್ವತ್ರಿಕವಾಗಿದ್ದಿತು. ರಾಜನ ಉಗಮದ ವಿಷಯವಾಗಿ ಹೊರಟಿರುವ ಕಥೆಗಳು ಇದನ್ನೇ ಪೋಷಿಸುತ್ತವೆ.[೨೦]

ರಾಜನು ಕೆಲವೊಮ್ಮೆ ತನ್ನ ಆಡಳಿತಾವಧಿಯಲ್ಲಿ ಶಾಸನೋಕ್ತವಾದ ರಾಜಾಜ್ಞೆಗಳ ಮೂಲಕ ತನ್ನ ಆಡಳಿತದ ನೀತಿ ಹಾಗೂ ಕರ್ತವ್ಯ ಪ್ರಜ್ಞೆಯ ಬಗ್ಗೆ ಎಚ್ಚರಿಕೆ ಮೂಡಿಸಿದ್ದನು. "ಕೇಂದ್ರಾಡಳಿತದಲ್ಲಿ ರಾಜ ಮತ್ತು ಅವನ ಮಂತ್ರಿ ಮಂಡಲ ಪ್ರಮುಖವಾದರೂ, ಚಕ್ರವರ್ತಿಯ ಕೈಯಲ್ಲಿಯೇ ರಾಜ್ಯದ ಸಮಸ್ತ ಸೂತ್ರಗಳಿರುತ್ತಿದ್ದವು. ಅವನ ಮನಸ್ಸಿನ ಸಾಮರ್ಥ್ಯದ ಮೇಲೆ ದೇಶದ ಕಾರ್ಯಗಳು ರೂಪ ತಳೆಯುತ್ತಿದ್ದವು. ಚಕ್ರವರ್ತಿಗಾಗಿ ನಮ್ಮ ನಾಡಿನ ಜನ ತೆತ್ತೆ ಬೆಲೆ ಅಪೂರ್ವವಾದದ್ದು, ಅದು ಮಳೆ ಬೆಳೆಗಿಂತ ದೊಡ್ಡವಾಗಿದೆ.[೨೧] ಆದ್ದರಿಂದಲೇ ರಾಜಪ್ರಭುತ್ವವು ಅತ್ಯಂತ ಉನ್ನತ ಮಟ್ಟದಾಗಿತ್ತು. ಮುಕ್ಕುಂದಿಯ ರಾಜಕೀಯ ಇತಿಹಾಸ ಅಧ್ಯಾಯದಲ್ಲಿ ಚಕ್ರವರ್ತಿಗಳ (ರಾಜರ ಕುರಿತು) ಆಳ್ವಿಕೆಯ ಕುರಿತು ಚರ್ಚಿಸಿರುವುದರಿಂದ ಇಲ್ಲಿ ಅವರ ಕೆಳಗಿನ ಅಧಿಕಾರಿಗಳನ್ನು ಮಾತ್ರ ವಿವರಿಸಲಾಗಿದೆ.(ಚಿತ್ರಿಸಲಾಗಿದೆ)

ರಾಣಿಯರು

ವೇದ, ಪುರಾಣ, ಸ್ಮೃತಿಗಳ ಕಾಲದಿಂದಲೂ ಭಾರತೀಯ ಹಿಂದೂ ಸಮಾಜದಲ್ಲಿ ಸ್ತ್ರೀಯರ ಪಾಲಿಗೆ ಅಧಿಕಾರವೆಂಬುದು ಅಂಧಕಾರದ ಯುಗವಾಗಿತ್ತು. ಸ್ವಾತಂತ್ರ್ಯ, ಸಮಾನತೆ, ಧಾರ್ಮಿಕ ಸಂಸ್ಕಾರ ಹಾಗೂ ಶಿಕ್ಷಣದಲ್ಲಿ ಆಕೆಗೆ ಯಾವ ಹಕ್ಕು ಇರಲಿಲ್ಲ. ಶತ ಶತಮಾನಗಳವರೆಗೆ ಅವಕಾಶಗಳು ಸ್ತ್ರೀಯರ ಪಾಲಿಗೆ ಎಸಗಲಾಗದ ಸಾಮಾಜಿಕ ಅನ್ಯಾಯವಾಗಿತ್ತು. ಆದರೆ ಕಾಲ ಬದಲಾದಂತೆ ಮಹಿಳೆಯರು ವಿವಿಧ ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಪ್ರಮುಖ ಸ್ಥಾನ ಪಡೆದರು.

ಕರ್ನಾಟಕದಲ್ಲಿ ಶಾಸನೋಕ್ತ ಮಹಿಳೆಯರ ಇತಿಹಾಸ ಕದಂಬರ ಕಾಲದಿಂದ ಪ್ರಾರಂಭವಾಗುತ್ತದೆ. ಅಂದಿನಿಂದ ಸಾಮಾನ್ಯವಾಗಿ ಶಾಸನಗಳ ಒಡಲಲ್ಲಿ, ಮೂಡಿ ನಿಂತವರು ಪ್ರಭುವರ್ಗದ ಮತ್ತು ಉನ್ನತ ವರ್ಗದ ಮಹಿಳೆಯರು ಇವರಲ್ಲಿ ಚಕ್ರಾಧಿಪತಿಗಳ ರಾಣಿಯರಿಗಿಂತ, ಸಾಮಂತ, ಮಾಂಡಳಿಕ, ದಂಡನಾಯಕ, ನಾಳ್ಗಾವುಂಡ ಮತ್ತು ಗಾವುಂಡ ಮನೆತನದ ಮಹಿಳೆಯರು ಹೆಚ್ಚು ಸಂಖ್ಯೆಯಲ್ಲಿ ಕಂಡುಬರುತ್ತಾರೆ. ಇದಕ್ಕೆ ಚಕ್ರವರ್ತಿಗಳಿಗಿಂತ ಮಿಕ್ಕವರ ಸಂಖ್ಯೆ ಅಧಿಕವಾಗಿರುವುದು ಕಾರಣವಾಗಿರುವಂತೆ ಮೇಲಿನ ಅಂತಸ್ತಿನವರಿಗಿಂತ ಕೆಳಗಿನ ಅಂತಸ್ತಿನವರು. ಸಮಾಜದಲ್ಲಿ ಹೆಚ್ಚು ಕಾಣಿಸಿಕೊಳ್ಳುವುದು. ಕಾರಣವಾಗಿರಬಹುದು.[೨೩]

ಶಾಸನಗಳಲ್ಲಿ ರಾಷ್ಟ್ರಕೂಟ, ಕಲ್ಯಾಣಚಾಲುಕ್ಯ ಹಾಗೂ ವಿಜಯನಗರ ಅರಸರ ಆಡಳಿತ ವ್ಯಾಪ್ತಿಯಲ್ಲಿ ರಾಣಿಯರಿಗೆ ವಿಶೇಷ ಗೌರವ ಮತ್ತು ಸ್ಥಾನ ಮಾನಗಳು ಕಲ್ಪಿಸಿಕೊಡಲಾಗಿದೆ. ರಾಣಿಯರು ಸಹ ರಾಜ್ಯದ ಸಾಮಾಜಿಕ, ಧಾರ್ಮಿಕ ರಾಜಕೀಯ ಕ್ಷೇತ್ರಗಳಲ್ಲಿ ಆಸಕ್ತಿ ತೋರುವುದರ ಜೊತೆಗೆ ಸಾಮ್ರಾಜ್ಯದ ವಿವಿಧ ವಿಭಾಗಗಳಲ್ಲಿ ಆಳ್ವಿಕೆ ನಡೆಸುತ್ತಿದ್ದರು. ರಾಣಿಯರಲ್ಲಿ ಪಿರಿಯರಸಿ, ಪಟ್ಟ ಮಹಾದೇವಿ ಮತ್ತು ರಾಣಿ ಎಂಬ ಮೂರು ಗುಂಪುಗಳಿದ್ದವು.

ಪ್ರಾಚೀನ ಕಾಲದಲ್ಲಿ ಬಹುಪತ್ನಿತ್ವ ಪದ್ಧತಿ ಜಾರಿಯಲ್ಲಿತ್ತು ಪ್ರತಿಷ್ಠೆಯಿಂದ ಮೆರೆಯುವುದಕ್ಕಾಗಿ, ಮೊದಲ ಹೆಂಡತಿಗೆ ಸಂತಾನವಿಲ್ಲದದ್ದಕ್ಕಾಗಿ ವೈರಿ ಅರಸರೊಡನೆ, ಸೌಹಾರ್ದತೆ ಬಳಸುವುದಕ್ಕಾಗಿ ಮತ್ತು ಇತರ ಕಾರಣಗಳಿಂದಾಗಿ ಈ ಪದ್ಧತಿ ರೂಢಿಯಲ್ಲಿದ್ದಿತು. ಚಕ್ರವರ್ತಿ ಮತ್ತು ಮಾಂಡಳಿಕರ ಹೆಂಡಂದಿರನ್ನು 'ರಾಣಿ', 'ಅರಸಿ' ಎಂದು ಕರೆಯಲಾಗುತ್ತಿತ್ತು.[೨೪]

ರಾಣಿಯರು ರಾಜ್ಯದ ಆಡಳಿತದಲ್ಲಿ ಮುಖ್ಯವಾದ ಪಾತ್ರವನ್ನು ಹೊಂದಿರುವುದನ್ನು ಶಾಸನಗಳು ಉಲ್ಲೇಖಿಸುತ್ತವೆ. ರಾಜನು ಪ್ರವಾಸಕ್ಕೆಗೊಂಡಾಗ ರಾಣಿಯರು ಅವನ ಜೊತೆಯಲ್ಲಿಯೇ ಇರುತ್ತಿದ್ದರು. ಸಾಮಾಜಿಕ ಕಾರ್ಯ, ಶಿಕ್ಷಣ ಪ್ರಸಾರ ಮತ್ತು ದಾನ ಧರ್ಮಗಳಲ್ಲಿ ರಾಣಿಯ ಪಾತ್ರವು ಕಂಡುಬರುತ್ತದೆ. ಮುಕ್ಕುಂದಿಯ ಐತಿಹಾಸಿಕ ವಿವೇಚನೆಯಲ್ಲಿ "ತ್ರೈಲೋಕ್ಯಮಲ್ಲನ ಪತ್ನಿಯಾದ ತ್ರೈಲೋಕ್ಯಮಹಾದೇವಿ ಮುಕ್ಕುಂದೆಯನ್ನು ತ್ರಿಭೋಗಾಭ್ಯಂತರದಿಂದ ಆಳುತ್ತಿದ್ದಳು. ತುಂಗಭದ್ರಾ ತೀರದ ಕಪಾಳೇಶ್ವರ ದೇವರಿಗೆ ಭೂದಾನ ನೀಡಿದ್ದಾಳೆ. (ಸಿಂಧ ೨೦) ತದನಂತರ ಈ ಜಿಲ್ಲೆಯಲ್ಲಿ ಈಕೆಯ ಉಲ್ಲೇಖ ಎಲ್ಲಿಯೂ ದೊರೆಯುವುದಿಲ್ಲ.[೨೫]

ಒಟ್ಟಾರೆಯಾಗಿ ಇತರೆ ರಾಜಮನೆತನದ ರಾಣಿಯರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಕಲ್ಯಾಣ ಚಾಲುಕ್ಯ ರಾಣಿಯರು ಉಲ್ಲೇಖಿತರಾಗಿದ್ದರೆ. ಜಿಲ್ಲೆಯ ಶಾಸನಗಳು ಅನೇಕ ಕಡೆ ಈ ರಾಣಿಯರು ಗ್ರಾಮವನ್ನು ಆಳುತ್ತಿದ್ದ ಬಗ್ಗೆ ಹಾಗೂ ಅಲ್ಲಿ ದೇವಾಲಯಗಳಿಗೆ ದಾನಗಳನ್ನು ನೀಡಿ ಧರ್ಮ ಕಾರ್ಯಗಳನ್ನು ಮಾಡಿರುವುದರ ಕುರಿತು ಉಲ್ಲೇಖಿಸುತ್ತವೆ. ಉದಾ: ಇಮ್ಮಡಿ ಜಯಸಿಂಹನ ಪತ್ನಿಯರಾದ ಸೋಮಲದೇವಿ[೨೬] ಹಾಗೂ ಬಿಜ್ಜಲದೇವಿ[೨೭] ತ್ರೈಲೋಕ್ಯ ಮಲ್ಲನ ಪತ್ನಿಯರಾದ ಚಾಮಲದೇವಿ[೨೮] ಮತ್ತು ತ್ರೈಲೋಕ್ಯಮಹಾದೇವಿ,[೨೯] ಭುವನೈಕ ಮಲ್ಲನ ಪತ್ನಿ ಪಂಪಾದೇವಿ ಹಾಗೂ ತ್ರಿಭುವನಮಲ್ಲನ ಪತ್ನಿಯಾದ ಮಲಯಮತಿ, ಚಂದಲದೇವಿ ಮತ್ತು ಅಬ್ಬಲದೇವಿಯರು ಉಲ್ಲೇಖಿತರಾಗಿದ್ದಾರೆ. ಕ್ರಿ.ಶ.೧೦೬೮ರ ಶಾಸನದಲ್ಲಿ (ಸಿಂಧ ೨೦)ಚಾಳುಕ್ಯ ಅರಸ ತ್ರೈಲೋಕ್ಯ ಮಲ್ಲನ ರಾಣಿ ಕಲ್ಯಾಣದಿಂದ ರಾಜ್ಯಭಾರ ಮಾಡುತ್ತಿರುತ್ತಾಳೆ. ಅದೇ ವೇಳೆಗೆ ಕಲ್ಯಾಣದಲ್ಲಿ ತ್ರೈಲೋಕ್ಯಮಲ್ಲನು ರಾಜ್ಯಭಾರ ಮಾಡುತ್ತಿದ್ದಂತೆ ತಿಳಿದುಬರುತ್ತದೆ.

ಚಕ್ರವರ್ತಿಯಾಗಲಿ ಅಥವಾ ಆತನ ಕೆಳಗಿನ ಮಹಾಮಂಡಳೇಶ್ವರರಾಗಲಿ, ಅವರಿಗೆ ಒಬ್ಬ 'ಪಟ್ಟದರಾಣಿ' ಇರುತ್ತಿದ್ದಳು. 'ಪಟ್ಟದ ರಾಣಿ' ಎಂಬುದು 'ಚಕ್ರವರ್ತಿ'ಯಂತೆ ಒಂದು ಪದವಿಯಾಗಿತ್ತು. ಉಳಿದ ಎಲ್ಲಾ ರಾಣಿಯರಿಗಿಂತ ಇವಳಸ್ಥಾನ ಹಿರಿದಾಗಿತ್ತು. ಚಕ್ರವರ್ತಿಯೊಂದಿಗೆ ಎಲ್ಲಾ ಧಾರ್ಮಿಕ, ಸಾಮಾಜಿಕ, ಮೊದಲಾದ ಕಾರ್ಯಗಳಲ್ಲಿ ಈಕೆ ಪತಿಯೊಂದಿಗೆ ಭಾಗವಹಿಸುತ್ತಿದ್ದಳು. ಈ ಹಕ್ಕು ಇತರರಿಗೆ ಇರುತ್ತಿದ್ದಿಲ್ಲ.[೬೦] ಈ ಪಟ್ಟದ ರಾಣಿಗೆ 'ಹಿರಿಯರಸಿ' ಎಂದು ಕರೆಯುತ್ತಿದ್ದರು. ಪಿರಿಯರಾಣಿ ಎಂದು ಅರ್ಥೈಸಬಹುದು. ಇವಳು ಮೊದಲು ವರಸಿದ ಹೆಂತಿಯಾಗಿದ್ದು ಇವಳಿಗೆ ಮಕ್ಕಳಾದರೆ ಪಿರಿಯರಸಿ ಪಟ್ಟಮಹಾದೇವಿಯನಿಸುತ್ತಾಳೆ. ಇವಳಿಗೆ ಮಕ್ಕಳಾಗದಿದ್ದರೆ ಎರಡನೆಯವಳಿಗೆ ಮಕ್ಕಳಾದರೆ ಅವಳು ಪಿರಿಯರಸಿ ಪಟ್ಟಮಹಾದೇವಿಯನಿಸಿಕೊಳ್ಳುತ್ತಿದ್ದು, ಮೊದಲನೆಯವಳು ಕೇವಲ ಪಿರಿಯರಸಿಯಾಗಿ ಉಳಿಯುತ್ತಾಳೆ. ಪಿರಿಯರಸಿ ಪಟ್ಟಮಹಾದೇವಿಗಿಂತ ಹಿರಿಯರಿದ್ದು ಮತ್ತು ಮಕ್ಕಳಾಗದ ಎಲ್ಲಾ ರಾಣಿಯರೂ ಪಿರಿಯರಿಸಿಯರೇ.

ಈ ರೀತಿಯಾಗಿ ನಾವು ರಾಣಿಯರನ್ನು ಕುರಿತು ಅಧ್ಯಯನ ಮಾಡಬಹುದಾಗಿದೆ. ಇವರು ಆಡಳಿತ ವ್ಯವಸ್ಥೆಯಲ್ಲಿ ತಮ್ಮದೇ ಆದ ಸ್ಥಾನ ಪಡೆದು ಮಹಾ-ವ್ಯಕ್ತಿಗಳು ಎನಿಸಿದ್ದಾರೆ.

ಮಹಾಮಂಡಳೇಶ್ವರರು

ಮಹಾಮಂಡಳೇಶ್ವರರು ಚಕ್ರವರ್ತಿಯ ಅಧೀನದಲ್ಲಿದ್ದುಕೊಂಡು ಆಡಳಿತ ನಡೆಸುತ್ತಿದ್ದರು. ತಮ್ಮ ತಮ್ಮ ಪ್ರದೇಶದಲ್ಲಿ ಅಧಿಕಾರ ಸ್ವಾತಂತ್ರ್ಯವನ್ನು ಪಡೆದಿದ್ದರು. ವಿಶಾಲವಾದ ಸಾಮ್ರಾಜ್ಯವನ್ನು ರಾಜನೊಬ್ಬನಿಂದಲೇ ನೋಡಿಕೊಂಡು ಹೋಗುವುದು ಅಸಾಧ್ಯವಾದ್ದರಿಂದ ರಾಜನು ಕೆಲವು ಪ್ರದೇಶಗಳಿಗೆ ಅಧಿಕಾರಿಗಳನ್ನು ನೇಮಿಸುತ್ತಿದ್ದನು. ಇವರಿಗೆ ಮಹಾಮಂಡಳೇಶ್ವರ ಎಂದು ಕರೆಯಲಾಗುತ್ತಿತ್ತು. 'ಮಹಾಮಂಡಳೇಶ್ವರ' ಪದದ ಶಬ್ದಶಃ ಅರ್ಥ, ವಿಸ್ತಾರವಾದ ಭೂಮಿಗೆ ಅಥವಾ ವಿಭಾಗಕ್ಕೆ ಒಡೆಯ ಎಂದಾಗುತ್ತದೆ. ಇವರು ಕೆಲವೊಮ್ಮೆ ಒಂದು ಇಲ್ಲವೆ ಒಂದಕ್ಕಿಂತ ಹೆಚ್ಚು ವಿಭಾಗಗಳನ್ನು ಆಳುತ್ತಿದ್ದರು. ವಿಸ್ತಾರವಾದ ಚಕ್ರವರ್ತಿಯ ಸಾಮ್ರಾಜ್ಯದ ಆಡಳಿತ ಸೌಲಭ್ಯಕ್ಕಾಗಿ ವಿಶಾಲವಾದ ರಾಷ್ಟ್ರದಲ್ಲಿ ವಿಭಾಗಿಸಲಾದ ಮಂಡಲಗಳಿಗೆ ವಂಶಪಾರಂಪರ್ಯದಿಂದ ಬಂದ ಮಂಡಳೇಶ್ವರರನ್ನು ತನ್ನ ಕೈಕೆಳಗೆ ಮುಂದುವರೆಯಲು ಅನುಮತಿ ನೀಡುತ್ತಿದ್ದನು. ಕೆಲವೊಮ್ಮೆ ಮಾತ್ರ ಹೊಸ ಮಂಡಳೇಶ್ವರರನ್ನು ನೇಮಿಸುತ್ತಿದ್ದನು. ಚಕ್ರವರ್ತಿಗೆ ಅಧೀನರಾಗಿ ಆಳುತ್ತಿದ್ದ ಇವರು ಸಾಕಷ್ಟು, ಅಧಿಕಾರ ಸ್ವಾತಂತ್ರ್ಯವನ್ನು ಪಡೆದಿದ್ದರು. ಪ್ರತಿಯೊಬ್ಬ ಮಹಾಮಂಡಳೇಶ್ವರರು ತನ್ನದೇ ಆದ ಮಂತ್ರಿಮಂಡಳ, ಸೈನ್ಯ ಅಧಿಕಾರಿವರ್ಗ ಹೊಂದಿದ್ದರೂ ಇವರು ಚಕ್ರವರ್ತಿ ಅಧೀನರಾಗಿ ಪ್ರತಿವರ್ಷ ಕಪ್ಪವನ್ನು ಕೊಡಬೇಕು. ಒಂದು ವೇಳೆ ಕಪ್ಪ ಕೊಡದೆ ಅಧೀನತೆಯನ್ನು ಒಪ್ಪಿಕೊಳ್ಳದೇ ಹೋದರೆ ಇವರನ್ನು ಸದೆ ಬಡಿಯಲು ಚಕ್ರವರ್ತಿ ತನ್ನ ಇನ್ನೊಬ್ಬ ಮಹಾಮಂಡಳೇಶ್ವರನನ್ನು ಕಳುಹಿಸುತ್ತಿದ್ದನು.[೬೧]

ಮುಕ್ಕುಂದಿಯ ಆಡಳಿತ ವ್ಯವಸ್ಥೆಯಲ್ಲಿ ಮಹಾಮಂಡಳೇಶ್ವರರನ್ನು ಶಾಸನಗಳು ಈ ಕೆಳಗಿನ ವ್ಯಕ್ತಿಗಳನ್ನು ಉಲ್ಲೇಖಿಸುತ್ತವೆ.

ಕ್ರ.ಸಂ.	ಮಹಾ ಮಂಡಳೇಶ್ವರ ಹೆಸರು	ರಾಜವಂಶ	ಕಾಲ	ಉಲ್ಲೇಖ
೧.	ಅಮ್ಮಣದೇವ	ಕಲ್ಯಾಣ ಚಾಲುಕ್ಯ	೧೦೫೩	ಸಿಂಧ ೧ ರೌಡಕುಂದೆ
೨.	ಬಾಚರಸ	ಕಲ್ಯಾಣ ಚಾಲುಕ್ಯ	೧೧೩೪	ಸಿಂಧ ೫ ಮುಕ್ಕುಂದಿ
೩.	ಬಾಚರಸ	ಕಲ್ಯಾಣ ಚಾಲುಕ್ಯ	೧೧೩೪	ಸಿಂಧ ೬ ಮುಕ್ಕುಂದಿ
೪.	ಬಾಚರಸ	ಕಲ್ಯಾಣ ಚಾಲುಕ್ಯ	೧೦೮೮	ಸಿಂಧ ೮ ಮುಕ್ಕುಂದಿ

ಅಮ್ಮಣದೇವ

ಶಾಸನದಲ್ಲಿ ಚಾಲುಕ್ಯ ರಾಜ ತ್ರೈಲೋಕ್ಯಮಲ್ಲನ ಉಲ್ಲೇಖವಿದ್ದು ಇವನ ಮಂಡಳೇಶ್ವರ ಅಮ್ಮಣದೇವನು ನಿಟ್ಟರವೆ ೭೦ನ್ನು ಆಳುತ್ತಾ ಕರಹಡದ ನೆಲೆವೀಡಿನಲ್ಲಿದ್ದಂತೆ ತಿಳಿಸುತ್ತದೆ. ಇವನ ಸಾಮಂತರಾಗಿ ಸಿಂಧವಂಶದ ಕಣ್ಣರಸನೆಂಬುವನಿದ್ದ. ಇವನು ಕರ್ಣೇಶ್ವರ ದೇವರಿಗೆ ರೇವಡಿ ಕುಂದೆಯ ದಕ್ಷಿಣ ಹಾಲಾರಿ ಹಳ್ಳದ ಉತ್ತರಕ್ಕೆ ೨೫ ಮತ್ತರು ಕರಿಯನೆಲವನ್ನು ಮಂಡಲ ಗಾವನ ಘಳೆಯಲ್ಲಿ ಅಳೆದು ನೀಡುತ್ತಾನೆ.[೮೩] ಈ ರೌಡಕುಂದ ಗ್ರಾಮವು ಮುಕ್ಕುಂದಿಗೆ ೭ ಕಿ.ಮೀ. ದೂರದಲ್ಲಿದೆ. ಅದುದರಿಂದ ಈತನ ಆಳ್ವಿಕೆಗೆ ಮುಕ್ಕುಂದಿ ಗ್ರಾಮವು ಸೇರಿತೆಂದು ಊಹಿಸಬಹುದಾಗಿದೆ.

ಬಾಚರಸ

ಕ್ರಿ.ಶ. ೧೧೩೪ರಲ್ಲಿ ಅಧಿಕಾರವಹಿಸಿಕೊಂಡ ಬಾಚರಸನು ಚಾಲುಕ್ಯ ಭೂಲೋಕಮಲ್ಲನು ರಾಜ್ಯಭಾರ ಮಾಡುತ್ತಿದ್ದಾಗ, ಅವನ ಸಾಮಂತ ಸಿಂಧವಂಶದ ಕಣ್ಣರಸನ ಮಗ ಬಾಚಿರಾಜ ಆಳುತ್ತಿದ್ದ ಇವನ ಪ್ರಧಾನವಾಗಿ ಬೆನಚಿಮಯ್ಯ ಎಂಬ ಬ್ರಾಹ್ಮಣನಿದ್ದ ಮೇಲೆ ಉಲ್ಲೇಖಿಸಿರುವ ಕಾಲದಲ್ಲಿ ಕುಜಿ ುವಡದ ರಾಯನಾದ ಬಾಚಿದೇವನು ಬೆನಚಿಮಯ್ಯನು ಮಾಡಿಸಿದ ಕೇಶವದೇವರ, ದೇವಾಲಯದ ರಂಗಭೋಗ ತೆರೆದ ದೇವರ ಮಂದಿರ ಖಂಡಸ್ಫುಟಿತ ಜೀರ್ಣೋದ್ಧಾರ, ಪೂಜಾರಿಗಳ ಜೀವಿತಕ್ಕೆಂದು ಭೂದಾನ ಮಾಡಿದ ಉಲ್ಲೇಖವಿದೆ. ಶಾಸನದಲ್ಲಿ ಬಾಚಿಭೂಪ, ಬೆನಚಿಮಯ್ಯನ ವಂಶದ ವರ್ಣನೆಯಿದೆ.[೮೪]

ಭೂಲೇಕಮಲ್ಲನು ಕಲ್ಯಾಣಪುರದ ನೆಲೆವಿಡಿನಲ್ಲಿ. ಆಳ್ವಿಕೆ ನಡೆಸುತ್ತಿದ್ದು, ಸಿಂಧಕುಲದ ಬಾಚರಸನು ಇವನು ಮಹಾಮಂಡಳೇಶ್ವರನಾಗಿದ್ದನು. ಇವನ ಪೆರ್ಗಡೆಯಾಗಿ ಬೆನಿವಣನೆಂಬುವನಿದ್ದ. ಇವನ ಪತ್ನಿಚನ್ನಿಯಿಕ್ಕ. ಇವರ ಮಗ ನಾಚಣ, ಬೆನಿಮಯನು ಮಾಡಿಸಿದ ಕೇಶವದೇವರ ದೇವಾಲಯಕ್ಕೆ ಮಹಾಮಂಡೇಶ್ವರ ಕುಜುವಡದ ಬಾಚರಸನು ದೇವಾಲಯದ ಅಂಗಭೋಗ ಮಂದಿರದ ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆ ಪೂಜಾರಿಗಳ ಜೀವಿತಕ್ಕೆಂದು ಆರುಮತ್ತರು ಭೂಮಿ ದಾನ ನೀಡಿದ್ದಾನೆ.[೮೫]

ಚಾಳುಕ್ಯ ಆರನೆಯ ವಿಕ್ರಮಾದಿತ್ಯನ ಆಳ್ವಿಕೆಯಲ್ಲಿ ಅವನ ಮಾಂಡಳಿಕನಾದ 'ಮಹಾಮಂಡಳೇಶ್ವರ ಸಿಂಧುಕುಲದ ಬಾಚರಸನು' ಎಂದು ಅಗ್ರಹಾರ ಮುಕ್ಕುಂದೆಯ ಶಾಸನದಲ್ಲಿ ಉಲ್ಲೇಖಿತವಾಗಿದೆ. ಈತನು ಬಾಚೇಶ್ವರ ದೇವಾಲಯ ಮಾಡಿಸುತ್ತಾನೆ. ತಾನು ಕಟ್ಟಿಸಿದ ದೇವಾಲಯಕ್ಕೆ ದಾನ ನೀಡಿ ಗಬ್ಬೂರ ಉತ್ತರಕ್ಕೆ ಗಂಡಬೇರುಂಡನ ನಲ್ವತ್ತೆರಡು ಗೇಣ ಗಳೆಯಲ್ಲಿ ೬೩ ಮತ್ತರು ದಾನ ಬಿಟ್ಟಿರುವ ವಿಷಯ ತಿಳಿದುಬರುತ್ತದೆ.[೪೬]

ರಾಜ್ಯಕ್ಕೆಲ್ಲ ಚಕ್ರವರ್ತಿ ಸರ್ವಾಧಿಕಾರಿಯಾಗಿದ್ದರೂ ಸಹ ಆಡಳಿತದ ಅನುಕೂಲಕ್ಕಾಗಿ ರಾಜ್ಯವನ್ನು ಆಡಳಿತ ವಿಭಾಗ ಮಾಡಿ ಮಹಾಮಂಡೇಶ್ವರರನ್ನು ನೇಮಕ ಮಾಡುತ್ತಿದ್ದುದು ಶಾಸನಗಳಿಂದ ಅರಿಯಬಹುದಾಗಿದೆ. ಹೀಗೆ ವಿಭಾಗ ಮಟ್ಟದಲ್ಲಿ ಆಯಾ ವಿಭಾಗಗಳನ್ನು ರಕ್ಷಿಸಿಸುವುದು ಇವರ ಹೊಣೆಯಾಗಿತ್ತು. ರಾಜ್ಯದ ಹಿತರಕ್ಷಣೆಗಾಗಿ ರಾಜನ ಜೊತೆಗೆ ಮಹಾಮಂಡಳೇಶ್ವರರು ಸೇರಿ ಹೋರಾಡಬೇಕಾದ ಸಂದರ್ಭ ಬರುತ್ತಿತ್ತು. ಈ ಆಜ್ಞೆಯನ್ನು ಮೀರದೆ ತನ್ನ ಕರ್ತವ್ಯವನ್ನು ಪಾಲಿಸುತ್ತಿದ್ದದು. ಮಹಾಮಂಡಳೇಶ್ವರ ನಿಷ್ಠೆಯನ್ನು ತೋರಿಸುತ್ತದೆ.

ಮಹಾ ಸಾಮಂತರು

ಅರಸರ ಕೈಕೆಳಗೆ ಹಲವು ಸಣ್ಣ ದೊಡ್ಡ ಸಾಮಂತರಸರಿರುತ್ತಿದ್ದರು. ಈ ಸಾಮಾಂತಾಧಿಕಾರಿಗಳು ಅರಸರ ಪರಮಾಧಿಕಾರವನ್ನು ಒಪ್ಪಿಕೊಂಡು ಆತನ ಆದೇಶದ ಪ್ರಕಾರ ಆಡಳಿತವನ್ನು ನಡೆಸಿಕೊಂಡು ಹೋಗುತ್ತಿದ್ದರು. ಚಕ್ರವರ್ತಿಯ ಆಸ್ಥಾನದಲ್ಲಿ ಸಾಮಂತರಿಗೆ ಉತ್ತಮವಾದ ಸ್ಥಾನ ಗೌರವವಿದ್ದಿತು. ಸಾಮಂತ ಅರಸರ ಆಡಳಿತ ಸ್ವರೂಪವು ಸ್ವತಂತ್ರವಾಗಿತ್ತಾದರೂ ರಾಜರ ಅಧೀನಕ್ಕೆ ಒಳಪಟ್ಟಿರುತ್ತಿತ್ತು. ಅರಸರು ಆಡಳಿತದ ಹಲವಾರು ಸಾಧನೆಗಳನ್ನು ಹೊಂದಿದವರಾಗಿದ್ದರು. ತಮಗೆ ಒದಗಿಸಿದ ಸಾಧನಗಳನ್ನು ಬಳಸಿಕೊಂಡು ಅದರ ಪರಿಮಿತಿಯಲ್ಲಿಯೇ ಅರಸರ ನೇತೃತ್ವದಲ್ಲಿ ಆಡಳಿತವನ್ನು ನಡೆಸುತ್ತಿದ್ದರು. ಆಯಾ ಪ್ರಾಂತಗಳಿಗೆ ಪ್ರಭುಗಳಾಗಿ ತಮ್ಮ ತಮ್ಮ ಪ್ರದೇಶಗಳನ್ನು ಆಳುತ್ತಿದ್ದರು ಇವರು ತಮ್ಮದೇ ಆದ ಸೈನ್ಯ, ಆಡಳಿತ ವರ್ಗದವರನ್ನು ಹೊಂದಿರುತ್ತಿದ್ದರು. ಪ್ರಾಂತ್ಯವನ್ನು ಸರ್ವ ಸ್ವತಂತ್ರದಿಂದ ಅಧಿಕಾರ ನಡೆಸಿದರೂ ರಾಜನ ಅಧೀನದಲ್ಲಿರಬೇಕಾಗಿತ್ತು.

"'ಸಾಮಂತ' ಎಂಬ ಶಬ್ದಕ್ಕೆ ಕನ್ನಡ ಸಾಹಿತ್ಯ ಪರಿಷತ್ತಿನ ಸಂಕ್ಷಿಪ್ತ ನಿಘಂಟಿನಲ್ಲಿ ಒಬ್ಬ ರಾಜನಿಗೆ ಅಧೀನವಾಗಿರುವ ರಾಜ, ಮಾಂಡಳಿಕ ಎಂದು ಅರ್ಥೈಸಲಾಗಿದೆ. ಇದು ತೀರ ಸಾಮಾನ್ಯ ಸರಳ ಅರ್ಥ. 'ಮಹಾ' 'ಸಾಮಂತ' ಎಂಬುದರಲ್ಲಿ ಎರಡು ಪದಗಳಿವೆ. 'ಮಹಾ' 'ಸಾಮಂತ' ಸ್ವಾಮವಂತ (ಒಡೆಯ, ಒಡೆತನ, ಪಡೆದವ) >ಸಾಮಂತ>ಸಾವಂತ ಎಂಬ ರೂಪಾಂತರ ಹೊಂದುತ್ತಾ ಬಂದಿದೆ. ಇದಕ್ಕೆ ಕೇವಲ ಗೌರವವಾಚಿಯಾಗಿ 'ಮಹಾ' ಎಂಬ ವಿಶೇಷಣ ಸೇರಿ ಮಹಾಸಾಮಂತ ಎಂಬ ಪದವಾಗಿದೆ. ಅಂದರೆ ಇಲ್ಲಿ ಸಾಮಂತ ಎಂದರೂ ಒಂದೇ ಮಹಾ ಸಾಮಂತ ಎಂದರೂ ಒಂದೇ. ಇದು ಹುದ್ದೆಯನ್ನು

ಸೂಚಿಸುವ ಪದವಾಗಿದೆ. ಇಂದು 'ಸಾಮವಂತ' ಎಂಬ ಅಡ್ಡ ಹೆಸರಿನವರು ಮೂಲತಃ ಇಂಥ ಒಡೆಯರಾಗಿದ್ದರೆಂದು ಹೇಳಬಹುದಾಗಿದೆ.'[೫೭]

ಈ ಗ್ರಾಮದಲ್ಲಿ ದೊರೆತಿರುವ ಶಾಸನಗಳಿಂದ ಮಹಾಸಾಮಂತರ ಆಳ್ವಿಕೆಯ ಕುರಿತು ಮಾಹಿತಿಯನ್ನು ಒದಗಿಸುತ್ತವೆ.

ಕ್ರ.ಸಂ.	ಹೆಸರು	ರಾಜರ ಆಳ್ವಿಕೆ	ಕ್ರಿ.ಶ.ಕಾಲ	ಉಲ್ಲೇಖ
೧.	ಕಣ್ಣರಸ	ಭೂಲೋಕಮಲ್ಲ	೧೧೩೪	ಸಿಂಧ-೫ ಮುಕ್ಕುಂದಿ
೨.	ಗೋನರಸ	ಉಲ್ಲೇಖವಿಲ್ಲ	೧೦೪೯	ಸಿಂಧ ೯ ಮುಕ್ಕುಂದಿ
೩.	ಬಾಚರಸ	ತ್ರೈಲೋಕ ಮಲ್ಲ	೧೧೩೪	ಸಿಂಧ ೧ ರೌಡಕುಂದ

ಸಾಮಂತನಾದ ನೆಲಗುತ್ತಿಗ ಕಣ್ಣರಸನನ್ನು ಕ್ರಿ.ಶ.೧೧೩೪ರ ಸಿಂಧನೂರಿನ ರೌಡಕುಂದೆ ಶಾಸನದಲ್ಲಿ ಸಿಂಧ ವಂಶಕ್ಕೆ ಸೇರಿದ್ದಾನೆಂದು ಉಲ್ಲೇಖಿಸಿದೆ.[೫೮] ಕಲ್ಯಾಣಚಾಲುಕ್ಯರ ರಾಜ ತ್ರೈಲೋಕ್ಯಮಲ್ಲನ ಅವಧಿಯಲ್ಲಿ ಸಾಮಂತನಾಗಿರುತ್ತಾನೆ. ಈತನು ರೇವಡಿ ಕುಂದೆಯ ದಿಗ್ಗಿಗೆರೆಯ ಕೆಳಗೆ ಇರುವ ಕರ್ಣೇಶ್ವರ ದೇವರಿಗೆ ರೇವಡಿ ಕುಂದೆಯ ದಕ್ಷಿಣದ ಹಾಲಾರಿ ಹಳ್ಳದ ಉತ್ತರಕ್ಕೆ ೨೫ ಮತ್ತರು. ಕರಿಯ ನೆಲವನ್ನು ಮಂಡಲಗಾವನ ಘಳೆಯಲ್ಲಿ ಅಳೆದು ನೀಡುತ್ತಾನೆ. ಅಲ್ಲದೆ ಮಾಹವ್ರತಿ ದವನಸೋವ ಭಳಾರರಿಗೆ ಒಂದು ನಿವೇಶನ ನೀಡಿದ ಕುರಿತು ಶಾಸನದಲ್ಲಿ ಮಾಹಿತಿ ದಾಖಲಾಗಿದೆ.

ಸಾಮಂತ ಬಾಚಿರಾಜ

ಕಣ್ಣರಸನ ಮಗನಾದ ಬಾಚಿರಾಜನ ಉಲ್ಲೇಖ ಸಿಂಧನೂರಿನ ಮುಕ್ಕುಂದಿ ಶಾಸನದಲ್ಲಿ ಬರುತ್ತದೆ.[೫೯] ಬಾಚಿರಾಜನು ಸಿಂಧ ವಂಶದವನಾಗಿದ್ದಾನೆ. ಕ್ರಿ.ಶ.೧೧೩೪ರಲ್ಲಿ ಕಲ್ಯಾಣ ಚಾಳುಕ್ಯ ಅರಸ ಭೂಲೋಕಮಲ್ಲನು ರಾಜ್ಯಭಾರ ಮಾಡುತ್ತಿದ್ದಾಗ ಈತನ ಸಾಮಂತ ಬಾಚಿರಾಜನು ಆಳುತ್ತಿರುತ್ತಾನೆ.(ಪ್ರದೇಶ ಉಲ್ಲೇಖವಿಲ್ಲ) ಬಾಚಿರಾಜನ ಪ್ರಧಾನನಾಗಿ ಬೆನಚಿಮಯ್ಯ ಎಂಬ ಬ್ರಾಹ್ಮಣನಿದ್ದ ಈ ಬೆನಚಿಮಯ್ಯ ಮಾಡಿಸಿದ ಕೇಶವ ದೇವರ ದೇವಾಲಯದ ರಂಗಭೋಗ, ತೆರೆದ ದೇವರ ಮಂದಿರದ ಖಂಡಸ್ಫುಟಿತ, ಜೀರ್ಣೋದ್ಧಾರ ಪೂಜಾರಿಗಳ ಜೀವತಕ್ಕೆಂದು ಭೂದಾನ ಮಾಡಿದ ಮಾಹಿತಿ ಇದೆ.

ಚಕ್ರವರ್ತಿಯ ಆದೇಶದ ಮೇರೆಗೆ ಆಳುವ ಮಹಾಸಾಮಂತರು ಮಹಾಮಂಡಳೇಶ್ವರರ ಅಧೀನರಾಗಿದ್ದರು. ಒಮ್ಮೊಮ್ಮೆ ಮಹಾಮಂಡಳೇಶ್ವರರಿಗಿಂತಲೂ ಪ್ರಬಲರಾಗಿರುವ ಮಹಾಸಾಮಂತರ ಉಲ್ಲೇಖ ಶಾಸನಗಳಲ್ಲಿ ಸಿಗುವುದಾದರೂ ಇವರು ಮಹಾಮಂಡಳೇಶ್ವರಿಗೆ ಅಧೀನರಾಗಿರುತ್ತಿದ್ದರು. ಮಹಾಮಂಡಳೇಶ್ವರರಿಗೆ ಅಧೀನರಾಗಿದ್ದು ಚಿಕ್ಕ ವಿಭಾಗಗಳನ್ನು ಆಳುತ್ತಿದ್ದ ಪ್ರಭುಗಳೇ ಮಹಾಸಾಮಂತರು.

ಇವರನ್ನು 'ನಾಳ್ಗಾವುಂಡ'ರೆಂದೂ ಶಾಸನಗಳಲ್ಲಿ ಕರೆಯಲಾಗಿದೆ. ರಾಷ್ಟ್ರಕೂಟದ ಕಾಲದಲ್ಲಿ ದೊಡ್ಡ ವಿಭಾಗಗಳನ್ನು ಆಳುತ್ತಿದ್ದವರನ್ನು ಮಹಾಸಾಮಂತರೆಂದೇ ಕರೆಯಲಾಗಿದೆ.[೯೦]

ವಿಶಾಲವಾದ ಸಾಮ್ರಾಜ್ಯವನ್ನು ವಿಂಗಡಿಸಿ ಪುಟ್ಟ ಪುಟ್ಟ ವಿಭಾಗಗಳಲ್ಲಿ ಚಕ್ರವರ್ತಿಗಳ ಅಧೀನದಲ್ಲಿದ್ದ ಸಾಮಂತರು ಆಳುತ್ತಿದ್ದರು. ವಿಸ್ತಾರವಾದ ಸಾಮ್ರಾಜ್ಯದ ಆಡಳಿತವನ್ನು ಚಕ್ರವರ್ತಿಯೊಬ್ಬನೇ ನೋಡಿಕೊಳ್ಳುವುದು ಅಸಾಧ್ಯವಾದುದರಿಂದ ರಾಜ್ಯದ ಸುವ್ಯವಸ್ಥೆಗೆ ಹಾಗೂ ಆಡಳಿತದ ಸೌಲಭ್ಯಕ್ಕಾಗಿ ಸಾಮಂತರರನ್ನು ನೇಮಿಸಲಾಗುತ್ತಿತ್ತು. ಪ್ರಾಚೀನ ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ಚಕ್ರವರ್ತಿಗಳೊಂದಿಗೆ ಸಾಮಂತರ ಚರಿತ್ರೆಯೂ ಬೆಸೆದುಕೊಂಡು ಬಂದಿದೆ. ಒಬ್ಬರನ್ನು ಬಿಟ್ಟು, ಮತ್ತೊಬ್ಬರಿಲ್ಲವೆನ್ನುವಷ್ಟರ ಮಟ್ಟಿಗೆ ಅವರಿಬ್ಬರ ವಿವರಗಳು ಕನ್ನಡ ನಾಡಿನ ಶಾಸನಗಳಲ್ಲಿ ವಿಫುಲ ಸಂಖ್ಯೆಯಲ್ಲಿ ಸಿಗುತ್ತವೆ. ಆಡಳಿತದ ದೃಷ್ಟಿಯಿಂದ ಇದು ಅನಿವಾರ್ಯವೂ ಆಗಿದ್ದಿತು. ಏಕೆಂದರೆ, ಚಕ್ರವರ್ತಿಯು ದೂರದ ರಾಜಧಾನಿಯಿಂದ ರಾಜ್ಯಭಾರವನ್ನು ಮಾಡುತ್ತಿದ್ದುದರಿಂದ ಅವರಿಗೆ ಸಾಮ್ರಾಜ್ಯದ ಸಮಸ್ತ ವ್ಯವಹಾರಗಳ ಕಡೆಗೆ ಗಮನ ಕೊಡುವುದು ಅಸಾಧ್ಯವಾಗಿತ್ತು.[೯೧] ಹೀಗೆ ನಾವು ಸಾಮಂತರ ಕುರಿತು ಅವರ ಆಡಳಿತದ ವೈಖರಿಯ ಕುರಿತು ಅರಿತುಕೊಳ್ಳಬಹುದಾಗಿದೆ. ಹಾಗೆಯೇ ಇವರು ರಾಜರಿಗೆ ನಿಷ್ಠರಾಗಿದ್ದು, ತಮ್ಮ ವಿಭಾಗದ ಆಡಳಿತ ಪ್ರದೇಶದಲ್ಲಿ ಸಮಗ್ರತೆಯನ್ನು ಕಾಪಾಡಿಕೊಂಡು ಶ್ರದ್ಧೆಯಿಂದ ಕಾರ್ಯ ನಿರ್ವಹಿಸಿದ್ದಾರೆ. ಇದರಿಂದ ನಾಡಿನಲ್ಲಿ ಶಾಂತಿ ಸುವ್ಯವಸ್ಥೆ ನೆಲೆಸುವಂತೆ ಸದಾ ಜಾಗೃತರಾಗಿರುತ್ತಿದ್ದರು.

ದಂಡನಾಯಕರು

ನಾಡಿನ ಆಡಳಿತವನ್ನು ಸಮರ್ಥವಾಗಿ ನಿರ್ವಹಿಸುತ್ತಿದ್ದ ದಂಡನಾಯಕರು ಚಕ್ರವರ್ತಿ ಮತ್ತು ಪ್ರಜೆಗಳ ಮಧ್ಯೆ ಸೇತುವೆಯಾಗಿದ್ದರು. ದಂಗೆ, ಯುದ್ಧಗಳಂತಹ ಪರಿಸ್ಥಿತಿಯಲ್ಲಿ ಸಾಮಂತರು ಹಾಗೂ ದಂಡನಾಯಕರು ಅವರ ಸಾಮರ್ಥ್ಯಕ್ಕೆ ತಕ್ಕಂತೆ ಅರಸರ ಪಡೆಗೆ ನೆರವು ನೀಡುವುದರ ಜೊತೆಗೆ ಅವರ ಸಂದಿಗ್ಧ ಪರಿಸ್ಥಿತಿಯಲ್ಲಿ ಚಕ್ರವರ್ತಿಯ ಪರವಾಗಿ ಹೋರಾಡಿ ನಾಡಿನಲ್ಲಿ ಸುವ್ಯವಸ್ಥೆಯನ್ನು ಕಾಪಾಡುತ್ತಿದ್ದರು. ದಂಡ ನಾಯಕರೆಲ್ಲರೂ ವೀರರಾಗಿದ್ದುದರಿಂದಲೂ 'ದಂಡ' ಶಬ್ದಕ್ಕೆ 'ಸೈನ್ಯ' ಎಂಬ ಅರ್ಥವಿರುವುದರಿಂದಲೂ 'ದಂಡನಾಯಕ'ರೆಂದರೆ 'ಸೇನಾಪತಿ' ಎಂದೇ ಕರೆಯಲಾಗುತ್ತದೆ. ಭಾರತೀಯ ಸಂಸ್ಕೃತಿಯಲ್ಲಿ 'ದಂಡ'ಕ್ಕೆ ವಿಶಿಷ್ಟ ಸ್ಥಾನವಿದೆ. ಸ್ವಾಮಿಗಳು, ಸಂನ್ಯಾಸಿಗಳು, ವಟುಗಳು, ದೀಕ್ಷೆ ಮುಂತಾದ ಸಮಯದಲ್ಲಿ ದಂಡ ವನ್ನು ಹಿಡಿದಿರುತ್ತಾರೆ. ದಂಡನಾಯಕರು ರಾಜನಿಂದ ಹುದ್ದೆಯನ್ನು ಸ್ವೀಕರಿಸುವ ಸಂದರ್ಭದಲ್ಲಿ ದಂಡ ವನ್ನು ಹಿಡಿದಿರಬೇಕು. ಆದ್ದರಿಂದ ಅವರೆಲ್ಲರಿಗೆ 'ದಂಡನಾಯಕ' ಎಂಬ ಹೆಸರು ಸಾಮಾನ್ಯವಾಗಿ ಬಳಕೆಗೊಂಡಿರ ಬೇಕು.[೯೨]

ಮುಖ್ಯವಾಗಿ ದಂಡ ನಾಯಕರನ್ನು ಚಕ್ರವರ್ತಿಗಳು ನೇಮಿಸುತ್ತಿದ್ದರು. ಈ ಅಧಿಕಾರಿಗಳು ತೆರಿಗೆ, ಸೈನ್ಯ, ವಿದೇಶಾಂಗ ಹೀಗೆ ವಿವಿಧ ಇಲಾಖೆಗಳಿಗೆ ಸಂಬಂಧಿಸಿದವರಾಗಿದ್ದಾರೆ. ದಂಡನಾಯಕರಲ್ಲಿ

ಕೇಂದ್ರೀಯ ಮತ್ತು ಪ್ರಾಂತೀಯ ಎಂದು ಎರಡು ವಿಧ, ಕೇಂದ್ರೀಯ ದಂಡನಾಯಕರು ಚಕ್ರವರ್ತಿಯಿಂದ ನೇಮಿಸಲ್ಪಟ್ಟವರು. ಇದರಲ್ಲಿ ಸುಂಕ, ಸೈನ್ಯ ವಿದೇಶಾಂಗ ಹೀಗೆ ವಿವಿಧ ಇಲಾಖೆಗಳಿಗೆ ಸಂಬಂಧಪಟ್ಟಿದ್ದಾರೆ. ಮಹಾಸಾಮಂತಾಧಿಪತಿ, ಮಹಾಪ್ರಚಂಡ ದಂಡನಾಯಕ ಹಾಗು ಮಹಾಮಂಡಳೇಶ್ವರರ ಕೆಳಗೆ ಇವರು ಕರ್ತವ್ಯ ನಿರ್ವಹಿಸುತ್ತಿದ್ದರು.[೯೩] ಇಂತಹ ದಂಡ ನಾಯಕರನ್ನು ಕುರಿತು ಮುಕ್ಕುಂದಿ ಗ್ರಾಮದ ಶಾಸನದಲ್ಲಿ ಉಲ್ಲೇಖಿಸಲಾಗಿದೆ.

ದಂಡನಾಯಕ ಮಾರ್ತಂಡಯ್ಯ

ಈತನ ಉಲ್ಲೇಖ ಕಲ್ಯಾಣ ಚಾಲುಕ್ಯರ ಆಳ್ವಿಕೆಯ ಕಾಲದ (ಕಾಲದ ಉಲ್ಲೇಖವಿಲ್ಲ) ತ್ರುಟಿತ ಶಾಸನದಲ್ಲಿ ಬಂದಿದೆ. ದಂಡನಾಯಕ ಮಾರ್ತಂಡಯ್ಯನು ೬೫ ಮತ್ತರು ಭೂಮಿಯನ್ನು ದಾನ ನೀಡಿದಂತೆ ತಿಳಿದುಬರುತ್ತದೆ. ಇದು ಕಲ್ಯಾಣ ಚಾಲುಕ್ಯನ ಕಾಲದ ಶಾಸನವೆಂದು ಗುರುತಿಸಲು ಕಾರಣ ಇದೇ ಶಾಸನದ ಇನ್ನೊಂದು ಭಾಗ ಕಾಲವನ್ನು ೧೦೪೯ ಎಂದು ಸ್ಪಷ್ಟಪಡಿಸುತ್ತದೆ. ಹಾಗೂ ಸಿಂಧರ ವಂಶದ ಗೋನರಸನು ದಂಡನಾಯಕ ಮಾರ್ತಾಂಡಯ್ಯನು ಮಾಡಿಸಿದ ಸತ್ರಕ್ಕೆ ದಾನ ನೀಡಿದ ಉಲ್ಲೇಖವಿದೆ.[೯೪] ದಂಡ ನಾಯಕರ ಅಧಿಕಾರ ವ್ಯಾಪಕವಾಗಿತ್ತು. ಇವರು ಸೈನಿಕ ಸಾಧನೆಗಳ ಜೊತೆಗೆ ಧಾರ್ಮಿಕ ಕಾರ್ಯಗಳನ್ನು ಮಾಡಿ ಸಂಸ್ಕೃತಿಗೆ ವಿಶಿಷ್ಟ ಕಾಣಿಕೆ ಸಲ್ಲಿಸಿದ್ದಾರೆ. ಆದ್ದರಿಂದ ಈ ಅಧಿಕಾರಿಗಳ ಪಾತ್ರ ಇಲ್ಲಿ ಪ್ರಮುಖವಾಗಿದೆ.

ಅಧಿಕಾರಿ ವರ್ಗ

ಮುಕ್ಕುಂದಿಯ ಶಾಸನಗಳಲ್ಲಿ ಉಲ್ಲೇಖಿತವಾಗಿರುವ ಅಧಿಕಾರಿ ವರ್ಗದವರನ್ನು ಈ ಕೆಳಗಿನಂತೆ ಗುರುತಿಸಬಹುದಾಗಿದೆ.

ಕ್ರ.ಸಂ.	ಅಧಿಕಾರಿ	ಹೆಸರು	ರಾಜ	ಕಾಲ	ಉಲ್ಲೇಖ
೧	ಪೆರ್ಗಡೆ	ಬೆನಚಿಮಯ್ಯ	ಭೂಲೋಕಮಲ್ಲ	೧೧೩೪	ಸಿಂಧ ೫ ಮುಕ್ಕುಂದಿ
೨	ಸ್ಥಾನಿಕ	ಪಂಡಿತದೇವ	೬ನೇ-ವಿಕ್ರಮಾದಿತ್ಯ	೧೦೯೭	ಸಿಂಧ.೭ ಮುಕ್ಕುಂದಿ
೩	ತಳವಾರ	ಉಲ್ಲೇಖವಿಲ್ಲ	ಉಲ್ಲೇಖವಿಲ್ಲ	೧೫೮೫	ಸಿಂಧ ೧೦ ಮುಕ್ಕುಂದಿ
೪	ಸೇನಬೋವ	ಸೋಮರಸ	ಉಲ್ಲೇಖವಿಲ್ಲ	೧೫೨೩	ಸಿಂಧ ೨೨ ಸಿದ್ಧರಾಂಪುರ

ಪೆರ್ಗಡೆಗಳು

ಪೆರ್ಗಡೆಗಳು ಸುಂಕದ ಅಧಿಕಾರಿಗಳಾಗಿದ್ದಾರೆ. ಗಾವುಂಡರಿಗಿಂತ ಹಿರಿಯರಾದ ಇವರು ವಿವಿಧ ಸುಂಕಗಳನ್ನು ಸಂಗ್ರಹಿಸುತ್ತಿದ್ದರು. ಜಿ.ಎಸ್.ದೀಕ್ಷಿತರು ನಾಡು ಅಥವಾ ಗ್ರಾಮದ ಮುಖ್ಯಸ್ಥ ಗಾವುಂಡ,

ಪೆರ್ಗಡೆ ಎಂಬುವರು ನಾಡುಗಳ ಇಲ್ಲವೆ, ಹಳ್ಳಿಗಳ ಇಲ್ಲವೆ, ಯಾವುದೇ ವಿಭಾಗದ ಮುಖ್ಯಸ್ಥರಾಗಿದ್ದಾರೆ. ತೆರಿಗೆ ಸಂಗ್ರಹಿಸುವ ಅಧಿಕಾರ ಹೊಂದಿದ್ದ ಪೇರ್ಗಡೆಯನ್ನು 'ಸುಂಕದ ಹೆಗ್ಗಡೆ' ಎಂದು ಕರೆದಿದ್ದಾರೆ.[೬೫]

ಮುಕ್ಕುಂದಿ ಶಾಸನವು ಮಹಾ ಮಂಡಳೇಶ್ವರ ಬಾಚರಸನ ಪೆರ್ಗಡೆಯಾಗಿ ಬೆನಚಿಮಯ್ಯನೆಂಬುವ ನಿದ್ದನೆಂದು ಉಲ್ಲೇಖಿಸುತ್ತದೆ.[೬೬] ಮಹಾಮಂಡಳೇಶ್ವರರ ಅನುಪಸ್ಥಿತಿಯಲ್ಲಿ ಅಥವಾ ಬೇರೆ ಕಡೆ ಹೋದಾಗ ಇವರ ಅಧಿಕಾರ ಗ್ರಾಮದಲ್ಲಿ ಇರುತ್ತಿದ್ದಿತು ಎಂಬುದನ್ನು ಊಹಿಸಬಹುದು.

ಸ್ಥಾನಾಚಾರ್ಯರು

ದೇವಾಲಯ ಹಾಗೂ ಮಠಗಳಿಗೆ ಸಂಬಂಧಿಸಿದ ವ್ಯವಹಾರದ ಉಸ್ತುವಾರಿಯನ್ನು ಸ್ಥಾನಚಾರ್ಯರು ವಹಿಸಿದ್ದರು. ದೇವಾಲಯಗಳಿಗೆ ಬಿಟ್ಟದಾನ ದತ್ತಿಗಳನ್ನು ಸ್ವೀಕರಿಸುವುದು ಮತ್ತು ಅವುಗಳನ್ನು ನೋಡಿಕೊಳ್ಳುವುದು, ದೇವಾಲಯದ ಸಂಪತ್ತಿನ ಮೇಲ್ವಿಚಾರಣೆ ಮಾಡುವುದು ಇವರ ಕಾರ್ಯವಾಗಿತ್ತು. ಆರನೇ ವಿಕ್ರಮಾದಿತ್ಯನ ಕಾಲದ ಮುಕ್ಕುಂದಿ ಶಾಸನ ಸ್ಥಾನಿಕ ಪಂಡಿತದೇವ ಎಂಬ ವ್ಯಕ್ತಿಯನ್ನು ಉಲ್ಲೇಖಿಸುತ್ತದೆ.[೬೭] ಈತನು ಗ್ರಾಮದ ದೇವಾಲಯ, ಮಠಗಳಿಗೆ, ಬಿಟ್ಟದಾನ ದತ್ತಿಗಳನ್ನು ನೋಡಿಕೊಳ್ಳುತ್ತಿದ್ದನು ಎಂಬುವುದನ್ನು ಊಹಿಸಬಹುದಾಗಿದೆ.

ತಳವಾರ

ಗ್ರಾಮದ ರಕ್ಷಣೆ ಮಾಡುವವನೆ ತಳವಾರ. ಇವನು ಗ್ರಾಮಗಳಲ್ಲಿಯ ತಳವಾರರಾಗಿದ್ದಾರೆ. ಈ ಶಬ್ದ 'ಸ್ಥಳ' ಇಲ್ಲವೆ. "ತಲ್ವಾರ್ (ಖಡ್ಗ) ಮೂಲದಿಂದ ಬಂದಿರಬಹುದು. ಆದ್ದರಿಂದ ಈತನನ್ನು ತಳವಾರ ಎಂದು ಕರೆಯಲಾಗುತ್ತಿತ್ತು. ಇವರು ಹಗಲು ರಾತ್ರಿಯನ್ನದೇ ಕಳ್ಳರಿಂದ, ಸಮಾಜ ದ್ರೋಹಿಗಳಿಂದ ಗ್ರಾಮದ ರಕ್ಷಣೆಯನ್ನು ಮಾಡುತ್ತಿದ್ದರು. ಅವಶ್ಯಕತೆಯಿದ್ದಲ್ಲಿ ಕೇವಲ ತಮ್ಮ ಗ್ರಾಮದ ರಕ್ಷಣೆಯ ಹೊರತಾಗಿ ಬೇರೆ ಬೇರೆ ಸ್ಥಳ ರಕ್ಷಣೆಯನ್ನು ತಳವಾರರು ಮಾಡುತ್ತಿದ್ದರು.[೬೮] ಈ ತಳವಾರರ ಕುರಿತು ಮುಕ್ಕುಂದಿ ಶಾಸನಗಳಲ್ಲಿ ಯಾವುದೇ ಮಾಹಿತಿ ದೊರೆಯುವುದಿಲ್ಲ. ಆದರೆ ಪ್ರತಿಯೊಂದು ಗ್ರಾಮಕ್ಕೂ ತಳವಾರರು ಇರುತ್ತಿದ್ದರೆಂಬುದನ್ನು ಪ್ರಸ್ತುತ ಸಂದರ್ಭದಲ್ಲಿಯೂ ಗಮನಿಸಬಹುದಾಗಿದೆ.

ಆಡಳಿತ ವಿಭಾಗಗಳು

ರಾಜಕೀಯ ಇತಿಹಾಸವನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಈ ಜಿಲ್ಲೆಯು ಪ್ರಾಚೀನ ಕಾಲದಲ್ಲಿ ರಾಜಕೀಯವಾಗಿ ಮಹತ್ವದ ಪ್ರದೇಶವಾಗಿತ್ತು. ಕರ್ನಾಟಕದ ಚರಿತ್ರೆಗೆ ತಿರುವು ನೀಡಿದಂತಹ ರಾಜಕೀಯ ಮನೆತನಗಳು ಇಲ್ಲಿ ಆಳ್ವಿಕೆ ನೆಡಸಿವೆ. ಈ ಜಿಲ್ಲೆಯು ಕರ್ನಾಟಕದ ಪ್ರಸಿದ್ಧ ರಾಜ ಮನೆತನಗಳ ಆಳ್ವಿಕೆಗೆ ಒಳಪಟ್ಟಿದ್ದು ಮಹತ್ವದ ರಾಜಕೀಯ ಕ್ಷೇತ್ರವೆನಿಸಿದೆ.

ಪ್ರಾಚೀನ ಕಾಲದಲ್ಲಿ ಇಡೀ ಆಡಳಿತ ವ್ಯವಸ್ಥೆಗೆ ರಾಜನೇ ಅಧಿಪತಿ, ಎಲ್ಲವೂ ಆತನ ಆಳ್ವಿಕೆಗೆ ಒಳಪಟ್ಟಿತ್ತು. ಆಡಳಿತದ ಅನುಕೂಲಕ್ಕಾಗಿ ಒಂದೊಂದು ಗ್ರಾಮಕ್ಕೂ ಅಧಿಕಾರಿಗಳನ್ನು ನೇಮಿಸಿದ್ದನು. ಪ್ರಭುಗಳು ವಾಸ್ತವವಾಗಿ ಆಳುವವರು ಅವರೆಂದರೆ ಕ್ರಮವಾಗಿ ಚಕ್ರವರ್ತಿಗಳು, ಮಹಾಮಂಡಳೇಶ್ವರರು, ಮಹಾಸಾಮಂತ, ಪ್ರಭುಗಾವುಂಡ ಮತ್ತು ಗಾವುಂಡರಾಗಿದ್ದಾರೆ. ಈ ಐದು ಪ್ರಭು ವಿಭಾಗದವರು ವ್ಯಾಪ್ತಿಗೊಳಪಟ್ಟ ನಾಡಿನ ವಿಭಾಗದ ಒಡೆಯರಾಗಿದ್ದಾರೆ. ಸಾಮ್ರಾಜ್ಯಕ್ಕೆ ಒಡೆಯ ಚಕ್ರವರ್ತಿ, ಇತರ ಪ್ರಭುವರ್ಗದವರು ಈತನ ಆಜ್ಞಾನುವರ್ತಿಗಳು. ಅಧಿಕಾರದಲ್ಲಿ ಪರಮೋಚ್ಚನಾಗಿರುವ ಚಕ್ರವರ್ತಿಯ ಪಾದಪದ್ಮೋಪಜೀವಿಯಾಗಿ ಇವರು ಇರುತ್ತಿದ್ದರು. ಚಕ್ರವರ್ತಿಗೆ ಅಧೀನರಾಗಿ ಮಹಾಮಂಡಳೇಶ್ವರ ಮಹಾಮಂಡಳೇಶ್ವರರಿಗೆ ಅಧೀನರಾಗಿ ಮಹಾಸಾಮಂತರು, ಮಹಾಸಾಮಂತರಿಗೆ ಪ್ರಭುಗಾವುಂಡರು ಇಲ್ಲವೆ ನಾಳ್ಪ್ರಭುಗಳು, ಈ ಪ್ರಭುಗಾವುಂಡರಿಗೆ ಅಧೀನರಾಗಿ ಗಾವುಂಡರು ತಮ್ಮ ಗ್ರಾಮಗಳನ್ನು ಆಳುತ್ತಿದ್ದರು. ಸಾಮ್ರಾಜ್ಯವನ್ನು ವಿಭಾಗ, ಉಪವಿಭಾಗಗಳನ್ನಾಗಿ ವಿಂಗಡಿಸಲಾಗುತ್ತಿತ್ತು. ದೊಡ್ಡ ವಿಭಾಗಗಳಿಗೆ ಚಕ್ರವರ್ತಿಯು ಸಾಮಾನ್ಯವಾಗಿ ರಾಜವಂಶದವರನ್ನು ಮಹಾಮಂಡಳೇಶ್ವರ ಎಂದು ನೇಮಿಸುತ್ತಿದ್ದರು. ಇದೇ ರೀತಿ ಮಹಾಮಂಡಳೇಶ್ವರರು ತಮ್ಮ ರಾಜ್ಯದ ಸಣ್ಣ ವಿಭಾಗಗಳಿಗೆ ಮಹಾ ಸಾಮಂತರನ್ನು ಪ್ರಭುವಾಗಿ ನೇಮಿಸುತ್ತಿದ್ದರು. ಈ ಮಹಾಸಾಮಂತರ ಕೆಳಗೆ ಕೆಲವು ಗ್ರಾಮಗಳನ್ನೊಳಗೊಂಡ ಸಣ್ಣ ವಿಭಾಗಗಳ ಪ್ರಭುಗಳಾಗಿ ಪ್ರಭುಗಾವುಂಡರು ಇರುತ್ತಿದ್ದರು. ಗ್ರಾಮದ ಪ್ರಭುವಾಗಿ ಗಾವುಂಡನು ಆಳುತ್ತಿದ್ದನು.[೯೯]

ಕರ್ನಾಟಕ ಇತಿಹಾಸದಲ್ಲಿ ಸಾಮ್ರಾಜ್ಯವನ್ನು ಆಡಳಿತದ ಅನುಕೂಲಕ್ಕಾಗಿ ವಿವಿಧ ವಿಭಾಗಗಳಾಗಿ ವಿಂಗಡಿಸಿರುವುದು ತಿಳಿದುಬರುತ್ತದೆ. ಈ ಪ್ರಾಂತಗಳನ್ನು ಶಾಸನಗಳು ನಾಡು, ವಿಷಯ, ದೇಶ ಎಂದು ಕರೆದಿವೆ.[೧೦೦] ಆದರೆ ಒಂದು ನಾಡು ನಾಡೆಂದು ಕರೆಸಿಕೊಳ್ಳಲು ಅದಕ್ಕಿರುವ ಅರ್ಹತೆಗಳೇನೆಂಬುವುದನ್ನು ಶಾಸನಗಳು ತಿಳಿಸುವುದಿಲ್ಲ. ಸಾಮಾನ್ಯವಾಗಿ ಸಾವಿರ ಹಳ್ಳಿಗಳ ಸಂಖ್ಯೆಯ ವಿಭಾಗಕ್ಕೆ ನಾಡೆನ್ನುವುದನ್ನು ರೈಸ್ ಗುರುತಿಸಿದ್ದಾರೆ. ಆದರೆ ಈ ಸಂಖ್ಯೆ ಯಾವಾಗಲೂ ಸಾವಿರವಾಗಿ ಉಳಿದಿಲ್ಲ. ಉದಾ : ರಾಯಚೂರು ಜಿಲ್ಲೆಯ ಕ್ರಿ.ಶ.೧೧೯೯ರ ಕುರಡಿ ಶಾಸನವು ಕರಡಿಕಲ್ಲು ೩೦೦ ಎಂದು ಹೇಳುತ್ತದೆ. ಆದ್ದರಿಂದ ನಾಡು ಎಂಬುದು ಆಡಳಿತ ವಿಭಾಗವಾಗಿತ್ತೆಂದು ಗೊತ್ತಾಗುತ್ತದೆ.[೧೦೧]

ಇತಿಹಾಸ ಪರಂಪರೆಯಲ್ಲಿ ಆಡಳಿತ ವ್ಯವಸ್ಥೆ ಎಷ್ಟು ಸುವ್ಯವಸ್ಥಿತವಾಗಿ ನಡೆಯುತ್ತಿತೆಂಬುದಕ್ಕೆ ಈ ನಾಡಿನಲ್ಲಿ ಮಾಡಲಾಗಿರುವ ವಿಭಾಗಗಳನ್ನು ನೋಡಬಹುದು. ಈ ಪದ್ಧತಿಯು ಕರ್ನಾಟಕದಲ್ಲಿ ಸಮರ್ಥವಾಗಿ ಬೆಳೆದು ಬಂದಿದೆ. ಅದೇ ರೀತಿಯಾಗಿ ಮುಕ್ಕುಂದಿ ಗ್ರಾಮದಲ್ಲಿ ಹಾಗೂ ಸಿಂಧನೂರು ತಾಲೂಕಿನ ಇತರ ಗ್ರಾಮದ ಶಾಸನಗಳಲ್ಲಿ ಉಲ್ಲೇಖಿತವಾದ ನಾಡು ಪ್ರಾಂತ್ಯ, ಆಡಳಿತ ವಿಭಾಗಗಳನ್ನು ಈ ಕೆಳಗಿನಂತೆ ನೋಡಬಹುದಾಗಿದೆ.

ರೌಡಕುಂದ ಶಾಸನವು ಚಾಲುಕ್ಯ ರಾಜ ತ್ರೈಲೋಕ್ಯ ಮಲ್ಲನ ಉಲ್ಲೇಖವಿದ್ದು, ಇವನ ಮಣ್ಡಳೇಶ್ವರನಾದ ಅಮ್ಮಣದೇವನು ನಿಟ್ಟರವೆಯನ್ನು ಆಳುತ್ತಾ, ಕರಹಡದ ನಲೆವೀಡಿನಲ್ಲಿದ್ದಂತೆ ತಿಳಿಸುತ್ತದೆ.[೧೦೨] ಸಾಲಗುಂದೆ ಶಾಸನವು ಚಾಳುಕ್ಯರಾಜ ಭೂಲೋಕಮಲ್ಲನ ಮಗನಾದ ಮಲ್ಲಿಕಾರ್ಜುನನು ಆಳುತ್ತಿದ್ದಾಗ ಅವನ ದಂಡನಾಯಕ ನಾಚಣನಿರುತ್ತಾನೆ. ಇವನು ಎಡದೊರೆ ೨೦೦೦ವನ್ನು ಆಳುತ್ತಿದ್ದಾಗ ಸಾಲಗುಂದ ೭೦ನ್ನು ಬಾಚರಸ ದೇವ ಆಳುತ್ತಿದ್ದನು. ಮತ್ತು ನೂರ್ಮಡಿ ತೈಲಿನಿಂದಾರಂಭಿಸಿ ವಿಕ್ರಮಾದಿತ್ಯನವರೆಗೆ ಚಾಳುಕ್ಯ ವಂಶಾವಳಿಯನ್ನು ನೀಡಲಾಗಿದೆ. ತ್ರಿಭುವನಮಲ್ಲ ವಿಕ್ರಮಾದಿತ್ಯನ ಮಾಂಡಳೀಕನಾಗಿ ನಾಗದೇವನೆಂಬುವನಿದ್ದ ಎಡದೊರೆ ನಾಡಿನಲ್ಲಿನ ನಿಟ್ಟರವೆ-೭೦ಕ್ಕೆ ಸೇರಿದ. ಅಗ್ರಹಾರ ಸಾಲಿಗುಂದೆಯಾಗಿತ್ತು.[೧೦೩] ಇದಲ್ಲದೆ ವಿಕ್ರಮಾದಿತ್ಯನು ಬಲ್ಲಕುಂದೆ ೨೦೦ರ, ತೆಕ್ಕಾಕಲ್ಲು ೧೨ಕ್ಕೆ ಸೇರಿದ ಸಿರಿಯಾರ ಬಳಿ ಗದ್ದೆ ನೀಡುತ್ತಾನೆ.

ಮುಕ್ಕುಂದಿಯ ಶಾಸನಾಂತ್ಯದಲ್ಲಿ ಶಕ ೧೩೦೬, ರುದಿರೋದ್ಗಾರಿ, ಕಾರ್ತಿಕ, ಬ,೧ ಬುಧವಾರ ಅಂದರೆ ಕ್ರಿ.ಶ.೧೧-೧೧-೧೩೮೩ರ ಬುಧವಾರದಲ್ಲಿ ಮೊರಟನಾಡಿನ ಒಡೆಯನು ಬಾಚೇಶ್ವರದೇವರ ಪ್ರತಿಷ್ಠೆ ಮಾಡಿದಂತೆ ಹೇಳಿದೆ.[೧೦೪]

ಮುಕ್ಕುಂದಿ ಶಾಸನವು ನಿಟ್ಟರವೆಯ ೭೦ರ ಬಳಿಯ ಮುಕುಂದೆ ಅಗ್ರಹಾರದ ಬಳಿ ಹೊಳೆಯಲ್ಲಿ ಅಕ್ಷಯನಿಧಿ ಭಂಡಾರವನ್ನು ಸೇನಬೋವ ಥಾವಣ್ಣಯ್ಯ ದೇವಾಲಯದ ನೈವೇದ್ಯಕ್ಕೆ, ಹೂಮಾಲೆಗೆ ನಂದಾದೀವಿಗೆಗೆ ನೀಡಿದಂತೆ ಹೇಳಿದೆ.[೧೦೫]

ಮುಕ್ಕುಂದಿ ಶಾಸನವು ಕಲ್ಯಾಣದಲ್ಲಿ ತ್ರೈಲೋಕ್ಯಮಲ್ಲನು ರಾಜ್ಯಭಾರ ಮಾಡುತ್ತಿದ್ದಂತೆ ಹೇಳಿದೆ ಇವನ ಪತ್ನಿ ತ್ರೈಲೋಕ್ಯ ಮಹಾದೇವಿ, ನಿಟ್ಟರವೆ ೭೦ರ ಬಳಿಯ ಅಗ್ರಹಾರ ಮುಕ್ಕುಂದೆಯನ್ನು ತ್ರಿಭೋಗ್ಯಾಭ್ಯಂತರವಾಗಿ ಆಳುತ್ತಿದ್ದಳು.[೧೦೬]

ಹೀಗೆ ಮೇಲ್ಕಾಣಿಸಿದ ಆಡಳಿತ ವಿಭಾಗಗಳು ಎಡದೊರೆ ನಾಡಿನ ಉಪ ಆಡಳಿತ ವಿಭಾಗಗಳಾಗಿ ನಿಟ್ಟರವೆ ೭೦ ಸಾಲಗುಂದ ೭೦, ಬಲ್ಲಕುಂದೆ ೩೦೦ರ ತಕ್ಕಕಲ್ಲು-೧೨, ಮೊರಟನಾಡು ಇನ್ನು ಮುಂತಾದ ವಿಭಾಗಗಳನ್ನು ಶಾಸನಗಳ ಮುಖಾಂತರ ತಿಳಿಯಬಹುದಾಗಿದೆ. ಒಟ್ಟಾರೆಯಾಗಿ ರಾಯಚೂರಿನ ಜಿಲ್ಲೆಯನ್ನು ಒಳಗೊಂಡಂತೆ ಎಡೆದೊರೆ ನಾಡು ವಿಶಾಲ ಪ್ರದೇಶವನ್ನು ಒಳಗೊಂಡಿತ್ತು ಎಂಬುದು ಸ್ಪಷ್ಟವಾಗಿ ಊಹಿಸಬಹುದು.

ಎಡದೊರೆ ನಾಡು

ಎಡದೊರೆ ನಾಡು ಎರಡು ಸಾವಿರ ಹಳ್ಳಿಗಳ ಒಂದು ಆಡಳಿತ ವಿಭಾಗವಾಗಿದೆ. ಕನ್ನಡ ಶಾಸನ ಗಳಲ್ಲಿ ಅದು "ಎಡದೊಱೆಯಿಬ್ಚಾಸರ" "ಎಡದೊಱೆ ಇಚ್ಛಾಸಿರ" 'ಮತ್ತು ಎಡದೊಱು ೨೦೦೦'

ಎಂದು ರೂಪಗಳಲ್ಲಿ ಕಾಣಿಸಿಕೊಂಡಿದೆ. ತಮಿಳು ಶಾಸನಗಳು ಇದನ್ನು ಇಡೈತುರೈ ನಾಡು ಎಂದು ಕರೆದಿವೆ.[೧೦೭] ಎಡದೊರೆ ನಾಡಿನ ಅತ್ಯಂತ ಪ್ರಾಚೀನ ಉಲ್ಲೇಖ ಕ್ರಿ.ಶ.೮೯೧-೯೨ರ ಭೋಗಾವತಿ ಶಾಸನದಲ್ಲಿದೆ. ಈ ವಿಭಾಗವು ಸ್ಥೂಲವಾಗಿ ಇಂದಿನ ರಾಯಚೂರು, ಕೊಪ್ಪಳ ಮತ್ತು ಸುರಪುರ ತಾಲೂಕಿನ ವ್ಯಾಪ್ತಿಯನ್ನು ಹೊಂದಿತ್ತು. ಮುಸ್ಲಿಂ ಅರಸರ ಆಳ್ವಿಕೆಯಲ್ಲಿ ಇದನ್ನು 'ದೋ ಅಬ್' ಎಂದು ಕರೆಯಲಾಯಿತು. ಎಡೆದೊರೆ ನಾಡಿನ ಗಡಿಯನ್ನು ಡಾ.ಜೆ.ಎಚ್.ಫ್ಲೀಟರು ಉತ್ತರಕ್ಕೆ ಕೃಷ್ಣನದಿ, ದಕ್ಷಿಣಕ್ಕೆ ತುಂಗಭದ್ರಾನದಿಗಳ ನಡುವಿನ ಪ್ರದೇಶವೆಂದು ಸೂಚಿಸಿದ್ದಾರೆ.[೧೦೮] ಹೀಗಾಗಿ ಎಡದೊರೆ ನಾಡಿನಲ್ಲಿ ರಾಯಚೂರು ಜಿಲ್ಲೆಯು ಸೇರಿಕೊಂಡಿದೆ.

ಎಡೆದೊರೆ ಪದದ ನಿಷ್ಪತ್ತಿ

ಎಡೆದೊರೆ ಹೆಸರಿನ ಇನ್ನು ಕೆಲವು ವಿಭಾಗಗಳು ಪ್ರಾಚೀನ ಕರ್ನಾಟಕದಲ್ಲಿ ಆಡಳಿತ ವಿಭಾಗಗಳಾಗಿದ್ದವು ಎಂಬುದು ಶಾಸನಗಳ ಮೂಲಕ ತಿಳಿಯುತ್ತದೆ. ಅವುಗಳು ಎರಡು ನದಿಗಳ ಮಧ್ಯದಲ್ಲಿದ್ದುದು ಆಕಸ್ಮಿಕವೇ ಸರಿ. ಮೈಸೂರು ಜಿಲ್ಲೆಯಲ್ಲಿ ಕಾಣಿಸಿಕೊಳ್ಳುವ ಎಡೆದೊರೆ ೧೦೦೦. ವಿಭಾಗ ಕಾವೇರಿ ಮತ್ತು ಕಪಿಲಾ ನದಿಗಳ ಮಧ್ಯದಲ್ಲಿ ಹಾಗೂ ಶಿವಮೊಗ್ಗ ಜಿಲ್ಲೆಯಲ್ಲಿ ಬರುವ ಎಡೆದೊರೆ ೨೦ ಉಪವಿಭಾಗವು ತುಂಗಾ ಮತ್ತು ಭದ್ರಾನದಿಗಳ ಮಧ್ಯದಲ್ಲಿವೆ.[೧೦೯]

ಎಡದೊರೆ ಪದವನ್ನು ಎರಡು+ತೊರೆ ಅಥವಾ ಪಿರಿದು+ತೊರೆ > ಪೆರ್ದೊರೆ > ಎರ್ದೊರೆ> ಎಡೆದೊರೆ ಎಂದು ವಿಗ್ರಹಿಸುವುದು ಸರಿಯಾದ ಕ್ರಮವಲ್ಲ. ಏಕೆಂದರೆ ಎರಡು+ತೂರೆ ಎಂಬುದು ಇರ್ದೊರೆಯಾಗಿ ಮತ್ತು ಪೆರ್ದೊರೆ ಎಂಬುದು ಹೆದ್ದೊರೆಯಾಗಿ ಬದಲಾವಣೆ ಹೊಂದುತ್ತದೆ. ಆದ್ದರಿಂದ ಈ ಪದವನ್ನು ಎಡೆಯ + ತೊರೆ > ಎಡದೊರೆ ಎಂದು ವಿಭಾಗಿಸುವುದು ಸರಿಯಾಗಿದೆ. ಇಲ್ಲಿ 'ತೊರೆ'(ನದಿ) ಪದದ ಅರ್ಥಸ್ಪಷ್ಟವಿದೆ.

ಆದರೆ 'ಎಡ' ಅಥವಾ ಎಡೆಯ ಎಂಬುದಕ್ಕೆ ಸ್ಥಳ, ದಂಡೆ, ಹತ್ತಿರ, ಮಧ್ಯ ಮೊದಲಾದ ಅರ್ಥಗಳಿವೆ. ಇತರ ದ್ರಾವಿಡ ಭಾಷೆಗಳಲ್ಲಿ ಎಡೆ ಪದವು ಇಡೈ(ತಮಿಳು) ಇಡೆ (ತುಳು, ಮಲೆಯಾಳ) ಎಡೆ-ಎಡ(ಕನ್ನಡ, ತೆಲಗು) ಇವುಗಳು ಮೇಲಿನ ಅರ್ಥಗಳಲ್ಲಿ ಬಳಕೆಯಾಗಿದೆ. ಆದ್ದರಿಂದ ಎಡೆಯ ಪದಕ್ಕೆ ದಂಡೆ, ಹತ್ತಿರ, ಸ್ಥಾನ ಎಂದು ಅರ್ಥಹೇಳುವುದೇ ಸರಿ ಎನಿಸುತ್ತದೆ. ಈ ಮೇಲಿನ ವಿಚಾರದಿಂದ ಎಡದೊರೆ ನಾಡಿನ ಪದದ ಅರ್ಥ ಸ್ಪಷ್ಟವಾಗುತ್ತದೆ.[೧೧೦]

ಎಡದೊರೆ ನಾಡಿನ ವ್ಯಾಪ್ತಿ

ತುಂಗಾ ಭದ್ರಾನದಿಯ ದಂಡೆಯ ಮೇಲಿರುವ ಸಿಂಧನೂರು ತಾಲೂಕಿನ ಮುಕ್ಕುಂದೆಯು ಎಡದೊರೆ ನಾಡಿನಲ್ಲಿ ಸಮಾವೇಶಗೊಂಡಿತ್ತು ಎಂಬುದಕ್ಕೆ ಏವೂರು ಶಾಸನವು "ಪೂಡವಿಗದೆ ತಾನೆ

ಮುಖಮೆನಿಪೆಡೆದೊಱೆ ನಾಡಿಂಗೆ ತಿಳಕದನ್ದದಿನೊಪ್ಪಂ ಒಡೆದಿರ್ಕು ಮೆಸೆವ ಕಿಱುದೊಱೆದಿಡಿಯೊಳ್ ಮುಕ್ಕುಂನ್ದೆಯೆಂಬ 'ವಿಪುಗ್ರಾಮಂ' ಎಂದು ಹೇಳಿದೆ.[೧೧೧]

ಕೊಪ್ಪಳ ತಾಲೂಕಿನ ಮಾದಿನೂರು ಶಾಸನವು "ಎಡೆದೊಱೆ ಯಿರ್ಚ್ಛಾಸಿರದ ಬಳಿಯ (ಕೆಳವಾಡಿ ಮುನೂಱಿಕ್ಕಂ ತಿಳಕದಪ್ಪಂತಿರಿಪ್ಪಗ್ಗದಗ್ರಹಾರಂ ಮಾದೆಯಿನೂರು" ಎಂದು ಹೇಳಿದೆ.[೧೧೨]

ಈಗೆ ಅಂದಿನ ಆಡಳಿತ ವಿಭಾಗಗಳ ಹಿನ್ನೆಲೆಯಲ್ಲಿ ಎಡೆದೊರೆ ನಾಡಿನ ಮೇರೆಗಳನ್ನು ಗುರುತಿಸುವುದು ಸುಲಭಸಾಧ್ಯ. ಉತ್ತರದಲ್ಲಿ ಆಳಂದ-೧೦೦೦ ನಾಡಿನ ಉಪವಿಭಾಗ, ಅತ್ತಿನೂರು-೮೦, ಈಶಾನ್ಯದಲ್ಲಿ ಅರಲು ೩೦೦, ಪೂರ್ವದಲ್ಲಿ ಅಯಿಜೆ-೩೦೦, ಆಗ್ನೇಯಕ್ಕೆ ಸಿಂಧವಾಡಿನಾಡಿನ ಮಂಚಾಲ (ಮಂತ್ರಾಲಯ) ೩೬ ದಕ್ಷಿಣದಲ್ಲಿ ಬಲ್ಲಕುಂದೆ ನಾಡಿನ ತೆಕ್ಕಕಲ್ಲು-೧೨ ಮತ್ತು ನೆಲ್ಲುಡಿ-೧೨, ನೈರುತ್ಯದಲ್ಲಿ ಪುಲಿಗೆರೆ ೩೦೦ರ ಉಪವಿಭಾಗ ಮಾಸವಾಡಿ-೧೪೦, ಪಶ್ಚಿಮದಲ್ಲಿ ಬೆಳ್ವೊಲನಾಡಿನ ಕುಕನೂರು ೨೦ ಕಿಸುನಾಡು-೭೦ ಮತ್ತು ಹುನುಗುಂದ ೭೦ ಹಾಗೂ ತರ್ದವಾಡಿ ನಾಡಿನ ನಲವತ್ತುಬಾಡ(ನಾಲತವಾಡ) ವಾಯವ್ಯದಲ್ಲಿ ತರ್ದವಾಡಿ ನಾಡಿನ ಸಿಂದಗಿ-೧೨ ಮತ್ತು ನರಿಯೆಂಬೊಳೆ-೭೦ ವಿಭಾಗಗಳು ಎಡೆದೊರೆ ನಾಡಿನ ಬಾಹ್ಯ ಮೇರೆಗಳಾಗಿದ್ದವು.

ಎಡದೊರೆ ನಾಡಿನ ಆಡಳಿತ ವಿಭಾಗದಲ್ಲಿ ಮುಕ್ಕುಂದಿ ಗ್ರಾಮವು ಸೇರಿಕೊಂಡದಲ್ಲದೆ, ತುಂಗಭದ್ರಾ ಬಲಭಾಗದ ಕೆಲವು ಗ್ರಾಮಗಳು ಈ ಎಡದೊರೆ ೨೦೦೦ದಲ್ಲಿ ಸೇರಿತ್ತು ಎಂಬುದು ಶಾಸನಗಳ ಉಲ್ಲೇಖದಿಂದ ತಿಳಿಯಬಹುದಾಗಿದೆ. ಉದಾ : ಬಾಗಳಿಯ ಕ್ರಿ.ಶ.೧೦೧೮ರ ಎರಡು ಶಾಸನಗಳು[೧೧೩] "ಎಡೆದೊಱೆಯಿಬ್ಚಾಸಿರದೊಳಗಣ ಕುದಿಹಾರಯಟ್ಟಿತ್ತು" ವಿಭಾಗವನ್ನು ಉಲ್ಲೇಖಿಸಿವೆ, ಬಾಗಳಿಯು ತುಂಗಭದ್ರಾ ನದಿಯ ಬಲಭಾಗದಲ್ಲಿದೆ. ಮುಕ್ಕುಂದಿಯ ಅಧ್ಯಯನ ವ್ಯಾಪ್ತಿಯಲ್ಲಿ ಬರುವ ಎಡದೊರೆ ನಾಡಿನಲ್ಲಿ ಉಲ್ಲೇಖಿತವಾಗಿರುವ, ನಿಟ್ಟರವೆ ೭೦, ಸಾಲಗುಂದ ೭೦, ಬಲ್ಲಕುಂದೆ ೩೦೦, ತಕ್ಕಕಲ್ಲು-೧೨, ಮೊರಟನಾಡು, ಉಪ ಆಡಳಿತ ವಿಭಾಗಗಳು ದೊರೆಯುತ್ತಿದ್ದು, ಅವುಗಳ ವ್ಯಾಪ್ತಿ ಈ ಕೆಳಗಿನಂತೆ ಪರಿಶೀಲಿಸಲಾಗಿದೆ.

ಕುದಿಯಹರವಿ ೭೦ ಈ ವಿಭಾಗವು ಶಾಸನಗಳಲ್ಲಿ ಕುದಿಯ ಪರವಿ, ಕುದಿಯ ಹರವಿ, ಕುಡಿಹಾರ, ಮೊದಲಾದ ರೂಪಗಳಲ್ಲಿ ಕಾಣಿಸಿಕೊಂಡಿದೆ. ಆದರೆ ಇದು ಎಡದೊರೆ ನಾಡಿನ ಯಾವ ಉಪವಿಭಾಗದಲ್ಲಿ ಸಮಾವೇಶಗೊಂಡಿತ್ತೆಂಬುದು ಶಾಸನಗಳಿಂದ ತಿಳಿಯುವುದಿಲ್ಲ.[೧೧೪]

ಕುದಯಹರವಿ ವಿಭಾಗವನ್ನು ಕ್ರಿ.ಶ.೧೦೧೩ರಿಂದ ೧೦೫೪ರವರೆಗೆ ನೊಳಂಬ ಪಲ್ಲವ ವಂಶದ ಅರಸರು ಆಳುತ್ತಿದ್ದರು. ಇವರು ಕೋಗಳಿ ಬಲ್ಲಕುಂದೆ ಮೊದಲಾಗಿ ನೊಳಂಬವಾಡಿ ೩೦೦೦ ನಾಡುಗಳ ಜೊತೆಗೆ ಕುದಿಯ ಹರವಿ ವಿಭಾಗವನ್ನು ಆಳುತ್ತಿದ್ದದು ಶಾಸನಗಳಿಂದ ತಿಳಿಯುತ್ತದೆ.[೧೧೫] ಬಲ್ಲಕುಂದೆ ೩೦೦, ತೆಕ್ಕಕಲ್ಲು ೭೦, ತುಂಗಭದ್ರಾ ನದಿಯ ಬಲದಭಾಗದಲ್ಲಿವೆ. ಕುದಿಯ ಹರವಿ ಎಡದಂಡೆಯಲ್ಲಿರ

ಬೇಕು. ಕೋಗಳಿ ಮತ್ತು ಬಲ್ಲಕುಂದೆ ನಾಡುಗಳಿಗೆ ಹೊಂದಿಕೊಂಡು ತುಂಗಭದ್ರಾನದಿಯು ಎಡಭಾಗದಲ್ಲಿ ಕೆಳವಾಡಿ ೩೦೦ ವ್ಯಾಪ್ತಿಸಿತ್ತು. ಆದ್ದರಿಂದ ಕುದಯಹರಿವಿ ಕಳವಾಡಿ-೩೦೦ರ ಉಪವಿಭಾಗವೆಂದು ಹೇಳಬಹುದು. ಈ ನಾಡು ಎಡದೊರೆ ೨೦೦೦ದಲ್ಲಿತ್ತು. ಬಹುಶಃ ಈಗಿನ ಸಿಂಧನೂರು ತಾಲೂಕಿನ ದೇವರಗುಡಿಯ ಸುತ್ತಮುತ್ತಲ ಪ್ರದೇಶವಾಗಿರಬೇಕು. ಕ್ರಿ.ಶ.೯೬೨ ಶಾಸನದಲ್ಲಿಯೇ ಈ ನಾಡಿನ ಉಲ್ಲೇಖ ಬಂದಿದೆ. (ಸಿಂಧ. ೪೯) ಕ್ರಿ.ಶ.೧೧೦೧ರ ಶಾಸನವು ಇನ್ನೊಂದು ಉಲ್ಲೇಖದ ಶಾಸನವಾಗಿದೆ.[೧೦೬] ಈ ಮೇಲಿನ ವಿಚಾರದಿಂದ ಬಲ್ಲಕುಂದೆ ತೆಕ್ಕೆಕಲ್ಲು ಉಪ ಆಡಳಿತ ವಿಭಾಗಗಳು ತುಂಗಭದ್ರಾ ನದಿಯ ಬಲದಂಡೆಯಲ್ಲಿವೆ ಎಂಬುದಾಗಿ ತಿಳಿದುಬರುತ್ತದೆ. ಕುದಿಯ ಹರವಿ ವಿಭಾಗವು ಎಡದಂಡೆಯ ಮೇಲಿದೆ. ಬಲ್ಲಕುಂದೆ ೩೦೦ರ ಮತ್ತು ತೆಕ್ಕಕಲ್ಲು-೧೨ರ ಸಿರಯಾರ ಬಳಿ ದಾನ ನೀಡಿರುವುದನ್ನು ಸಾಲಗುಂದೆ ಶಾಸನ ಉಲ್ಲೇಖಿಸುತ್ತದೆ. ಇದರಿಂದ ತುಂಗಭದ್ರಾ ನದಿಯ ಬಲಭಾಗಕ್ಕೂ ಎಡದೊರೆ ನಾಡು ವ್ಯಾಪಿಸಿದ್ದಿರಬಹುದಾಗಿದೆ.

ಕೆಳವಾಡಿ ೩೦೦

ಕೆಳವಾಡಿ ನಾಡು ಇಂದಿನ ಮುಧೋಳ, ಬಾಗಲಕೋಟೆ ಮತ್ತು ಬಾದಾಮಿ ತಾಲೂಕಿನ ವ್ಯಾಪ್ತಿಯನ್ನು ಹೊಂದಿತ್ತೆಂದು ಡಾ.ಜೆ.ಎಂ.ನಾಗಯ್ಯನವರು ಹೇಳಿದ್ದಾರೆ. ಇಂದಿನ ಬಾದಾಮಿ ತಾಲೂಕಿನ ಕೆಳವಾಡಿ ಗ್ರಾಮವೇ ಈ ವಿಭಾಗದ ಮುಖ್ಯ ಪಟ್ಟಣವಾಗಿದೆಯೆಂದು ಡಾ.ಬಿ.ವ್ಹಿ.ಶಿರೂರ ಅವರು ಊಹಿಸಿದ್ದಾರೆ. ಆದರೆ ರಾಯಚೂರು ಮತ್ತು ಕೊಪ್ಪಳ ಜಿಲ್ಲೆಯ ಶಾಸನಗಳು ಇವರ ಮಾತನ್ನು ಸಮರ್ಥಿಸುವುದಿಲ್ಲ.[೧೦೭] ಇದಕ್ಕೆ ಕಾರಣ ಮುಕ್ಕುಂದಿ ಗ್ರಾಮದಲ್ಲಿ ಮತ್ತು ತಾಲೂಕಿನಲ್ಲಿ ದೊರೆಯುವ ಶಾಸನಗಳು ಈ ಮಾತನ್ನು ಅಲ್ಲಗೆಳೆಯುತ್ತವೆ.

೧೫೫೬ರ ಶಾಸನವು ಶ್ರೀ ಸದಾಶಿವರಾಯದೇವ ಮಹಾರಾಯರು ರತ್ನ ಸಿಂಹಾಸನಾರೂಢರಾಗಿ ಪೃತಿವೀ ರಾಜ್ಯಂ ಗೆಯುತಿರಲಾಗಿ ಅನೆಗೊಂದಿಗೆ ಸಲುವ ಕಳವಡಿ ನಾಡೊಳಗಣ ರೌವುಡಕುಂದೆಯ ಸೀಮೆಗೆ ಸಲುವ ತುಂಗಾಭದ್ರಾ ತೀರದಲು ಮುಕುಂದೆ" ಎಂದು ಉಲ್ಲೇಖಿಸುತ್ತದೆ.[೧೦೮]

ಸಿಂಧನೂರು ತಾಲೂಕಿನ ದೇವರಗುಡಿ ಶಾಸನವು 'ಕುನ್ತಳಕಾನ್ತೆಗೆ ನೋಡಕಿನ್ತಿದೇ ಕನ್ನಡಿಯನಿಪ್ಪ ಕಳವಾಡಿಯೊಳತ್ಯನ್ತಮಿತ ನಿಳಯ ಗೌರೀ ಕಾನ್ತಂ ಶ್ರೀ ಹುಳಿಯಮೇಶ್ವರಂ ನೆಲಸಿರ್ದ್ದೊನ್[೧೦೯] ಎಂದು ಹೇಳಿದೆ. ದೇವರಗುಡಿಯ ಇನ್ನೊಂದು ಶಾಸನ "ಕೆಳವಾಡಿ ೩೨೦ ರಾಜಧಾನಿ ಕಲುಕೆಱಿ[೧೧೦] ಎಂದು ಉಲ್ಲೇಖಿಸಿದೆ. ಈ ಮೇಲಿನ ಆಧಾರಗಳಿಂದ ಜೆ.ಎಂ.ನಾಗಯ್ಯ ಡಾ.ಬಿ.ವಿ.ಶಿರೂರ ಮಾತನ್ನು ಒಪ್ಪಲು ಸಾಧ್ಯವಿಲ್ಲ ದೇವರಗುಡಿ ಶಾಸನವು ಕಲಕೇರಿ ಗ್ರಾಮವನ್ನು ಉಲ್ಲೇಖಿಸುತ್ತಿದ್ದು ಈ ಗ್ರಾಮವು ಗಂಗಾವತಿ ತಾಲೂಕಿನಲ್ಲಿದೆ. ಈ ಗ್ರಾಮವೇ ಮುಖ್ಯ ಪಟ್ಟಣವಾಗಿರಬಹುದೆಂದು ಹೇಳಬಹುದು. ಕೆಲವೊಂದು ಶಾಸನಗಳಲ್ಲಿ ಕೆಳವಡಿ ನಾಡು ೩೦೦ ಎಂದು ಉಲ್ಲೇಖಿಸುತ್ತಿದ್ದ ನಾಡು. ೧೨೦೨ರ ಶಾಸನದಲ್ಲಿ [೧೧೧]

ಯಾದವ ಸಿಂಪಣನ ಸಾಮಂತ ಕದಂಬವಂಶದ ಹಾಗೂ ಕೆಳವಾಡಿ ೩೨೦ರ ರಾಜಧಾನಿ ಕಲಕೇರಿಯ ಹೆರ್ಮಾಡಿ ದೇವನ ಮಕ್ಕಳು ಕಣ್ಣರಸ ಮತ್ತು ಯಜರಸ ದೇವರಿಬ್ಬರೂ ಆಳ್ವಿಕೆ ನಡೆಸುತ್ತಿದ್ದರೆಂದು ಉಲ್ಲೇಖಿಸುತ್ತದೆ. ಇದರಿಂದ ಮೊದಲು ಕೆಳವಾಡಿ ನಾಡು ೩೦೦ ಆಗಿತ್ತು ಸಾಲಗುಂದೆಯ ನಾಡು ೨೦ ಸೇರಿ ೩೨೦ ಆಗಿರಬಹುದು. ಅಂದರೆ ಕೆಳವಾಡಿ ನಾಡು ಸಿಂಧನೂರು ಗಂಗಾವತಿ ಕೊಪ್ಪಳ ಕುಷ್ಟಗಿ ಮತ್ತು ಯಲ್ಬುರ್ಗಾ ತಾಲೂಕಿನ ವ್ಯಾಪ್ತಿಯನ್ನು ಹೊಂದಿತ್ತೆಂದು ಹೇಳಬಹುದು.

ನಿಟ್ಟರವೆ ೨೦

ಈಗಿನ ಸಿಂಧನೂರು ತಾಲೂಕಿನ ಸಾಲಗುಂದೆ ಮುಕ್ಕಂದೆ ಮತ್ತು ಜಾಲಿಹಾಳ ಶಾಸನಗಳಲ್ಲಿ ಈ ನಾಡಿನ ಉಲ್ಲೇಖ ಬಂದಿದೆ. ಕ್ರಿ.ಶ.೧೦೮೫ರಲ್ಲಿ ತ್ರೈಲೋಕ್ಯಮಲ್ಲನ ಪತ್ನಿ ತ್ರೈಳೋಕ್ಯಮಹಾದೇವಿಯು ಈ ನಿಟ್ಟರವೆ ೨೦ಕ್ಕೆ ಸೇರಿದ ಮುಕ್ಕುಂದಿಯನ್ನು ಆಳುತ್ತಿದ್ದಳು ಎಂಬುದಾಗಿ ಉಲ್ಲೇಖಿತವಾಗಿದೆ. ಆದರೆ ಈ ನಿಟ್ಟರವೆ ಎಂಬ ಗ್ರಾಮವು ಯಾವುದು ಎಂಬುದಾಗಿ ತಿಳಿದುಬರುತ್ತಿಲ್ಲ. ಅದರೆ ಶಾಸನ ಉಲ್ಲೇಖವನ್ನು ನಾವು ಗಮನಿಸಬಹುದಾಗಿದೆ. ರೌಡಕುಂದೆ ಶಾಸನವು ಶ್ರೀಮನ್ಮಹಾಮಂಡಳೇಶ್ವರನಮ್ಮಣ ದೇವಂ ನಿಟ್ಟರವೆಯಟ್ಟಿತ್ತುವಂ ಎಂದು ಉಲ್ಲೇಖಿಸಿದೆ.[೨೨] ಮುಕ್ಕುಂದಿಯ ಶಾಸನ ವರಂ, ಪಣಂ, ನಿಟ್ಟರವೆಯಳ್ಳ... ಬಳಿಯಗ್ರಹಾರಂ ಮುಕ್ಕನ್ದೆ ಎಂದು, ಇನ್ನೊಂದು ಶಾಸನ ಸುಖಸಂಕಥಾ ವಿನೋದದಿಂದ ರಾಜ್ಯಂಗೆಯ್ಯುತ್ತಮಿರೆ ನಿಟ್ಟರವೆಯಪ್ಪತ್ತಳ ಬಳಿಯಗ್ರಹಾರ ಮುಕ್ಕುಂದೆಯಂ[೨೩] ಎಂದು ಉಲ್ಲೇಖಿಸುತ್ತದೆ.

ನಿಟ್ಟರವೆ ೨೦ ಎಂಬ ಸಣ್ಣ ವಿಭಾಗವು ಕೆಳವಾಡಿ ನಾಡಿನ ೩೦೦ರಲ್ಲಿ ಒಂದು ವಿಭಾಗವಾಗಿ ಆಡಳಿತ ನಡೆಸುತ್ತಿರಬಹುದೆಂದು ಊಹಿಸಬಹುದಾಗಿದೆ. ನಿಟ್ಟರವೆ ೨೦ ಎಡದೊರೆಯ ನಾಡಿನ ಉಪವಿಭಾಗವಾಗಿತ್ತು ಎಂಬುದಕ್ಕೆ ಶಾಸನ ಉಲ್ಲೇಖವಿದೆ. ಕ್ರಿ.ಶ.೧೦೬೩ರ ಸಾಲಗುಂದೆ ಶಾಸನವು ಎಡೆದೊರೆ ಸಾಳ್ಕೆ ತೊಡವಿದನಂತೊರ್ಪಿ ತೋರ್ಪ ನಿಟ್ಟರವೆಯರ್ಪ್ಪತ್ತರಗ್ರಹಾರಮದು. ಶಾಶ್ವತ ನಿಳಯಂ ಸಾಲಗುಂದೆ ಎಂದು ಹೇಳಿದೆ. ಆದ್ದರಿಂದ ನಿಟ್ಟರವೆ ೨೦ ಎಡದೊರೆ ನಾಡಿನ ಆಡಳಿತ ವಿಭಾಗದಲ್ಲಿ ಸೇರಿಕೊಂಡಿದೆ ಎಂಬುದನ್ನು ಗುರುತಿಸಬಹುದು. ಸಾಲಗುಂದೆ ೨೦ ಕ್ರಿ.ಶ.೧೧೫೩ರ ಸಾಲ ಗುಂದೆ ಶಾಸನವು ಎಡದೊರೆಯಚ್ಛಾಸಿರ ನಾಡೊಳಗೆ ಸೋಭೆವೆತಿರ್ಪ x ಭೊದೇವ ಕುಳೋತ್ತಮರಿಂದಂ ಕೇವಳವೆ ಸಾಲಗುಂದೆ ಯಪ್ಪತ್ತರೊಳು ಸಾಲಗುಂದೆ ೨೦[೨೪] ಎಂದು ಉಲ್ಲೇಖಿಸಿದೆ. ಉಪ ಆಡಳಿತ ವಿಭಾಗ ನಿಟ್ಟರವೆಗಿಂತ ಭಿನ್ನವಾಗಿದೆ ಎಂಬುದು ಸ್ಪಷ್ಟ. ಆರಂಭದಲ್ಲಿ ನಿಟ್ಟರವೆ ನಾಡಿನ ಅಗ್ರಹಾರವಾಗಿದ್ದ ಸಾಲಗುಂದೆಯು ೧೧೩೫ರ ವೇಳೆಗೆ ಸ್ವತಂತ್ರ ವಿಭಾಗವಾಗಿ ರೂಪುಗೊಂಡಿತು ಎಂಬುದು ತಿಳಿಯಬಹುದಾಗಿದೆ.

ಒಟ್ಟಾರೆಯಾಗಿ ಕೆಳವಾಡಿ ೩೦೦ರ ಕುಡಿಯಹರವಿ ೨೦, ಪರವರಿ ೨೬, ನಿಟ್ಟರವೆ ೨೦ ಸಾಲಗುಂದೆ ೨೦, ವಿಭಾಗಗಳು ಸೇರಿ ಒಟ್ಟು ಎರಡನೂರಾ ಎಂಭತ್ತಾರು ಹಳ್ಳಿಗಳ ಲೆಕ್ಕ ಸಿಗುತ್ತದೆ. ಆದರೆ ಉಳಿದ ಹಳ್ಳಿಗಳ ಲೆಕ್ಕಸಿಗುವುದಿಲ್ಲ.

ಮೊರಟನಾಡು ೩೦೦

ಇಂದಿನ ಮಾನ್ವಿ ತಾಲೂಕಿನ ಮಲ್ಲಟಗ್ರಾಮವೆ ಈ ವಿಭಾಗದ ಮುಖ್ಯ ಪಟ್ಟಣವಾಗಿದೆ. ಆಂಧ್ರ ಪ್ರದೇಶದ ಚಿನ್ನ ತುಂಬಳ ಶಾಸನದಲ್ಲಿ ಉಲ್ಲೇಖವಾಗಿರುವ 'ಮಾಟಟ ಮುನ್ನೂರು' 'ಮಾಟಟ ನಾಡು'ಗಳು ಇಲ್ಲಿಯ ಮಲ್ಲಟವೆ ಆಗಿದೆ. ಚಿಮ್ಮಹಳ್ಳಿ ಶಾಸನವು "ಮಾಟೂಟ ಮುನೂಟ ಮನ್ನೆಯ 'ಬೆನ್ನರಸ'ನನ್ನು ಮತ್ತು "ಮಾಜಟನಾಡ ಬಳಿಯಲಾ" ಬಾಯಿನೂರು ಗ್ರಾಮವನ್ನು ಉಲ್ಲೇಖಿಸಿದೆ. ಅದು ಇಂದಿನ ಮಾನ್ವಿ ತಾಲೂಕಿನ ಬೇವಿನೂರು ಗ್ರಾಮವಾಗಿದೆ. ಕ್ರಿ.ಶ.೧೧೯೧ರಲ್ಲಿ ಈ ವಿಭಾಗದ ರಾಜಧಾನಿಯು ಸಿರಿವಾರ ಗ್ರಾಮಕ್ಕೆ ಸ್ಥಳಾಂತರವಾಯಿತು. ಆದರೆ ಈ ವಿಭಾಗ ಉಪವಿಭಾಗಗಳು ಇದುವರೆಗೂ ಲಭ್ಯವಾಗಿಲ್ಲ.[೨೬] ಶಾಸನಗಳಲ್ಲಿ ಮಾರಟನಾಡು ಇಂದಿನ ಮಾನ್ವಿ ಮತ್ತು ಸಿಂಧನೂರು ತಾಲೂಕಿನ ಕೆಲವು ಹಳ್ಳಿಗಳ ಉಲ್ಲೇಖ ಸ್ಪಷ್ಟವಾಗಿ ಗುರುತಿಸಬಹುದು. ಉದಾಹರಣೆಗೆ ಮುಕ್ಕುಂದಿ ಶಾಸನ ಕೋಲಗಟ್ಟೆಯಳೆದು ಬಿಟ್ಟ ನೆಲ. ಕಮ್ಮ ೫೨, ಮತ್ತರ ಮಾರಟನಾಡ, ಪೊಲದಿಂ ತೆಂಕ ಕಾಸಿಗನೂರ ಎಂದು ಹೇಳಿದೆ.[೨೭] ಆದ್ದರಿಂದ ಮುಕ್ಕುಂದಿಯು ಮೊರಟನಾಡಿನ ಆಡಳಿತ ವ್ಯಾಪ್ತಿಗೆ ಸೇರಿರಬಹುದು ಎಂಬುದನ್ನು ಊಹಿಸಬಹುದಾಗಿದೆ.

ಗದಗು ಪರಗಣೆ

ಕ್ರಿ.ಶ.೧೮ನೇ ಶತಮಾನದಲ್ಲಿ ಗದಗು ಪರಗಣೆಯ ಉಲ್ಲೇಖ ಬಂದಿದೆ. ಇಲ್ಲಿ ಸರದೇಸಾಯಿಯಾಗಿ ಅಂಣಪೈಯ ಎಂಬುವವನಿದ್ದ. ಇದು ಮುಕ್ಕಂದಿಯ ಶಾಸನದಲ್ಲಿ[೨೮] ಪರಗಣೆ ಗದುಗು ರೌವುಡ ಕುಂದಿ ಮಿಯದೇಶ ಸಂಮಂದ ಎಂದು ಉಲ್ಲೇಖವಾಗಿದೆ. ಆದರೆ ಯಾವ ಆಡಳಿತ ವಿಭಾಗವನ್ನು ಸೇರುತ್ತದೆ ಎಂಬುದು ಅಸ್ಪಷ್ಟವಾಗಿದೆ. ಸುತ್ತಮುತ್ತ ದೊರೆಯುವ ಶಾಸನಗಳಲ್ಲಿ ಈ ವಿಭಾಗದ ಉಲ್ಲೇಖಿಸಿಲ್ಲ. ಒಟ್ಟಿನಲ್ಲಿ ಎಡದೊರೆ ೨೦೦೦ ನಾಡಿನಲ್ಲಿ ಇದುವರೆಗೂ ಕರಡಿಕಲ್ಲು ೩೦೦, ಕೆಳವಾಡಿ ೩೦೦ ಮೊರಟ ೩೦೦, ಅಯ್ಯಣವಾಡಿ ೩೦೦, ಮಾಸಳಿಕಲ್ಲು ೨೩೦೦ ಮತ್ತು ಸಗರ ೩೦೦ ಸೇರಿ ಒಟ್ಟು ೧೮೦೦ ಹಳ್ಳಿಗಳ ಲೆಕ್ಕದೊರೆಯುತ್ತದೆ. ಜೊತೆಗೆ ಉಪವಿಭಾಗಗಳ ಆಡಳಿತ ಸೇರಿದರೆ ಎಡದೊರೆ ೨೦೦೦ ಆಗಬಹುದು.

ಒಟ್ಟಾರೆಯಾಗಿ ಆಡಳಿತದ ದೃಷ್ಟಿಯಿಂದ ವಿಭಾಗಗಳನ್ನು ಮಾಡಿಕೊಂಡು ಅಲ್ಲಿ ವಿವಿಧ ಅಧಿಕಾರಿಗಳನ್ನು ನೇಮಿಸಿ ಆಡಳಿತವನ್ನು ಸುವ್ಯವಸ್ಥೆಯಿಂದ ನಡೆಸುತ್ತಿದ್ದರು ಎಂಬುದು ಸ್ಪಷ್ಟವಾಗುತ್ತದೆ.

ಅಡಿಟಿಪ್ಪಣಿಗಳು

೧. ಕೃಷ್ಣಕುಮಾರ ಸಿ.ಪಿ., ೧೯೯೩, ಶಾಸನಶಾಸ್ತ್ರ ಪ್ರವೇಶ, ಪು.೩೬

೨. ಭಗವತಿ ಎಸ್.ಎಸ್., ೨೦೦೪, ಕನ್ನಡ ಶಾಸನಗಳ ಅಧ್ಯಯನ, ಪು.೧

೩. ರವೀಂದ್ರನಾಥ್ ಕೆ., ಕನ್ನಡ ದಾಖಲು ಸಾಹಿತ್ಯ, ಪು.೩೧

೪. ಕೃಷ್ಣಕುಮಾರ್ ಸಿ.ಪಿ., ೧೯೯೩, ಪೂರ್ವೋಕ್ತ, ಪು.೫೬

೫. ನರಸಿಂಹಮೂರ್ತಿ ಎ.ವಿ., ೧೯೭೩, ಪು.೧೮

೬. Kane P.V., 1930, **History of Dharamashastra II**, P.869

೭. ಚಿದಾನಂದಮೂರ್ತಿ, ೧೯೭೯, **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ**, ಪು.೨೫

೮. ತಿಪ್ಪೇರುದ್ರಸ್ವಾಮಿ ಎಚ್., **ಕರ್ನಾಟಕ ಸಂಸ್ಕೃತಿ ಸಮೀಕ್ಷೆ**, ಪು.೨೪೯

೯. ಶೇಷಶಾಸ್ತ್ರಿ, ೧೯೮೨, **ಕನ್ನಡ ಶಾಸನಗಳ ಪರಿಚಯ**, ಪು.೬

೧೦. ದೇವರಕೊಂಡಾರೆಡ್ಡಿ, ೨೦೦೩, **ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೭**, ಪು.೩೫೫

೧೧. ಅದೇ, ಪು.೩೫೬

೧೨. ಅದೇ, ಪು.೩೫೮

೧೩. ಅದೇ, ಪು.೩೬೨

೧೪. ಅದೇ, ಪು.೩೬೪

೧೫. ಅದೇ, ಪು.೩೭೨

೧೬. ಅದೇ, ಪು.೩೭೬

೧೭. ಅದೇ, ಪು.೩೭೦

೧೮. ಅದೇ, ಪು.೩೭೩

೧೯. ಅದೇ, ಪು.೩೬೬

೨೦. ಪಂಚಮುಖಿ ಆರ್.ಎಸ್., ೧೯೯೭, **ಕರ್ನಾಟಕ ಇತಿಹಾಸ ಪ್ರಥಮ ಸಂಪುಟ**, ಪು.೭೧ ೭೨

೨೧. ಶೇಷಶಾಸ್ತ್ರಿ ಆರ್.ಎಸ್., ೧೯೮೨, **ಕರ್ನಾಟಕದ ವೀರಗಲ್ಲುಗಳು**, ಪು.೧೧

೨೨. ಅದೇ, ಪು.೧೯ ೨೦

೨೩. ಅದೇ, ಪು.೨೧

೨೪. ಚಿದಾನಂದಮೂರ್ತಿ ಎಂ., ೧೯೮೪, **ವೀರಗಲ್ಲು ಮತ್ತು ಮಾಸ್ತಿಗಲ್ಲು**, ಪು.೫

೨೫. ಭಾರತಿ ಬಸವರಾಜ, ೨೦೦೫, ರಾಯಚೂರು ಜಿಲ್ಲೆಯ ಶಾಸನಗಳ ಸಮಗ್ರ ಅಧ್ಯಯನ, ಛಾಯಾಚಿತ್ರಭಾಗ

೨೬. ಹಿರೇಮಠ ಬಿ.ಆರ್., ೨೦೦೦, **ಶಾಸನಗಳಲ್ಲಿ ಕರ್ನಾಟಕದ ವರ್ತಕರು**, ಪು.೬

೨೭. ಅದೇ, ಪು.೭

೨೮. ಚನ್ನಬಸವಯ್ಯ ಹಿರೇಮಠ, ೧೯೯೫, **ಕುರುಗೋಡದ ಸಿಂಧರು ಒಂದು ಅಧ್ಯಯನ**, ಪು.೨೧೧

೨೯. ಕೊಪ್ಪ ಎಸ್.ಕೆ., **ತರ್ದವಾಡಿ ಒಂದು ಅಧ್ಯಯನ**, ಪು.೨೦೨

೩೦. ದೇವರಕೊಂಡಾರೆಡ್ಡಿ, ೨೦೦೩, **ಪೂರ್ವೋಕ್ತ**, ಪು.೨೫೩

೩೧. ಚನ್ನಬಸವಯ್ಯ ಹಿರೇಮಠ, ೧೯೯೫, ಪೂರ್ವೋಕ್ತ, ಪು.೨೪

೩೨. ಸ್ವಾಮಿ ಬಿ.ಜಿ.ಎಲ್., ೧೯೭೫, ಶಾಸನಗಳಲ್ಲಿ ಗಿಡ ಮರಗಳು, ಪು.೧

೩೩. ಕೆಳದಿಯ ವೆಂಕಟೇಶ ಜೋಯಿಸ ೧೯೯೬, ಕೆಳದಿ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು.೧೭೪

೩೪. ಚಿದಾನಂದಮೂರ್ತಿ ಎಂ., ೨೦೦೨, ಪೂರ್ವೋಕ್ತ, ಪು.೪೦೪ ೪೦೫

೩೫. ದೇವರಕೊಂಡಾರೆಡ್ಡಿ, ೨೦೦೩, ಪೂರ್ವೋಕ್ತ, ಪು.೩೭೬

೩೬. ಅದೇ, ಪು.೩೪೪

೩೭. ಅದೇ, ಪು.

೩೮. ಅದೇ, ಪು.೩೮೮

೩೯. ಅದೇ, ಪು.೩೯೪

೪೦. ಅದೇ, ಪು.೩೯೫

೪೧. ಅದೇ, ಪು.೩೮೨

೪೨. ಅದೇ, ಪು.೩೭೭

೪೩. ಅದೇ, ಪು.೩೭೫

೪೪. ಅದೇ, ಪು.೩೬೧

೪೫. ಚಿದಾನಂದಮೂರ್ತಿ ಎಂ., ೨೦೦೨, ಪೂರ್ವೋಕ್ತ, ಪು.೪೧೩

೪೬. ಹಿರೇಮಠ ಬಿ.ಆರ್., ೨೦೦೦, ಶಾಸನಗಳಲ್ಲಿ ವರ್ತಕರು, ಪು.೧೦೩

೪೭. ದೇವರಕೊಂಡಾರೆಡ್ಡಿ, ರಾಯಚೂರು ಜಿಲ್ಲೆಯ ಶಾಸನ ಸಂಪುಟ, ಪು.೩೪೯

೪೮. ಅದೇ, ಪು.೩೫೮

೪೯. ಅದೇ, ಪು.೩೭೯

೫೦. ಅಗೇ, ಪು.೩೮೮

೫೧. ಅದೇ, ಪು.೩೭೭

೫೨. ಅದೇ, ಪು.೩೬೨

೫೩. ಅದೇ, ಪು.೩೭೦

೫೩. ಅದೇ, ಪು.೪೧೦

೫೪. ಅದೇ, ಪು.೪೧೦

೫೫. ಚಿದಾನಂದಮೂರ್ತಿ ಎಂ., ೨೦೦೨, ಪೂರ್ವೋಕ್ತ, ಪು.೪೩೩

೫೬. ಅದೇ, ಪು.೪೩೫

೫೭. ದೇವರಕೊಂಡಾರೆಡ್ಡಿ, ರಾಯಚೂರು ಜಿಲ್ಲೆಯ ಶಾಸನ ಸಂಪುಟ, ಪು.೩೪೯

೫೮. ಅದೇ, ಪು.೪೨೪

೫೯. ಅದೇ, ಪು.೩೭೬

೬೦. ಅದೇ, ಪು.೩೭೨

೬೧. ಚಿದಾನಂದಮೂರ್ತಿ, ೨೦೦೨, ಪೂರ್ವೋಕ್ತ, ಪು.೪೩೫

೬೨. ದೇವರಕೊಂಡಾರೆಡ್ಡಿ, ರಾಯಚೂರು ಜಿಲ್ಲೆಯ ಶಾಸನ ಸಂಪುಟ, ಪು.೪

೬೩. ಅದೇ, ಪು.೩೪೪

೬೪. ಅದೇ, ಪು.೩೪೬

೬೫. ಅದೇ, ಪು.೩೪೮

೬೬. ಅದೇ, ಪು.೩೫೦

೬೭. ಅದೇ, ಪು.೩೫೮

೬೮. ಭಾರತಿ ಬಸವರಾಜ, ರಾಯಚೂರು ಜಿಲ್ಲೆಯ ಶಾಸನಗಳ ಸಮಗ್ರ ಅಧ್ಯಯನ, ಪು.೧೧೪

೬೯. ಅದೇ, ಪು.೩೪೬

೭೦. ಅದೇ, ಪು.೩೭೫

೭೧. ಚಿಂದಾನಂದಮೂರ್ತಿ, ೨೦೦೨, ಪೂರ್ವೋಕ್ತ, ಪು.

೭೨. ಚನ್ನಬಸವಯ್ಯ ಹಿರೇಮಠ, ೧೯೯೫, ಪೂರ್ವೋಕ್ತ, ಪು.೩೫೬

೭೩. ಚನ್ನಕ್ಕ ಎಲಿಗಾರ ೨೦೦೦, ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ, ಪು.೪

೭೪. ನಾಗಯ್ಯ ಜೆ.ಎಂ., ೧೯೯೨, ಆರನೇ ವಿಕ್ರಮಾದಿತ್ಯನ ಶಾಸನಗಳ ಒಂದು ಅಧ್ಯಯನ, ಪು.೨೮

೭೫. ದೇವರಕೊಂಡಾರೆಡ್ಡಿ, ೨೦೦೩, ಪೂರ್ವೋಕ್ತ, ಪು.

೭೬. ಅದೇ, ಪು.೩೦೪

೭೭. ಅದೇ, ಮಾನ್ವಿ ೧೬, ಪು.೨೩೯

೭೮. ಅದೇ, ಪು.೩೧೨

೭೯. ಅದೇ, ಪು.೨೦

೮೦. ನಾಗಯ್ಯ ಜೆ.ಎಂ., ೧೯೯೨, ಪೂರ್ವೋಕ್ತ, ಪು.೨೯

೮೧. ಅದೇ, ಪು.೧೫೨

೮೨. ಅದೇ, ಪು.೧೫೨

೮೩. ದೇವರಕೊಂಡಾರೆಡ್ಡಿ, ೨೦೦೩, ಪೂರ್ವೋಕ್ತ, ಪು.೩೪೪

೮೪. ಅದೇ, ಪು.೩೫೪

೮೫. ಅದೇ, ಪು.೩೫೮

೮೬. ಅದೇ, ಪು.೩೫೮

೮೭. ನಾಗಯ್ಯ ಜೆ.ಎಂ, ೧೯೯೨, ಪೂರ್ವೋಕ್ತ, ಪು.೨೩೦

೮೮. ದೇವರಕೊಂಡಾರೆಡ್ಡಿ, ೨೦೦೩ ಪೂರ್ವೋಕ್ತ, ಪು.೩೪೪

೮೯. ಅದೇ, ಪು.೩೫೩

೯೦. ನಾಗಯ್ಯ ಜೆ.ಎಂ., ೨೦೦೨, ಪೂರ್ವೋಕ್ತ, ಪು.೧೪೮

೯೧. ಚನ್ನಬಸವ ಹಿರೇಮಠ, ೧೯೯೫, ಪೂರ್ವೋಕ್ತ, ಪು.೧೪

೯೨. ಅದೇ, ಪು.೧೪೨

೯೩. ನಾಗಯ್ಯ ಜೆ.ಎಂ., ೨೦೦೨, ಪೂರ್ವೋಕ್ತ, ಪು.೧೭೫

೯೪. ದೇವರಕೊಂಡಾರೆಡ್ಡಿ, ೨೦೦೩, ಪೂರ್ವೋಕ್ತ, ಪು.೩೬೪

೯೫. ನಾಗಯ್ಯ ಜೆ.ಎಂ., ೨೦೦೨, ಪೂರ್ವೋಕ್ತ, ಪು.೩೫೦

೯೬. ದೇವರಕೊಂಡಾರೆಡ್ಡಿ, ೨೦೦೩, ಪೂರ್ವೋಕ್ತ, ಪು.೩೫೬

೯೭. ಅದೇ, ಪು.೩೪೪

೯೮. ಭಾರತಿ ಬಸವರಾಜ, ರಾಯಚೂರು ಜಿಲ್ಲೆಯ ಶಾಸನಗಳ ಸಮಗ್ರ ಅಧ್ಯಯನ, ಪು.೮೭

೯೯. ನಾಗಯ್ಯ ಜೆ.ಎಂ., ೨೦೦೨, ಪೂರ್ವೋಕ್ತ, ಪು.೨೩

೧೦೦. ಚನ್ನಬಸವ ಹಿರೇಮಠ, ೧೯೯೫, ಪೂರ್ವೋಕ್ತ, ಪು.೯೦ ೯೧

೧೦೧. ದೇವರಕೊಂಡಾರೆಡ್ಡಿ, ೨೦೦೩, ಪೂರ್ವೋಕ್ತ, ಪು.೩೦೬

೧೦೨. ಅದೇ, ಪು.೩೪೪

೧೦೩. ಅದೇ, ಪು.೩೪೬

೧೦೪. ಅದೇ, ಪು.೩೪೯

೧೦೫. ಅದೇ, ಪು.೩೫೮

೧೦೬. ಅದೇ, ಪು.೩೭೨

೧೦೭. ಚನ್ನಬಸವ ಹಿರೇಮಠ, ೧೯೯೫ ಪೂರ್ವೋಕ್ತ, ಪು.೧

೧೦೮. ಅದೇ, ಪು.೧

೧೦೯. ಅದೇ, ಪು.೧

೧೧೦. ಅದೇ, ಪು.೧

೧೧೧. ಅದೇ, ಪು.೧೮

೧೧೨. ಅದೇ, ಪು.೨

೧೧೩. ಅದೇ, ಪು.೨

೧೧೪. ಅದೇ, ಪು.೫

೧೧೫. ಅದೇ, ಪು.೫

೧೧೬. ಅದೇ, ಪು.೫

೧೧೭. ಅದೇ, ಪು.೫

೧೧೮. ದೇವರಕೊಂಡಾರೆಡ್ಡಿ, ೨೦೦೩, ಪೂರ್ವೋಕ್ತ, ಪು.೩೭೦

೧೧೯. ದೇವರಕೊಂಡಾರೆಡ್ಡಿ, ೨೦೦೩, ಪೂರ್ವೋಕ್ತ, ಪು.೩೭೧

೧೨೦. ಅದೇ, ಪು.೩೯೦

೧೨೧. ಅದೇ, ಪು.೩೯೩

೧೨೨. ಅದೇ, ಪು.೩೯೩

೧೨೩. ಅದೇ, ಪು.೩೪೫

೧೨೪. ಅದೇ, ಪು.೩೭೨

೧೨೫. ಅದೇ, ಪು.೩೭೧

೧೨೬. ಅದೇ, ಪು.೩೫೧

೧೨೭. ಅದೇ, ಪು.೩೪೭

೧೨೮. ಅದೇ, ಪು.೩೬೦

ಅಧ್ಯಾಯ ೪

ಶಾಸನ ಸಾಹಿತ್ಯ

೪

ಶಾಸನ ಸಾಹಿತ್ಯ

ಐತಿಹಾಸಿಕ ಮತ್ತು ಸಾಂಸ್ಕೃತಿಕ ಚರಿತ್ರೆಯ ಮೂಲ ಆಕರಗಳಾದ ಶಾಸನಗಳು ಸಾಹಿತ್ಯವಾಗಬೇಕೆಂಬ ಉದ್ದೇಶದಿಂದ ರಚನೆಗೊಂಡವುಗಳು ಅಲ್ಲ, ರಾಜಕೀಯ, ಸಾಮಾಜಿಕ, ಧಾರ್ಮಿಕ ಮತ್ತು ಆರ್ಥಿಕ ಕ್ಷೇತ್ರಗಳಿಗೆ ಲಕ್ಷ್ಯವಹಿಸಿದಂತೆ ಸಾಹಿತ್ಯ ಕ್ಷೇತ್ರದ ಕಡೆಗೆ ಅಷ್ಟೊಂದು ಗಮನ ಹರಿಸಿದಂತೆ ಕಂಡುಬರುವುದಿಲ್ಲ. ಆದಾಗ್ಯೂ ಎಷ್ಟೋ ವೇಳೆ ಶಾಸನಗಳನ್ನು ಬರೆಸಿದ ಅಥವಾ ಬರೆದ ವ್ಯಕ್ತಿಯ ಮನೋಧರ್ಮಕ್ಕೆ ಅನುಗುಣವಾಗಿ ಸಾಮರ್ಥ್ಯದಿಂದಾಗಿ ಶಾಸನಗಳಲ್ಲಿ ಸಾಹಿತ್ಯದ ಸೊಗಸು ಕಾವ್ಯಗುಣ ಕಾಣಿಸಿಕೊಳ್ಳುತ್ತದೆ.

ಮುಕ್ಕುಂದಿಯ ಅಧ್ಯಯನ ವ್ಯಾಪ್ತಿಗೆ ಬರುವ ಅರಸು ಮನೆತನಗಳ ಅವಧಿಯಲ್ಲಿ ದೊರೆತ ಶಾಸನಗಳಲ್ಲಿ ಸಾಹಿತ್ಯ ಕ್ಷೇತ್ರದ ಕಡೆಗೆ ಗಮನ ಹರಿಸಿದರೆ ಬಹಳಷ್ಟು ಶಾಸನಗಳಲ್ಲಿ ಸಾಹಿತ್ಯ ಕಾಣಸಿಗುವುದಿಲ್ಲ. ನೇರ ನಿರೂಪಣೆ ಇದೆ. ಆದರೆ ಅವುಗಳಲ್ಲಿ ಕೆಲವೊಂದು ಶಾಸನಗಳು ಸಾಹಿತ್ಯದ ಅಂಶಗಳನ್ನು ಒಳಗೊಂಡಿದ್ದು, ಅವನ್ನು ರಚಿಸಿದ ಕವಿಗಳ ಹೆಸರುಗಳನ್ನು ಉಲ್ಲೇಖಿಸಿವೆ.

ಶಾಸನಗಳು ಛಂದೋಬದ್ಧವಾದ ಬರವಣಿಗೆಗಳ (ಚಂಪೂ ಶೈಲಿ) ವ್ಯಾಪ್ತಿಗೆ ಒಳಪಡುವುದರಿಂದ ಶಾಸನಗಳುದ್ದಕ್ಕೂ ಅಲ್ಲಲ್ಲಿ ಕಾವ್ಯಗುಣ ವ್ಯಕ್ತವಾಗುವುದು ಕಂಡುಬರುತ್ತದೆ. ಇದಕ್ಕೆ ಕಾರಣವೆಂದರೇ, ಶಾಸನಗಳನ್ನು ರಚಿಸಿದ ಕರ್ತೃವು, ಚೊಕ್ಕವಾಗಿ ಶಾಸನವನ್ನು ಬರೆದನೆಂಬ ಹೆಸರು ಪಡೆಯಬೇಕೆಂಬ ಹಂಬಲ ತನ್ನ ಮತ್ತು ತನ್ನ ವಂಶದ ಹಿರಿಯರ ಹೊಗಳಿಕೆಯೂ ಅದರಲ್ಲಿ ಮೂಡಿಬರಬೇಕೆಂಬ ಅಪೇಕ್ಷೆ ದಾನವಿತ್ತವನ ಬಗೆಗೆ ಜನರಿಗಿರುವ ಗೌರವಗಳ ಒತ್ತಡದಿಂದಾಗಿ ರಾಜಕೀಯ ಸಾಂಸ್ಕೃತಿಕ ದಾಖಲೆಗಳಾದ ಶಾಸನಗಳನ್ನು ಕವಿ ಹೃದಯಕ್ಕೆ ಕೆಲವು ಶಾಸನಕಾರರು ತಮ್ಮ ಪ್ರತಿಭಾ ಗುಣದಿಂದ ಸಾಹಿತ್ಯವನ್ನಾಗಿಸಲು ಪ್ರಯತ್ನಪಟ್ಟಂತೆ ಕಂಡುಬರುತ್ತದೆ. ಅವರ ಈ ವಿಶಿಷ್ಠ ಶಕ್ತಿಯಿಂದ ಶಾಸನಗಳಲ್ಲಿ ಕವಿಯ ಅಭಿವ್ಯಕ್ತಿಗೆ ಒದಗುವ ಛಂದೋಬದ್ಧತೆಯ ಸೊಗಸಿನಿಂದ ಕೂಡಿದ ಕಾವ್ಯಗುಣವನ್ನು ಗುರುತಿಸಬಹುದು.

ಶಾಸನಗಳಿಗೂ ಕಾವ್ಯಗಳಿಗೂ ಇರುವ ಮುಖ್ಯ ವ್ಯತ್ಯಾಸ ಎಂದರೆ, ಶಾಸನ ಸಾಂದರ್ಭಿಕವಾಗಿದ್ದು, ಅಂದರೆ ದಾನ ದತ್ತಿಗೆ ಸಂಬಂಧಿಸಿದ, ದೇವಾಲಯಗಳ ನಿರ್ಮಾಣ ಲೋಕೋಪಯೋಗಿ ಕಾರ್ಯ ನಿಸದಿಗೆ, ವೀರಗಲ್ಲು ಮಾಸ್ತಿಕಲ್ಲು ಸ್ಥಾಪಿಸುವುದರ ಇತ್ಯಾದಿ ಕ್ರಿಯೆಯ ಸಂದರ್ಭಕ್ಕೆ ಸಂಬಂಧಪಟ್ಟದ್ದಾಗಿದೆ. ಆದ್ದರಿಂದ ಅವೆಲ್ಲ ನಿರ್ದೇಶಿತ ರಚನೆಗೆ ಸಂಬಂಧ ಪಟ್ಟವುಗಳು ಈ ಶಾಸನಗಳ ನಿರ್ಮಾಣ ಮೂರು ಹಂತಗಳಲ್ಲಿ ನಡೆದಿರುವುದನ್ನು ವಿದ್ವಾಂಸರು ಗುರುತಿಸಿದ್ದಾರೆ.

೧. ಶಾಸನ ಹಾಕಿಸಬೇಕೆಂಬ ಪ್ರಭುವರ್ಗ

೨. ಪ್ರಭುವರ್ಗದ ನಿರ್ದೇಶನದ ಮೇರೆಗೆ ಆ ಸಂದರ್ಭದ ವಸ್ತುವಿಗೆ ತಕ್ಕ ಪದಸಂಯೋಜನೆಯ ಮೂಲಕ ಶಾಸನ ಪಠ್ಯ ಸಿದ್ಧಪಡಿಸಿದ ವ್ಯಕ್ತಿ.

೩. ಶಾಸನ ಪಾಠವನ್ನು ಕಲ್ಲಿನಲ್ಲಿ ಕಂಡರಿಸಿರುವ ವ್ಯಕ್ತಿ.

ಈ ಕ್ರಿಯೆಯಲ್ಲಿ ತನಗೆ ತಾನೇ ಇಚ್ಚಿಸಿದ ವಸ್ತುವೊಂದನ್ನು ಆಯ್ಕೆ ಮಾಡಿಕೊಂಡು ಏಕಾಂತದಲ್ಲಿ ಕುಳಿತು ಕೃತಿ ರಚನೆ ಮಾಡುವ ಕವಿಯ ಕಾವ್ಯದಲ್ಲಿರುವ 'ಕಾವ್ಯಗುಣ'ವನ್ನು ಹುಡುಕಲಿಕ್ಕೆ ಸಾಧ್ಯವಿಲ್ಲ. ಕವಿಯಾದವನು ತನ್ನನ್ನು ನಿಯಂತ್ರಿಸುವ ಪ್ರಭುಶಕ್ತಿಗೆ ಎಷ್ಟೇ ನಿಷ್ಠನಾಗಿದ್ದರೂ, ಬರೆಯುವ ಹೊತ್ತಿನಲ್ಲಿ ಆತ ಬದ್ಧತೆಯನ್ನು ಮೀರಿ ತಾನೂ ಆರಿಸಿಕೊಂಡ ವಸ್ತು ಹಾಗೂ ರಸಕ್ಕೆ ಅಧೀನವಾಗುವುದರಿಂದಲೇ ಆತ ತನ್ನ ಬರವಣಿಗೆಯಲ್ಲಿ ಕಾವ್ಯತ್ವವನ್ನು ಸಾಧಿಸಲು ಸಾಧ್ಯವಾಗುತ್ತದೆ. ಆದರೆ ಶಾಸನ ರಚನೆ ಕ್ರಿಯೆ ಹಾಗಲ್ಲ. ಸಾಂದರ್ಭಿಕ ವಾದದ್ದು. ನಿರ್ದೇಶಿತವಾದದ್ದು. ತನ್ನ ಅಭಿವ್ಯಕ್ತಿಗೆ ಆಶ್ರಯಿಸಬೇಕಾದ ಮಾಧ್ಯಮದ (ಶಿಲೆ-ಲೋಹ) ಪರಿಮಿತಿಯಿಂದ ನಿರ್ಬಂಧಿತವಾದದ್ದು[೨] ಮುಖ್ಯವಾಗಿ ಶಾಸನ ರಚಿಸುವ ವ್ಯಕ್ತಿಯು ಸೀಮಿತ ಚೌಕಟ್ಟಿನೊಳಗೆ ಕೆಲಸ ಮಾಡಬೇಕಾಗುತ್ತದೆ. ಶಾಸನಕಾರರಿಗೆ ತಾನು ಹೇಳಲಿರುವ ವಿಷಯ ಮುಖ್ಯವೇ ಹೊರತು, ಸಾಹಿತ್ಯ ಅಷ್ಟು ಪ್ರಮುಖವಾದದ್ದು ಅಲ್ಲ. ನಡೆದ ಘಟನೆಯನ್ನು ಯಥಾವತ್ತಾಗಿ ವಿವೇಚಿಸಬೇಕು(ನಿರೂಪಿಸಬೇಕು).

ಶಾಸನಕಾರನಿಗೆ ತನ್ನ ಇಚ್ಛೆಯಂತೆ ಕಥೆ ಹೆಣೆಯಲು, ವರ್ಣನೆಯನ್ನು ತುಂಬಲು ಅವಕಾಶ ಇರುವುದಿಲ್ಲ. ಈ ಹಿನ್ನೆಲೆಯಲ್ಲಿ ಶಾಸನಗಳ ಮೌಲ್ಯವನ್ನು ನಿರ್ಧರಿಸಬೇಕಾಗುತ್ತದೆ. ಈ ಮಿತಿಗಳ ನಡುವೆಯೂ ಶಾಸನಗಳಲ್ಲಿ ಸಾಹಿತ್ಯಾಂಶ ಮೂಡಿ ಬಂದಿದೆ. ಶಾಸನಗಳನ್ನು ರಚಿಸಿದವರಲ್ಲಿ ಎಷ್ಟೋ ಮಂದಿ ಕವಿಗುಣವುಳ್ಳವರೂ ಹಾಗೂ ಕವಿಗಳೂ ಆಗಿದ್ದರಿಂದ ತಾವೂ ಹೇಳುವ ವಿಷಯವನ್ನು ತಮಗೆ ಹಿನ್ನಲೆಯಾದ ಕಾವ್ಯ ಪರಂಪರೆಯ ಭಾಷಾ ಸಾಮಗ್ರಿಯಿಂದ ಕಟ್ಟಿಕೊಡುವ ಕಲೆಗಾರಿಕೆಯನ್ನು ಅಲ್ಲಲ್ಲಿ ಪ್ರಕಟಿಸಿದ್ದಾರೆ.

ಯಾವುದೇ ಒಂದು ವಿಷಯವನ್ನು ಕುರಿತು ಭಾಷೆಯ ಮೂಲಕ ಕೇಳುವಾಗ ಹೇಳುವ ವಿಧಾನ ಕೇವಲ ವಿಷಯ ನಿರೂಪಣೆಯಷ್ಟೇ ಆಗದೆ, ಭಾವನೆಯ ವರ್ಣನಾಕ್ರಮ ಆದಾಗ ಕವಿತ್ವದ ಅಂಶ ಸೇರ್ಪಡೆಯಾದಂತೆ ಶಾಸನದಲ್ಲಿ ವಿವರವು ಆಸ್ವಾದ ಹಾಗೂ ಪರಿಭಾವನೆಯ ವಿಷಯವಾದಾಗ ಕಾವ್ಯತ್ವದ ನೆಲೆಯನ್ನು ಪ್ರವೇಶಿಸುತ್ತದೆ. ''ಕನ್ನಡ ಕಾವ್ಯಗಳು ಮೂಲತಃ ಸಾಹಿತ್ಯ ಕ್ಷೇತ್ರಕ್ಕೆ ಸೇರಿದವುಗಳಾದರೂ, ಅನುಷಂಗಿಕವಾಗಿ ಕಾವ್ಯ ಅಥವಾ ಸಾಹಿತ್ಯಕ್ಕೂ ಕೊಂಚ ಮಟ್ಟಿಗೆ ಸಲ್ಲುವ ಲಕ್ಷಣಗಳನ್ನು ಒಳಗೊಂಡಿದೆ.[೩]

ಹೀಗಾಗಿ ಶಾಸನಗಳಲ್ಲಿ ಹಲವೆಡೆ ಕಾವ್ಯಗುಣ ಪ್ರಾಸಂಗಿಕವಾಗಿ ಕಾಣಿಸಿಕೊಂಡಿದ್ದು, ಕಡೆಗಣಿಸು ವಂತಹದಲ್ಲವಾಗಿದೆ. ಉತ್ತಮ ಕಾವ್ಯದ ಒಂದು ಭಾಗವನ್ನು ಓದಿದಂತೆ ಶಾಸನಗಳನ್ನು ಓದುವಾಗಲೂ

ಆಗುತ್ತದೆ. ಹೀಗಾಗಿ ಕನ್ನಡ ಸಾಹಿತ್ಯ ಮತ್ತು ಶಾಸನಗಳ ಅಧ್ಯಯನವನ್ನು ಅನ್ಯೋನ್ಯ ಪೂರಕವಾಗಿಯೂ ಪ್ರತ್ಯೇಕವಾಗಿಯೂ ಮಾಡುವುದರಿಂದ ಆಗುವ ಪ್ರಯೋಜನ ಬಹು ವಿಧವಾಗಿದೆ.

ಶಾಸನಗಳಲ್ಲಿ ಒದಗುವ ಮಾಹಿತಿಯು ಕೆಲವೆಡೆ ಕನ್ನಡ ಸಾಹಿತ್ಯ ಕವಿಗಳ ವಂಶಾವಳಿ ಜನ್ಮ ಸ್ಥಳಗಳ ವಿವರದ ಮೇಲೆ ಬೆಳಕು ಚೆಲ್ಲಲು ಸಹಾಯಕವಾಗಿದೆ. ಅಲ್ಲದೆ, ಇವರ ಜೀವಿತ ಕಾಲವನ್ನು ಗುರುತಿಸಬಹುದಾಗಿದೆ. ಕವಿಗಳ ಅನುಪಲಬ್ಧ ಕೃತಿಗಳನ್ನು ತಿಳಿಯಲು ಸಹಾಯಕವಾಗಿದೆ. ಹಾಗೂ ಶಾಸನಗಳಿಂದ ಸಾಹಿತ್ಯ ಕೃತಿಗಳ ಅಧ್ಯಯನಕ್ಕೆ ಹಿನ್ನಲೆಯಾದ ಯುಗಧರ್ಮದ ಸ್ವರೂಪವನ್ನು ತಿಳಿಯಬಹುದಾಗಿದೆ.

ಆರಂಭ ಕಾಲದಿಂದಲೂ ಶಾಸನಗಳು ಪ್ರೌಢವಾದ ಚಂಪೂ ಶೈಲಿಯನ್ನೇ ಮಾದರಿಯಾಗಿಟ್ಟುಕೊಂಡಿವೆ. ಈ ವೇಳೆಗಾಗಲೇ ಚಂಪೂಮಾರ್ಗ ಒಂದು ನಿಶ್ಚಿತ ರೂಪ ಪಡೆದಿದ್ದರಿಂದ ಅದರ ನಿಚ್ಚಳ ಪ್ರಭಾವ ಶಾಸನ ಪದ್ಯಗಳ ಮೇಲಾಗಿರುವುದನ್ನು ತಿಳಿಯಬಹುದಾಗಿದೆ. ಹನ್ನೆರಡನೆ ಶತಮಾನದ ತರುವಾಯ ಕನ್ನಡ ಸಾಹಿತ್ಯದಲ್ಲಿ ದೇಶಿ ಸಾಹಿತ್ಯ ಪ್ರಕಾರಗಳಾದ ವಚನ, ರಗಳೆ, ಷಟ್ಪದಿ, ಸಾಂಗತ್ಯ ಇತ್ಯಾದಿ ಪ್ರಕಾರಗಳು ರೂಪಗೊಂಡು ಜನಪ್ರಿಯತೆಯನ್ನು ಗಳಿಸಿದ್ದವಾದರೂ(ಪಡೆದವು) ಎಂದಿನಂತೆ ಚಂಪೂ ಶೈಲಿಯನ್ನೇ ಬಹುಮಟ್ಟಿಗೆ ಅನುಸರಿಸಿದವು.

ಹತ್ತನೇ ಶತಮಾನದ ಕವಿಗಳ ಕಾವ್ಯಗಳ ಪ್ರಭಾವ ಚಂಪೂ ಶೈಲಿಯು, ಶಾಸನ ಕವಿಗಳ ಮೇಲಾದ ಹಾಗೆಯೇ ದೇಸಿ ಸಾಹಿತ್ಯ ಪ್ರಕಾರಗಳ ಪ್ರಭಾವ ಶಾಸನಗಳ ಮೇಲಾಗಲಿಲ್ಲ, ಪಂಪ ತನ್ನ ಕಾವ್ಯದಲ್ಲಿ ನಿರೂಪಿಸಿದ ಜೀವನ ಮೌಲ್ಯ ಪ್ರಸಾರವು ಯಾವ ರೀತಿ ೧೦ ಮತ್ತು ೧೧ನೇ ಶತಮಾನದಲ್ಲಿ ವ್ಯಕ್ತಗೊಂಡಿದೆ ಎಂಬುದನ್ನು ಎಂ.ಚಿದಾನಂದಮೂರ್ತಿಯವರು ಪಂಪ ಕವಿ ಹಾಗೂ ಮೌಲ್ಯ ಪ್ರಸಾರ, ಪಂಪ ಕವಿ ಹಾಗೂ ಯುಗಧರ್ಮ ಎಂಬ ಲೇಖನಗಳಲ್ಲಿ ಗುರುತಿಸಿದ್ದಾರೆ.[೪] ಪಂಪನ ಸಮಕಾಲೀನ ಮೌಲ್ಯಗಳೆಲ್ಲವೂ ಪಂಪನ ನಂತರ ಶಾಸನಗಳಲ್ಲಿ ಕಂಡುಬರುತ್ತದೆ. ಪಂಪ ಭಾರತದ ನಂತರದ ಶಾಸನಗಳಲ್ಲಿ ಪಂಪ ಭಾರತದ ವ್ಯಕ್ತಿಗಳ ಪ್ರಶಂಸೆ ಹಾಗೂ ಅವರು ಪ್ರತಿನಿಧಿಸಿದ ಮೌಲ್ಯಗಳ ಮಾತು ಹೆಚ್ಚಾಗಿ ಆಗಿದ್ದನ್ನು ಕಾಣುತ್ತೇವೆ. ಹತ್ತನೇ ಶತಮಾನದ ವೀರಯುಗದ ನನ್ನಿ, ತ್ಯಾಗ, ಸ್ವಾಮಿಭಕ್ತಿ, ಅಭಿಮಾನ, ಶೌಚ ಛಲ, ಈ ಎಲ್ಲಾ ಪಂಪನ ಸಮಕಾಲೀನ ಮೌಲ್ಯಗಳು ಪಂಪನ ನಂತರ ಶಾಸನಗಳಲ್ಲಿ ಕಂಡುಬರುತ್ತದೆ. ಪಂಪನು ಪ್ರತಿಪಾದಿಸಿರುವ ಸಮಕಾಲೀನ ಮೌಲ್ಯಗಳು ನಂತರದ ಕಾಲದ ರಾಯಚೂರು ಜಿಲ್ಲೆಯ ಕೆಲವು ಶಾಸನಗಳಲ್ಲಿ ಸಂಕ್ಷಿಪ್ತವಾಗಿ ವ್ಯಕ್ತವಾಗಿದೆ. ಹಾಗೇ ಮುಕ್ಕುಂದಿಯ ಶಾಸನಗಳಲ್ಲಿ ಉಲ್ಲೇಖವಾಗಿರುವುದನ್ನು ಗಮನಿಸಬಹುದಾಗಿದೆ. ಹಾಗೇ ಇದರ ಜೊತೆಗೆ ಕವಿಗಳು ಬಳಸಿರುವ ಕಾವ್ಯಾತ್ಮಕ ವರ್ಣನೆಯನ್ನು ಕಾಣಬಹುದಾಗಿದೆ. ಮುಕ್ಕುಂದಿಯ ಶಾಸನದಲ್ಲಿ ಕಾವ್ಯಾತ್ಮಕ ವರ್ಣನೆಯನ್ನು ಈ ಕೆಳಗಿನಂತೆ ಗುರುತಿಸಬಹುದು.

'ಕಲ್ಯಾಣ'ದಲ್ಲಿ ತ್ರೈಲೋಕ್ಯಮಲ್ಲನು ರಾಜ್ಯ ಭಾರ ಮಾಡುತ್ತಿದ್ದಾಗ, ಆತನ ಪತ್ನಿ ತ್ರೈಲೋಕ್ಯ ಮಹಾದೇವಿಯು ಮುಕ್ಕುಂದೆಯನ್ನು ತ್ರಿಭೋಗಾಭ್ಯಂತರವಾಗಿ ಆಳುತ್ತಿದ್ದಳು. ಆಕೆಯನ್ನು ಮುಕ್ಕುಂದ ಶಾಸನವು ಈ ರೀತಿಯಾಗಿ ಕಾವ್ಯಾತ್ಮಕವಾಗಿ ವರ್ಣಿಸಿದೆ.

"ಕಲ್ಯಾಣಾಭ್ಯುದ್ಯಯ ಸಹಸ್ರಫಲ ಭೋಗ ಭಾಗಿನಿ ದ್ವಿತೀಯ ಲಕ್ಷ್ಮೀ ಸಮಾನೆ. ಶ್ರೀ ಮದಾಹವ ಮಲ್ಲದೇವ ಚಿತ್ತಾಪ್ರಿತ ವಾರ್ದ್ಧಿವರ್ದ್ಧನ ಪೂರ್ಣಚಂದ್ರವದನೆ ತ್ರೈಲೋಕ್ಯಮಲ್ಲದೇವ ವಿಶಾಲವಕ್ಷ ಸ್ಥಳ ಕ್ರೀಡಾ ವಿಳಾಸ ಶ್ರೀಕಾಂತೆ ಚರಣ ಸರೋರುಹಾನತಶಿಕ್ರಿತ ಸಕಳ ಸುದ್ದಾಂತೆ ಸರ್ವತ್ರ್ವಸಾತ್ರ್ವ ಚಿಂತಾಮಣಿ ಸೌಭಾಗ್ಯಸಾರ ಸರ್ವಸ್ವ ಲಲನಾ ಚೂಡಾಮಣಿ ಪ್ರತ್ಯಕ್ಷ ಪಾರ್ವತಿತ್ಯಾದಿಸ್ಸಂ ಸ್ವತ್ರ್ಯಭಿದಾನ ಪೂಜಿತೆಯುರು ಮಗ್ರಮಹಿಷಿ ಪದವಿರಾಜಿತಯುರುಮಪ್ಪ ಶ್ರೀ ಮತ್ರೈಲೋಕ್ಯ ಮಹಾದೇವಿಯರ್" ಎಂದು ವರ್ಣಿಸುತ್ತದೆ.[೫]

ಇನ್ನೊಂದು ಶಾಸನವು "ಆತನ ಸತಿ ಭುವನಶ್ರೀ... ಶ್ರೀ ಚಟ್ಟಿಯಕ್ಕನೆನೆ ಪೆಸರಿಂದ ಸೀತೆಗೆ ನೆಗಳಿರ್ದಾ ಗಿರಿಜಾತೆಗೆ ವಾಕ್ಸತಿಗೆ ರತಿಗೆ ದಂಸಟಿಯ ಕು(ತ್ರುಟಿತ) ಮೇರು ಗಿರಿಯಿಂದ ಮನ್ನಾಕ್ಷೀರಾಂಬುಧಿಯೊಳಗೆ ಕಲ್ಪಭೋಜಳಿವಾಚಾರುಚರಿತ ಕುಲನಾರಿ ಗಮದಿಯುಸಿದರಧಿಕ ವಿಶಯತ್ತನೆಯರ್"[೬]

ಕಣ್ನರಸನ ಪತ್ನಿಯ ಹೆಸರು ಕಾವಬ್ಬರಿಸಿಯಾದರು, ಆಕೆಯ ಹೆಸರಿನ ಹಲವಾರು ಹೆಸರು ಸೂಚಿತವಾಗಿವೆ. "ಕ್ಷಿತಿಪತಿ ಕಣ್ನರಸನ ಸತಿ ಗುಣವತಿ ರೂಪವತಿ ಯಶೋವತಿ ಭೋಗಾವತಿ ಲೀಲಾವತಿ ಮಹಿಮಾವತಿ ಕಾವಬ್ಬರಸಿ ಗೌರಿಗಣೆ ನೆಗರ್ದ್ದಳ್[೭]

ಈ ಮೇಲ್ಕಾಣಿಸಿದವರಲ್ಲಿ ರಾಣಿಯರ ಮತ್ತು ಮಹಾ ಮಂಡಳೇಶ್ವರರ ಪತ್ನಿಯರನ್ನು ಕಾವ್ಯಾತ್ಮಕವಾಗಿ ವರ್ಣಿಸಿದ್ದನ್ನು ಕಾಣಬಹುದಾಗಿದೆ.

ಸಾಲಗುಂದೆ ಶಾಸನ ಮಹಾ ಮಂಡಳೇಶ್ವರ ನಾಗದೇವನನ್ನು ಉಲ್ಲೇಖಿಸಿ ಆತನನ್ನು ಕಾವ್ಯಾತ್ಮಕವಾಗಿ ವರ್ಣಿಸಿ ಆತನನ್ನು ಶ್ರೇಷ್ಠ ವ್ಯಕ್ತಿ ಎಂಬುದಾಗಿ ನಿರೂಪಿಸಿದೆ.

ಅಮಿತೋತ್ಸಾಹದೇ ವಿಪ್ರ ಸಂತತಿಗೆ ವಿದ್ಯಾದಾನಮಂ ಭೂಮಿದಾನಮನಶ್ವಾದಿ ಸಮಸ್ತ ದಾನಮನಶ್ವಾದಿ ಸಮಸ್ತ ದಾನಮನೆ ದರ್ಪೋವಪ್ಪಮಿ, ಯುತ್ತ ಮೋತ್ತ್ರೆಮನಂ ಸತ್ಯಾಭಿಧಾನಂ ಪತಿಹಿತೋಪಾಧ್ಯಾಯನಂ ಸಂತತೋದ್ಯಮನಂ ಪ್ಪೋಲ್ಬರೀ ನಾಗದೇಸಿಳಾವಿಖ್ಯಾತಮಂ ಮಾನವತ್ ಅಜ್ಜಿಕೆಯ ಸಾಲಗುಂದೆಯೊಳು ಗುಂದಲೆಯಾಗಿರೆ, ಭಾವಿ ದೇಗುಲಂ ಕೆಜಿನಮ್ಮಳ ಪುಷ್ಪಪೋಕ್ಕರಣೆ ದೀರ್ಗ್ಘಿಗೆ, ದೇವ ನಿವಾಸ ಮಾಳ್ಪುಕಣ್ಣಿದ ಪೊಟ್ಟ ನಂದನ ವನಾವಳೀಶ(ಛ)ತ್ರಮನಿಪ್ಪ ಧರ್ಮಮಂ ಮರೆದ ಮಹಾತ್ಮನಂ ಪೊಗಳದಿರ್ಪವನಾವನು ನಾಗದೇವನ.[೮]

ಮುಕ್ಕುಂದಿಯ ಮತ್ತು ಸಾಲಗುಂದಿಯ ಸುತ್ತಮುತ್ತ ಶಾಸನಗಳನ್ನು ಗಮನಿಸಿದರೆ ಶಾಸನಗಳಲ್ಲಿ ಕಾವ್ಯಾತ್ಮಕ ವರ್ಣನೆಯನ್ನು ಗುರುತಿಸಬಹುದಾಗಿದೆ.

ಜಿಲ್ಲೆಯ ೧೧ನೆಯ ಶತಮಾನದ ನಂತರ ಶಾಸನಗಳಲ್ಲಿಯು ಕೆಲವು ಪದ್ಯ ಶಾಸನಗಳು ಕೆಲವೆಡೆ ಚಂಪೂ ಶೈಲಿಯ ಕವಿಗಳ ಕಾವ್ಯಗಳಿಂದ ಪ್ರಭಾವಿತವಾಗಿ ಅವರ ಕಾವ್ಯಗಳಲ್ಲಿಯ ಉಕ್ತಿಗಳನ್ನು ಅಲ್ಪಸ್ವಲ್ಪ ಬದಲು ಮಾಡಿ ಬಳಸಿಕೊಂಡಿರುವುದನ್ನು ವಿರಳವಾಗಿ ಗುರುತಿಸಬಹುದಾಗಿದೆ. ವಿಶೇಷವಾಗಿ ಪಂಪ ಭಾರತ ಮತ್ತು ಗದಾಯುದ್ಧದ ಕಾವ್ಯಗಳಲ್ಲಿಯ ಪಾತ್ರಗಳ ವಿಶೇಷಣಗಳನ್ನು ಶಾಸನದಲ್ಲಿ ಪ್ರಸ್ತಾಪಿಸಲ್ಪಟ್ಟಿರುವ ವ್ಯಕ್ತಿಗಳಿಗೆ ಬಳಸಿದ್ದಾರೆ. ನಿದರ್ಶನಕ್ಕೆ ಇಂತಹ ಕೆಲವೊಂದು ಉಲ್ಲೇಖಗಳನ್ನು ಗಮನಿಸಬಹುದು.

"ವಿದ್ಯಾವಿರಿಂಚನಂ ಸಿನ್ದ ಸಿಖಾಮಣಿ ವಿಬುದ ಚಿನ್ತಾಮಣಿ

ಶೌಚಗಾಂಗೇಯಂ ಸತ್ಯರಾಧೆಯಂ ಗುಂಗಣೋತ್ತುಂಗಂ ಗೋನನ ಸಿಂಗಂ"[೯]

"ಭೂಪಾಳಕ ಗೋನಂಗೆಸೆಯ ಪಂಪಿನ ಪೊಂಪುಳಿಯನ್ನೊಡಿಂನದ ಲೀಲೆಯ ಮಾಲೆಯ ಪೊಗವಿಲಾರ್ನ್ನೆರವ ಕಲಿಗೋನ ಭೂಪನು ಎಂದು ಮುಂದುವರಿದ ಶಾಸನ ರೂಪನಕಳಂಕ ಚರಿತ್ರನನೂನಿ ದಾನನಿ ಕಣ್ನೆಗನಂಕಕಾರನೆಸೆದಂ ಜಗದೊಳ್."[೧೦]

"ವೀರಲಕ್ಷ್ಮೀ ಲಕ್ಷಿತ ದಕ್ಷಿಣದೋರ್ದ್ದಣ್ಡಂ ಸಿಂದರೊಳ್ಗಂಡ ವಿಜಯ ಪಟಹವಶೇಷ ಭೋಗಾವತೀ ಪುರವರೇಶ್ವರಂ ಲೋಕಯ್ಯ ಭಾಸ್ಕರಂ ಫಣೀಂದ್ರರುಂದ್ರ ಧ್ವಜ ಭೂಪಮಕರ ಧ್ವಜಂ ಭ್ಯಾರ್ಘ ಮ್ರಿಗಲಾಂಚನ ವಿನಯೋಗ ಕಾಂಚನ ಪಗೆಯಂಕ ಭೀಮಂ. ಚಲದಂಕರಾಮನಾಳ್ಗೆ ನಲ್ಲಾತಂ ವೈರಿನಿರ್ದ್ದೋತ ಭ್ರಿತ್ಯಚಿನ್ತಾಮಣಿ ಸುಭಟ ಶಿರೋಮಣಿ"[೧೧]

ಕವಿಗಳ ಅಲಂಕಾರ ಸಾಮಾಗ್ರಿ ಚಂಪೂ ಪರಂಪರೆಯ ಮಾದರಿಯದ್ದೇ ಆಗಿದೆ. ಪರಂಪರೆಯ ಪರಿಚಿತವಾದ ಸಾಮಗ್ರಿಗಳಿಂದಲೇ ತಮ್ಮ ಸಮಕಾಲೀನ ಸಂದರ್ಭಗಳನ್ನು, ವ್ಯಕ್ತಿ ಚಿತ್ರಗಳನ್ನು ಶಾಸನಗಳು ಕಟ್ಟಿಕೊಟ್ಟಿರುವುದನ್ನು ಗುರುತಿಸಬಹುದಾಗಿದೆ. ಚಂಪೂ ಕಾವ್ಯಗಳ ಅನುಕರಣೆಗಳೆಂದು ಸೂಚಿಸುವುದು ತಪ್ಪಾಗುತ್ತದೆ. ಚಂಪೂಕಾವ್ಯದ ಪ್ರಭಾವಗಳ ಹಿನ್ನೆಲೆಯಲ್ಲಿ ಶಾಸನ ಪದ್ಯಗಳು, ಚಂಪೂಕಾವ್ಯ ಪರಂಪರೆಯಿಂದ ಹೊರತಾದ ವಿಶೇಷ ಅನುಭವವನ್ನೇನು ಕಟ್ಟಿಕೊಡಲಾರವು ಎಂದೆನಿಸಿದರೂ, ಎಷ್ಟೋ ಬಿಡಿ ಬಿಡಿ ಶಾಸನ, ಶಾಸನ ಪದ್ಯಗಳು ಉತ್ಕೃಷ್ಟ ಕಾವ್ಯದೊಳಗಿನ ಬಿಡಿ ಬಿಡಿ ಭಾಗಗಳಂತೆ ತೋರುತ್ತದೆ. ಚಂಪೂ ಪರಂಪರೆಯಂತಹ ಸಂಪ್ರದಾಯ ಕಾವ್ಯದಲ್ಲಿ ದೊರಕದ ಹಾಗೂ ಸ್ಪಷ್ಟವಾದ ವ್ಯಕ್ತಿ ಚಿತ್ರಗಳನ್ನು ನಿರ್ಮಿಸುವುದರ ಮೂಲಕ ಸಂಪ್ರದಾಯಿಕ ಕಾವ್ಯ ಮಾಡದಿದ್ದ ಕೆಲಸಗಳನ್ನು ಮಾಡುತ್ತಾ, ರಾಜರು, ಮಂತ್ರಿಗಳು, ದಂಡಾಧೀಶರ, ಸಾಮಂತರ, ಮುನಿಗಳ, ಆಚಾರ್ಯರ ವ್ಯಕ್ತಿತ್ವವನ್ನು ಶಾಸನಗಳು ಕಡೆದು ನಿಲ್ಲಿಸಿವೆ. ಕೆಲವು ಶಾಸನಗಳ ಪದ್ಯಗಳ ಬಂಧ ಕೇವಲ ಅನುಕರಣೆಗಳೆನಿಸದೆ ಕುದುರಿದ ಕೈಯ ನಿರ್ಮಿತಿಗಳಂತೆ ತೋರುತ್ತದೆ.

ಒಟ್ಟಾರೆಯಾಗಿ ಸಾಹಿತ್ಯಕ ಮೌಲ್ಯವಿರುವ ಶಾಸನಗಳು ಆರಂಭದಿಂದಲೂ ಭಾಷೆ ಮತ್ತು ರಚನೆಯ ದೃಷ್ಟಿಯಿಂದ ಚಂಪೂ ಕಾವ್ಯಗಳನ್ನು ಅನುಸರಿಸಿ ಸೃಷ್ಟಿಯಾಗಿರುವುದರಿಂದ ಹಾಗೂ ಮುಂದೆ ಕನ್ನಡ ಸಾಹಿತ್ಯದಲ್ಲಿ ಚಂಪೂ ಪರಂಪರೆಯ ಪ್ರಾಬಲ್ಯ ಕಡಿಮೆಯಾಗಿ ದೇಶಿ ಪ್ರಾಬಲ್ಯ ಮೆರೆಯುತ್ತಿದ್ದಾಗಲೂ ಚಂಪೂ ಶೈಲಿಯನ್ನು ಅನುಸರಿಸಿರುವುದರಿಂದ ಚಂಪೂ ಸಾಹಿತ್ಯ ಚರಿತ್ರೆಯನ್ನು ಅಧ್ಯಯನ ಮಾಡುವಲ್ಲಿ ಆಕರಗಳಾಗಿವೆ ಎಂಬುದನ್ನು ಮರೆಯುವಂತಿಲ್ಲ.[೨] ಶಾಸನಗಳು ಸಾಹಿತ್ಯಕವಾಗಿ ಹುಟ್ಟಿದವುಗಳಲ್ಲವೆಂದೂ, ಅವುಗಳ ಪ್ರಧಾನ ಉದ್ದೇಶ ಬೇರೆ ಎಂಬುದನ್ನು ತಿಳಿಯಬಹುದಾಗಿದೆ.

ಶಾಸನಗದ್ಯ

ಮುಕ್ಕುಂದಿಯ ಶಾಸನಗಳನ್ನು ಹಾಗೂ ತಾಲೂಕಿನ ಶಾಸನಗಳಲ್ಲಿ ಶಾಸನ ಗದ್ಯದ ವಿಭಿನ್ನ ಮಾದರಿಗಳನ್ನು ಅಲ್ಲಲ್ಲಿ ಗುರುತಿಸಬಹುದಾಗಿದೆ. ಎರಡೂ ರೀತಿಯ ಗದ್ಯದ ಸ್ವರೂಪವನ್ನು ಈ ಶಾಸನಗಳಲ್ಲಿ ಗುರುತಿಸಬಹುದು. ಕನ್ನಡ ಚಂಪೂ ಕಾವ್ಯದಲ್ಲಿ ಕಂಡುಬರುವ ಪ್ರೌಢ ಗದ್ಯದ ಮಾದರಿಯನ್ನು ಸಾಲಗುಂದ, ರೌಡಕುಂದ, ಮುಕ್ಕುಂದದ ಕೆಲವು ಶಾಸನಗಳಲ್ಲಿ ಗುರುತಿಸಬಹುದು. ಆದರೆ ಮುಕ್ಕುಂದಿಯಲ್ಲಿ ದೊರೆಯುವ ಬಹುತೇಕ ಶಾಸನಗಳಲ್ಲಿಯ ಗದ್ಯಭಾಗವು ದೇಸಿ ಗದ್ಯದಿಂದ ಕೂಡಿರುವುದಾಗಿದೆ. ಶಾಸನಗಳಲ್ಲಿ ಬ್ರಾಹ್ಮಣರಿಗೆ ವೃತ್ತಿ ಹಾಕಿಕೊಟ್ಟ ದಾನ ಶಾಸನಗಳು ಜನ ಸಾಮಾನ್ಯರು ದೇವರಿಗೆ ನೀಡುತ್ತಿದ್ದ ದಾನಗಳು, ಮಾಡುತ್ತಿದ್ದ ಸೇವೆಗಳು, ಅಂದಿನ ಕಾಲದ ವ್ಯಾಪಾರ ವಸ್ತುಗಳು, ಸುಂಕ-ತೆರಿಗೆಗಳು, ಅಳತೆ-ತೂಕಗಳು, ಸುಲಭ ಸರಳ ಗದ್ಯದ ನಿರೂಪಣೆಯಿಂದ ಕೂಡಿರುವುದನ್ನು ಕಾಣಬಹುದು. ಜನಪದ ಸಂಸ್ಕೃತಿಯ ಭಾಗವಾದ ಫಲಶೃತಿ ಶ್ಲೋಕಗಳು ಹಾಗೂ ಶಾಪಾಶಯಗಳು ಗದ್ಯದಲ್ಲಿಯೇ ನಿರೂಪಿತವಾಗಿವೆ. ಬೇರೆ ಬೇರೆ ಭಾಗದ ಶಾಸನಗಳಿಗೆ ಹೋಲಿಸಿದರೆ, ಮುಕ್ಕುಂದಿ ತಾಲೂಕಿನ ಪ್ರಮುಖ ಶಾಸನಗಳಲ್ಲಿ ವ್ಯಕ್ತಗೊಂಡಿರುವ ಗದ್ಯವು ಓಜಸ್ವಿ ಗದ್ಯ ಎನಿಸದಿದ್ದರೂ ಆ ಶಾಸನಗಳ ಗದ್ಯ ಭಾಷೆ ಕನ್ನಡ ನಾಡಿನ ಜನತೆಯ ಸ್ವಭಾವಗಳನ್ನು ವ್ಯಕ್ತಪಡಿಸುವಲ್ಲಿ ಮಹತ್ತರವಾಗಿದೆ.

೪.೧ ಶಾಸನಗಳು ಮತ್ತು ಛಂದಸ್ಸು

ಕನ್ನಡ ಛಂದಸ್ಸಿನ ಅಧ್ಯಯನದಲ್ಲಿ ಶಾಸನಗಳು ಮಹತ್ತರ ಪಾತ್ರವಹಿಸಿದೆ. ಸಂಸ್ಕೃತದಿಂದ ಕನ್ನಡಕ್ಕೆ ಹೊಸದಾಗಿ ಅಕ್ಷರ(ವರ್ಣ) ವೃತ್ತಗಳನ್ನು ಸ್ವೀಕರಿಸಿದಾಗ ಇದ್ದ ಪರಿಸ್ಥಿತಿಯು ಸ್ವರೂಪವನ್ನು ತಿಳಿಯಲಿಕ್ಕೆ ಶಾಸನಗಳನ್ನು ಅವಲಂಬಿಸಬೇಕಾಗಿದೆ. ಆರಂಭ ಕಾಲದ ಕನ್ನಡ ಚಂಪೂವಿನ ಛಂದೋವೈವಿಧ್ಯತೆಯನ್ನು ತಿಳಿಸುವಲ್ಲಿ ಶಾಸನಗಳ ನೆರವು ಅತ್ಯಗತ್ಯವಾಗಿದೆ.[೩] ಕನ್ನಡದಲ್ಲಿ ಪ್ರಪ್ರಥಮವಾಗಿ ವರ್ಣ ವೃತ್ತಗಳು ಬಳಕೆಯಾಗಿದೆ. ಪದ್ಯಮಯ ಶಾಸನಗಳಲ್ಲಿ ಬಳಕೆಯಾಗಿರುವ ಬಹುತೇಕ ಛಂದಸ್ಸು ವರ್ಣ ಛಂದಸ್ಸಾಗಿದೆ. ಕನ್ನಡದ ಬಹುತೇಕ ಶಾಸನಗಳು ಚಂಪೂವಿನ ಛಂದೋವೈವಿಧ್ಯತೆಯನ್ನು ಎಲ್ಲಾ ಕಾಲಕ್ಕೂ ಅಳವಡಿಸಿಕೊಂಡಿವೆ. ವರ್ಣವೃತ್ತಗಳಲ್ಲಿ ಸಮ, ಅರ್ಧಸಮ, ವಿಷಮ ವೃತ್ತಗಳಲ್ಲಿ ವೈವಿಧ್ಯತೆಯನ್ನು

ಗುರುತಿಸಬಹುದಾಗಿದೆ. ಬಹುತೇಕ ತಾಲೂಕಿನ ಶಾಸನಗಳಲ್ಲಿ ಬಹುಪಾಲು ಶಾಸನಗಳು ಗದ್ಯಾತ್ಮಕತೆಯಿಂದ ಕೂಡಿದೆ. ವಿರಳವಾಗಿ ಪದ್ಯಮಯ ಶಾಸನಗಳು ಕಂಡುಬರುತ್ತವೆ. ಪದ್ಯಮಯ ಶಾಸನಗಳಲ್ಲಿ ಚಂಪೂ ಛಂದೋವೈವಿಧ್ಯತೆ ಕಂಡುಬರುತ್ತಿದ್ದು, ಛಂದಸ್ಸಿನ ನಿಯಮಗಳನ್ನು ಸಾಧಾರಣವಾಗಿ ಪಾಲಿಸಿರುವುದು ಕಂಡುಬರುತ್ತದೆ. ಆದರೆ ಆ ಶಾಸನ ಪದ್ಯಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ವಿರಳವಾಗಿ ಗಣ ಮತ್ತು ಪ್ರಾಸ ನಿಯಮದಲ್ಲಿ ದೋಷಗಳು ನುಸುಳುವುದು ಕಂಡುಬರುತ್ತದೆ. ಇಂತಹ ಭಾಗಗಳಲ್ಲಿ ಲಿಪಿಕಾರನ ಕೈವಾಡವೆಷ್ಟು, ಕೃತಿಕಾರನ ಸ್ವತಂತ್ರವೆಷ್ಟು ಎನ್ನುವುದು ಎಚ್ಚರಿಕೆಯಿಂದ ಪರಿಶೀಲಿಸಬೇಕಾಗುತ್ತದೆ. ಶಾಸನಗಳನ್ನು ಶಿಲೆಗಳ ಮೇಲೆ ಬರೆಯುವ ಹಾಗೂ ಕೊರೆಯುವ ಕೈಗಳ ತಪ್ಪು ಸಾಮಾನ್ಯವಾಗಿರುತ್ತದೆ. ಹೀಗಾಗಿ ತಾಲೂಕಿನ ಮತ್ತು ಮುಕ್ಕುಂದಿ ಪದ್ಯ ಶಾಸನಗಳಲ್ಲಿ ವಿರಳವಾಗಿ ಬಳಕೆಯಾಗಿರುವ ವರ್ಣ ವೃತ್ತಗಳಲ್ಲಿ ಕೆಲವೆಡೆ ಕಂಡುಬಂದಿರುವ ಲಿಪಿಕಾರರ ಸ್ಖಾಲಿತ್ಯಗಳನ್ನು ಸರಿಪಡಿಸಿ ಕೆಲಮಟ್ಟಿಗೆ ಪಾಠಗಳನ್ನು ಪರಿಶೀಲಿಸಬೇಕಾಗಿದೆ.

ಬಹುತೇಕ ಶಾಸನಗಳು ಚಂಪೂ ಶೈಲಿಯನ್ನು ಅನುಸರಿಸಿದೆ. ೧೨ನೇ ಶತಮಾನದ ನಂತರ ಕನ್ನಡದಲ್ಲಿ ದೇಶಿ ಸಾಹಿತ್ಯ ಪ್ರಕಾರಗಳು (ವಚನ, ರಗಳೆ, ಷಟ್ಪದಿ, ಸಾಂಗತ್ಯ ಇತ್ಯಾದಿ) ಹೆಚ್ಚಾಗಿ ಕಾಣಿಸಿಕೊಂಡಿದ್ದು, ಅವುಗಳ ಪ್ರಭಾವಕ್ಕೆ ಒಳಗಾಗಿಲ್ಲ. ಶಾಸನಗಳು ಬಹುಪಾಲು ಅನುಸರಿಸಿರುವುದು ಚಂಪೂ ಕಾವ್ಯಗಳ ಮಾದರಿಯನ್ನಾಗಿಟ್ಟುಕೊಂಡಿದೆ. ನಿದರ್ಶನಕ್ಕಾಗಿ ಶಾಸನಗಳಲ್ಲಿ ಬಳಸಲ್ಪಟ್ಟಿರುವ ಸ್ರಗ್ದರಾ ವೃತ್ತವನ್ನು ಗಮನಿಸಬಹುದು. ಹಾಗೆಯೇ ವಿವಿಧ ವೃತ್ತಗಳು ಬಳಕೆಯಾಗಿದೆ.

"ನಾಗೇದ್ರಂ ತಂದೆ ತಾಯ್ನಾಗಿಣಿ ವಿಮೇಳ ನಿಚೋತ್ಪತ್ತಿಯಿಂ
ತಾನ್ನುದಿಂ ಪೆಂ = ೨೧ ಅಕ್ಷರ
ಪಾರ್ಗ್ಗ ತಾನೆಂಬನಂ ಭೂಗಾವತಿ ಪುರ ವರಾಧೀಶ್ವರಂ
ಸಿಂದಭೂಪಂ[೧೪] = ೨೧ ಅಕ್ಷರ"

ಉತ್ಪಲ ಮಾಲೆ

ಕಣ್ಣರ ಸಂಗಮುತ್ತಮ ಪತಿವ್ರತೆ ಕಾವಲದೇವಿಗಂ ಜಗಂ = ೨೦ ಅಕ್ಷರ
ಬಣ್ಣಿಸೆ ಪುಟ್ಟಿದಂ ಸಕಳ ಲಕ್ಷ್ಮೀಯಾಳಾರ್ಜಿತ ತೇಜದೊಳ್ಕರಂ[೧೫] = ೨೦ ಅಕ್ಷರ

ಉತ್ಪಲ ಮಾಲೆ ದೋಷ ಪೂರಿತವಾಗಿರುವುದಕ್ಕೆ ಉದಾಹರಣೆಯನ್ನು ಮುಕ್ಕುಂದಿಯ ಶಾಸನ ಸಂಖ್ಯೆ ೭ರಲ್ಲಿ ಗಮನಿಸಬಹುದಾಗಿದೆ.

ಕಣ್ಣನ್ರಿಪಂಗ ಮುತ್ತಮ ಪತಿವ್ರತೆ ತಾಂ ಕಾಮದೇವಿಗಂ ಜಗಂ = ೨೦ ಅಕ್ಷರ
ಬಣ್ಣಿಸೆ ಪುಟ್ಟಿದಂ ಸಕಲ ಲಕ್ಷ್ಮಿಯಾಳೊರ್ಜ್ಜಿತ ತೇಜದೊಳುಕರಂ[೧೬]

ಛಂದಸ್ಸಿನ ನಿಯಮಕ್ಕೆ ಮೇಲಿನ ಸಾಲು ಸರಿಯಾಗಿ ಹೊಂದಿಕೆಯಾಗುತ್ತಿದ್ದು, ಎರಡನೇ ಸಾಲಿನಲ್ಲಿ 'ರ'ಗಣ ಬರಬೇಕಾದಲ್ಲಿ, 'ಭ'ಗಣ ಬರುತ್ತಿದ್ದು 'ಳು' ಅಕ್ಷರ ಕೂಡಾ ಈ ಛಂದಸ್ಸಿನ ನಿಯಮಕ್ಕೆ ಹೊಂದಾಣಿಕೆಯಾಗುತ್ತಿಲ್ಲ.

ಉತ್ಪಲ ಮಾಲೆ ದೋಷ ಪೂರಿತ

ಭ ರ ನ ಭ ಭ U ಜ

ಚೋಳ ಬ|ಳಂ ಪಡ|ಲ್ಪಡೆಯು |ಮುಪ್ಪುವ| ತೂಣ್ದಮ|ಲೆ ಪರಾ|ಯಿರು[೬]

ಈ ಸಾಲಿನಲ್ಲಿ ಇರುವ ಲೆ ಅಕ್ಷರವನ್ನು 'ಲಾ' ಎಂದು ಉಚ್ಚರಿಸಿದರೆ ಛಂದಸ್ಸಿನ ನಿಯಮಕ್ಕೆ ಸರಿ ಹೊಂದುತ್ತದೆ.

ಮಾತ್ರಾ ವೃತ್ತ

ಮಾತ್ರ ವೃತ್ತ ಜಾತಿಗೆ ಸೇರಿದ ಕಂದ ಮತ್ತು ರಗಳೆಗಳಲ್ಲಿ ಕಂದ ಪ್ರಕಾರವು ಮುಕ್ಕುಂದಿ ಶಾಸನಗಳಲ್ಲಿ ಹೆಚ್ಚಾಗಿ ಬಳಸಲ್ಪಟ್ಟಿದೆ. ಬಳಕೆಯಾಗಿರುವ ಕಂದ ಪದ್ಯಗಳು ಹೆಚ್ಚು ಕಡಿಮೆ ಛಂದಸ್ಸಿನ ನಿಯಮವನ್ನು ಪಾಲಿಸಿವೆ. ವಿರಳವಾಗಿ ಗಣ ಮತ್ತು ಪ್ರಾಸನಿಯಮಗಳಲ್ಲಿ ಉಲ್ಲಂಘನೆಯಾಗಿರುವುದುಂಟು. ಬಹುತೇಕ ಶಾಸನಗಳು ಭಾಷಾ ಸ್ವರೂಪವನ್ನು ಛಂದೋನಿಯಮಗಳನ್ನು ಅಷ್ಟು ಲಕ್ಷಿಸದೆ, ಪದ್ಯ ರಚನೆ ನೆಡೆಸಿರುವ ಸಂದರ್ಭಗಳು ಶಾಸನಗಳಲ್ಲಿ ಕಂಡುಬರುತ್ತಿದ್ದರಿಂದ ಕಂದದಂತಹ ಛಂದೋ ಪ್ರಕಾರಗಳ ಬಳಕೆಯಲ್ಲಿ ಸಲಿಗೆ ಸ್ವಾತಂತ್ರವನ್ನು ಶಾಸನ ಕವಿಗಳು ತೆಗೆದುಕೊಂಡಿರುವುದುಂಟು. ಮುಕ್ಕುಂದ ಶಾಸನದಲ್ಲಿ ಉಲ್ಲೇಖಗೊಂಡಿರುವ ಕಂದಪದ್ಯವನ್ನು ಗಮನಿಸಬಹುದು.

ಕಂದ

ಆತನ ತನೆಯ ನಿಟೂವಿ
ಖ್ಯಾತಂ ಶಿಷ್ಯೇಷ್ಟದಾತನರಿಭೂಪ ಭಯೋ
ತ್ಪಾತಂ ಶೌರ್ಯ್ಯದೊಳುಪಮಾ
ತೀತಂ ಕಣ್ನರಸನೆಸದ ನವನೀತದೊಟು[೨೮]

ಕ್ಷಿತಿಪತಿ ಕಣ್ನರಸನ ಕುಲ
ಸತಿ ಗುಣ ವತಿ ರೂಪವತಿ ಯಶೋವತಿ ಭೋಗಾ
ವತಿ ವಿಳಾಸವತಿಮ
U
ವತಿ ಕಾವೆಬ್ಬರಸಿಗೌರಿ ಗೆಣೆಯನೆ ನೆಗಟ್ದಳು[೨೯]

ಮನುಮಾರ್ಗ ಮುದ್ಯತು ಖಚ
ರ ಪತಿ ವಿಳಾಸಂ ದಿನನಾಧೀಶನ ತೇಜಂ
ತೇಜಮಂ ಭೋರುಹಸಖಿ ಸುತ
U
ನಮ್ಮ್ಮಮ್ಮುಡಿವಾಪ ಗಾಪುತ್ರನ ಶೌಚಂ ಶಾ[೩೦]

ಈಗೆ ಮುಕ್ಕುಂದಿಯಲ್ಲಿ ದೊರೆಯುವ ಶಾಸನಗಳ ಮಾತ್ರ ವೃತ್ತಗಳ ಜಾತಿಗೆ ಸೇರಿದ ಕಂದ ಪದ್ಯಗಳು ದೋಷ ಪೂರಿತವಾಗಿದ್ದರೂ ನಿಯಮಗಳನ್ನು ಅನುಸರಿಸಿವೆ ಎಂದು ಹೇಳಬಹುದು.

ಕರ್ನಾಟಕ ವಿಷಯ ಜಾತಿಗಳು

ಅಂಶ ಛಂದೋ ಪ್ರಕಾರಗಳಾದ ತ್ರಿಪದಿ, ಪಿರಿಯಕ್ಕರ, ಷಟ್ಪದಿ, ಉತ್ಸಾಹಗಳ ಛಂದೋ ರೂಪಗಳು ಕನ್ನಡ ಕಾವ್ಯಗಳಿಗಿಂತ ಮೊದಲೇ ಶಾಸನಗಳಲ್ಲಿ ಬಳಕೆಯಾಗಿವೆ. ರಾಯಚೂರು ಜಿಲ್ಲೆಯ ಶಾಸನಗಳಲ್ಲಿ ಕರ್ನಾಟಕ ವಿಷಯ ಜಾತಿಯ ಪ್ರಕಾರಗಳು ಬಳಕೆಯಾಗಿಲ್ಲವೆಂದೇ ಹೇಳಬೇಕಾಗುತ್ತದೆ. ಸೂಕ್ಷ್ಮವಾಗಿ ಗಮನಿಸಿದಾಗ ಸಾಲಗುಂದೆ ಶಾಸನ, ಕವಿತಾಳ ಶಾಸನ ಗಬ್ಬೂರ ಶಾಸನಗಳು ಅಲ್ಪಸ್ವಲ್ಪ ದೋಷಗಳಿಂದ ಕೂಡಿದ್ದರು, ಅವು ಛಂದೋ ನಿಯಮಕ್ಕೆ ಸರಿಹೊಂದುತ್ತವೆ. ಅಪರೂಪಕ್ಕೆ ಎನ್ನುವಂತೆ ಸಿಂಧನೂರು ತಾಲೂಕಿನ ಸಾಲುಗುಂದೆಯ ಶಾಸನದಲ್ಲಿ ಎರಡು ಅಕ್ಕರ ಪದ್ಯಗಳು ಮಾತ್ರ ಬಳಕೆಯಾಗಿವೆ.[೨೧] ಇಲ್ಲಿ ಬಳಕೆಯಾಗಿರುವ ಅಕ್ಕರವು ದೋಷಪೂರಿತವಾಗಿದ್ದರೂ ಹೆಚ್ಚು ಕಡಿಮೆ ಪಿರಿಯಕ್ಕರದ ಲಕ್ಷಣಗಳನ್ನು ಒಳಗೊಂಡಿದೆ. ಅದರ ಒಂದು ಉದಾಹರಣೆಯನ್ನು ಇಲ್ಲಿ ಗಮನಿಸಬಹುದಾಗಿದೆ.

ಪಿರಿಯಕ್ಕರ

ಬ್ರ ವಿ ವಿ ವಿ ವಿ ವಿ ರು
ವಸುಧೆ | ಯೆಲ್ಲಮಂ| ಕೆರೆಭಾವಿ| ದೀರ್ಗ್ಘಿಗೆ |ದೇಗುಲಂ| ಪೂದೋಟಂ| ಶತ್ರುಂಗಳಂ|
ಮುಸುಕಿ ಮಾಣ್ದನೇ ಪುಣ್ಯತೀರ್ತ್ಥಗಳುಳ್ಳನಿತುಮಂ ನೆರೆ ಮಿಂದು ಬ್ರಾಹ್ಮಣರ್ಗ್ಗೆ
ಪೆಸರ ದಾನಂಗಳ ನಿತುಮಂ ಪೊಣ್ದೆತ್ತಂ ಮಗಳಾಚಾರದಿಂ ಕಲಿದೋಷಮಂ
ಪೊಸೆದು ಬಿಸುಟಂ ಮಹಾದಾನಿ ಚಕ್ರೇಶಂ ತ್ರಿಭುವನಮಲ್ಲದೇವ

ಒಟ್ಟಾರೆಯಾಗಿ ಶಾಸನಗಳಲ್ಲಿ ಕಂಡುಬರುವ ಪದ್ಯ ಶಾಸನಗಳಲ್ಲಿನ ಛಂದೋ ವೈಲಕ್ಷಣಗಳಲ್ಲಿ ಕೆಲವೆಡೆ ವ್ಯತ್ಯಯ ಉಂಟಾದರೂ ಇದಕ್ಕೆ ಶಾಸನ ಕವಿಗಳ ದೌರ್ಬಲ್ಯವಲ್ಲ. ಇಲ್ಲಿ ಹಲವಾರು ಜನರ ಕೈವಾಡವಿರಬಹುದು. (ಲಿಪಿಕಾರ ಕರಡಣಿಕಾರ) ಆದರೂ ಶಾಸನಗಳಲ್ಲಿ ಛಂದಸ್ಸು ಬಳಕೆಯಾಗಿದೆ ಎಂಬುದು ಮಾತ್ರ ಸತ್ಯ. ಶಾಸನಗಳಲ್ಲಿ ಪ್ರಮುಖವಾಗಿ ಆದಿ ಪ್ರಾಸ ಪಾಲನೆಯನ್ನು ನಿಯಮಾನುಸಾರವಿರುವುದು ಕಂಡುಬರುತ್ತದೆ. ಇಲ್ಲಿಯ ಪದ್ಯ ಶಾಸನಗಳಲ್ಲಿ ಕಂಡುಬರುವ ವರ್ಣ ವೃತ್ತಗಳು ಸಾಮಾನ್ಯವಾಗಿ ಚತುಷ್ಪದಿಗಳಾಗಿ ರಚಿತವಾಗಿವೆ. ಆದಾಗ್ಯೂ ಲೇಖನ ಸ್ಖಾಲಿತ್ಯ ಹಾಗೂ ರಚನಾ ಸ್ವಾತಂತ್ರ್ಯ ಹಿನ್ನೆಲೆಯಲ್ಲಿ ವೃತ್ತಗಳ ಸಾಮಾನ್ಯ ಲಕ್ಷಣವನ್ನು ಖಚಿತವಾಗಿ ಗುರುತಿಸಲು ಆಗುವುದಿಲ್ಲ. ಪದ್ಯ ಶಾಸನಗಳಲ್ಲಿ ವಿವಿಧ ಛಂದೋ ಪ್ರಕಾರಗಳ ಹೆಸರನ್ನು ಪೂರ್ತಿಯಾಗಿಯೂ ಸಂಕೇತಗಳ ಮೂಲಕವಾಗಿಯೂ ಸೂಚಿಸಿರುವುದುಂಟು. ವರ್ಣ ವೃತ್ತಗಳ ವಿಷಯದಲ್ಲಿ ವೃತ್ತ, ವ್ರಿತ್ತ ಎಂದು ಸಾಲುಗುಂದೆ ಶಾಸನದಲ್ಲಿ ಗುರುತಿಸಬಹುದು.

೪.೨ ಶಾಸನ ಕವಿಗಳು ಮತ್ತು ಲಿಪಿಕಾರರು

ಒಂದು ಶಾಸನ ನಿರ್ಮಾಣಗೊಳ್ಳಲು ಶಾಸನ ಕವಿ ಲಿಪಿಕಾರ ಮತ್ತು ರೂವಾರಿಗಳ ಪರಿಶ್ರಮವಿರುತ್ತದೆ. ಶಾಸನ ಕವಿಗಳು ಎಷ್ಟೇ ಪ್ರತಿಭೆ, ಸಾಮರ್ಥ್ಯವುಳ್ಳವರಾದರೂ ಅವರು ಸ್ಫಟಿಕವಾದ ಶಾಸನ ಶಿಲಾ ಬರಹಗಳನ್ನು ಅಂದಿನ ಆಳರಸರ ಆಜ್ಞಾನುಸಾರವಾಗಿ ಬರೆದುದರಿಂದಲೂ ಅಲ್ಲದೆ ಇವರಲ್ಲಿನೇಕರು ನಿಯುಕ್ತ (Appointed) ಕವಿಗಳಾದ್ದುದರ ನಿಮಿತ್ತವಾಗಿ ಅವರ ಬದುಕು ಬರಹಗಳಿಗೆ ಸಾಹಿತ್ಯ ಚರಿತ್ರೆಯಲ್ಲಿ ದೊರಕಬಹುದಾದ ಸ್ಥಾನಮಾನಗಳು ಲಭ್ಯವಾಗದೇ ಉಳಿದಿವೆ. ಆದರೂ ಶಾಸನ ಬರವಣಿಗೆ ವ್ಯವಸ್ಥೆಯಲ್ಲಿ ಶಾಸನ ಕವಿಗಳಿಗೆ ವಿಶಿಷ್ಟ ಮಹತ್ವವಿದೆ. ಇವರು ರಚಿಸಿಕೊಟ್ಟ ಶಾಸನ ಪಠ್ಯವನ್ನು ಕಲ್ಲುಗಳ ಮೇಲೆ ಬಳಪದಿಂದ ತೀಡಿ ಬರೆಯುವವನು ಲಿಪಿಕಾರ. ಈ ಲಿಪಿಯನ್ನು ಚಾಣದಿಂದ ಕಲ್ಲುಗಳ ಮೇಲೆ ಕೆತ್ತುವವನು ರೂವಾರಿ ಅಥವಾ ಕಂಡರಣಕಾ. ಕೆಲವೊಮ್ಮೆ ಕವಿ, ಒಕ್ಕಣಿಕೆಗಾರ, ಲಿಪಿಕಾರ, ಕಲ್ಲುಕುಟಗ, ಕಂಡರಣ ಇವರೆಲ್ಲರ ಸಂಯುಕ್ತ ಪ್ರಯತ್ನಗಳಿಂದ ಶಾಸನಗಳು ನಿರ್ಮಾಣಗೊಂಡಿವೆ. ಕವಿ, ರೂವಾರಿ ಒಬ್ಬರೇ ಆಗಿರುವ ಸಂದರ್ಭಗಳು ಇವೆ. ಆದರೂ ಪ್ರತ್ಯೇಕವಾದ ಶಾಸನ ಕವಿಗಳು ಲಿಪಿಕಾರರ ಕುರಿತು ಶಾಸನಗಳಲ್ಲಿ ಮಾಹಿತಿ ದೊರೆಯುತ್ತದೆ.[೨೨]

ಶಾಸನಗಳ ತುತ್ತ ತುದಿಯಲ್ಲಿ(ಕೊನೆಭಾಗ) ಶಾಸನವನ್ನು ಬರೆದ ಕೃತಿಕಾರನ(ಕವಿ) ಮತ್ತು ಶಾಸನವನ್ನು ಕೆತ್ತಿದ ಶಿಲ್ಪಿಯ (ಕಂಡಣಿಕಾರ) ಹೆಸರುಗಳು ಕಂಡುಬರುತ್ತವೆ. ಪ್ರಾಚೀನ ಕನ್ನಡ ಶಿಲಾಶಾಸನಗಳಲ್ಲಿ ಕೃತಿಕಾರ ಮತ್ತು ಶಿಲ್ಪಿಗಳ ಹೆಸರು ಒಟ್ಟಿಗೆ ಹೇಳಿರುವುದು ಬಹಳ ಕಡಿಮೆ. ಹಾಗೇ ನೋಡಿದರೆ ಸಮರ್ಥ ಕವಿಗಳು ಯಾರೂ ಪ್ರಾಚೀನ ಕನ್ನಡ ಶಾಸನಗಳನ್ನು ಬರೆದಂತೆ ತೋರುವುದಿಲ್ಲ.[೨೩] ಆದಾಗ್ಯೂ ಕೆಲವು ಶಾಸನಗಳಲ್ಲಿ ಕವಿಗಳು ಲಿಪಿಕಾರರು ಒಟ್ಟಿಗೆ ಉಲ್ಲೇಖಿತರಾಗಿದ್ದಾರೆ. ಉದಾ : ಕ್ರಿ.ಶ. ಮತ್ತು ೩ನೆಯ ಶತಮಾನಗಳ ಮಳವಳ್ಳಿಯ ಪ್ರಾಕೃತ ಶಾಸನಗಳಲ್ಲಿ ಶಾಸನದ ಕೃತಿಕಾರ ನಾಗದತ್ತ ಮತ್ತು ಶಿಲ್ಪಿ ವಿಶ್ವಕರ್ಮರ ಹೆಸರು ಬಂದಿದೆ. ಕರ್ನಾಟಕದಲ್ಲಿ ಮೊದಲಬಾರಿಗೆ ಅಶೋಕನ ಶಾಸನದಲ್ಲಿ ಉಲ್ಲೇಖವಾದ ಚಪಡ ಎನ್ನುವ ಕವಿ ಪ್ರಪ್ರಥಮ ಶಾಸನ ಕವಿಯಾಗಿದ್ದಾನೆ.

ಶಾಸನ ಕವಿಗಳು ಮತ್ತು ಲಿಪಿಕಾರರು ತಾವು ರಚಿಸಿದ ಶಾಸನದ ಕೊನೆಯ ಭಾಗದಲ್ಲಿ ತಮ್ಮ ಹೆಸರನ್ನು ಮತ್ತು ಬಿರುದುಗಳನ್ನು ಸೇರಿಸುವ ಪರಿಪಾಠವನ್ನು ಹೊಂದಿದ್ದರು. ಕೆಲವೊಮ್ಮೆ ಸೇರಿಸದೆ ಇರುವುದು ಕಂಡುಬರುತ್ತದೆ.

ಮುಕ್ಕುಂದಿ ಮತ್ತು ಸಿಂಧನೂರಿನ ತಾಲೂಕಿನ ಶಾಸನಗಳ ಪಾಠವನ್ನು ಗಮನಿಸಿದಾಗ ಕೆಲವೊಂದು ಶಾಸನಗಳು ಸಾಹಿತ್ಯ ಅಂಶದಿಂದ ಕೂಡಿರುವುದು ಕಂಡುಬರುತ್ತದೆ. ಈ ಶಾಸನವನ್ನು ಶ್ರೇಷ್ಠ ಕವಿಗಳಿಂದ ಬರೆಯಲು ಮಾತ್ರ ಸಾಧ್ಯವೆಂಬುದನ್ನು ಶಾಸನಗಳ ಅಧ್ಯಯನ ಮಾಡಿದಾಗ ಸ್ಪಷ್ಟವಾಗುತ್ತದೆ. ಮುಕ್ಕುಂದಿಯ ಮತ್ತು ಸಿಂಧನೂರಿನ ಶಾಸನಗಳು ಕಾಲದ ವಿಕೋಪಕ್ಕೆ ಸಿಲುಕಿ ಕೊನೆಯ ಭಾಗಗಳು ತೃಟಿತವಾಗಿವೆ. ಆದರೂ ಕೆಲವೊಂದು ಶಾಸನಗಳು ಕವಿಗಳನ್ನು ಲಿಪಿಕಾರರನ್ನು ಉಲ್ಲೇಖಿಸಿರುವುದನ್ನು ಗಮನಿಸಬಹುದಾಗಿದೆ.

ಮುಕ್ಕುಂದಿಯ ಗ್ರಾಮದ ಕ್ರಿ.ಶ.೧೬೪೬ರ ಶಾಸನದಲ್ಲಿ ಶಾಸನವನ್ನು ಕೆತ್ತಿದವನು ವಿರೋಜನ ಮಗ ಬೈರೋಜ ಎಂದು ಉಲ್ಲೇಖವಾಗಿದೆ.[೨೪] ಸಿಂಧನೂರು ತಾಲೂಕಿನ ಬೇವಿನಹಳ್ಳಿ ಗ್ರಾಮದ ಕ್ರಿ.ಶ.೧೫೫೧ರ ತಾಮ್ರ ಶಾಸನದಲ್ಲಿ ಸಭಾಪತಿ ಸ್ವಯಂಭೂ ರಚಿಸಿದ ಇದನ್ನು ಕೆತ್ತಿದವನು ವೀರಣನ ಮಗ ವೀರಣಾಚಾರ್ಯ ಎಂಬುದಾಗಿ ತಿಳಿಸುತ್ತದೆ.[೨೫]

ದೇವರಗುಡಿಯ ಕ್ರಿ.ಶ.೧೧೦೧ರ ಶಾಸನ 'ಶಂಭುವಣ್ಣಂಗಳು ಬ(ರಹ)' ಎಂದು ಹೇಳಿದೆ, ಆದ್ದರಿಂದ ಇವನು ಶಾಸನ ಕವಿಯಾಗಿರಬೇಕು[೨೬] ಬನ್ನಿಗೋಳ ಶಾಸನ(೧೦೫೫)ವನ್ನು ಊರೊಡೆಯ(ಬ್ರಾಹ್ಮಣ) ನಾಗವರ್ಮಯ್ಯನು ಬರೆದಿದ್ದಾನೆ. ಇವನು ಕವಿ ಮತ್ತು ಲಿಪಿಕಾರನಾಗಿದ್ದಾನೆ.[೨೭]

ಹೀಗೆ ಸಿಂಧನೂರು ತಾಲೂಕಿನ ಮತ್ತು ಮುಕ್ಕುಂದಿ ಗ್ರಾಮದ ಸುತ್ತ ಮುತ್ತ ಶಾಸನ ಕವಿಗಳು ಲಿಪಿಕಾರರು ಉಲ್ಲೇಖಿತರಾಗಿದ್ದಾರೆ. ಒಟ್ಟಾರೆಯಾಗಿ ಕವಿಗಳು ಹತ್ತನೇ ಶತಮಾನ ಸಾಹಿತ್ಯವನ್ನು ಗರ್ಭೀಕರಿಸಿಕೊಂಡು ಶಾಸನ ರಚನೆ ಮಾಡಿರುವುದು ಕಂಡುಬರುತ್ತದೆ.

೪.೨ ಶಿಕ್ಷಣ ವ್ಯವಸ್ಥೆ(ಅಗ್ರಹಾರ)

ಪ್ರಾಚೀನ ಕಾಲದಿಂದಲೂ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಲಾಗಿದೆ. ಹಿಂದೂ ಸಮಾಜವು ವಿದ್ಯೆಯನ್ನು ನೀಡುವುದು ತನ್ನ ಕರ್ತವ್ಯವೆಂದು ಭಾವಿಸಿತ್ತು. ''ವಿದ್ಯೆಯ ವಿಷಯದಲ್ಲಿ ಪ್ರಾಚೀನ ಭಾರತವು ಇಟ್ಟುಕೊಂಡಿದ್ದ ಅಭಿಪ್ರಾಯಗಳನ್ನು ಹೀಗೆ ಸಂಗ್ರಹಿಸಬಹುದು, ವಿದ್ಯೆಗಿಂತ ಶ್ರೇಷ್ಟವಾದುದು ಮತ್ತೊಂದಿಲ್ಲ. ಸರ್ವದ್ರವ್ಯಗಳಲ್ಲಿ ವಿದ್ಯೆಯೇ ನಿಜವಾದ ಧನ. ಏಕೆಂದರೆ ಅದನ್ನು ಯಾರು ಅಪಹರಿಸರು. ಅದು ಅನರ್ಘ್ಯವಾದುದು ಮತ್ತು ಅಕ್ಷಯವಾದುದು. ವಿದ್ಯೆಯಿಂದ ಬರುವ ಸುಖವೇ ನಿಜವಾದ ಸುಖ. ಅದರ ಮೆಟ್ಟಿಲುಗಳನ್ನು ಹೀಗೆ ಗುರುತಿಸಬಹುದು. ವಿದ್ಯೆಯಿಂದ ವಿನಯ, ವಿನಯದಿಂದ ಪಾವಿತ್ರತೆ, ಪಾವಿತ್ರತೆಯಿಂದ ಧನ, ಧನದಿಂದ ಧರ್ಮ, ಧರ್ಮದಿಂದ ಸುಖ, ವಿದ್ಯೆಯು ಕಲ್ಪಲತೆಯಂತೆ ಎಲ್ಲವನ್ನು ಕೊಟ್ಟು ಕಾಪಾಡುತ್ತದೆ. ತಂದೆಯಂತೆ ಸರಿಯಾದ ಮಾರ್ಗದಲ್ಲಿ ನಿಯೋಜಿಸುತ್ತದೆ. ಪ್ರಿಯೆಯಂತೆ ಕಷ್ಟಗಳನ್ನು ಹೋಗಲಾಡಿಸಿ ಸಂತೋಷಪಡಿಸುತ್ತದೆ. ಐಶ್ಯರ್ಯವನ್ನು ತಂದು ಅಷ್ಟ ದಿಕ್ಕುಗಳಲ್ಲಿ ಕೀರ್ತಿಯನ್ನು ಹರಡುತ್ತದೆ. ವಿದ್ಯಾಹೀನನಾದವನು ಒಂದು ಪಶುವಿಗೆ ಸಮಾನ. ಇಂದು ವಿದ್ಯೆಯ ವಿಷಯದಲ್ಲಿ ಇಷ್ಟೊಂದು ಆಸ್ಥೆ ವಹಿಸಿದ ದೇಶಗಳು ಬಹಳ ವಿರಳ.[೨೮] ಇದು ಅಂದಿನ ಕಾಲದಲ್ಲಿ ಶಿಕ್ಷಣಕ್ಕಿದ್ದ ಮಹತ್ವವನ್ನು ಸೂಚಿಸುತ್ತದೆ.

ಕರ್ನಾಟಕದ ಪ್ರಾಚೀನ ಶಿಕ್ಷಣ, ಧಾರ್ಮಿಕ ಅಂಶಗಳಿಗೆ ಹೆಚ್ಚಿನ ಆದ್ಯತೆ ನೀಡಿದ್ದನ್ನು ಕಾಣುತ್ತೇವೆ. ಆಧ್ಯಾತ್ಮಿಕ ತಳಹದಿಯ ಮೇಲೆ ನಿಂತಿದ್ದ ವಿದ್ಯೆಯು, ಮಾನವನ ಬೌದ್ಧಿಕ ಶಕ್ತಿಯನ್ನು ರೂಪಿಸುವ ಒಂದು ಕಲೆಯಾಗಿತ್ತು. ಶಿಕ್ಷಣವು ವ್ಯಕ್ತಿಯ ವ್ಯಕ್ತಿತ್ವ ಮತ್ತು ಅಂತರ್ಗತ ಶಕ್ತಿಯನ್ನು ಬೆಳಗಿ

ಆತ್ಮೋದ್ಧಾರವನ್ನು ಸಾಧಿಸಲು ಅನುವುಗೊಳಿಸುವಂತೆ ಪ್ರೇರೇಪಿಸುವುದೇ ಆಗಿದೆ ಎಂದು ತಿಳಿಯಲಾಗಿತ್ತು. ಇದರಿಂದ ಅಂದಿನ ಕಾಲದಲ್ಲಿ ಧಾರ್ಮಿಕ ಶಿಕ್ಷಣವೇ ಸರ್ವಸ್ವ ಎಂಬುದು ಸ್ಪಷ್ಟವಾಗುತ್ತದೆ.

ಅಗ್ರಹಾರ

ಅಗ್ರಹಾರಗಳು ಸಂಖ್ಯೆಯ ದೃಷ್ಟಿಯಿಂದ ಹೆಚ್ಚು ವ್ಯಾಪಕವಾದದ್ದು ಎಂದು ಮುಕ್ಕುಂದಿ ಗ್ರಾಮದಲ್ಲಿ ದೊರೆತ ಶಾಸನಗಳ ಉಲ್ಲೇಖದಿಂದ ಗುರುತಿಸಬಹುದಾಗಿದೆ.

ಕ್ರ.ಸಂ.	ಅಗ್ರಹಾರ	ಕಾಲ	ಶಾಸನ	ಸಂಖ್ಯೆ	ಉಲ್ಲೇಖ
೧.	ನಿಟ್ಟುರವೆ ೭೦	೧೦೬೩	ಸಿಂಧ	೪	ಸಾಲಗುಂದೆ
೨.	ಮುಕ್ಕುಂದಿ	೧೧೯೭	ಸಿಂಧ	೭	ಮುಕ್ಕುಂದೆ
೩.	ಮುಕ್ಕುಂದಿ	೧೦೮೮	ಸಿಂಧ	೮	ಮುಕ್ಕುಂದೆ
೪.	ಮುಕ್ಕುಂದಿ	೧೫೫೬	ಸಿಂಧ	೧೪	ಮುಕ್ಕುಂದೆ
೫.	ಮುಕ್ಕುಂದಿ	೧೫೬೧	ಸಿಂಧ	೧೫	ಮುಕ್ಕುಂದೆ
೬.	ಮುಕ್ಕುಂದಿ	೧೨ನೇ ಶತಮಾನ	ಸಿಂಧ	೧೬	ಮುಕ್ಕುಂದೆ
೭.	ಮುಕ್ಕುಂದಿ	೧೦೬೬	ಸಿಂಧ	೨೦	ಮುಕ್ಕುಂದೆ

"ಅಗ್ರಹಾರಗಳು ಬ್ರಾಹ್ಮಣರ ನೆಲೆಗಳಾಗಿರುತ್ತಿದ್ದವಾದರೂ ಸಂಪೂರ್ಣವಾಗಿ ಬ್ರಾಹ್ಮಣರ ವಶಕ್ಕೊಳಪಟ್ಟಿರದೇ ಬೇರೆ ಜನಾಂಗಗಳವರು ಇಲ್ಲಿ ಇರಬಹುದಾಗಿತ್ತು. ಆದರೆ ಬ್ರಾಹ್ಮಣರಿಗೆ ಮಾತ್ರ ಮೀಸಲಾಗಿ ಅಲ್ಲಿಯ ಉತ್ಪತ್ತಿಯೆಲ್ಲವೂ ಸಲ್ಲುತ್ತಿತ್ತು. ಇದರ ಮೂಲ ರೂಪ 'ಅಗ್ರಹಾರ' ಎಂದಿರ ಬೇಕೆಂದೂ, ಅದು ಅಗ್ರ + ಆಹಾರ ಎಂದು ಎರಡು ಪದಗಳ ಸಮಾಸವೆಂದೂ ಪ್ರೊ.ಡಿ.ಎಲ್. ನರಸಿಂಹಾಚಾರ್ಯರ ಅಭಿಪ್ರಾಯ. 'ಅಗ್ರ' ಎಂದರೆ ಶ್ರೇಷ್ಠ, 'ಆಹಾರ' ಎಂದರೆ ದೇಶ ಅಥವಾ ಸ್ಥಳ. ಅಗ್ರಹಾರವೆಂದರೆ ಶ್ರೇಷ್ಠರಿಗೆ ಕೊಟ್ಟಿರುವ ಊರು ಅಥವಾ ಸ್ಥಳ ಎಂದರ್ಥ."[೯]

ಅಗ್ರಹಾರಗಳು ವಿದ್ಯಾಕೇಂದ್ರಗಳಾಗಿ ನಿರಂತರ ಕೆಲಸ ನಿರ್ವಹಿಸುತ್ತಿದ್ದವು. ಗುರು ಕುಲದಿಂದ ಹಿಂದಿರುಗಿ ಬಂದ ನಂತರ ಬ್ರಾಹ್ಮಣರು ಅಗ್ರಹಾರದಲ್ಲಿ ಮತ್ತೆ ತಮ್ಮ ವಿದ್ಯಾಭ್ಯಾಸವನ್ನು ಮುಂದುವರೆಸುತ್ತಿದ್ದರು. ಪುರೋಹಿತರಿಗೆ, ವಿದ್ವಾಂಸರಿಗೆ ಭೂಮಿಯನ್ನು ದಾನವಾಗಿ ನೀಡುತ್ತಿದ್ದರು. ಇಂತಹ ಭೂಮಿಯು ಅಗ್ರಹಾರ ವಿದ್ಯಾಕೇಂದ್ರಗಳಾಗಿ ಬಳಕೆಯಲ್ಲಿದ್ದವು. ಹೀಗೆ ಶಾಸನಗಳಿಂದ ಉಲ್ಲೇಖಿತವಾದ ಅಗ್ರಹಾರವನ್ನು "ಸರ್ವನಮಸ್ಯದಗ್ರಹಾರ" ಅಗ್ರಹಾರವೆಂದು ಕರೆಯಲಾಗಿದೆ.

ಮುಕ್ಕುಂದಿಯ ಐತಿಹಾಸಿಕ ವಿವೇಚನೆಯನ್ನು ಕುರಿತು ತಿಳಿದುಕೊಳ್ಳುವ ಸಂದರ್ಭದಲ್ಲಿ ಅದರ ಅಧ್ಯಯನ ವ್ಯಾಪ್ತಿಯು ಗ್ರಾಮಕ್ಕೆ ಸೀಮಿತವಾಗಿದ್ದರೂ ಸಮೀಪದಲ್ಲಿ ಇರುವ ಸಾಲಗುಂದೆ ಗ್ರಾಮದ ಶಾಸನ ಅಧ್ಯಯನಕ್ಕೆ ಅವಶ್ಯಕ. ಈ ಗ್ರಾಮ ಎಡೆ ದೊರೆ ನಾಡಿನ ನಿಟ್ಟುರವೆ ೭೦ಕ್ಕೆ ಸೇರಿದ

ಅಗ್ರಹಾರವಾಗಿದೆ. ಕ್ರಿ.ಶ.೧೦೮೫ರ ಶಾಸನದಲ್ಲಿ ಇದರ ಉಲ್ಲೇಖ ಬಂದಿದ್ದು,[೬೦] ಈ ನಾಡನ್ನು ನಾಗರಾಜ ಎಂಬುವವನು ಆಳುತ್ತಿದ್ದಂತೆ ಹೇಳಿದೆ. ಈತನ ಮಗ ನಾಗದೇವನು ನಾಗೇಶ್ವರ ದೇವಾಲಯ ಕಟ್ಟಿಸಿ ದೇವಾಲಯದ ನಿರ್ವಹಣೆಗಾಗಿ ತುಂಗಭದ್ರಾ ತೀರದಲ್ಲಿ ೧೨ ಮತ್ತರು ಭೂಮಿ, ಒಂದು ಗಾಣವನ್ನು ದಾನ ನೀಡುತ್ತಾನೆ. ಇಲ್ಲಿಯ ಮಹಾಜನರಿಗೆ ಹನ್ನೆರಡು ಮತ್ತರನ್ನು ೩೨ ಗೇಣೆಗಳೆಯಲ್ಲಿ ಅಳೆದು ದಾನ ನೀಡುತ್ತಾರೆ.

ಈ ಶಾಸನದ ಪ್ರಕಾರ ಸಾಲಗುಂದೆಯ ನಾಗೇಶ್ವರ ದೇವಾಲಯಕ್ಕೆ ನಾಗರಾಜನು ದಾನ ನೀಡಿದ ವಿಷಯವನ್ನು ತಿಳಿಸುತ್ತದೆ. ಆದರೆ ದಾನಕೊಟ್ಟ ಭೂಮಿ ಮುಕ್ಕಂದಿಯ ಭಾಗವಾಗಿದೆ ಎಂದು ಉಲ್ಲೇಖಿಸಿದೆ.

ಮುಕ್ಕುಂದಿ

ಇದು ನಿಟ್ಟರವೆ ೨೦ರ ಆಡಳಿತ ವಿಭಾಗಕ್ಕೆ ಸೇರಿದ್ದು ಈ ಅಗ್ರಹಾರದಲ್ಲಿ ೩೦೦ ಮಹಾಜನರಿದ್ದಂತೆ ತಿಳಿದುಬರುತ್ತದೆ. ಇದು ಹಿಂದೆ ವರದರಾಜ ಅಮ್ಮಪುರವೆಂದೂ[೬೧] ಪ್ರಸಿದ್ಧಿ ಪಡೆದಿತ್ತು. ಕ್ರಿ.ಶ.೧೫೬೧ ಶಾಸನವು[೬೨] ಸರ್ವಮಾನ್ಯ ಅಗ್ರಹಾರವೆಂದು ಕರೆದಿದ್ದಂತೆ ತಿಳಿಸುತ್ತದೆ. ಇಲ್ಲಿ ನೆಲೆಸಿದ ಮಹಾಜನಗಳು ಸಾಗುವಳಿಗಾಗಿ, ಭೂಮಿಯನ್ನು ವಾಮುನ ಮುದ್ರೆ ಕಲ್ಲುಹಾಕಿಸಿ ದಾನ ಬಿಟ್ಟಿದ್ದನ್ನು ಕಾಣುತ್ತೇವೆ. ಕ್ರಿ.ಶ.೧೨ನೇ ಶತಮಾನದ ಶಾಸನವು ಮುಕ್ಕುಂದೆಯಲ್ಲಿ ಕಟ್ಟಿಸಿದ ದೇವಾಲಯಕ್ಕೆ ಸೇನಬೋವ ಭಾವಣ್ಣಯ್ಯನು ಅಕ್ಷಯ ನಿಧಿ ಭಂಡಾರವನ್ನು ದಾನ ನೀಡಿದ್ದನ್ನು ತಿಳಿಸುತ್ತದೆ.[೬೩] ಕ್ರಿ.ಶ.೧೦೬೬ರಲ್ಲಿ ದೊರೆತ ಶಾಸನವು ಮುಕ್ಕಂದೆಯನ್ನು ತ್ರಿಭೋಗಾಭ್ಯಂತರವಾಗಿ ತ್ರೈಲೋಕ್ಯಮಲ್ಲನ ರಾಣಿ ತ್ರೈಲೋಕ್ಯ ಮಹಾದೇವಿ ಆಳುತ್ತಿದ್ದಂತೆ[೬೪] ಕಂಡುಬಂದಿದೆ.

ಈ ಮೇಲೆ ತಿಳಿಸಿರುವ ಶಾಸನಗಳ ಉಲ್ಲೇಖದಿಂದ ಮುಕ್ಕುಂದಿಯು ಪ್ರಾಚೀನ ಅಗ್ರಹಾರಗಳಲ್ಲಿ ಒಂದಾಗಿದ್ದು, ತನ್ನದೇ ಆದ ಸ್ವತಂತ್ರವನ್ನು ಪಡೆದಿತ್ತು ಎಂಬುದನ್ನು ತಿಳಿಯಬಹುದಾಗಿದೆ.

ಅಗ್ರಹಾರಗಳೂ ಸಂಖ್ಯೆಯ ದೃಷ್ಟಿಯಿಂದ ಬಹಳಷ್ಟು ಶಾಸನಗಳಲ್ಲಿ ಉಲ್ಲೇಖವಾಗಿರುವುದರಿಂದ ವಿದ್ಯೆಗೆ ಹೆಚ್ಚಿನ ಆದ್ಯತೆ ನೀಡಿದ್ದನ್ನು ಪ್ರಾಚೀನ ಕಾಲದಲ್ಲಿದ್ದಂತೆ ಇಲ್ಲಿಯೂ ಅಗ್ರಹಾರಗಳು ಆತ್ಮೋದ್ಧಾರವನ್ನು ಬೆಳೆಸಿ ಸಮಾಜ ವ್ಯವಸ್ಥೆಯ ಕೇಂದ್ರಗಳಾಗಿ ಸದಾ ಕಾಲ ಕಾರ್ಯನಿರ್ವಹಿಸುತ್ತಿದ್ದವು ಎಂಬುದನ್ನು ಗಮನಿಸಬಹುದು. ಈ ಶಾಸನಗಳಲ್ಲಿ ಪ್ರಮುಖವಾಗಿ ದಾನ ಬಿಟ್ಟಿದ್ದರ ಮಾಹಿತಿ ಅತಿ ಹೆಚ್ಚಾಗಿ ದೊರೆಯುತ್ತದೆ. ಅಲ್ಲದೆ ಇಲ್ಲಿ ನೆಲೆಸಿದ ಬ್ರಾಹ್ಮಣರಿಗೆ, ಅರಸರು ಸೇರಿದಂತೆ ಸಾಮಂತರು, ಮಾಂಡಲೀಕರು ದಾನ ಬಿಟ್ಟಿದ್ದನ್ನು ಕಾಣುತ್ತೇವೆ. ಕೆಲವು ಸಂದರ್ಭದಲ್ಲಿ ಗ್ರಾಮವನ್ನು (ಅಗ್ರಹಾರ) ದಾನವಾಗಿ ಬಿಡಲಾಗುತ್ತಿತ್ತು. ಈ ಅಗ್ರಹಾರಗಳಲ್ಲಿ ನೆಲೆಸಿದ ಬ್ರಾಹ್ಮಣರನ್ನು ಮಹಾ ಜನಗಳೆಂದೇ ಕರೆಯಲಾಗುತ್ತಿತ್ತು. ಮಹಾಜನಗಳು ಅಗ್ರಹಾರಗಳ ಒಡೆಯರಾದುದ್ದರಿಂದ ಅವರಿಗೆ ಅಗ್ರಹಾರಗಳ

ಮೇಲ ಪ್ರಭುತ್ವವಿರುತ್ತಿತ್ತು. "ಆದರೆ ಕನ್ನಡ ನಾಡಿನ ಅಗ್ರಹಾರಗಳಿಗಾಗಿ ಮಹಾಜನರು ಹಾಗೆಯೇ ಸಮಿತಿ ಗಳನ್ನು ರಚಿಸುತ್ತಿರಲಿಲ್ಲ. ಬಹುಶಃ ತಾವೇ ಸಾಮೂಹಿಕವಾಗಿ ಊರಿನ ಒಳ ಆಡಳಿತವನ್ನು ನಡೆಸಿಕೊಂಡು ಹೋಗುತ್ತಿದ್ದರು."[೩೫] ಏಕೆಂದರೆ ಅಗ್ರಹಾರಗಳಲ್ಲಿ ಮಹಾಜನರ ಸಂಖ್ಯೆ ನೋಡಿದರೆ ಈ ಮೇಲೆನ ಭಾವನೆ ಬರುತ್ತದೆ. ಅದೇ ರೀತಿಯಾಗಿ ಈ ಗ್ರಾಮದಲ್ಲಿಯು 'ಮುನ್ನೂರು' ಇನ್ನು ಮುಂತಾದ ಸಂಖ್ಯೆಯಲ್ಲಿ ಮಹಾಜನರಿರುತ್ತಿದ್ದರೆಂದೂ ಇಲ್ಲಿನ ಶಾಸನಗಳಿಂದ ತಿಳಿದುಬರುತ್ತದೆ.[೩೬]

ಐತಿಹಾಸಿಕ ವಿವೇಚನೆಯಲ್ಲಿ ಸಿಂಧನೂರು ತಾಲೂಕಿನ ಶಾಸನಗಳನ್ನು ಪರಿಶೀಲಿಸಿದಾಗ ಮಹಾಜನರನ್ನು ಕುರಿತು ವಿದ್ವಜ್ಜನಗಳು, ವಿಪ್ರಚೋಡಾಮಣಿಗಳು, ದ್ವಿಜಗುರು ದೇವತಾ ಪೂಜಾತತ್ಪರೂ, ಸಕಲ ಶಾಸ್ತ್ರ ವಿಶಾರದರೂ ಎಂದು ಶಾಸನ ವರ್ಣಿಸಿದ್ದನ್ನು ಕಾಣುತ್ತೇವೆ. ವಿದ್ಯಾಕ್ಷೇತ್ರವನ್ನು ಹೊರತು ಪಡಿಸಿಯೂ ರಾಜಕೀಯ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿಯೂ ಇವರು ಕಾರ್ಯ ನಿರ್ವಹಿಸುತ್ತಿದ್ದರು. ಇವರು ಹಲವಾರು ಧಾರ್ಮಿಕ ಆಚರಣೆಗಳಲ್ಲಿ ಪಾಲ್ಗೊಳ್ಳುತ್ತಿದ್ದರಲ್ಲದೆ, ಅದಕ್ಕಾಗಿ ಹಣವನ್ನು ನೀಡುತ್ತಿದ್ದರು. ಹಾಗೂ ಸಾರ್ವಜನಿಕರು ನೀಡುತ್ತಿದ್ದ ದಾನ ದತ್ತಿಗಳಿಗೆ ಇವರು ಧರ್ಮದರ್ಶಿಗಳೂ ಆಗಿದ್ದರು. ಆದರೆ ಇವರ ಕುರಿತು ಇಲ್ಲಿ ದೊರೆತ ಶಾಸನಗಳಲ್ಲಿ ಸ್ಪಷ್ಟವಾಗಿ ಉಲ್ಲೇಖವಾಗಿರದಿದ್ದರೂ ಕೆಲವೊಂದು ಶಾಸನಗಳಲ್ಲಿ ಶಿಕ್ಷಣಕ್ಕೆ ದಾನ ನೀಡಿರುವುದನ್ನು ಗಮನಿಸಬಹುದು.

"ಭೋಗಗಕ್ಕಂ ಮಠದ ತಪೂಧನರ ವಿಧ್ಯಾಸತ್ರಕ್ಕ ಮಾಣಿಗಳಾ ಹಾರ...ದಾನಕಂ" ಎಂಬುದಾಗಿ ಶಾಸನದಿಂದ ತಿಳಿದುಬರುತ್ತದೆ.[೩೭]

'ಅಮಿತೊತ್ಸಾಹದೇ ವಿಪ್ರ ಸಂತತಿಗೆ ವಿದ್ಯಾದಾನಮಂ ಭೋಮಿ
ದಾನಮನಶ್ವಾದಿ ಸಮಸ್ತ ದಾನಮನೆ ದರ್ಪೋಪನ್ನಮಿ'[೩೮]

ಈ ರೀತಿಯಾಗಿ ಶಾಸನಗಳು ಶಿಕ್ಷಣಕ್ಕೆ ದಾನ ಮಾಡಿದ ವಿಚಾರ ತಿಳಿದುಬರುತ್ತದೆ. ಆದರೆ ಈ ಅಗ್ರಹಾರಗಳಲ್ಲಿ ಯಾವ ಯಾವ ವಿಷಯಗಳ ಕುರಿತು ಶಿಕ್ಷಣವನ್ನು ನೀಡುತ್ತಿದ್ದರು ಎನ್ನುವುದರ ಕುರಿತು ಮಾಹಿತಿ ದೊರೆತಿರುವುದಿಲ್ಲ. ಆದಾಗ್ಯೂ ಇತರ ಅಗ್ರಹಾರಗಳಲ್ಲಿ ನಡೆಯುತ್ತಿದ್ದ ಅಧ್ಯಯನದ ವಿಷಯ ಗಳನ್ನು ಇಲ್ಲಿಯೂ ಕಲಿಸಲಾಗುತ್ತಿತ್ತೆಂದು ಈ ಕೆಳಗಿನ ಮಾಹಿತಿಯಿಂದ ಅರಿಯಬಹುದಾಗಿದೆ.

"ಕುರೆತ ಕೊಂಟೆಯ (ಈಗಿನ ಕುರ್ತಕೋಟಿ) ಇನ್ನೊರ್ವರು, ಮಹಾಜನರನ್ನು ಒಂದು ಶಾಸನವು ಹೀಗೆ ಹೊಗಳುತ್ತದೆ : "ಸ್ವಸ್ತನೇಕ ಗುಣಗಳಾಳಂಕ್ರಿತ ಮುಖಕಮಳವಿನಿರ್ಗತ ವೇದ ವೇದಾಂಗೋಪಾಂಗಾನೇಕ ಶಾಸ್ತ್ರ ಷ್ಟಾದಶಸ್ಮೃತಿ ಪುರಾಣ ವಾಗ್ಭೂಷಣರ್ ಯಮನಿಯಮ ಸ್ವಾಧ್ಯಾಯ ಧ್ಯಾನಧಾರಣ ಮೌನಾನುಷ್ಠಾನ ಪರಾಯಣರ್ ವಿಧಿತ ವೇದಾರ್ಥ ವಿದ್ಯಾಪಾರಗರ್ ಷಟ್ಕರ್ಮ ನಿರತರ್ ಸಪ್ತಸೋಮ ಸಂಸ್ಥಾವಭೃತಾವಗಾಹನ ಪವಿತ್ರೀಕೃತ ಶರೀರ್ ಪರಮ ಪರೋಪಕಾರಿಗಳಾಶ್ರೀತ ಜನ ಕಲ್ಪವೃಕ್ಷಕೇಶ ವಾಕ್ಯಳ್ದುಷ್ಟ ನಿಗ್ರಹ ಶಿಷ್ಟ ಪ್ರತಿಪಾಳಕರಪ್ಪ ಶ್ರೀ ಮತ್ಕುರೆತ ಕೊಂಟೆಯೂರೊಡೆಯರು ವಾಸುದೇವ ಭಟ್ಟ ಸೋಮಯಾಜಿಯ

ಪ್ರಮುಖವಿಶೇಷ ಮಹಾಜನವಿನ್ನೊರ್ವರು || ಆದಿಬ್ರಹ್ಮ ಸಮಾನದ ವೇದ ವಿದರ್ ಸಪ್ತಸೋಮ ಸಂಸ್ಥಾನ ಪಭೃತಾಹ್ಲಾದನ ಕೃತರಮಳಯಶರ್ ಮೇದಿನಿಯೊಳ್ಕರೆತ ಕೊಂಟೆಯ ದ್ವಿಜನಿಚಯ @@ ವಿದಿತರ ನೀತಿವಿದರ್ ವಿನೂತ ವಿನಯಾಳಂಕಾರರತ್ನೂರ್ಜಿತರ್ ಮದ ಮಾತ್ಸರ್ಯ ವಿದುರಾದಿ ಪುರಷ ಪ್ರಖ್ಯಾತಿಯ ನ್ತಾಳಿಯಭ್ಯುದಯಮಾ ದರಾವುದರೊಳಂ ಧರ್ಮಜ್ಞಹಾರದನದ ಪೆಂಪಿಟ್ಟಳಮೆಂದುಯೀ ಕುರೆತಕೊಂಟೆ ಗ್ರಾಮದೊಳು ದ್ವಿಜರ್" ಎಂದು ಹೇಳಿದೆ.[೧೯]

ಇವರಿಗಿದ್ದ ಈ ವಿಶೇಷಣಗಳನ್ನು ನೋಡಿದರೆ, ಶಾಸ್ತ್ರ, ಸ್ಮೃತಿ, ಪುರಾಣ, ವೇದಾ ಮುಂತಾದ ವಿಷಯಗಳಲ್ಲಿ ದೊಡ್ಡ ವಿದ್ವಾಂಸರಾಗಿದ್ದರೆಂದೂ ತಿಳಿದುಬರುತ್ತದೆ. ಒಟ್ಟಾರೆಯಾಗಿ ಮುಕ್ಕುಂದಿಯಲ್ಲಿ ದೊರೆಯುವ ಶಾಸನಗಳು ಮುಕ್ಕುಂದಿಯನ್ನು ಸರ್ವಮಾನ್ಯ ಅಗ್ರಹಾರವೆಂದು ಉಲ್ಲೇಖಿಸಿರುವುದರಿಂದ ಈ ಗ್ರಾಮವು ಪ್ರಾಚೀನ ವಿದ್ಯಾಕೇಂದ್ರಗಳಲ್ಲಿ ಮುಕ್ಕುಂದಿಯು ಒಂದಾಗಿತ್ತೆಂದು ಊಹಿಸಬಹುದಾಗಿದೆ.

ಅಡಿಟಿಪ್ಪಣಿ

೧. ನಾಗಭೂಷಣ ಸಿ., ೧೯೯೯, **ಕನ್ನಡ ಸಾಹಿತ್ಯ ಸಂಸ್ಕೃತಿ ಶೋಧನೆ,** ಪು.೧೩-೧೪

೨. ನಾಗಭೂಷಣ ಸಿ., ೨೦೦೫, **ಶಾಸನಗಳು ಮತ್ತು ಕನ್ನಡ ಸಾಹಿತ್ಯ,** ಪು.೧೫-೧೬

೩. ನಾಗಭೂಷಣ ಸಿ., ೨೦೦೨, **ಸಾಹಿತ್ಯ ಸಂಸ್ಕೃತಿ ಹುಡುಕಾಟ,** ಪು.೧೯

೪. ಭಾರತಿಬಸವರಾಜ, ೨೦೦೫, **ರಾಯಚೂರು ಜಿಲ್ಲೆಯ ಶಾಸನಗಳ ಸಮಗ್ರ ಅಧ್ಯಯನ,** ಪು.೨೦೭

೫. ದೇವರಕೊಂಡಾರೆಡ್ಡಿ, ೨೦೦೩, **ಕನ್ನಡ ವಿಶ್ವವಿದ್ಯಾಲಯ ಶಾಸನ ಸಂ.೭,** ಪು.೩೬೧

೬. ಅದೇ, ಪು.೩೭೩

೭. ಅದೇ, ಪು.೩೫೪

೮. ಅದೇ, ೩೫೨

೯. ಅದೇ ೩೪೫

೧೦. ಅದೇ ೩೫೯

೧೧. ಅದೇ ೩೬೨

೧೨. ನಾಗಭೂಷಣ ಸಿ., ೨೦೦೨, **ಪೂರ್ವೋಕ್ತ,** ಪು.೩೨

೧೩. ನಾಗಭೂಷಣ ಸಿ., ೨೦೦೫, **ಪೂರ್ವೋಕ್ತ,** ಪು.೭೯

೧೪. ದೇವರಾಕೊಂಡಾರೆಡ್ಡಿ (ಸಂ), ೨೦೦೩, ಪೂರ್ವೋಕ್ತ, ಪು.೩೫೯

೧೫. ಅದೇ, ಪು.೩೫೪

೧೬. ಅದೇ, ೩೫೯

೧೭. ಅದೇ, ಪು.೩೬೨

೧೮. ಅದೇ, ಪು.೩೫೯

೧೯. ಅದೇ, ಪು.೩೫೯

೨೦. ಅದೇ, ಪು.೩೬೩

೨೧. ಅದೇ, ಪು.೩೫೦

೨೨. ಶಿವಾನಂದ ವಿ., ೧೯೯೨, ಹೈದರಾಬಾದು ಕರ್ನಾಟಕ ಭಾಗದ ಕನ್ನಡ ಶಿಲಾಶಾಸನಗಳು, ಪು.೩

೨೩. ಚಿದಾನಂದ ಮೂರ್ತಿ, ೨೦೦೨, ಕನ್ನಡ ಶಾಸನಗಳು ಸಂಸ್ಕೃತಿ ಅಧ್ಯಯನ, ಪು.೬೩

೨೪. ದೇವರಕೊಂಡಾರೆಡ್ಡಿ, ೨೦೦೩, ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ, ಪು.೩೭೫

೨೫. ಅದೇ, ೪೨೫

೨೬. ಅದೇ, ೩೯೨

೨೭. ಚನ್ನಬಸವ ಹಿರೇಮಠ, ೨೦೦೦, ಎಡದೊರೆ ನಾಡು, ಪು.೨೬

೨೮. ಎಂ.ಚಿದಾನಂದಮೂರ್ತಿ, ೨೦೦೨, ಪೂರ್ವೋಕ್ತ, ಪು.೨೨೬-೨೨೭

೨೯. ಅದೇ, ೨೩೦

೩೦. ದೇವರಕೊಂಡಾರೆಡ್ಡಿ, ೨೦೦೩, ಪೂರ್ವೋಕ್ತ, ಪು.೩೪೯

೩೧. ಅದೇ, ೩೭೧

೩೨. ಅದೇ, ೩೭೧

೩೩. ಅದೇ, ೩೭೨

೩೪. ಅದೇ, ೩೭೬

೩೫. ಚಿದಾನಂದಮೂರ್ತಿ ಎಂ., ೨೦೦೨, ಪೂರ್ವೋಕ್ತ, ಪು.೨೩೩

೩೬. ದೇವರ ಕೊಂಡಾರೆಡ್ಡಿ, ೨೦೦೩, ಪೂರ್ವೋಕ್ತ, ಪು. ೩೬೨

೩೭. ಅದೇ, ೩೬೦

೩೮. ಅದೇ, ೩೫೨

೩೯. ಚಿದಾನಂದಮೂರ್ತಿ ಎಂ., ೨೦೦೨, ಪೂರ್ವೋಕ್ತ, ಪು.೨೩

ಅಧ್ಯಾಯ ೫

ವಾಸ್ತು ಮತ್ತು ಮೂರ್ತಿಶಿಲ್ಪ

೫

ವಾಸ್ತು ಮತ್ತು ಮೂರ್ತಿಶಿಲ್ಪ

೫.೧. ದೇವಾಲಯ

ಭಾರತೀಯ ಸಂಸ್ಕೃತಿಯಲ್ಲಿ ಧರ್ಮ ಎಂಬ ಪದಕ್ಕೆ ತನ್ನದೇ ಆದ ವಿಶಿಷ್ಟ ಸ್ಥಾನವಿದೆ. ಪ್ರಾಚೀನ ಕರ್ನಾಟಕದ ದೇವಾಲಯಗಳು ಜನರ ಭಕ್ತಿಯ ಪ್ರತೀಕಗಳಾಗಿದ್ದವು. ಧಾರ್ಮಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಅವುಗಳಿಂದ ದೊರೆತ ಪ್ರಾಮುಖ್ಯತೆಯನ್ನು ಶಾಸನಗಳ ಮೂಲಕ ಅರಿಯಬಹುದಾಗಿದೆ. ದೇವಾಲಯದ ನಿರ್ಮಾಣದ ವಿಷಯದಲ್ಲಿ ಹೆಚ್ಚು ಮಾನ್ಯತೆ ಮತ್ತು ಪ್ರೋತ್ಸಾಹ ಕಂಡುಬರುವುದು ಎಂಟು ಮತ್ತು ಒಂಬತ್ತನೇ ಶತಮಾನದ ನಂತರ ಅರಸರಿಂದ ಹಿಡಿದು ಜನಸಾಮಾನ್ಯರವರೆಗೂ ಈ ಧಾರ್ಮಿಕ ಭಾವನೆ ಸಹಜ ಗುಣವಾಗಿ ಪರಿಣಮಿಸಿದೆ. ಪ್ರತಿಯೊಂದು ಊರಿನಲ್ಲಿಯೂ ದೇವಾಲಯಗಳು ಸ್ಥಾಪನೆಗೊಂಡವು. ದೇವಾಲಯಗಳ ನಿರ್ಮಾಣ ಉದಾತ್ತ ಸಂಸ್ಕೃತಿಯ ಸಾಧನೆಗೆ ಹಿನ್ನೆಲೆ ಎಂಬ ಅಂಶದಿಂದಲೇ ಅಧಿಕ ಸಂಖ್ಯೆಯಲ್ಲಿ ದೇವಾಲಯಗಳು ನಿರ್ಮಾಣಗೊಂಡವು. ದೇವಾಲಯಗಳ ನಿರ್ಮಾಣಕ್ಕೆ ಕಾರಣಕರ್ತರಾದ ವ್ಯಕ್ತಿಗಳು ಜನರಲ್ಲಿ ಧಾರ್ಮಿಕ ಜೀವನ ರೂಪಗೊಳ್ಳಲು ಕಾರಣರಾದರು.

ಭಾರತೀಯರಿಗೆ ದೇವಸ್ಥಾನಗಳ ಬಗೆಗಿರುವ ನಂಬಿಕೆ, ಭಕ್ತಿ, ವಿಶಿಷ್ಠವಾಗಿದೆ. ಪ್ರಾಚೀನ ಕಾಲದಲ್ಲಿ ಅವುಗಳ ಕ್ಷೇತ್ರವು ವ್ಯಾಪಕವಾಗಿದ್ದಿತು. ಕರ್ನಾಟಕದ ಕಲೆಗಳ ಬಹುಪ್ರಾಚೀನ ನಿದರ್ಶನಗಳಾಗಿದ್ದು, ಮುಂದೆ ವಿವಿಧ ಅರಸು ಮನೆತನಗಳು ಅಧಿಕಾರಕ್ಕೆ ಬಂದಾಗ ಅನೇಕ ದೇವಾಲಯಗಳು ನಿರ್ಮಾಣಗೊಂಡಿದ್ದನ್ನು ಕಾಣುತ್ತೇವೆ. 'ಪೂಜೆಗಾಗಿ' ಪ್ರಾರ್ಥನೆಗಾಗಿ ದೇವರ ಮೂರ್ತಿಗಳನ್ನು ಇತರ ಆರಾಧ್ಯ ವಸ್ತುಗಳನ್ನು ಸ್ಥಾಪಿಸಿ ರಕ್ಷಿಸಲಿಕ್ಕಾಗಿ ನಿರ್ಮಿಸಿರುವ ವಿಶಿಷ್ಟವಾದ ಕಟ್ಟಡವೇ ದೇವಾಲಯ.

ದೇವಾಲಯಗಳು ಸಮಾಜದ ಅವಿಭಾಜ್ಯ ಅಂಗವಾಗಿದೆ. ದೇವಾಲಯಗಳಿಂದಲೇ ಇಂದಿಗೂ ಕೆಲವು ಸ್ಥಳಗಳು ಪುಣ್ಯಸ್ಥಳಗಳಾಗಿ ಪ್ರವಾಸಿ ತಾಣಗಳಾಗಿ ಪ್ರಸಿದ್ಧವಾಗಿವೆ. ದೇವರ+ಆಲಯ ದೇವಾಲಯ. 'ಆಲಯ' ಎಂದರೆ ಕಟ್ಟಡವೆಂದರ್ಥ.[೧] ದೇವಾಲಯಗಳು ಬದುಕಿನ ಹಲವು ಮುಖಗಳನ್ನು ಸಾಮುದಾಯಕವಾಗಿ ನಿಯಂತ್ರಿಸುತ್ತಿದ್ದು, ಸಾಂಸ್ಕೃತಿಕ ಚಟುವಟಿಕೆಗಳ ನೆಲೆವೀಡಾಗಿದ್ದವು.[೨] ಇದು ಮುಂದೆ ಕಲೆಯ ಪ್ರತಿರೂಪವಾಗಿ ಮೂಡಿ ಅದನ್ನು ಕಲಾತ್ಮಕವಾಗಿ ನಿರ್ಮಿಸಿರುವುದು ಕೂಡಾ ಮಹತ್ವದ ಅಂಶವಾಗಿ ಬೆಳೆಯಿತು.

ಭಕ್ತಿ ಹಾಗೂ ನಿಷ್ಠೆಗಳನ್ನು ಒಗ್ಗೂಡಿಸಿಕೊಂಡಿದ್ದ ಹಲವಾರು ವ್ಯಕ್ತಿಗಳು, ಪ್ರಾಚೀನ ಮಧ್ಯಕಾಲೀನ ಯುಗದಲ್ಲಿ ದೇವಸ್ಥಾನಗಳ ನಿರ್ಮಾಣಕ್ಕೆ ಕಾರಣೀಭೂತರಾಗಿದ್ದಾರೆ. ದೇವಾಲಯಗಳನ್ನು ಕಟ್ಟಿಸುವುದು ಲೌಕಿಕ ಸಂಪತ್ತಿನ ಗಳಿಕೆಯ ಸಾರ್ಥಕತೆ ಎಂದು ಜನ ಭಾವಿಸಿದ್ದರು. ಜೀವನದಲ್ಲಿ ಒಂದಾದರೂ ಗುಡಿಯನ್ನು ಕಟ್ಟಿಸಬೇಕೆನ್ನುವ ಧಾರ್ಮಿಕ ಭಾವನೆ, ಆ ಕಾಲದ ರಾಜರಿಂದ ಹಿಡಿದು ಸಾಮಾನ್ಯ ಜನತೆಯ ಆಕಾಂಕ್ಷೆಯಾಗಿತ್ತು ಎಂದೆನಿಸುತ್ತದೆ. ದೇವಾಲಯಗಳು ಜನತೆಯ ಅಂತರಂಗವನ್ನು ವಿಕಸಿಸಿದ ರೀತಿಯನ್ನು ಇಲ್ಲಿಯ ಶಾಸನಗಳ ಮೂಲಕ ತಿಳಿಯಬಹುದಾಗಿದೆ. ಊರಿಗೊಂದು ಧಾರ್ಮಿಕೇಂದ್ರ, ಹೆಜ್ಜೆಗೊಂದು, ದೇವಾಲಯಗಳ ಸ್ಮಾರಕಗಳಿರುವಂತೆ ಈ ಗ್ರಾಮದಲ್ಲಿ ಬಹು ಚಟುವಟಿಕೆಗಳಿಗೆ ಆಗರವಾದ ದೇವಾಲಯಗಳ ನಿರ್ಮಾಣ ಕಾರ್ಯ ದೊಡ್ಡ ಪ್ರಮಾಣದಲ್ಲಿ ಆಗಿರುವುದನ್ನು ಶಾಸನಗಳ ಮೂಲಕ ತಿಳಿದು ಕೊಳ್ಳಬಹುದಾಗಿದೆ.

ಇವು ಶಾಸನಗಳಲ್ಲಿ ಉಲ್ಲೇಖಿತ ದೇವಾಲಯಗಳಾಗಿದ್ದು, ಮುಕ್ಕುಂದಿ ವ್ಯಾಪ್ತಿಯಲ್ಲಿ ಬರುವ ದೇವಾಲಯಗಳನ್ನು ಶೈವ, ವೈಷ್ಣವ, ದೇವಾಲಯವೆಂದು ಗುರುತಿಸಲಾಗಿದೆ.

ಶೈವ ದೇವಾಲಯಗಳು

ಕ್ರ.ಸಂ.	ಹೆಸರು	ರಾಜವಂಶ	ಕಾಲ	ಕ್ರಿ.ಶ	ಉಲ್ಲೇಖ
೧.	ಕಾಪಾಳೇಶ್ವರ	ಕಲ್ಯಾಣಚಾಲುಕ್ಯ	೧೧೩೪	ಸಿಂಧ.೫	ಮುಕ್ಕುಂದಿ
೨.	ಬಾಚೇಶ್ವರ	ಕಲ್ಯಾಣಚಾಲುಕ್ಯ	೧೦೯೭	ಸಿಂಧ.೭	ಮುಕ್ಕುಂದಿ
೩.	ಬಾಚೇಶ್ವರ	ಕಲ್ಯಾಣಚಾಲುಕ್ಯ	೧೦೮೮	ಸಿಂಧ.೮	ಮುಕ್ಕುಂದಿ
೪.	ಕಾಪಾಳೇಶ್ವರ	ಕಲ್ಯಾಣಚಾಲುಕ್ಯ	೧೦೬೬	ಸಿಂಧ.೨೦	ಮುಕ್ಕುಂದಿ

ವೈಷ್ಣವ ದೇವಾಲಯಗಳು

ಕ್ರ.ಸಂ.	ಹೆಸರು	ರಾಜವಂಶ	ಕಾಲ	ಕ್ರಿ.ಶ	ಉಲ್ಲೇಖ
೧.	ಕೇಶವ,	ಕಲ್ಯಾಣ ಚಾಲುಕ್ಯ	೧೧೩೪	ಸಿಂ.೫	ಮುಕ್ಕುಂದಿ
೨.	ಕೇಶವ,	ಕಲ್ಯಾಣ ಚಾಲುಕ್ಯ	೧೧೩೪	ಸಿಂ.೬	ಮುಕ್ಕುಂದಿ
೩.	ವಿಷ್ಣು	ಕಲ್ಯಾಣ ಚಾಲುಕ್ಯ	೧೦೮೮	ಸಿಂ.೮	ಮುಕ್ಕುಂದಿ
೪.	ಮುರಹರಿ	ವಿಜಯನಗರ	೧೫೫೪	ಸಿಂ.೧೧	ಮುಕ್ಕುಂದಿ

ಇವು ಶಾಸನ ಉಲ್ಲೇಖಿತ ದೇವಾಲಯಗಳಾಗಿದ್ದು, ಸಮಾಜದಲ್ಲಿಯ ಎಲ್ಲಾ ವರ್ಗದ ಜನತೆಯೂ ದೇವಾಲಯಗಳೊಡನೆ ಸಂಬಂಧ ಇರಿಸಿಕೊಂಡಿದ್ದು, ಶಾಸನಗಳಿಂದ ತಿಳಿದು ಬರುತ್ತದೆ. ದೇವಾಲಯವನ್ನು

ಸ್ಥಾಪಿಸುತ್ತಿದ್ದವರು ಹಾಗೂ ಅದಕ್ಕೆ ದಾನ-ದತ್ತಿಗಳನ್ನು ನೀಡುತ್ತಿದ್ದವರು. ಅಂದಿನ ಅರಸರು, ರಾಣಿಯರು, ಮಾಂಡಳೀಕರು, ಅಮಾತ್ಯರು, ದಂಡನಾಯಕರು, ವರಣಿಕರು, ಅಷ್ಟೇ ಅಲ್ಲದೇ ಸಾಮಾನ್ಯ ಜನರೂ ಕೂಡಾ ದಾನಗಳನ್ನು ನೀಡುತ್ತಿದ್ದರು.

ಇವರೆಲ್ಲರೂ ಒಂದು ರೀತಿಯ ನಿಷ್ಠೆ ಮತ್ತು ಶ್ರದ್ಧೆ ನಂಬಿಕೆಗಳನ್ನು ಹೊಂದಿದ್ದರು. ಆಯಾ ಅರಸು ಮನೆತನಗಳ ಕಾಲದ ಧಾರ್ಮಿಕ ಹಾಗೂ ಆರ್ಥಿಕ ಪರಿಸ್ಥಿತಿಯನ್ನು ಅನುಸರಿಸಿ ನಿರ್ಮಾಣವಾದ ದೇವಾಲಯಗಳು ಸಮಾಜಕ್ಕೆ ಸಲ್ಲಿಸಿದ ಕೊಡುಗೆ ಅಪಾರ ಸಮಾಜದಲ್ಲಿ ಶಿಕ್ಷಣ ಸಂಸ್ಥೆಗಳಾಗಿ ಸಾಮಾಜಿಕ, ಆರ್ಥಿಕ ವಿಕಾಸದ ಹೊಣೆ ಹೊತ್ತು, ನ್ಯಾಯ ವಿತರಣ ಸಂಸ್ಥೆಗಳಾಗಿದ್ದವು ಹೀಗೆ ಅಂದಿನ ದೇವಾಲಯಗಳು ಮತ್ತು ಅದರ ಕೇಂದ್ರ ವ್ಯಕ್ತಿಗಳು ಕರ್ನಾಟಕದ ಸಂಸ್ಕೃತಿಯನ್ನು ಪ್ರತಿನಿಧಿಸುವ ಕೇಂದ್ರ ಬಿಂದುಗಳಾಗಿದ್ದರು.[೩]

ವ್ಯಕ್ತಿಗಳು ತಾವು ನಿಷ್ಠೆಯಿಂದ ಸಂಪಾದಿಸಿದ ಸಂಪತ್ತನ್ನು ಸಾರ್ಥಕಗೊಳಿಸಿಕೊಳ್ಳಬೇಕಾದಾಗ ತಮ್ಮ ಇಷ್ಟದೈವದ ಹೆಸರಿನಲ್ಲಿ ದೇವಾಲಯ ನಿರ್ಮಾಣ ಮಾಡುವ ಉದ್ದೇಶವನ್ನು ಹೊಂದಿದ್ದರು. ತಮ್ಮ ಹೆಸರನ್ನು ಇಷ್ಟ ದೈವದ ಹೆಸರಿನೊಂದಿಗೆ ಸೇರಿಸಿ ದೇವಾಲಯ ನಿರ್ಮಾಣ ಮಾಡುತ್ತಿದ್ದರು. ವ್ಯಕ್ತಿಗೆ ತಂದೆ ತಾಯಿಗಳು ಇಟ್ಟ ಹೆಸರು ಯಾವುದೇ ಆಗರಲಿ, ಆ ವ್ಯಕ್ತಿ ತನ್ನ ಹೆಸರಿಗೆ ಈಶ್ವರ ಎಂಬ ಪದವನ್ನೋ 'ಭಟ್ಟಾರಕ' ಎಂಬ ಪದವನ್ನೋ ಸೇರಿಸಿ. ಆ ಹೆಸರಿನ ದೇವರನ್ನು ಪ್ರತಿಷ್ಠಾಪಿಸುವ ಸಂಗತಿಯು ಹಲವು ಶಾಸನಗಳಲ್ಲಿದೆ.[೪]ಅಂತಹ ದೇವಸ್ಥಾನವನ್ನು ಕಟ್ಟಿಸಿದವನ ಹೆಸರು ಬರುವುದೆಂದು ಕಟ್ಟಿಸಿದವನು ಶಿವನೇ ಆಗಿಬಿಡುತ್ತಾನೆ ಎಂದು ಆ ಕಾಲದ ಜನರು ನಂಬಿದ್ದರು.[೫]

ಕ್ರಿ.ಶ.೧೦೮೪ರಲ್ಲಿ ದಂಡಾಧೀಶನಾದ ನಾಗದೇವನು ನಾಗೇಶ್ವರ ದೇವಸ್ಥಾನವೊಂದನ್ನು ಕಟ್ಟಿಸುತ್ತಾನೆ.[೬] ಈತನು ಈಶ್ವರ ದೇವಾಲಯವನ್ನು ಕಟ್ಟಿಸಿದ್ದರೂ ನಾಗದೇವ ಕಟ್ಟಿಸಿದ ದೇವಾಲಯವಾಗಿದ್ದರಿಂದ ಈ ದೇವಸ್ಥಾನಕ್ಕೆ ನಾಗೇಶ್ವರ ದೇವಸ್ಥಾನ ಎಂಬ ಹೆಸರು ಬಂದಿರುವ ಸಾಧ್ಯತೆ ಇದೆ. ಇಂದಿಗೂ ಈ ದೇವಾಲಯ ಸಾಲಗುಂದಿಯಲ್ಲಿದೆ.

ಕ್ರಿ.ಶ.೧೦೮೮ರ ಶಾಸನದಲ್ಲಿ[೭] ಚಾಳುಕ್ಯ ಅರಸ ತ್ರಿಭುವನಮಲ್ಲನ ಮಾಂಡಳೀಕನಾದ ಬಾಚರಸನು ಬಾಚೇಶ್ವರ ದೇವಾಲಯವನ್ನು ಕಟ್ಟಿಸಿದನು. ಬಾಚರಸನ ಹೆಸರಿನ ಮೊದಲ ಎರಡು 'ಅಕ್ಷರ' ಮತ್ತು 'ಈಶ್ವರ' ಪದ ಸೇರಿ ಬಾಚೇಶ್ವರ ದೇವಾಲಯವೆಂದು ಕರೆದಿರಬಹುದು.

ಕರ್ನಾಟಕದಲ್ಲಿಯ ಕಲಾಸಿರಿಯ ಸಮಗ್ರ ಪದ್ಧತಿ ಹಾಗೂ ಶೈಲಿಯನ್ನು ತನ್ನಲ್ಲಿ ಹುದುಗಿಸಿ ಕೊಂಡಿರುವ ಸಿಂಧನೂರು ತಾಲೂಕಿನ ಮುಕ್ಕುಂದಿ ಗ್ರಾಮ ಕೂಡ ಪ್ರಮುಖವಾಗಿದೆ. ಇದು ಅತ್ಯಂತ ಪ್ರಾಚೀನ ಗ್ರಾಮವಾಗಿದ್ದು ೮ ಮತ್ತು ೯ನೇ ಶತಮಾನದಲ್ಲಿ ಶೈಕ್ಷಣಿಕ ಕೇಂದ್ರವಾಗಿ ಪ್ರಸಿದ್ಧ

ದೇವಾಲಯಗಳ ತಾಣವಾಗಿತ್ತು, ಇಂದು ಸಹ ಮುಕ್ಕುಂದಿಯಲ್ಲಿ ಅತ್ಯಾಕರ್ಷಕವಾದ ದೇವಾಲಯಗಳು ಹಾಗೂ ಮಸೀದಿ ಮಂಟಪಗಳು, ಕೋಟೆ, ಸೇತುವೆ, ಪ್ರಮುಖವಾಗಿ ಕಂಡುಬರುತ್ತವೆ.

ಮುಕ್ಕುಂದಿಯಲ್ಲಿ ಹೆಚ್ಚಾಗಿ ಕಂಡುಬರುವ ದೇವಾಲಯಗಳ ಕಲೆ ಹಾಗೂ ವಾಸ್ತು, ತಳವಿನ್ಯಾಸಗಳನ್ನು ಗಮನಿಸಿದರೆ ಇವುಗಳು ಹೆಚ್ಚಾಗಿ ಕಲ್ಯಾಣ ಚಾಲುಕ್ಯರ ಕಾಲದ ರಚನೆಗಳಾಗಿವೆ. ದೇವಾಲಯ ರಚನೆ ಶಿಲ್ಪ ದೃಷ್ಟಿಯಿಂದ ಇವರ ಕಾಲದಲ್ಲಿ ಮುಕ್ಕುಂದಿ ಗ್ರಾಮವು ಶಿಲ್ಪಕಲೆಗಳ ತವರೂರು ಆಗಿತ್ತೆಂದು ಭಾವಿಸಬಹುದಾಗಿದೆ. ಚಾಳುಕ್ಯ ಅರಸರಲ್ಲದೆ, ಇತರ ಅರಸರ ಆಳ್ವಿಕೆಯಲ್ಲಿ ಕೂಡಾ ದೇವಾಲಯಗಳ ನಿರ್ಮಾಣ, ಜೀರ್ಣೋದ್ಧಾರವಾಗಿದೆ.

ಈ ದೇವಾಲಯಗಳಿಗೆ ಅರಸರು, ಸಾಮಂತರು, ವರ್ತಕರು, ಸಾಮಾನ್ಯರು ಹೀಗೆ ಬೇರೆ ಬೇರೆ ಜನವರ್ಗದವರು ದೇವಾಲಯ ನಿರ್ಮಾಣ, ನಿರ್ವಹಣೆಗೆ, ಯಥೇಚ್ಛವಾಗಿ ದಾನ ನೀಡಿದ್ದಾರೆ. ಮುಕ್ಕುಂದಿ ಗ್ರಾಮದಲ್ಲಿ ಮುರಹರಿ ದೇವಾಲಯ, ಸೋಮಲಿಂಗೇಶ್ವರ ದೇವಾಲಯ ರಾಮಲಿಂಗೇಶ್ವರ ದೇವಾಲಯ, ಪಾಪನಾಥೇಶ್ವರ ದೇವಾಲಯ, ವೀರಭದ್ರೇಶ್ವರ ದೇವಾಲಯ, ಭಂಡಾರ ಖಾನೆ, ಭೈರವೇಶ್ವರ ದೇವಾಲಯ, ಮಸೀದಿ, ಕೋಟೆ, ಸೇತುವೆ ಮಂಟಪಗಳು ಪ್ರಮುಖವಾಗಿ ಕಂಡುಬರುತ್ತವೆ. ಇವುಗಳ ವಾಸ್ತುರಚನೆಯನ್ನು ಈ ಕೆಳಗಿನಂತೆ ಗಮನಿಸಬಹುದಾಗಿದೆ.

ಊರು : ಮುಕ್ಕುಂದಿ	**ಪಂಥ :** ವೈಷ್ಣವ
ಸ್ಥಳ : ಗ್ರಾಮದ ಮಧ್ಯಭಾಗ	**ಅಭಿಮುಖ :** ಪೂರ್ವ
ಸ್ಮಾರಕ : ಮುರಹರಿ ದೇವಾಲಯ	**ಸ್ಥಿತಿ :** ಉತ್ತಮ
ಕಾಲ : ೧೦/೧೧ನೇ ಶತಮಾನ	**ಸಂರಕ್ಷಣೆ :**

ಮುಕ್ಕುಂದಿ ಗ್ರಾಮದಲ್ಲಿರುವ ಈ ದೇವಾಲಯವು ತ್ರಿಕೂಟ ದೇವಾಲಯವಾಗಿದೆ. ಇದು ಗರ್ಭಗೃಹ ಅಂತರಾಳ ತೆರೆದಸಭಾಮಂಟಪವನೊಂದಿದ್ದು ಮತ್ತು ಗರ್ಭಗೃಹದಲ್ಲಿ ಮುರಹರಿಯ, ವಿಗ್ರಹವಿದೆ. ಮೂರ್ತಿಯನ್ನು ಸೂಕ್ಷ್ಮವಾಗಿ ಗಮನಿಸಿದರೆ. ಸೂರ್ಯ ವಿಗ್ರಹದಂತೆ ಕಾಣುತ್ತದೆ. ಅಂತರಾಳದಲ್ಲಿ ಎರಡು ಸಾದ ಕೆತ್ತನೆಯ ಕಂಬಗಳಿವೆ. ತೆರೆದ ಸಭಾ ಮಂಟಪದಲ್ಲಿ ೧೨ ಕಂಬಗಳಿವೆ. ಈ ಕಂಬಗಳು ಅಲಂಕಾರಿಕವಾಗಿ ಕೆತ್ತಲ್ಪಟ್ಟಿವೆ. ಪೀಠ ಪಾದ ದಂಡ ದಂಡಾಗ್ರ ಬೋದಿಗೆಯನ್ನು ಒಳಗೊಂಡಿವೆ. ಸಭಾಮಂಟಪಕ್ಕೆ ಹೊಂದಿಕೊಂಡು ಸೋಪಾನವಿದೆ. ಗರ್ಭಗೃಹದ ಒಳಗಿನಿಂದ ದೇವರಿಗೆ ಸ್ನಾನ ಮಾಡಿದ ನೀರು ಹೊರಬರಲು ಸಾದ ಪ್ರಣಾಳಿಕೆ ಇದೆ.

ಅಧಿಷ್ಠಾನ, ಭಿತ್ತಿ, ಕಪೋತಗಳನ್ನು, ಹೊಂದಿದ ಈ ದೇವಾಲಯದ ವಿಶಾಲವಾದ ಆವರಣದಲ್ಲಿ(ಪ್ರಾಕರ) ಕಂಬಗಳ ಅವಶೇಷಗಳಿವೆ. ಇದು ವೈಷ್ಣವ ದೇವಾಲಯವಾಗಿದ್ದು, ಈ ದೇವಾಸ್ಥಾನದ ಕುರಿತು ಈ ಗ್ರಾಮದ ಜನರು "ಮುಕ್ಕುಂದಿಯಂತಹ ಊರಿಲ್ಲ ಮುರಹರಿಯಂತಹ

ದೇವರಿಲ್ಲ'' ಎಂಬ ಗಾದೆ ಮಾತಿನಂತೆ ಪ್ರಾಚೀನ ಕಾಲದ ದೇವಾಲಯವಾಗಿದೆ. ಮೂರ್ತಿ ಶಿಲ್ಪವನ್ನು ಗಮನಿಸಿದರೆ, ಈ ಗಾದೆ ಮಾತು ನಿಜವೆನಿಸುತ್ತದೆ. 'ಮುರಾ' ಎಂಬ ರಾಕ್ಷಸನನ್ನು 'ಹರಿ' ಸಂಹಾರ ಮಾಡಿ ಇಲ್ಲಿಯೇ ನೆಲಸಿದಾಗ, ಹಿಂದಿನವರು 'ಹರಿ' ಇಲ್ಲಿಂದ ಹೋಗಬಾರದೆಂಬ ಕಾರಣಕ್ಕೆ ತಲೆ ಮೇಲೆ ಹಾರಿ ಜಡಿದು, 'ಮುರಾರಿ' ಎಂಬ ನಾಮಕರಣ ಮಾಡಿದರು. ಇದು ಮುಂದೆ 'ಮುರಹರಿ' ದೇವಸ್ಥಾನವಾಯಿತೆಂದು ಹಿರಿಯರು ತಿಳಿಸುತ್ತಾರೆ.

ಈ ದೇವಾಲಯ ಹಲವಾರು ಶಾಸನಗಳಲ್ಲಿ ಉಲ್ಲೇಖವಾಗಿದ್ದು, ಬೇರೆ ಬೇರೆ ಹೆಸರುಗಳಿಂದ ಕರೆದಿರುವ ಸಾಧ್ಯತೆಯಿದೆ. ಶಾಸನಗಳಲ್ಲಿ ಕೇಶವ, ವಿಷ್ಣು, ಮುರಾರಿ ಎಂದು ಕರೆಯಲಾಗಿದೆ. ಈ ಎಲ್ಲಾ ಹೆಸರು ಶ್ರೀಕೃಷ್ಣ ಪರಮಾತ್ಮನ ಹೆಸರುಗಳಾಗಿವೆ. ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಅರಸರು ಮಾಂಡಳಿಕರು ಸಾಮಂತರು ಸಾಮಾನ್ಯ ಜನರು ಈ ದೇವಾಲಯಕ್ಕೆ ದಾನ ನೀಡಿರುವುದನ್ನು ಶಾಸನಗಳು ತಿಳಿಸುತ್ತವೆ. ಇದೇ ದೇವಾಲಯದ ಒಳಭಾಗದಲ್ಲಿ ಕಲ್ಯಾಣ ಚಾಲುಕ್ಯರ ಎರಡು ಶಾಸನಗಳು ಇವೆ. ಕಾಲಕಾಲಕ್ಕೆ ಈ ದೇವಾಲಯ ಜೀರ್ಣೋದ್ಧಾರಗೊಂಡಿದೆ. ಗ್ರಾನೈಟ್ ಶಿಲೆಯನ್ನು ತೆರೆದ ಸಭಾಮಂಟಪದಲ್ಲಿ ಹಾಕಿಸಲಾಗಿದೆ.

ಒಟ್ಟಾರೆಯಾಗಿ ಈ ದೇವಾಲಯದ ವಾಸ್ತು ಶೈಲಿಯನ್ನು ಮತ್ತು ಈ ದೇವಾಲಯದ ಕುರಿತು ಜನರು ಹೇಳುತ್ತಿರುವ ಐತಿಹ್ಯಗಳನ್ನು ಗಮನಿಸಬಹುದಾಗಿದೆ.

ಊರು : ಮುಕ್ಕುಂದಿ	**ಪಂಥ :** ಶೈವ
ಸ್ಥಳ : ನದಿದಂಡೆ (ತುಂ.ಭ)	**ಅಭಿಮುಖ :** ಪೂರ್ವ
ಸ್ಮಾರಕ : ಪಾಪನಾಥೇಶ್ವರ	**ಸ್ಥಿತಿ :** ಉತ್ತಮ
ಕಾಲ : ೧೦/೧೧ನೇ ಶತಮಾನ	**ಸಂರಕ್ಷಣೆ :**

ಸಿಂಧನೂರು ತಾಲೂಕಿನ ಮುಕ್ಕುಂದಿ ಗ್ರಾಮದ ತುಂಗಭದ್ರಾ ನದಿದಂಡೆ ಮೇಲಿರುವ ಪಾಪನಾಥೇಶ್ವರ ದೇವಾಲಯವು ಏಕಕೂಟ ದೇವಾಲಯವಾಗಿದೆ, ಇದನ್ನು, ಜಗಲಿಯಮೇಲೆ ನಿರ್ಮಿಸಲಾಗಿದೆ. ಇದು ಗರ್ಭಗೃಹ, ತೆರೆದ ಸಭಾಮಂಟಪವನೊಂದಿದ್ದು ಗರ್ಭಗೃಹದಲ್ಲಿ ಪಾಪನಾಥೇಶ್ವರ ಶಿವಲಿಂಗ ವಿಗ್ರಹವಿದೆ, ಈ ತೆರೆದ ಸಭಾಮಂಟಪದಲ್ಲಿ ಸಾದಾ ಕೆತ್ತನೆಯ ೧೨ ಕಂಭಗಳಿವೆ. ಗರ್ಭಗೃಹದ ಲಲಟಾಬಿಂಬದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ. ಈ ದೇವಾಲಯವು ಜಗಲಿ, ಭಿತ್ತಿ ಕಪೋತ ಒಳಗೊಂಡಿದ್ದು, ಇದು ಶಿಖರ ರಹಿತವಾಗಿದೆ. ದೇವಾಲಯ ಮೇಲ್ಛಾವಣಿಯು ಸಾದ ಕೆತ್ತನೆಯಿಂದ ಕೂಡಿರುವುದು ದೇವಾಲಯದ ಮುಂದೆ ವಿಶಾಲವಾದ ಪಾಕಾರವಿದ್ದು, ಪ್ರಾಕಾರದಲ್ಲಿ ಎದುರು ಬಸವಣ್ಣನ ಶಿಲ್ಪವನ್ನು ಪ್ರತಿಷ್ಠಾಪಿಸಲಾಗಿದೆ. ಈ ದೇವಾಲಯವು ಪೂರ್ವಾಭಿಮುಖವಾಗಿದ್ದು ಉತ್ತಮವಾಗಿದೆ. ಈ ದೇವಾಲಯದ ಪ್ರಾಕಾರದಲ್ಲಿ ಕಲ್ಯಾಣ ಚಾಲುಕ್ಯರ ಕಾಲದ ಶಾಸನ ಮತ್ತು ಮೂರು ಪಟ್ಟಿಕೆಯ ವೀರಗಲ್ಲು ಇದೆ. ತುಂಗಭದ್ರಾ

ನದಿಯ ಪಶ್ಚಿಮ ವಾಹಿನಿಯಾಗಿ ಹರಿಯುವುದರಿಂದ ಸಂಕ್ರಾಂತಿ ಹಬ್ಬದಲ್ಲಿ ಪುಣ್ಯಸ್ನಾನ ಮಾಡಲು ಬೇರೆ ಬೇರೆ ಗ್ರಾಮಗಳಿಂದ ಜನ ಇಲ್ಲಿಗೆ ಅಗಮಿಸುತ್ತಾರೆ.

ಊರು : ಮುಕ್ಕುಂದಿ | **ಪಂಥ : ಶೈವ**
ಸ್ಥಳ : ನದಿದಂಡೆ (ತುಂ.ಭ) | **ಅಭಿಮುಖ : ಪೂರ್ವ**
ಸ್ಮಾರಕ : ರಾಮಲಿಂಗೇಶ್ವರ ದೇವಾಲಯ | **ಸ್ಥಿತಿ : ಕನಿಷ್ಠ**
ಕಾಲ : ೧೦/೧೧ನೇ ಶತಮಾನ | **ಸಂರಕ್ಷಣೆ :**

ಮುಕ್ಕುಂದಿ ಗ್ರಾಮದ ತುಂಗಭದ್ರಾ ನದಿಯದಂಡೆಯ ಮೇಲಿರುವ ಪಾಳುಬಿದ್ದಿರುವ ರಾಮಲಿಂಗೇಶ್ವರ ದೇವಾಲಯವು ಪೂರ್ವಾಭಿಮುಖವಾಗಿದೆ. ಈ ದೇವಾಲಯವು ಗರ್ಭಗೃಹ ಅಂತರಾಳ, ಸಭಾಮಂಟಪವನ್ನು ಹೊಂದಿದ್ದು, ಗರ್ಭಗೃಹದಲ್ಲಿ ಭಿನ್ನವಾದ ಶಿವಲಿಂಗವಿದೆ. ಸಭಾ ಮಂಟಪದಲ್ಲಿ ನಂದಿ ಶಿಲ್ಪವಿದೆ. ಗರ್ಭಗೃಹದ ಬಾಗಿಲುವಾಡವು ಸುರಳಿಗಳಿಂದ ಅಲಂಕೃತವಾಗಿದ್ದು ಲಲಾಟಬಿಂಬದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ. ಅದರಂತಯೇ ಅಂತರಾಳದ ಬಾಗಿಲವಾಡವು ಸುರಳಿಗಳಿಂದ ಅಲಂಕೃತವಾದ ಅರ್ಧಗಂಭಗಳಿಂದ ಅಲಂಕೃತಗೊಂಡಿದೆ. ಸಭಾಮಂಟಪದಲ್ಲಿ ನಾಲ್ಕು ಅಲಂಕಾರಿಕವಾಗಿ ಕೆತ್ತಲ್ಪಟ್ಟ ಕಂಬಗಳಿದ್ದು ಉಳಿದ ೧೨ ಕಂಬಗಳು ಸಾದಕೆತ್ತನೆಯ ಕಂಬಗಳಾಗಿವೆ. ಈ ದೇವಾಲಯವು ಗರ್ಭಗೃಹ ಅಧಿಷ್ಠಾನ ಭಿತ್ತಿ ಕಪೋತ ಹೊಂದಿದ್ದು ಶಿಖರ ರಹಿತವಾಗಿದೆ. ಈ ದೇವಾಲಯವು ಪ್ರಸ್ತುತವಾಗಿ ಸಂಪೂರ್ಣವಾಗಿ ಪಾಳುಬಿದ್ದಿದ್ದು ಯಾವ ರಕ್ಷಣೆಯೂ ಇಲ್ಲ.

ಊರು : ಮುಕ್ಕುಂದಿ | **ಪಂಥ : ಶೈವ**
ಸ್ಥಳ : ಗ್ರಾಮದ ಮಧ್ಯ | **ಅಭಿಮುಖ : ಪೂರ್ವ**
ಸ್ಮಾರಕ : ಸೋಮಲಿಂಗೇಶ್ವರ | **ಸ್ಥಿತಿ : ಉತ್ತಮ**
ಕಾಲ : ೧೦/೧೧ನೇ ಶತಮಾನ | **ಶೈಲಿ : ಕಲ್ಯಾಣಚಾಲುಕ್ಯ(ದ್ರಾವಿಡವೇಸರ)**

ಮುಕ್ಕುಂದಿ ಗ್ರಾಮದಲ್ಲಿರುವ ಸೋಮಲಿಂಗೇಶ್ವರ ದೇವಾಲಯವು ಏಕಕೂಟ ದೇವಾಲಯವಾಗಿದ್ದು, ಗರ್ಭಗೃಹ, ವಿಶಾಲವಾದ ಅಂತರಾಳ ಹಾಗೂ ತೆರೆದ ಸಭಾಮಂಟಪದಿಂದ ಕೂಡಿದೆ, ಗರ್ಭಗೃಹದಲ್ಲಿ ಈಶ್ವರ ಲಿಂಗವಿದೆ. ಈ ಗರ್ಭಗೃಹದ ಪ್ರವೇಶದ್ವಾರಕ್ಕೆ ಅರ್ಧಗಂಭಗಳಿದ್ದು, ಇಕ್ಕಲೆಗಳಲ್ಲಿ ಸಹಚರರನ್ನು ಒಳಗೊಂಡ ವೀರಭದ್ರ ತ್ರಿಶೂಲ, ಡಮರುಗ ಬಿಲ್ಲನ್ನು ಹಿಡಿದ್ದಾನೆ. ಒಂದು ಕೈ ಅಭಯ ಹಸ್ತವಾಗಿದೆ. ಇನ್ನೊಂದು ಭಾಗದಲ್ಲಿ ಪೂರ್ಣಕುಂಭದ ಚಿತ್ರಣವಿದೆ. ಲಲಾಟಬಿಂಬದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ. ಅಂತರಾಳವನ್ನು ಹೊಂದಿದ್ದು, ಅಲ್ಲಿ ಭವ್ಯ ಬಸವಣ್ಣ ಮೂರ್ತಿಯು, ೩ ಅಡಿ ಎತ್ತರವಿದ್ದು ಕಪ್ಪು ಶಿಲೆಯಿಂದ ಕೆತ್ತಿದ ಶಿಲ್ಪವಾಗಿದೆ. ಅಂತರಾಳದ ಅರ್ಧಸಭಾಮಂಟಪದಲ್ಲಿ ಎರಡು ವೃತ್ತಾಕಾರದ ಕಂಬಗಳಿವೆ. ಸಭಾಮಂಟಪದಲ್ಲಿ ೨೦ ಕಂಬಗಳು ೮-೧೬ ೮-೧೬, ೮ ಚಚ್ಚೌಕ ಅಷ್ಟಮುಖದಿಂದ ಕೂಡಿದ ದಿಂಡುಗಳಿವೆ. ಕಂಬದ ಮೇಲ್ಭಾಗದಲ್ಲಿ ವೃತ್ತಾಕಾರದ ಬೋದಿಗೆಯನ್ನು ಹೊಂದಿದ್ದು, ಸಭಾಮಂಪಟದ

ಭುವನೇಶ್ವರಿ ಸರಳವಾಗಿದೆ, ಗರ್ಭಗೃಹದ ಗೋಡೆಯು ಅಧಿಷ್ಠಾನ, ಭಿತ್ತಿ, ಕಪೋತಗಳಿಂದ ಕೂಡಿದೆ. ಭಿತ್ತಿಯಲ್ಲಿ ಅಲಂಕಾರಿಕ ಕಂಬಗಳು ಕೀರ್ತಿಮುಖಗಳು, ದ್ರಾವಿಡ ವೇಸರ ಶೈಲಿಯ ಶಿಖರಗಳ ಅಲಂಕರಣೆಯನ್ನು ಒಳಗೊಂಡಿದೆ. ದೇವಾಲಯದ ಭಿತ್ತಿಯಲ್ಲಿ ಕಡ್ಯಸ್ತಂಭ, ಕೋಷ್ಠಕಗಳಿವೆ. ಈ ಕೋಷ್ಠಕಗಳಲ್ಲಿ ವಿಷ್ಣುವಿನ ವಿವಿಧ ಅವತಾರದ ಶಿಲ್ಪಗಳಿವೆ. ಬಲಭಾಗದ ಕೋಷ್ಠಕದಲ್ಲಿ ನಾಗದಂಪತಿ ಶಿಲ್ಪವಿದೆ. ಎಡಭಾಗದಲ್ಲಿ ಉಗ್ರ ನರಸಿಂಹ ಹಿರಣ್ಯಕಶ್ಯಪನನ್ನು ಸಂಹಾರ ಮಾಡುತ್ತಿರುವ ಶಿಲ್ಪವಿದೆ. ಇದರ ಜೊತೆಗೆ, ಭಿತ್ತಿಯ ಬಲಭಾಗದಲ್ಲಿ ಶಿಲಾಬಾಲಿಕೆಯರು ನೃತ್ಯ ಮಾಡುತ್ತಿರುವ ಶಿಲ್ಪಗಳಿವೆ.

ಊರು : ಮುಕ್ಕುಂದಿ **ಪಂಥ : ಶೈವ**

ಸ್ಥಳ : ಗ್ರಾಮದ ಮಧ್ಯ ಭಾಗ **ಅಭಿಮುಖ : ಉತ್ತರಾಭಿಮುಖ**

ಸ್ಮಾರಕ : ವೀರಭದ್ರ ದೇವಸ್ಥಾನ **ಸ್ಥಿತಿ : ಮಧ್ಯಮ**

ಕಾಲ : ೧೦/೧೧ನೇ ಶತಮಾನ **ಶೈಲಿ : ---**

ಮುಕ್ಕುಂದಿ ಗ್ರಾಮದ ವೀರಭದ್ರೃಶ್ವರ ದೇವಾಲಯವು ಗ್ರಾಮದ ಮಧ್ಯಭಾಗದಲ್ಲಿದೆ. ಇದು ಏಕಕೂಟದೇವಾಲಯವಾಗಿದೆ. ಗರ್ಭಗೃಹದಲ್ಲಿ ವೀರಭದ್ರ ಶಿಲ್ಪವಿದೆ. ಸಭಾಮಂಪವನ್ನು ಹೊಂದಿದ್ದು, ಸಭಾಮಂಟಪದ ಕಂಬಗಳು ಚಚ್ಚೌಕಕಾರದ ಪಟ್ಟಿಕೆಯನ್ನು ಹೊಂದಿದೆ. ಈ ದೇವಾಲಯದ ಮೇಲ್ಛಾವಣೆ ಮತ್ತು ಗೋಡೆ ಮಣ್ಣಿನಿಂದ ಕಟ್ಟಿದವುಗಳಾಗಿವೆ. ಕಂಬಗಳು ಮಾತ್ರ ಅಲಂಕಾರದಿಂದ ಕೂಡಿವೆ.

ಊರು : ಮುಕ್ಕುಂದಿ **ಪಂಥ : ---**

ಸ್ಥಳ : ಕುರತಕೋಟೆ (ತುಂ.ಭ) **ಅಭಿಮುಖ : ಪೂರ್ವ**

ಸ್ಮಾರಕ : ಭಂಡಾರಖಾನೆ (ದೇವಾಲಯ) **ಸ್ಥಿತಿ : ---**

ಕಾಲ : ೧೦/೧೧ನೇ ಶತಮಾನ **ಶೈಲಿ : ---**

ಮುಕ್ಕುಂದಿ ಗ್ರಾಮದ ಕುರ್ತಕೂಡೆಯೆಂಬ ನಡುಗಡ್ಡೆ(ತುಂಗಭದ್ರಾ)ಯಲ್ಲಿ ಭಂಡಾರಖಾನೆ ಎಂಬ ಪಾಳು ಬಿದ್ದಿರುವ ದೇವಸ್ಥಾನವಿದೆ. ಈ ದೇವಾಲಯ ಪುರಾತನವಾಗಿದ್ದು ವಿಶಿಷ್ಠ ಶೈಲಿಯಿಂದ ಕೂಡಿದೆ. ಗರ್ಭಗೃಹ, ಸಭಾಮಂಟಪ, ಭಿತ್ತಿ, ಕಪೋತಗಳಿಂದ, ಕೂಡಿದೆ. ಸಭಾಮಂಟಪದ ಕಂಬಗಳು ಅಲಂಕಾರದಿಂದ ಕೂಡಿದ್ದು, ಪೀಠ ಪಾದ ದಂಡ ದಂಡಾಗ್ರ ವೃತ್ತಾಕಾರದ ಬೋದಿಗೆಯನ್ನೊಳಗೊಂಡಿದೆ. ಗರ್ಭಗೃಹದಲ್ಲಿ ಯಾವುದೇ ವಿಗ್ರಹವಿರುವುದಿಲ್ಲ. ಇಲ್ಲಿಯ ಜನರು ಇದನ್ನು ಭಂಡಾಖಾನೆ ಎಂದು ಕರೆಯುತ್ತಾರೆ. ೧೨ನೇಯ ಶತಮಾನದ ಲಿಪಿಯಲ್ಲಿರುವ ಶಾಸನ. ನಿಟ್ಟರವೆ ಬಳಿಯ ಮುಕ್ಕುಂದೆ ಅಗ್ರಹಾರದ ಬಳಿ ಹೊಳೆಯಲ್ಲಿ ಅಕ್ಷಯನಿಧಿ ಭಂಡಾರವನ್ನು ಸೇನಭೋವ ಭಾವಣ್ಣಯ್ಯ ದೇವಾಲಯದ ನೈವೇದ್ಯಕ್ಕೆ ಹೂಮಾಲೆಗೆ ನಂದಾದೀಪಕ್ಕೆ ದಾನಬಿಟ್ಟಂತೆ ಹೇಳಿದೆ.[೮] ದೇವಾಲಯದ ಸ್ವರೂಪದಲ್ಲಿ ಕಾಣುವ ಈ ಭಂಡಾರ ಖಾನೆ, ಸಂಪೂರ್ಣ ನಾಶವಾಗುವ ಸ್ಥಿತಿಯಲ್ಲಿದೆ.

ಊರು : ಮುಕ್ಕುಂದಿ | ಪಂಥ : ---
ಸ್ಥಳ : ಭೈರವೇಶ್ವರ ಗುಡ್ಡ | ಅಭಿಮುಖ : ಪೂರ್ವ
ಸ್ಮಾರಕ : ಭೈರವೇಶ್ವರ ದೇವಾಲಯ | ಸ್ಥಿತಿ : ಮಧ್ಯಮ
ಕಾಲ : ೧೦/೧೧ನೇ ಶತಮಾನ | ಶೈಲಿ :

ಮುಕ್ಕುಂದಿ ಗ್ರಾಮದ ಭೈರವೇಶ್ವರ ದೇವಾಲಯವು ಸುಮಾರು ೩೦೦ ಅಡಿ ಎತ್ತರದ ಗುಡ್ಡದಲ್ಲಿ ಇದೆ. ಈ ದೇವಾಲಯದಲ್ಲಿ ಗರ್ಭಗೃಹ ಮಾತ್ರವಿದೆ. ಗರ್ಭಗೃಹದಲ್ಲಿರುವ ಈಶ್ವರ ಲಿಂಗವು ನಯವಾದ ಕಪ್ಪು ಶಿಲೆಯಲ್ಲಿ ಕೆತ್ತಲಾಗಿದೆ. ಈ ದೇವಾಲಯದ ಹಿಂಭಾಗದಲ್ಲಿ ಬಾವಿಯಿದೆ. ಮೂನ್ನೂರು ಅಡಿ ಎತ್ತರದ ಗುಡ್ಡದಲ್ಲಿ ನೀರು ಇರುವುದು ಪ್ರಕೃತಿಯ ವಿಸ್ಮಯವಾಗಿದೆ.

೩.೨ ಮೂರ್ತಿಶಿಲ್ಪ

ದೇವಾಲಯವೆಂದ ಮೇಲೆ ಅಲ್ಲಿ ಮೂರ್ತಿಶಿಲ್ಪವಿರಲೇಬೇಕು. ಕರ್ನಾಟಕದ ಪ್ರಾಚೀನ ದೇವಾಲಯಗಳ ಹೊರಗೆ ಮತ್ತು ಒಳಗೆ ಹಲವು ರೀತಿಯ ಶಿಲ್ಪಗಳು ಗೋಚರಿಸುತ್ತವೆ. ದೇವಾಲಯಗಳಲ್ಲಿ ಮಾತ್ರವಲ್ಲದೆ ಹಲವು ಸ್ಥಳಗಳಲ್ಲಿ ಶಾಸನ ಶಿಲ್ಪಗಳು ಉಬ್ಬುಶಿಲ್ಪದ ಮಾದರಿಯಲ್ಲಿ ಕಂಡುಬರುತ್ತವೆ. ಅಂದರೆ ಶಾಸನ ಶಿಲ್ಪದ ಅಧ್ಯಯನವೆಂದರೆ ಶಾಸನಗಳ ಮೇಲಿರುವ ಉಬ್ಬು ಶಿಲ್ಪಗಳ ಅಧ್ಯಯನ.[೯]

ಪ್ರಾಚೀನ ಶಿಲ್ಪಶಾಸ್ತ್ರದ ಗ್ರಂಥಗಳಾದ ಮಾನಸಾರ, ಮಯಮತಿ, ಅಂಶುಮದ್ಭೇದಾಗಮ, ಶಿಲ್ಪಸಂಗ್ರಹ ಇವು ದೇವಾನುದೇವತೆಗಳಾದ ಶಿವ, ವಿಷ್ಣು, ಗಣಪತಿ ಮೊದಲಾದ ದೇವತೆಗಳ ದಪ್ಪ ಅಗಲ ಕಿರೀಟ ಪ್ರಮಾಣ ಅವರು ನಿಂತಭಂಗಿ ಹಿಡಿದಿರುವ ಆಯುಧಗಳ ಭಂಗಿ ಧರಿಸಿರುವ ಉಡುಗೆಗಳು ಅವರ ವಾಹನಗಳು ಮುಂತಾದವುಗಳನ್ನು ಲಕ್ಷಣಗಳ ಸಮೇತ ಬಹಳ ವಿವರವಾಗಿ ತಿಳಿಸುತ್ತವೆ. ಇವುಗಳಲ್ಲದೆ, ಡಾ.ಕೆ.ಶಿವರಾಮ ಕಾರಂತರ ಚಿತ್ರಶಿಲ್ಪ ವಾಸ್ತುಕಲೆಗಳ ಜ್ಞಾನ ಗಂಗೋತ್ರಿ ಕಲಾಕೋಶ ಭಾರತೀಯ ಶಿಲ್ಪ ಕಲಾಪ್ರಪಂಚಗಳಲ್ಲಿ ಶಿಲ್ಪದ ಬಗ್ಗೆ ವಿವರಣೆಗಳು ದೊರೆಯುತ್ತವೆ.[೧೦]

ಭಾರತೀಯ ಶಿಲ್ಪಕಾರರು ಪಾಶ್ಚಾತ್ಯಕಲೆಗಾರರ ಪ್ರಭಾವದಿಂದ ಹೊಸ ಹೊಸ ಮಾರ್ಗ ತಂತ್ರ ಮತ್ತು ವಸ್ತುಗಳನ್ನು ಇತ್ತೀಚೆಗೆ ಅಳವಡಿಸಿಕೊಳ್ಳುತ್ತಿರುವರು. ಆದರೆ ನಮ್ಮ ಪೂರ್ವಿಕರು ಮನದಲ್ಲಿ ಶಿಲ್ಪ ಎಂದರೆ ದೇವಾನುದೇವತೆಗ ಅವರ ಪರಿವಾರಗಳು[೧೧] ಆದುದರಿಂದ ಭಾರತೀಯ ಶಿಲ್ಪ ಬೆಳವಣಿಗೆಯೆಂದರೆ ಧರ್ಮದಿಂದ ಪ್ರಭಾವಿತವಾದ ಮೂರ್ತಿಶಿಲ್ಪದ ಬೆಳವಣಿಗೆ ಎಂದೇ ಹೇಳಬೇಕಾಗುತ್ತದೆ. ವಾಸ್ತುಶಿಲ್ಪದ ದೃಷ್ಟಿಯಿಂದಲೂ ಪ್ರಮುಖವಾಗಿ ಇದೇ ಅಂಶ ವ್ಯಕ್ತವಾಗುತ್ತಿದೆ. ಆಯಾ ಧರ್ಮಗಳು ನಮ್ಮ ನಾಡಿನಲ್ಲಿ ಉದಾತ್ತ ಸ್ಥಾನದಲ್ಲಿದ್ದಾಗ ಆ ಧರ್ಮಕ್ಕೆ ಸಂಬಂಧಿಸಿದ ಶಿಲ್ಪ ವಾಸ್ತುಶಿಲ್ಪಕಲೆಗಳೂ ಕೂಡ ಉನ್ನತ ಸ್ಥಾನದಲ್ಲಿದ್ದವು. ಮುಕ್ಕುಂದಿ ಗ್ರಾಮದಲ್ಲಿಯೂ ಇಂತಹ ಮೂರ್ತಿಶಿಲ್ಪಗಳನ್ನು ಕಾಣಬಹುದಾಗಿದೆ.

ಮುರಹರಿ(ಸೂರ್ಯ)

ಮುಕ್ಕುಂದಿ ಗ್ರಾಮದ ಮುರಹರಿ ದೇವಾಲಯದ ಗರ್ಭಗುಡಿಯಲ್ಲಿರುವ ಈ ಶಿಲ್ಪವು ಎತ್ತರವಾದ ಪೀಠದ ಮೇಲೆ ಸಮಭಂಗಿಯಲ್ಲಿನಿಂತಿದ್ದು ಕೀರಟ ಮುಖಟಧಾರಿಯಾಗಿದೆ. ತಲೆಯ ಹಿಂಭಾಗದಲ್ಲಿ ಪ್ರಭಾಮಂಡಲವಿದೆ. ಕೊರಳಲ್ಲಿ ಕಂಠಾಭರಣವನ್ನು ಧರಿಸಿದೆ. ತನ್ನ ಎರಡು ಕೈಗಳಲ್ಲಿ ಪದ್ಮಗಳನ್ನು ಹಿಡಿದಿರುವನು. ಕಾಲಿನಲ್ಲಿ ಕಾಲ್ಗಡವನ್ನು ಧರಿಸಿದೆ. ಇವನ ಎಡಬಲದಲ್ಲಿ ಚಂಡ ಮುಂಡರ ಮೂರ್ತಿಗಳನ್ನು ಕೆತ್ತಲಾಗಿದೆ. ಈ ಚಂಡಮುಂಡರು ಕೀರಿಟ ಮುಖಟಧಾರಿಯಾಗಿದ್ದಾರೆ. ಈ ಮೂರ್ತಿಯು ನಿಂತಿರುವ ಪೀಠಿಕೆವು ತೃಟಿತವಾಗಿದೆ. ಈ ಪೀಠಿಕೆಯಲ್ಲಿ ಏಳು ಕುದರೆಗಳ ಚಿತ್ರವಿದ್ದರೆ. ಇದು ಸೂರ್ಯದೇವ ಶಿಲ್ಪವಾಗುತ್ತದೆ. ಈ ಶಿಲ್ಪ ಸು.೪ ಅಡಿ ಎತ್ತರ ೩ ಅಡಿ ಅಗಲವಿದೆ.

ಮುಕ್ಕುಂದಿಯ ಗ್ರಾಮದ ಜನರು ಈ ಶಿಲ್ಪವನ್ನು ಮುರಹರಿ ಶಿಲ್ಪವೆಂದು ಕರೆಯುತ್ತಾರೆ. ಹಾಗೇ ಕರೆಯುವುದಕ್ಕೆ ಈ ಶಿಲ್ಪದಲ್ಲಿ ಶ್ರೀ ವಿಷ್ಣುವಿನ ಆಯುಧಗಳಾದ ಪದ್ಮ, ಶಂಕ, ಚಕ್ರ, ಗದಾ ಇವುಗಳಲ್ಲಿ ಯಾವುದಾದರೊಂದು ಆಯುಧ ಹಿಡಿರಬೇಕಾಗಿತ್ತು. ಈ ಮೂರ್ತಿಯನ್ನು ಗಮನಿಸಿ ಹೇಳುವುದಾದರೆ ಇದು ಸೂರ್ಯ ಶಿಲ್ಪವೆಂದು ಹೇಳಬಹುದು. ಮುರಹರಿಯ ದೇವಸ್ಥಾನವು ತ್ರಿಕೂಟ ದೇವಾಲಯವಾಗಿದ್ದು, ಅಂತರಾಳಕ್ಕೆ ಹೊಂದಿಕೊಂಡು ಎರಡು ಗರ್ಭಗೃಹಗಳಿವೆ. ಎಡಭಾಗದ ಗರ್ಭಗೃಹವು ಉತ್ತಮ ಸ್ಥಿತಿಯಲ್ಲಿದ್ದು ಯಾವುದೇ ಮೂರ್ತಿಯಿಲ್ಲ. ಬಲಭಾಗದಲ್ಲಿ ಇರುವ ಗರ್ಭಗೃಹದ ಪ್ರವೇಶದ್ವಾರವು ಅದರ ಭಿತ್ತಿಯು ಸಂಪೂರ್ಣವಾಗಿ ತೆಗೆಯಲಾಗಿದೆ(ಹಾಳಾಗಿದೆ). ಈ ಮೇಲಿನ ಕಾರಣವನ್ನು ಇಟ್ಟುಕೊಂಡು ಮೂರ್ತಿಶಿಲ್ಪವನ್ನು ಗಮನಿಸಿದರೆ ಸೂರ್ಯಶಿಲ್ಪವೆಂಬುದು ಸ್ಪಷ್ಟವಾಗುತ್ತದೆ. ಹಾಗೆಯೇ ಈ ಎರಡು ಗರ್ಭಗೃಹಗಳಲ್ಲಿ ಬಸವಣ್ಣ ಲಿಂಗವಿರುವ ಮೂರ್ತಿ ಇದ್ದು ಮುಖ್ಯ ಗರ್ಭಗೃಹದಲ್ಲಿ ಯಾವುದೇ ಮೂರ್ತಿಗಳಿಲ್ಲ. ಆದರೂ ಮುಖ್ಯಗರ್ಭಗೃಹದ ಈ ಮೂರ್ತಿ ಶಿಲ್ಪವನ್ನು ಗಮನಿದರೆ ಇದು ಸೂರ್ಯಶಿಲ್ಪವೆಂಬುದು ಸ್ಪಷ್ಟವಾಗುತ್ತದೆ.

ಉಗ್ರನರಸಿಂಹ

ಈ ಮೂರ್ತಿಯು ಮುಕ್ಕುಂದಿಯ ಸೋಮಲಿಂಗೇಶ್ವರ ದೇವಾಲಯದ ಹೊರಗೋಡೆ ಎಡಭಾಗದ ಕೋಷ್ಠಕದಲ್ಲಿದೆ. ಈ ಶಿಲ್ಪವು ಕೀರಿಟಧಾರಿಯಾಗಿದ್ದು, ನಿಂತಭಂಗಿಯಲ್ಲಿದೆ ನಾಲ್ಕು ಕೈಗಳನ್ನು ಇದ್ದು ಎರಡು ಕೈಗಳಲ್ಲಿ ಆಯುಧಗಳಿವೆ. ಹಿರಣ್ಯಕಶ್ಯಪನನ್ನು ತೊಡೆಯ ಮೇಲೆ ಮಲಗಿಸಿಕೊಂಡು ಎರಡುಕೈಗಳಿಂದ ಕರುಳ ಬಗೆಯುತ್ತಿರುವ ದೃಶ್ಯವಿದೆ. ಈ ಶಿಲ್ಪವು ತೃಟಿತವಾಗಿದೆ.

ವಿಷ್ಣು

ಸೋಮಲಿಂಗೇಶ್ವರ ದೇವಾಲಯದ ಎಡಭಾಗದ ಕೋಷ್ಟಕದಲ್ಲಿ ಈ ಶಿಲ್ಪವಿದೆ. ಸಮಭಂಗದಲ್ಲಿ ನಿಂತಿರುವ ವಿಷ್ಣು, ತನ್ನ ಕೈಗಳಲ್ಲಿ ಪದ್ಮ ಶಂಕ, ಚಕ್ರ ಮತ್ತು ಗದಾ ಹಿಡಿದು ನಿಂತಿರುವ ಚಿತ್ರವಿದೆ.

ಕೀರಟಮುಖಟಧಾರಿಯಾಗಿದ್ದು, ಕೊರಳಲ್ಲಿ ಕಂಠಾಭರಣ ಸೊಂಟದ ಭಾಗದಲ್ಲಿ ಅಭರಣಗಳಿವೆ. ಕೈಗಳಲ್ಲಿ ಮತ್ತು ಕಾಲುಗಳಲ್ಲಿ ಕಡಗಗಳನ್ನು ಧರಿಸಿದೆ.

ಸೂರ್ಯ

ಸೋಮಲಿಂಗೇಶ್ವರ ದೇವಾಲಯದ ಎಡಭಾಗದ ಕೋಷ್ಠಕದಲ್ಲಿ ಈ ಶಿಲ್ಪವಿದೆ. ಸಮಭಂಗಿಯಲ್ಲಿ ನಿಂತಿರುವ ಸೂರ್ಯನು ಕಿರೀಟ ಧಾರಿಯಾಗಿದ್ದಾನೆ. ತನ್ನ ಎರಡು ಕೈಗಳಲ್ಲಿ ಪದ್ಮವನ್ನು ಹಿಡಿದಿದ್ದಾನೆ. ಕಾಲ್ಗಡಗ, ಸೊಂಟಕ್ಕೂ ಅಭರಣಗಳನ್ನು ಕೊರಳಲ್ಲಿ ಹಾರವನ್ನು ಧರಿಸಿದ್ದಾನೆ.

ನಾಗದಂಪತಿ ಶಿಲ್ಪ (ನಾಗ-ನಾಗಿಣಿ)

ಸೋಮಲಿಂಗೇಶ್ವರ ದೇವಾಲಯದ ಬಲ ಭಾಗದ ಕೋಷ್ಠಕದಲ್ಲಿ ಈ ಶಿಲ್ಪವಿದೆ ಭೂವರಹಾ ಮತ್ತು ಶ್ರೀದೇವಿ ನಾಗಪೀಠದ ಮೇಲೆ ಕುಳಿತಿದ್ದಾರೆ. ಕಿರೀಟ ಮುಖಟಧಾರಿಯಾಗಿದ್ದು, ವರಾಹ ಮೂರ್ತಿಗೆ ಏಳು ಹೆಡೆಯ ಸರ್ಪ ಹಾಗೂ ಶ್ರೀದೇವಿಗೆ ಮೂರು ಹೆಡೆಯ ನಾಗ ತಲೆಯ ಮೇಲೆ ಇರುವುದನ್ನು ಕಾಣಬಹುದು.

ನಂದಿಶಿಲ್ಪ

ಮುಕ್ಕುಂದಿ ಗ್ರಾಮದ ಸೋಮಲಿಂಗೇಶ್ವರ ದೇವಾಲಯದ ಅಂತರಾಳದಲ್ಲಿರುವ ಈ ಶಿಲ್ಪ ಕುಳಿತಭಂಗಿಯಲ್ಲಿದ್ದು ಎಡಗಾಲು ಮುಂದಕ್ಕೆ ಚಾಚಿದೆ, ಅದರ ಮುಂದೆ ಚಿಕ್ಕ ಶಿವಲಿಂಗವಿದೆ, ಕೊರಳಲ್ಲಿ ಎರಡು ಗೆಜ್ಜೆಯ ಸರವನ್ನು ಹೊಂದಿದ್ದು, ಒಂದು ಗಜ್ಜೆಸರಕ್ಕೆ ದೊಡ್ಡಗಂಟೆ ಕಟ್ಟಿದೆ. ಸುಮಾರು ಮೂರು ಅಡಿ ಎತ್ತರವಿದೆ. ೧೬-೧೭ನೇ ಶತಮಾನದ ಈ ಶಿಲ್ಪವು ಕಪ್ಪುಶಿಲೆಯಲ್ಲಿ ನಯವಾಗಿ ಕೆತ್ತಲಾಗಿದೆ.

ಶಿವಲಿಂಗ ಶಿಲ್ಪ

ಮುಕ್ಕುಂದಿ ಗ್ರಾಮದ ಸೋಮಲಿಂಗೇಶ್ವರ ದೇವಸ್ಥಾನದ ಗರ್ಭಗುಡಿಯಲ್ಲಿರುವ ವೃತ್ತಾಕಾರದ ಪೀಠದ ಮೇಲೆ ಈ ಶಿವಲಿಂಗವಿದೆ. ಲಿಂಗದ ಮುಂಭಾಗದಲ್ಲಿ ಬ್ರಹ್ಮಸೂತ್ರವನ್ನು ಹೊಂದಿದೆ. ೧೧ನೇ ಶತಮಾನ ಈ ಲಿಂಗವು ಬಳಪದ ಕಲ್ಲಿನಲ್ಲಿನ ಮಾಡಲಾಗಿದೆ.

ವೀರಭದ್ರ ಶಿಲ್ಪ

ಈ ಶಿಲ್ಪವು ಮುಕ್ಕುಂದಿ ಗ್ರಾಮದ ವೀರಭದ್ರೇಶ್ವರ ದೇವಾಲಯದ ಗರ್ಭಗುಡಿಯಲ್ಲಿದೆ. ದ್ವಿಭಂಗಿಯಲ್ಲಿ ನಿಂತಿದ್ದು, ಕಿರೀಟ ಮುಕುಟಧಾರಿಯಾಗಿದೆ. ಕೊರಳಲ್ಲಿ ಆಭರಣ ಧರಿಸಿದ್ದು, ರುಂಡ ಮಾಲೆಯಿದೆ. ನಾಲ್ಕು ಕೈಗಳಲ್ಲಿ ಖಡ್ಗ, ಬಿಲ್ಲು, ಬಾಣ, ಕೇಶವನ್ನು ಹಿಡಿದಿರುವ ಚಿತ್ರವಿದೆ. ಕಾಲಲ್ಲಿ ಗೆಜ್ಜೆಯನ್ನು ಕಟ್ಟಿದ್ದು, ಪಕ್ಕದಲ್ಲಿ ದಕ್ಷಬ್ರಹ್ಮನು ಅಂಜಲಿ ಹಿಡದು ನಿಂತಿದ್ದಾನೆ. ಈ ವಿಗ್ರಹವು ಸುಮಾರು ೪ ಅಡಿ ಎತ್ತರವಿದ್ದು, ಅಷ್ಟಾಕಾರದ ಪೀಠದ ಮೇಲಿದೆ.

ಗಣೇಶ ಶಿಲ್ಪ

ಈ ಶಿಲ್ಪವು ಮುಕ್ಕುಂದಿ ಗ್ರಾಮದ ಸೋಮಲಿಂಗೇಶ್ವರ ದೇವಸ್ಥಾನದ ಸಭಾಮಂಟಪದ ಎಡಭಾಗದಲ್ಲಿದೆ. ಈ ಶಿಲ್ಪವು ಕುಳಿತ(ಸುಖಾಸೀನ) ಭಂಗಿಯಲ್ಲಿದೆ. ಕರಂಡ ಮುಕುಟಧಾರಿಯಾಗಿಯಾಗಿದ್ದು, ನಾಲ್ಕು ಕೈಗಳಲ್ಲಿ ದಂತ, ಪಾಶ, ಅಂಕುಶ ಮತ್ತು ಮೋದಕ ಹಿಡಿದ ದೃಶ್ಯವಿದೆ. ಕೊರಳಲ್ಲಿ ಕಂಠಿಸರ, ಕಾಲಲ್ಲಿ ಕಾಲ್ಗಡವಿದ್ದು, ಹೊಟ್ಟೆಗೆ ಸರ್ಪಬಂಧನವಿದೆ. ಈ ಮೂರ್ತಿ ತ್ರುಟಿತವಾಗಿದೆ.

ನಂದಿಶಿಲ್ಪ

ಮುಕ್ಕುಂದಿ ಗ್ರಾಮದ ಉಡೆದ ಶರಣಪ್ಪರವರ ಹೊಲದಲ್ಲಿರುವ ನಂದಿಶಿಲ್ಪ ಕುಳಿತ ಭಂಗಿಯಲ್ಲಿದ್ದು, ಎಡಗಾಲನ್ನು ಮುಂದಕ್ಕೆ ಚಾಚಿದೆ. ಭುಜದ ಹಿಂಭಾಗದಿಂದ ಪಾದದವರೆಗೆ ಅಲಂಕರಿಸಿರುವ ಪಟ್ಟಿಯಿದ್ದು, ಕೊರಳಲ್ಲಿ ಗೆಜ್ಜೆ ಸರವಿದೆ. ಮತ್ತು ಹಣೆಗೆ ಪಟ್ಟಿಯನ್ನು ಧರಿಸಿದೆ. ಇದು ೧೭/೧೮ನೇ ಶತಮಾನದ, ಕಾಲದ್ದಾಗಿದೆ. ಸುಮಾರು ೩ ಅಡಿ ಎತ್ತರದಲ್ಲಿದೆ.

೩.೨ ರಕ್ಷಣಾವಾಸ್ತು(ಕೋಟೆ)

ಪ್ರಾಚೀನ ಕಾಲದ ಜನರು ಅಂದರೆ ರಾಜ್ಯಗಳು ಸಾಮ್ರಾಜ್ಯಗಳು ಉದಯವಾಗುವುದಕ್ಕೆ ಮುನ್ನ ಚಿಕ್ಕ ಊರುಗಳಲ್ಲಿ ವಾಸಿಸುತ್ತಿದ್ದರು. ತಮ್ಮನ್ನು ಹಾಗೂ ತಾವು ಸಂಪಾದಿಸಿದ ಸಂಪತ್ತನ್ನು ದರೋಡೆ ಕೋರರಿಂದ ಶತ್ರುಗಳಿಂದ, ಕಾಡುಪ್ರಾಣಿಗಳಿಂದ ಸಂರಕ್ಷಿಸಿಕೊಳ್ಳಲು ಜನರು ಊರುಗಳ ಸುತ್ತಲೂ ಕೋಟೆಗಳನ್ನು ಕಟ್ಟಲು ಪ್ರಾರಂಭಿಸಿದರು ಊರುಗಳು ಬೆಳೆದು ಹಲವಾರು ಊರುಗಳು ಒಟ್ಟುಗೂಡಿ ರಾಜ್ಯಗಳು ಸ್ಥಾಪನೆಯಾದ ಮೇಲೆ ಆಳುವ ಅರಸರು ತಮ್ಮ ರಾಜ್ಯಗಳನ್ನು ಸಂರಕ್ಷಿಸಿಕೊಳ್ಳಲು ರಾಜಧಾನಿಯಲ್ಲಿ ಮತ್ತು ಗಡಿ ಪ್ರದೇಶಗಳಲ್ಲಿ ಬಲವಾದ ಕೋಟೆಗಳನ್ನು ಕಟ್ಟಿಸಿದರು. ಒಂದು ರಾಜ್ಯದ ಅತ್ಯಾವಶ್ಯಕವಾದ ಸಪ್ತಾಂಗಗಳಲ್ಲಿ ದುರ್ಗವು ಒಂದು ಎಂದು ರಾಜನೀತಿ ಹೇಳುತ್ತದೆ.[೨] ಭದ್ರವಾದ ಕೋಟೆಯಿಲ್ಲದ ರಾಜನನ್ನು ಬೀರುಗಾಳಿಗೆ ಸಿಕ್ಕಿದ ಮೋಡಕ್ಕೆ ಸಮಾನವೆನ್ನಲಾಗಿದೆ. ಕೋಟೆಯಿಲ್ಲದ ರಾಜ ವಿಷರಹಿತವಾದ ಹಾವಿನಂತೆ ಅಥವಾ ಮದ ರಹಿತವಾದ ಆನೆಯಂತೆ ಸುಲಭವಾಗಿ ಸ್ವಾಧೀನಪಡಿಸಿಕೊಳ್ಳಬಹುದು ಒಬ್ಬ ಬಿಲ್ಲುಗಾರನು ಕೋಟೆ ಗೋಡೆಯ ಹಿಂದೆ ರಕ್ಷಣೆ ಪಡೆದು ವೈರಿ ಪಡೆಯ ನೂರಾರು ಜನರೊಂದಿಗೆ ಹೋರಾಡಬಹುದು. ಮತ್ತೆ ನೂರಾರು ಬಿಲ್ಲುಗಾರರು ಸಾವಿರಾರು ವೈರಿಗಳೊಂದಿಗೆ ಹೋರಾಡಬಹುದು ಈ ಮೇಲಿನ ಮಾತುಗಳು ಕೋಟೆಯ ಮಹತ್ವವನ್ನು ತಿಳಿಸುತ್ತವೆ.

ಪ್ರಾಚೀನ ಕರ್ನಾಟಕದಲ್ಲಿ ಕೋಟೆಗಳನ್ನು ಕಟ್ಟುವಾಗ ಸ್ಥಳಗಳ ಆಯ್ಕೆಗೆ ಪ್ರಾಶಸ್ತ್ಯ ನೀಡಲಾಯಿತು. ಶತ್ರು ಸೈನಿಕರು ಸುಲಭವಾಗಿ ಹತ್ತಿಬರದಂತೆ ಕೋಟೆಗಳನ್ನು ಕಡಿದಾದ ಬೆಟ್ಟಗಳ ಮೇಲೆ ಕಾಡಿನ ಮಧ್ಯದಲ್ಲಿ ಮತ್ತು ನದಿಯ ದಂಡೆಯ ಮೇಲೆ ಕಟ್ಟಲಾಗಿದೆ. ಇಂತಹ ವಿವಿಧ ಪ್ರಕಾರದ ಕೋಟೆಗಳ

ಬಗ್ಗೆ ಪ್ರಾಚೀನ ಗ್ರಂಥಗಳಾದ ಕೌಟಿಲ್ಯನ ಅರ್ಥಶಾಸ್ತ್ರ, ಮನುಸ್ಮೃತಿ, ಶುಕ್ರನ ನೀತಿಸಾರ, ಮಾನಸಾರ, ದುರ್ಗಸಿಂಹನ ಪಂಚತಂತ್ರ ಸೋಮೇಶ್ವರನ ಮಾನಸೋಲ್ಲಾಸ ಮುಂತಾದ ಗ್ರಂಥಗಳಲ್ಲಿ ಕೋಟೆಗಳ ವಿಧಗಳು ಕೋಟೆ ಕಟ್ಟುವ ಸ್ಥಳ ಉಪಯೋಗಿಸುವ ಸಾಮಾಗ್ರಿ ಸಂರಕ್ಷಣ ವಿಧಾನ ಇನ್ನು ಮುಂತಾದ ಅಂಶಗಳು ಉಲ್ಲೇಖಿಸಲ್ಪಟ್ಟಿವೆ.[೧೩]

ಮುಕ್ಕುಂದಿ ಗ್ರಾಮದ ಊರ ಮಧ್ಯದಲ್ಲಿರುವ ಬೆಟ್ಟದ ಮೇಲೆ ಚಿಕ್ಕಕೋಟೆಯಿದೆ. ಹಿಂದಿನ ಕಾಲದಲ್ಲಿ ಊರಸುತ್ತಲೂ ಕೋಟೆಯಿತ್ತು. ಈಗ ಅದರ ಮೂರು ಅಗಸಿ ಬಾಗಿಲು ಮಾತ್ರ ಉಳಿದಿವೆ. ಇವುಗಳಲ್ಲಿ ಉತ್ತರಕ್ಕಿರುವುದು ಗಂಗಮ್ಮನ ಅಗಸಿ, ಪೂರ್ವಕ್ಕೆ ಇರುವುದು ಕೆಳಗಡೆ ಅಗಸಿ ಮತ್ತು ಪಶ್ಚಿಮಕ್ಕಿರುವುದು ವೀರಭದ್ರ ಅಗಸಿ, ಈ ಅಗಸಿಯ ಹತ್ತಿರ ಸೋಮಲಿಂಗೇಶ್ವರ ಮುರಹರಿ ಮತ್ತು ವೀರಭದ್ರೇಶ್ವರ ದೇವಾಲಯಗಳಿವೆ.

ಬೆಟ್ಟದ ಮೇಲಿನ ಕೋಟೆ ಸುಮಾರಾಗಿ ಅಯಾತಕಾರದಲ್ಲಿದೆ. ಆದರೆ ಇದರ ಪೂರ್ವಭಾಗ ಗಜಪುಷ್ಠಾಕಾರದಲ್ಲಿದೆ. ದಪ್ಪ ಚೌಕಾಕಾರದ ಕಲ್ಲುಗಳಿಂದ ಗಾರೆಯನ್ನು ಬಳಸದೆ ಕಟ್ಟಿದ ಕೋಟೆಯ ಕೈಪಿಡಿ ಗೋಡೆಯಲ್ಲಿ ತೆನೆಗಳಿವೆ. ಕೋಟೆಯ ಮೇಲ್ಭಾಗದಲ್ಲಿ ಅಲ್ಲಲ್ಲಿ ಚೌಕಾಕಾರದ ದೊಡ್ಡ ಕಿಂಡಿಗಳಿವೆ. ಉತ್ತರದಿಕ್ಕಿನಲ್ಲಿ ಬಂಡೆಗಳ ಮಧ್ಯದಲ್ಲಿ ಕೋಟೆಗೆ ಹತ್ತಲು ದಾರಿಯಿದೆ. ಕೋಟೆಯೊಳಗೆ ಪಶ್ಚಿಮ ಮತ್ತು ಆಗ್ನೇಯ ಭಾಗದಲ್ಲಿ ಎರಡು ದೊಡ್ಡ ಮಂಟಪಗಳಿವೆ. ಮಂಟಪಗಳನ್ನು ಸರಳವಾದ ಕಂಬ ತೊಲೆ ಮತ್ತು ಚಪಡಿಗಳಿಂದ ಕಟ್ಟಿದೆ. ಈ ಕೋಟೆಯ ಉತ್ತರ ಭಾಗದಲ್ಲಿ ದೇವಾಲಯದ ಅವಶೇಷಗಳು ದೊರೆತಿವೆ. ಭಗ್ನಗೊಂಡ ಬಸವಣ್ಣನ ಮೂರ್ತಿ ಕಂಬಗಳು ಭಗ್ನಗೊಂಡಿರುವ ಮತ್ತು ಈಶ್ವರಲಿಂಗದ ಪಾಣಿವಾಟವಿದೆ. ಕಪ್ಪುಶಿಲೆಯನ್ನು ಹೊಂದಿದೆ. ಅಲಂಕಾರಿಕ ಶೈಲಿಯಿಂದ ಕೂಡಿದ್ದು, ಕಪ್ಪುಶಿಲೆಯಲ್ಲಿ ಕೆತ್ತಿದವುಗಳಾಗಿವೆ. ಈ ಕಂಬಗಳಲ್ಲಿ ಒಂದು ಕಂಬಕ್ಕೆ ಶಾಸನವಿದೆ. ಕ್ರಿ.ಶ.೧೦೨೧ರ ಕಾಲವನ್ನು ಸೂಚಿಸುತ್ತಿದ್ದು, ಕಣ್ಣರಸ ಎಂಬುವವನು ದೀಪದ ಕಂಬವನ್ನು ಮಾಡಿಸಿದಂತೆಯೂ, ವಾಚಿಗತ್ಯ ಎಂಬುವವನು ಮಾಡಿದಂತೆಯೂ ಹೇಳಲಾಗಿದೆ.[೧೪]

ದಕ್ಷಿಣ ದಿಕ್ಕಿನಲ್ಲಿ ಕೋಟೆಯ ಪ್ರವೇಶ ದ್ವಾರವಿದ್ದು, ಲಲಾಟಬಿಂಬದಲ್ಲಿ ನಾಗಶಿಲ್ಪವಿದೆ. ಒಟ್ಟಾರೆಯಾಗಿ ಕೋಟೆ ಭಾಗಗಳು ಸದೃಢವಾಗಿದ್ದು, ದೂರದಿಂದ ನೋಡುವವರಿಗೆ ಸುಂದರವಾಗಿ ಕಾಣುತ್ತದೆ. ಸಮೀಪದಿಂದ ನೋಡುವವರಿಗೆ ಕೋಟೆಯು ಯಾವುದೇ ರಕ್ಷಣೆಯಿಲ್ಲದೆ ಅವಸಾನದತ್ತ ಸಾಗುತ್ತಿರುವುದು ಸ್ಪಷ್ಟವಾಗುತ್ತದೆ.

ಸೇತುವೆ(ಅಣೆಕಟ್ಟು)

ಮುಕ್ಕುಂದಿ ಗ್ರಾಮದ ಸಮೀಪದಲ್ಲಿ ತುಂಗಭದ್ರಾಯು ಹರಿಯುತ್ತಿದ್ದು, ಏಳು ಕವಲುಗಳಾಗಿ ವಿಭಾಗ ಹೊಂದಿದೆ. ಆರು ಕವಲುಗಳು ಮುಕ್ಕುಂದಿ ಗ್ರಾಮದ ಕಡೆಗೆ ಹರಿದರೆ ಒಂದು ಕವಲು

ಕೆಂಚನಗುಡ್ಡದ (ಸಿರುಗುಪ್ಪ ತಾ) ಕಡೆಗೆ ಹರಿಯುತ್ತದೆ. ಈ ಕವಲುಗಳು ಮಧ್ಯೆ ನಡಗಡ್ಡೆ(ದ್ವೀಪ) ಸೃಷ್ಟಿಯಾಗಿದ್ದು, ಅದು ಕುರ್ತಕೋಟೆ ಎಂದು ಪಾಳುಗ್ರಾಮವಾಗಿದೆ. ತುಂಗಭದ್ರಾ ನದಿಗೆ ಅಡ್ಡವಾಗಿ ಕವಲುಗಳಿಗೆ ಅಣೆಕಟ್ಟನ್ನು ಕಟ್ಟಿ ನೀರನ್ನು ತಡೆ ಹಿಡಿಯಲಾಗಿದೆ. ಈ ಅಣೆಕಟ್ಟನ್ನು ಸೂಕ್ಷ್ಮವಾಗಿ ಗಮನಿಸಿದಾಗ ಇದು ಹಿಂದಿನ ಕಾಲದಲ್ಲಿ ಸೇತುವೆಯಾಗಿತ್ತೆನಿಸುತ್ತದೆ. ಆದರೆ ಕ್ರಿ.ಶ.೧೪೭೭ರ ದೇವರಾಯನ ಶಾಸನವು ಕೆಂಚನಗುಡ್ಡದ ಬಳಿ ತುಂಗಭದ್ರಾ ನದಿಗೆ ಅಣೆಕಟ್ಟನ್ನು ಕಟ್ಟಿದಂತೆ ಹೇಳುತ್ತದೆ.[೧೫] ಹಾಗಾಗಿ ವಿಜಯನಗರ ಅರಸರ ಆಳ್ವಿಕೆಗೆ ಮುಕ್ಕುಂದಿ ಮತ್ತು ಕೆಂಚನಗುಡ್ಡ ಗ್ರಾಮಗಳು ಸೇರಿದ್ದು ಎರಡು ಗ್ರಾಮದ ನೀರಾವರಿ ವ್ಯವಸ್ಥೆಗಾಗಿ ಅಣೆಕಟ್ಟನ್ನು ಕಟ್ಟಿರಬಹುದು. ಆದರೆ ಅದರ ನೀರನ್ನು ಹೇಗೆ ಬಳಸಿಕೊಳ್ಳುತ್ತಿದ್ದರು ಎಂಬುದು ತಿಳಿದುಬರುವುದಿಲ್ಲ. ಈ ಕಾರಣಕ್ಕಾಗಿಯೇ ಇದನ್ನು ಅಣೆಕಟ್ಟು ಎಂದು ಸಮರ್ಥಿಸಲು ಬಲವಾದ ಆಧಾರಗಳ ಕೊರತೆ ಇದೆ.

ಇದು ಸೇತುವೆ ಎಂದು ಹೇಳಲು ಇಲ್ಲಿ ಬಳಸಿರುವ ದೊಡ್ಡ ಕಲ್ಲಿನ ದಿಂಡುಗಳು ದಿಂಡುಗಳ ಮಧ್ಯದಲ್ಲಿ ಕೊರೆದಿರುವ ರಂಧ್ರಗಳು ತುಂಡಗಳ ಜೋಡಣೆಯನ್ನು ತಿಳಿಸುತ್ತವೆ. ಈ ಆಧಾರದ ಮೇಲೆ ಇದು ಸೇತುವೆಯಾಗಿತ್ತು ಎಂಬುದನ್ನು ಊಹಿಸಬಹುದು. ಇಲ್ಲಿರುವ ಕೆಲವು ತುಂಡುಗಳು ಚೌಕಕಾರದ ಕೆತ್ತನೆಯಿಂದ ಕೂಡಿದವುಗಳಾಗಿವೆ. ಈ ಅವಶೇಷಗಳನ್ನು ಬಳಸಿಕೊಂಡು ಇದರಲ್ಲಿ ದೊಡ್ಡ ದೊಡ್ಡ ಗುಂಡುಕಲ್ಲುಗಳನ್ನು ಸೇರಿಸಿ, ಅಣೆಕಟ್ಟನ್ನಾಗಿ ಪರಿವರ್ತಿಸಲಾಗಿದೆ. ಈ ಅಣೆಕಟ್ಟಿನಲ್ಲಿ ಸಂಗ್ರಹವಾದ ನೀರನ್ನು ಏತ ನೀರಾವರಿ ಯೋಜನೆಯ ಮೂಲಕ ದೊಡ್ಡ ದೊಡ್ಡ ಪಂಪಸೇಟ್ ಗಳನ್ನು ಕೂಡಿಸಿ ವ್ಯವಸಾಯಕ್ಕೆ ಬಳಸಿಕೊಳ್ಳಲಾಗುತ್ತದೆ. ಕೆಂಚನಗುಡ್ಡದ ಕವಲಿಗೆ ಕಾಲುವೆಯನ್ನು ನಿರ್ಮಿಸಿ, ವಿದ್ಯುತ್ ಉತ್ಪಾದನೆ ಮತ್ತು ನೀರಾವರಿ ವ್ಯವಸ್ಥೆಗೆ ನೀರನ್ನು ಬಳಸಲಾಗುತ್ತಿದೆ. ಪ್ರಾಚೀನ ಕಾಲದಲ್ಲಿ ಸೇತುವೆಯಾಗಿದ್ದು, ತದನಂತರ(ಇತ್ತೀಚೆಗೆ) ಇದು ಅಣೆಕಟ್ಟಾಗಿ ಬದಲಾಗಿದೆ.

ಮಂಟಪಗಳು

ಮುಕುಂದಿ ಗ್ರಾಮದ ತುಂಗಭದ್ರಾ ತೀರದ (ದಂಡೆ) ಸಮೀಪಕ್ಕೆ ಹೊಂದಿಕೊಂಡು ಎರಡು ಮಂಟಪಗಳನ್ನು ನಿರ್ಮಿಸಲಾಗಿದೆ. ಈ ಎರಡು ಮಂಟಪಗಳು ಉತ್ತರಾಭಿಮುಖವಾಗಿವೆ. ಸಾದ ಶೈಲಿಯ ಜಗತಿ(ಅಧಿಷ್ಠಾನ) ಮೇಲೆ ನಿರ್ಮಿತವಾಗಿರುವ ಈ ಮಂಟಪಗಳು ಅಲಂಕಾರಿಕ ಶೈಲಿಯ ೧೮ ಕಂಬಗಳನ್ನು ಹೊಂದಿವೆ. ಈ ಮಂಟಪಗಳ ಮೂರು ಬದಿಗೆ ಭಿತ್ತಿಯನ್ನು ಹೊಂದಿದ್ದು, ಮೇಲ್ಭಾಗದ ಛಾವಣಿಯಲ್ಲಿ ಮುಂಭಾಗವು ಹೊರಚಾಚಿದೆ(ಕಪೋತ). ಈ ಮಂಟಪಗಳು ನದಿಯ ದಂಡೆಯ ಮೇಲಿದ್ದು ನದಿಗೆ ಇಳಿಯಲು ಮೆಟ್ಟಗಳನ್ನು ಮಾಡಿಸಲಾಗಿದೆ. ಹಾಗೆಯೇ ಮಂಟಪದ ಸುತ್ತಲೂ ಕಂಪೌಂಡ್ ನಿರ್ಮಿಸಲಾಗಿದೆ.

ಸಂಜೀವ ರೆಡ್ಡಿಯವರ ಹೊಲದಲ್ಲಿರುವ ಮಂಟಪದ ಕಂಬದಲ್ಲಿ ಕ್ರಿ.ಶ.೧೫೭೧ ಕಾಲವನ್ನು ಸೂಚಿಸುವ ಶಾಸನವಿದೆ. ಈ ಶಾಸನವು ಭೂಮಿಯನ್ನು ಸಾಗುವಳಿಗೆ ನೀಡಿದ ವಿಚಾರವನ್ನು ತಿಳಿಸುತ್ತದೆ.[೧೬]

ಅರಳ ಹಳ್ಳಿಯಲ್ಲಿರುವ ಮಂಟಪದ ಸಮೀಪವಿರುವ ನೆಲಮಟ್ಟದ ಬಂಡೆಗಲ್ಲಿನ ಮೇಲೆ ಶಾಸನವಿದ್ದು, ಕ್ರಿ.ಶ.೧೬೦೩ ಕಾಲವನ್ನು ಸೂಚಿಸುತ್ತಿದ್ದು, ಸಿದ್ಧವೀರಣದೇವನ ಶಿಷ್ಯ ಭಂಡಾರಿ ಸಿದ್ಧರಾಮ ದೇವನಿಗೆ ಅರಳಹಳ್ಳಿ ಗ್ರಾಮವನ್ನು ಪುರವರ್ಗವಾಗಿ ದಾನನೀಡಿದ್ದನ್ನು ತಿಳಿಸುತ್ತದೆ.[೧೭] 'ಮಂಟಪ' ಎಂಬ ಪದಕ್ಕೆ ಶಬ್ದಕೋಶದಲ್ಲಿ ನಾನಾ ಅರ್ಥಗಳಿವೆ. ಮಂಟಪ, ಹಂದರ, ಅಲಂಕೃತ, ಚಪ್ಪರ, ಸಿಂಗರಿಸಿ ಕುಳಿತುಕೊಳ್ಳುವ ಸ್ಥಳ ಎಂಬ ಅರ್ಥಗಳಿವೆ.

ಮುಕ್ಕುಂದಿ ಗ್ರಾಮದಲ್ಲಿರುವ ಈ ಮಂಟಪಗಳು ಅವಸಾನದ ಅಂಚಿನತ್ತ ಸಾಗಿವೆ. ಹಿಂದಿನ ಕಾಲದಲ್ಲಿ ಮಂಟಪಗಳು ದೂರದಿಂದ ದಣಿದು ಬರುವ ಪ್ರವಾಸಿಗಳ ತಂಗುದಾಣವಾಗಿದ್ದವು ಹಾಗೂ ನಿರ್ಗತಿಗರಿಗೆ ಊಟ ವಸತಿ ಸೌಲಭ್ಯಗಳನ್ನು ಒದಗಿಸುತ್ತಿದ್ದವು. ಇಂತಹ ಮಂಟಪಗಳಿಗೆ ಸತ್ರ, ಛತ್ರ ಎಂಬ ಹೆಸರಿನಿಂದಲೂ ಕರೆಯಲಾಗುತ್ತಿತ್ತು. ಈ ಛತ್ರ ಅಥವಾ ಮಂಟಪಗಳಿಗೆ ರಾಜರು, ಮಾಂಡಳೀಕರು, ಸಾಮಂತರು ದಾನ ನೀಡುತ್ತಿದ್ದರು. ಛತ್ರದ ಮೇಲ್ವಿಚಾರಣೆಯನ್ನು ನೋಡಿಕೊಳ್ಳಲು ಅಧಿಕಾರಿಗಳನ್ನು ನೇಮಿಸಲಾಗುತ್ತಿತ್ತು. ಅಂತಹ ಒಬ್ಬ ಅಧಿಕಾರಿಯನ್ನು ಮುಕ್ಕುಂದಿ ಗ್ರಾಮದ ಕ್ರಿ.ಶ.೧೦೪೮ರ ಶಾಸನದಲ್ಲಿ ಉಲ್ಲೇಖಿಸಲಾಗಿದ್ದು, ಸಿಂಧರ ವಂಶದ ಗೋನರಸನು ದಂಡನಾಯಕ ಮಾರ್ತಣ್ಣಯ್ಯನು ಮಾಡಿಸಿದ ಸತ್ರಕ್ಕೆ ಮಣ್ಣಲಗಾವನ ನಾಲ್ವತ್ತು ಗೇಣಘಳೆಯಲ್ಲಿ ಅಳೆದು ಐವತ್ತು ಮತ್ತರು ಭೂಮಿಯನ್ನು ದಾನವಾಗಿ ನೀಡುತ್ತಾನೆ. ಛತ್ರದ ವೃತ್ತಿಯನ್ನು ಚಂದ್ರಭಟ್ಟ ಎಂಬ ಅಧಿಕಾರಿ ನೋಡಿಕೊಳ್ಳುತ್ತಿದ್ದನೆಂದು ಶಾಸನ ಉಲ್ಲೇಖಿಸುತ್ತದೆ.[೧೮]

ಈ ಶಾಸನದ ಕಾಲವನ್ನು ಗಮನದಲ್ಲಿ ಇಟ್ಟುಕೊಂಡು. ಮಂಟಪ ಅಥವಾ ಸತ್ರಗಳ ಕಾಲವನ್ನು ಕಲ್ಯಾಣ ಚಾಲುಕ್ಯರ ಕಾಲವೆಂದು ಗುರುತಿಸಬಹುದಾದರೂ ಸ್ಪಷ್ಟವಾದ ಶಾಸನಗಳ ಉಲ್ಲೇಖ ದೊರೆಯುವುದಿಲ್ಲಾ ಹೀಗೆ ರಾಜರು ಮಾಂಡಳೀಕರು ಸಾಮಂತರು, ಮಂಟಪಗಳನ್ನು ನಿರ್ಮಿಸಿ ದಾನ ನೀಡುವ ಮೂಲಕ ಸಾಮಾಜಿಕ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರೆಂದು ಹೇಳಬಹುದು.

ಒಟ್ಟಾರೆಯಾಗಿ ದೇವಾಲಯಗಳು, ಕೋಟೆ, ಮಂಟಪಗಳು, ಕಲ್ಯಾಣ ಚಾಲುಕ್ಯರ ಅರಸು ಮನೆತನ ಗಳ ಮತ್ತು ಇತರ ಸಾಮ್ರಾಜ್ಯದ ರಾಜರ ಅಧೀನಕ್ಕೊಳಪಟ್ಟು ಜೀರ್ಣೋದ್ಧಾರಗೊಂಡಿವೆ. ಈ ದೇವಾಲಯಗಳು ಭಕ್ತಿಯ ಕೇಂದ್ರಗಳಾಗಿ, ಸಾಂಸ್ಕೃತಿಕವಾಗಿ ಮತ್ತು ಧಾರ್ಮಿಕವಾಗಿ ಮಹತ್ವವನ್ನು ಪಡೆದಿವೆ.

ಅಡಿಟಿಪ್ಪಣಿ

೧. ರಾಮಚಂದ್ರ ಎಸ್ .ಕೆ., ೧೯೯೪, ಮೂರ್ತಿಶಿಲ್ಪದ ನೆಲೆ ಹಿನ್ನೆಲೆ, ಪು.೧

೨. ನಾಗಭೂಷಣ ಸಿ., ಕನ್ನಡ ಸಾಹಿತ್ಯ ಸಂಸ್ಕೃತಿ ಶೋಧನೆ, ಪು.೧೧೫

೩. ಭಾರತಿ ಬಸವರಾಜ, ೨೦೦೫, ರಾಯಚೂರು ಜಿಲ್ಲೆ ಶಾಸನಗಳ ಸಮಗ್ರ ಅಧ್ಯಯನ(ಉದ್ಧೃತ), ಪು.೧೯೪

೪. ಎಂ.ಚಿದಾನಂದ ಮೂರ್ತಿ, ೨೦೦೨, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು.೧೯೪

೫. ಅದೇ, ಪು.೧೯೪

೬. ದೇವರಕೊಂಡಾರೆಡ್ಡಿ, ೨೦೦೩, ಕನ್ನಡ ವಿಶ್ವವಿದ್ಯಾಲಯ ಶಾಸನ ಸಂ.೭, ಸಿಂ.೪, ಪು.೩೪೯

೭. ಅದೇ, ಸಿಂ.೮, ಪು.೩೬೧

೮. ಅದೇ, ಸಿಂ.೧೬, ಪು.೩೭೨

೯. ಪರಮಶಿವಮೂರ್ತಿ ಡಿ.ವಿ., ೧೯೯೯, ಶಾಸನ ಶಿಲ್ಪ, ಪು.೭

೧೦. ಅದೇ, ಪು.೮

೧೧. ಅದೇ, ಪು.೮

೧೨. ಪಾಟೀಲ್ ಸಿ.ಎಸ್ ., ೧೯೯೯, ಕರ್ನಾಟಕದ ಕೋಟೆಗಳು, ಪು.೧

೧೩. ಅದೇ, ಪು.೨-೪

೧೪. ದೇವರಕೊಂಡಾರೆಡ್ಡಿ (ಸಂ), ೨೦೦೩, ಪೂರ್ವೋಕ್ತ, ಪು.೩೬೮

೧೫. ಕೊಟ್ರೇಶ್ ಎಂ., ಬಳ್ಳಾರಿ ಜಿಲ್ಲೆಯ ಕೋಟೆ ಕೊತ್ತಲುಗಳು, ಪು.೮೩

೧೬. ದೇವರಕೊಂಡಾರೆಡ್ಡಿ, ೨೦೦೩, ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೭, ಪು.೩೭೧

೧೭. ಅದೇ, ಪು.೩೭೩

೧೮. ಅದೇ, ಪು.೩೬೫

ಅಧ್ಯಾಯ ೬

ಸಮಾರೋಪ

೬

ಸಮಾರೋಪ

ಕರ್ನಾಟಕವು ಪುರಾತನ ಸಂಸ್ಕೃತಿಯ ಮತ್ತು ಐತಿಹಾಸಿಕ ಮಹತ್ವವನ್ನು ಪಡೆದಿರುವ ಪ್ರಾಚೀನ ನಾಡಾಗಿದೆ. ಇಲ್ಲಿರುವ ಅನೇಕ ಪ್ರದೇಶಗಳು ಹಲವಾರು ರಾಜಮನೆತನಗಳ ಆಳ್ವಿಕೆಗೊಳಪಟ್ಟು, ಸರ್ವಧರ್ಮಗಳ ಸಮನ್ವಯವನ್ನು ಸಾಧಿಸಿದ ಭೂಮಿಯಾಗಿದೆ. ಇಂತಹ ಸಂಸ್ಕೃತಿಯ ಹಿನ್ನೆಲೆಯನ್ನು ಪಡೆದ ಸಿಂಧನೂರು ತಾಲ್ಲೂಕಿನ ಪ್ರಮುಖ ಊರು ಮುಕ್ಕುಂದಿ.

ರಾಯಚೂರು ಜಿಲ್ಲೆಯ ಸಿಂಧನೂರು ತಾಲೂಕಿನಲ್ಲಿರುವ ಮುಕ್ಕುಂದಿ ಗ್ರಾಮವು ಅನೇಕ ವಿಷಯಗಳಲ್ಲಿ ಪ್ರಮುಖವಾಗಿದ್ದು, ತುಂಗಭದ್ರಾನದಿ ಬೆಟ್ಟಗಳಿಂದ ಆವೃತ್ತವಾಗಿರುವ ಚಿಕ್ಕ ಗ್ರಾಮವಾಗಿದೆ. ಇದನ್ನು ಊರು ಎಂದು ಕರೆಯುವುದಕ್ಕಿಂತ ದೇವಸ್ಥಾನಗಳ ಸಮುಚ್ಚಯವೆಂದರೆ ತಪ್ಪಾಗಲಾರದು. ಇತಿಹಾಸದ ಗತವೈಭವವನ್ನು ಮೆಲುಕು ಹಾಕುತ್ತಾ ಸುಸ್ಥಿತಿಯಲ್ಲಿರುವ ಶಾಸನಗಳು, ದೇವಾಲಯಗಳು, ಅದ್ಭುತ ಶಿಲ್ಪಗಳಿಂದ ತುಂಬಿದ ದೇಗುಲದ ಗೋಡೆಗಳು, ವೀರಗಲ್ಲುಗಳು, ಕೋಟೆ, ಮಂಟಪ, ಸೇತುವೆ, ಇವುಗಳು ಗತ ಇತಿಹಾಸವನ್ನು ಸಾರುವ ಪ್ರತಿಮೆಗಳಾಗಿವೆ.

ಮುಕ್ಕುಂದಿಯ ಗತ ಇತಿಹಾಸ ಮತ್ತು ವೈಭವದ ಸಂಸ್ಕೃತಿಯನ್ನು ತಿಳಿಸುವಲ್ಲಿ ಶಾಸನಗಳು ಮತ್ತು ದೇವಾಲಯಗಳು ಪ್ರಮುಖವಾದ ಆಕರಗಳಾಗಿವೆ. ಇವುಗಳು ಕಲೆಗೆ ದೊರೆತ ಪ್ರೋತ್ಸಾಹವನ್ನು ಕಲಾಶೈಲಿಯನ್ನು ಹಾಗೂ ಧಾರ್ಮಿಕ ಸ್ಥಿತಿಯನ್ನು ತಿಳಿಸುವಲ್ಲಿ ಮಹತ್ವದ ಪಾತ್ರವಹಿಸಿವೆ. ಇದಲ್ಲದೆ, ಧಾರ್ಮಿಕವಾಗಿ ಇತರೆ ಸಾಮಾಜಿಕ ಕಾರ್ಯಗಳಿಗೆ ಅಂದಿನ ರಾಜರು, ಸಾಮಂತರು, ದಂಡನಾಯಕರು ಹಾಗೂ ಇತರೆ ವ್ಯಕ್ತಿಗಳು ನೀಡಿದ ದಾನದ ಮಹತ್ವವನ್ನು ನಾವು ಶಾಸನಗಳ ಮುಖಾಂತರ ತಿಳಿಯಬಹುದಾಗಿದೆ.

ಮುಕ್ಕುಂದಿಯ ಕ್ಷೇತ್ರ ಕಾರ್ಯವನ್ನು ಕೈಗೊಂಡು ಪ್ರಮುಖವಾಗಿ ಭೌಗೋಳಿಕ ಪರಿಸರ ವಾಯುಗುಣ, ಇಲ್ಲಿಯ ಪ್ರಕೃತಿ ಗ್ರಾಮದ ವಿಶೇಷತೆಗಳನ್ನು ಹಾಗೂ ಮುಕ್ಕುಂದಿಯ ಪದ ನಿಷ್ಪತ್ತಿಯಲ್ಲಿ ಪ್ರಕೃತಿಯ ಪಾತ್ರ, ಗ್ರಾಮದ ಸುತ್ತ ಮುತ್ತ, ರೌಡಕುಂದ, ನಿಟ್ಟೂರೂ(ಸಿರಗುಪ್ಪ ತಾ) ಇನ್ನೂ ಮುಂತಾದ ಗ್ರಾಮದ ಪುರಾತತ್ವ ನೆಲೆಗಳನ್ನು ಆಧಾರವಾಗಿಟ್ಟುಕೊಂಡು, ಮುಕ್ಕುಂದಿಯ ಪ್ರಾಚೀನತೆಯನ್ನು ಅರಿಯಲು ಪ್ರಯತ್ನಿಸಲಾಗಿದೆ. ಶಾಸನಗಳಲ್ಲಿ ದೊರೆಯುವ ರಾಜಕೀಯ ಚರಿತ್ರೆಯನ್ನು ಸ್ಥಳೀಯ ಅಧಿಕಾರಿಗಳಾದ ಸಾಮಂತರು, ಮಾಂಡಳೀಕರು, ಇವರ ಅಧಿಕಾರ ವ್ಯಾಪ್ತಿಯನ್ನು ಅಧ್ಯಾಯದಲ್ಲಿ ವಿವರಿಸಲಾಗಿದೆ.

ಶಾಸನಗಳಲ್ಲಿ ಉಲ್ಲೇಖವಾಗಿರುವ ದಾನ-ದತ್ತಿಗಳನ್ನು ಆಧಾರವಾಗಿಟ್ಟುಕೊಂಡು, ಧಾರ್ಮಿಕ ಪ್ರಕ್ರಿಯೆಯನ್ನು ದಾನದ ಮಹತ್ವವನ್ನು ಅರಿಯುವುದರ ಜೊತೆಗೆ, ವೀರಗಲ್ಲುಗಳು, ತ್ಯಾಗ ಬಲಿದಾನ, ಮನೋಭಾವನೆ, ವೀರಪರಂಪರೆಯ ಸಂಕೇತವೆಂದು ಚಿತ್ರಿಸಲಾಗಿದೆ. ಹಾಗೆಯೇ ವಿವಿಧ ವ್ಯಕ್ತಿಗಳು, ವ್ಯಾಪಾರಿ ಸಂಘದವರು, ದೇವಾಲಯಗಳಿಗೆ ಮತ್ತು ಪೂಜಾರಿಗಳಿಗೆ ದಾನ ದತ್ತಿ ಭೂಮಿದಾನ ನೀಡಿರು ವುದನ್ನು ಆಧಾರವಾಗಿಟ್ಟುಕೊಂಡು ಅಂದಿನ ಆರ್ಥಿಕ ಸ್ಥಿತಿಯ ಬಗ್ಗೆ ಚರ್ಚಿಸಲಾಗಿದೆ. ಶಾಸನಗಳಲ್ಲಿ ಬಳಕೆಯಾಗಿರುವ ಸಾಹಿತ್ಯಿಕ ಅಂಶಗಳಾದ ಛಂದಸ್ಸು, ವರ್ಣನೆ, ಅಲಂಕಾರ, ಚಂಪೂ ಶೈಲಿಯ ಬಳಕೆಯನ್ನು ಮತ್ತು ವೃತ್ತ, ಅಕ್ಕರ, ಕಂದಗಳು ಬಳಕೆಯಾಗಿರುವುದನ್ನು ಗಮನಿಸಲಾಗಿದೆ. ಶಾಸನದಲ್ಲಿ ಉಲ್ಲೇಖಿತವಾದ ಕವಿ ಮತ್ತು ಲಿಪಿಕಾರರನ್ನು ಕುರಿತು ಅಧ್ಯಯನ ಮಾಡಿ ಸಾಹಿತ್ಯದ ಕವಿಗೂ ಶಾಸನ ಕವಿಗಳಿಗೂ ಇರುವ ಭಿನ್ನತೆಯನ್ನು ಇತಿಮಿತಿಗಳಲ್ಲಿ ವಿವರಿಸಲಾಗಿದೆ.

ಮುಕ್ಕುಂದಿಯು ಅಂದಿನ ಕಾಲದಲ್ಲಿ ಅಗ್ರಹಾರವಾಗಿದ್ದನ್ನು ಗಮನಿಸಿ ಅಗ್ರಹಾರಗಳು ವಿದ್ಯಾ ಕೇಂದ್ರಗಳಾಗಿದ್ದವು ಎಂಬುದನ್ನು ಶಾಸನಗಳು ಮತ್ತು ಇತರ ಆಕರ ಗ್ರಂಥಗಳನ್ನು ಬಳಸಿಕೊಂಡು ಅಗ್ರಹಾರಗಳಲ್ಲಿ ಬ್ರಾಹ್ಮಣರಷ್ಟೇ ಅಲ್ಲದೆ ಇತರ ವರ್ಗದ ಜನರು ಅಧಿಕಾರ ನಡೆಸುತ್ತಿದ್ದರೆಂಬುದನ್ನು ವಿವರವಾಗಿ ಚರ್ಚಿಸಲಾಗಿದೆ.

ದೇವಾಲಯದ ವಾಸ್ತು ಮತ್ತು ಮೂರ್ತಿಶಿಲ್ಪ, ಕೋಟೆ, ಮಂಟಪ, ಸೇತುವೆ ಮುಂತಾದವುಗಳನ್ನು ವಾಸ್ತುನೆಲೆಯಲ್ಲಿ ಅಧ್ಯಯನ ಮಾಡಲಾಗಿದೆ. ಹಾಗೆಯೇ ಪ್ರಸ್ತುತ ಸಂದರ್ಭದಲ್ಲಿ ದೇವಾಲಯಗಳು, ಶಿಲ್ಪಗಳು, ಕೋಟೆ ಹಾಗೂ ಮಂಟಪಗಳ ಸ್ಥಿತಿಯನ್ನು ವಿವರಿಸುತ್ತಾ, ದೇವಾಲಯದ ವಾಸ್ತು ಮತ್ತು ಮೂರ್ತಿಶಿಲ್ಪ ಕಲೆಯು ಅಂದಿನ ಕಾಲದ ಧಾರ್ಮಿಕ ಮಹತ್ವವನ್ನು ಸಾರುವುದಷ್ಟೇ ಅಲ್ಲದೇ ಅವು ಕಲೆಯ ಮಹತ್ವವನ್ನು ಪ್ರತಿಬಿಂಬಿಸುವ ಭಕ್ತಿಯ ಕೇಂದ್ರಗಳಾಗಿದ್ದವು ಎಂಬುದಾಗಿ ತಿಳಿಸುತ್ತಾ, ವಾಸ್ತು ಮತ್ತು ಶಿಲ್ಪವನ್ನು ವಿವರಿಸುವ ಮುಖಾಂತರ ನಶಿಸಿ ಹೋಗುತ್ತಿರುವ ದೇವಾಲಯಗಳನ್ನು ಪರಿಚಯಿಸಿ ಅವುಗಳ ಮಹತ್ವವನ್ನು ಈ ಅಧ್ಯಾಯದಲ್ಲಿ ತಿಳಿಯಪಡಿಸಲಾಗಿದೆ.

ಅಂದಿನ ಕಾಲದಲ್ಲಿ ಕೋಟೆ ಕಟ್ಟುವ ಮುಖಾಂತರ ಗ್ರಾಮದ ರಕ್ಷಣೆಗೆ ಮಹತ್ವ ನೀಡಲಾಗಿತ್ತು. ಪ್ರಾಚೀನ ಕಾಲದ ಜನರು ಸಂಪಾದಿಸಿದ ಸಂಪತ್ತನ್ನು ಸಂರಕ್ಷಿಸಿಕೊಳ್ಳಲು, ಕಾಡು ಪ್ರಾಣಿಗಳಿಂದ ರಕ್ಷಿಸಿಕೊಳ್ಳಲು ಕೋಟೆಯನ್ನು ಕಟ್ಟುತ್ತಿದ್ದರು. ಆದರೆ ನಂತರ ರಾಜರ ಆಳ್ವಿಕೆಯಲ್ಲಿ ಕೋಟೆಗಳನ್ನು ಪ್ರಮುಖ ರಕ್ಷಣಾ ಸ್ಥಾನಗಳಾಗಿ ಮಾರ್ಪಡಿಸಿಕೊಂಡಿದ್ದರೆಂಬುದನ್ನು ತಿಳಿಸುತ್ತಾ, ಕೋಟೆ ಮತ್ತು ರಾಜರಿಗಿರುವ ಸಂಬಂಧವನ್ನು ವಿವರವಾಗಿ ಚರ್ಚಿಸಲಾಗಿದೆ.

ಮಂಟಪಗಳು ಹಿಂದಿನ ಕಾಲದಲ್ಲಿ ದೂರದಿಂದ ದಣಿದು ಬರುವ ಪ್ರವಾಸಿಗರಿಗೆ ತಂಗುದಾಣ ವಾಗಿದ್ದು, ನಿರ್ಗತಿಕರಿಗೆ ಊಟ ವಸತಿಗಳನ್ನು ಕಲ್ಪಿಸುವ ಉದ್ದೇಶಕ್ಕಾಗಿ ನಿರ್ಮಿಸುತ್ತಿದ್ದರೆಂಬುದನ್ನು ಗಮನಿಸಿ, ಮಂಟಪಗಳ ಕುರಿತು ವಿವರವಾಗಿ ಚರ್ಚಿಸಲಾಗಿದೆ.

ಪ್ರಬಂಧದ ಪ್ರಮುಖ ಸಾರವೆಂದರೆ ಮುಕ್ಕುಂದಿಯ ಪ್ರಾಚೀನ ಗತ ವೈಭವದ ಬದುಕಿನ ಮೇಲೆ ಬೆಳಕುಚೆಲ್ಲುವುದರ ಜೊತೆಗೆ ಪ್ರಸ್ತುತ ಅಧ್ಯಯನದ ಇತಿಮಿತಿಗಳಲ್ಲಿ ಆಕಾರಗಳನ್ನು ಸಂಗ್ರಹಿಸಿ ವಿಷಯವನ್ನು ವಿಶ್ಲೇಷಿಸಿ ಸಂಯೋಜಿಸಲಾಗಿದೆ.

ಮುಕ್ಕುಂದಿಯಲ್ಲಿರುವ ದೇವಾಲಯಗಳು ಮತ್ತು ಶಾಸನಗಳನ್ನು, ಕೋಟೆ, ಮಂಟಪಗಳನ್ನು ರಕ್ಷಿಸುವ ಹೊಣೆ ಗ್ರಾಮಸ್ಥರದಾಗಿದೆ. ಅಲ್ಲಿ ಪಾಳುಬಿದ್ದಿರುವ ಸ್ಮಾರಕಗಳನ್ನು ಮತ್ತೆ ಪುನಾರಚಿಸಿ, ನಶಿಸುತಿರುವ ಅವುಗಳನ್ನು ರಕ್ಷಿಸಿ ಮುಂದಿನ ಪೀಳಿಗೆಗೆ ಉಳಿಸಬಹುದಾಗಿದೆ.

ಅನುಬಂಧಗಳು

೧

ಗ್ರಂಥಋಣ

೧. ಅಮರೇಶ ನುಗಡೋಣಿ, ೨೦೦೩, **ಹೈದರಾಬಾದ್ ಕರ್ನಾಟಕ ಹಾಡು -ಪಾಡು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೨. ಆಲೂರು ವೆಂಕಟರಾವ್, ೧೯೮೩, **ಕರ್ನಾಟಕ ಗತವೈಭವ,** ನಿರ್ದೇಶಕರು, ಸರಕಾರಿ ಮುದ್ರಣಾಲಯ, ಬೆಂಗಳೂರು

೩. ಕಲಬುರ್ಗಿ ಎಂ.ಎಂ., ೧೯೯೫, **ಸಮಾಧಿ- ಬಲಿದಾನ-ವೀರಮರಣ-ಸ್ಮಾರಕಗಳು,** ಐ.ಬಿ.ಎಚ್.ಪ್ರಕಾಶನ, ಬೆಂಗಳೂರು

೪. ಕೃಷ್ಣರಾವ್ ಮತ್ತು ಎಂ.ಕೇಶವಭಟ್, ೧೯೭೦, **ಕರ್ನಾಟಕ ಇತಿಹಾಸ ದರ್ಶನ,** ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ, ಬೆಂಗಳೂರು

೫. ಕೃಷ್ಣಕುಮಾರ್ ಸಿ.ಪಿ., ೧೯೭೦, **ಭಾರತೀಯ ಶಾಸನಶಾಸ್ತ್ರ ಪ್ರವೇಶ,** ಸುರಚಿ ಪ್ರಕಾಶನ, ಸರಸ್ವತಿಪುರಂ, ಮೈಸೂರು

೬. ಕೃಷ್ಣಕುಮಾರ್ ಸಿ.ಪಿ., ೧೯೯೩, **ಶಾಸನಶಾಸ್ತ್ರ ಪ್ರವೇಶ,** ಚೇತನ ಬುಕ್ ಹೌಸ್, ಮೈಸೂರು

೭. ಕೊಟ್ರೇಶ್ ಎಂ., ೨೦೦೨, **ಕೋಟೆ-ಕೊತ್ತಲುಗಳ : ಒಂದು ಅಧ್ಯಯನ (ಬಳ್ಳಾರಿ),** ಪಿಎಚ್.ಡಿ. ಅಪ್ರಕಟಿತ ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೮. ಚನ್ನಬಸಪ್ಪ ಪಾಟೀಲ ಎಸ್., ೧೯೯೧, **ಕರ್ನಾಟಕದ ಕೋಟೆಗಳು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೯. ಚನ್ನಬಸಪ್ಪ ಹಿರೇಮಠ, ೨೦೦೦, **ಎಡದೊರೆನಾಡು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೦. ಚಿದಾನಂದಮೂರ್ತಿ ಎಂ., ೨೦೦೨, **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ,** ಸ್ವಪ್ನ ಬುಕ್ ಹೌಸ್, ಬೆಂಗಳೂರು

೧೧. ಚಿದಾನಂದಮೂರ್ತಿ ಎಂ., ೧೯೮೨, **ವೀರಗಲ್ಲು ಮತ್ತು ಮಾಸ್ತಿಗಲ್ಲು,** ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

೧೨. ಚೆನ್ನಕ್ಕ ಎಲಿಗಾರ, ೨೦೦೦, **ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೪. ತಿಪ್ಪೇರುದ್ರಸ್ವಾಮಿ ಎಚ್., ೨೦೦೧, **ಕರ್ನಾಟಕ ಸಂಸ್ಕೃತಿ ಸಮೀಕ್ಷೆ**, ಡಿ.ವಿ.ಕೆ.ಮೂರ್ತಿ ಪ್ರಕಾಶನ, ಮೈಸೂರು

೧೫. ನಾಗಭೂಷಣ ಸಿ., ೧೯೯೯, **ಕನ್ನಡ ಸಾಹಿತ್ಯ ಸಂಸ್ಕೃತಿ ಶೋಧನೆ**, ಅಮೃತವರ್ಷಿಣಿ ಪ್ರಕಾಶನ, ನಂದಿಹಳ್ಳಿ, ಸಂಡೂರು

೧೬. ನಾಗಭೂಷಣ ಸಿ., ೨೦೦೨, **ಸಾಹಿತ್ಯ ಸಂಸ್ಕೃತಿ ಹುಡುಕಾಟ**, ಅಮೃತವರ್ಷಿಣಿ ಪ್ರಕಾಶನ, ನಂದಿಹಳ್ಳಿ, ಸಂಡೂರು

೧೭. ನಾಗಭೂಷಣ ಸಿ., ೨೦೦೫, **ಶಾಸನಗಳು ಮತ್ತು ಕನ್ನಡ ಸಾಹಿತ್ಯ**, ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ

೧೮. ನಾಗಯ್ಯ ಜೆ.ಎಂ., ೨೦೦೨, **ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸ**, ಲೋಹಿಯಾ ಪ್ರಕಾಶನ, ಬಳ್ಳಾರಿ, ೨೦೦೨

೧೯. ನಾಗಯ್ಯ ಜೆ.ಎಂ., ೧೯೯೨, **ಆರನೇ ವಿಕ್ರಮಾದಿತ್ಯನ ಕಾಲದ ಶಾಸನಗಳು ಒಂದು ಅಧ್ಯಯನ** ವೀರಶೈವ ಅಧ್ಯಯನ ಅಕಾಡೆಮಿ, ಬೆಳಗಾವಿ, ೧೯೯೨

೨೦. ಪರಮಶಿವಮೂರ್ತಿ ಡಿ.ವಿ., ೧೯೯೯, **ಕನ್ನಡ ಶಾಸನಶಿಲ್ಪ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೧. ಭಗವತಿ ಎಚ್.ಎಸ್., ಮೇಲಿನ ಮನಿ ಎಚ್.ಎಸ್., ೨೦೦೪, **ಕನ್ನಡ ಶಾಸನಗಳ ಅಧ್ಯಯನ**, ವಿದ್ಯಾನಿಧಿ ಪ್ರಕಾಶನ, ಗದಗ

೨೨. ರವೀಂದ್ರನಾಥ ಕೆ., ೨೦೦೨, **ಕನ್ನಡ ದಾಖಲು ಸಾಹಿತ್ಯ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೩. ರಾಮಚಂದ್ರರಾವ್ ಎಸ್.ಕೆ., ೧೯೭೫, **ಮೂರ್ತಿಶಿಲ್ಪದ ನೆಲೆ ಹಿನ್ನೆಲೆ**, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

೨೪. ಲಕ್ಷ್ಮಣ್ ತೆಲಗಾವಿ, ೨೦೦೪, **ಮೌರ್ಯ ಮತ್ತು ಶಾತವಾಹನ ಯುಗ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೫. ವೆಂಕಟೇಶ ಜೋಯಿಸ್ ಕೆ.ಜಿ., ೧೯೯೬, **ಕೆಳದಿ ಶಾಸನಗಳ ಸಾಂಸ್ಕೃತಿಕ ಅಧ್ಯಯನ**, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು

೨೬. ಶೇಷಶಾಸ್ತ್ರಿ ಆರ್., ೧೯೮೨, **ಕರ್ನಾಟಕದ ವೀರಗಲ್ಲುಗಳು**, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

೨೭. ಶೇಷಶಾಸ್ತ್ರಿ ಆರ್., ೧೯೯೨, **ಶಾಸನ ಪರಿಚಯ**, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

೨೮. ಸ್ವಾಮಿ ಬಿ.ಜಿ.ಎಲ್., ೧೯೭೫, **ಶಾಸನಗಳಲ್ಲಿ ಗಿಡಮರಗಳು**, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

೨೯. ಸುಜಾತ ಮಲ್ಲನಗೌಡ, ೨೦೦೦, **ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳ ಕೋಟೆಗಳು : ಒಂದು** ಅಧ್ಯಯನ, ಅಪ್ರಕಟಿತ ಪಿಎಚ್.ಡಿ.ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ,ಹಂಪಿ

೩೦. ಸೂರ್ಯನಾಥ ಯು.ಕಾಮತ್, ೧೯೮೪, **ಕರ್ನಾಟಕ ರಾಜ್ಯ ಗ್ಯಾಜೆಟಿಯರ್**, ಭಾಗ ೧, ಕರ್ನಾಟಕ ಸರಕಾರ, ಬೆಂಗಳೂರು

೩೧. ಹಿರೇಮಠ ಬಿ.ಆರ್., ೨೦೦೦, **ಶಾಸನಗಳಲ್ಲಿ ಕರ್ನಾಟಕ ವರ್ತಕರು**, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಸಂಪಾದಿತ ಕೃತಿಗಳು

೧. ಸಂಪಾದಕರು ಸಹ.ಸಂಪಾದಕರು	ಮೃತ್ಯುಂಜಯ ಹೊರಕೇರಿ ಬಸವಲಿಂಗ ಸೊಪ್ಪಿಮಠ	**ರಾಯಚೂರು ಜಿಲ್ಲಾ ದರ್ಶನ**, ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ೨೦೦೫
೨. ಪ್ರ.ಸಂಪಾದಕರು ಸಂ. ಸಂಪಾದಕರು	ಷೇಕ್ ಅಲಿ ಬಿ. ಸುಂದರ ಅ.	**ಕರ್ನಾಟಕ ಚರಿತ್ರೆ ಸಂಪುಟ ೧**, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭
೩. ಪ್ರ.ಸಂಪಾದಕರು ಸಂ. ಸಂಪಾದಕರು	ಷೇಕ್ ಅಲಿ ಬಿ. ಸುರೇಂದ್ರರಾವ್ ಬಿ.,	**ಕರ್ನಾಟಕ ಚರಿತ್ರೆ ಸಂಪುಟ ೨**, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭

ಶಾಸನ ಸಂಪುಟಗಳು


೧. ಸಂಪಾದಕರು ಸಹ. ಸಂಪಾದಕರು	ಡಾ.ದೇವರಕೊಂಡಾರೆಡ್ಡಿ ಡಾ.ಕೆ.ಜಿ.ಭಟ್‌ಸೂರಿ, ಡಾ.ಕಲವೀರ ಮನ್ವಚಾರ್ ಡಾ.ಡಿ.ವಿ.ಪರಮಶಿವಮೂರ್ತಿ	**ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೭** ರಾಯಚೂರು ಜಿಲ್ಲೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೩

೨


ಸಂಕೇತ ಸೂಚಿ

ರಾಯ	: ರಾಯಚೂರು
ಸಿಂಧ	: ಸಿಂಧನೂರು
ಲಿಂಗ	: ಲಿಂಗಸೂಗೂರು
ಮಾನವಿ	: ಮಾನ್ವಿ
ಸಂ.	: ಸಂಪಾದಕರು
ಪ್ರ.ಸಂ.	: ಪ್ರಧಾನ ಸಂಪಾದಕರು
ತುಂ.ಭ	: ತುಂಗಾಭದ್ರ


ಛಾಯಾಚಿತ್ರಗಳು




ಸೋಮಲಿಂಗೇಶ್ವರ ದೇವಾಲಯದಲ್ಲಿರುವ
ಶಾಸನ, ಮುಕ್ಕುಂದಿ



ಮುರಹರಿ ದೇವಸ್ಥಾನದ ಬಲಭಾಗದ
ಗೋಡೆಯಲ್ಲಿರುವ ಶಾಸನ, ಮುಕ್ಕುಂದಿ



ಮುರಹರಿ ದೇವಸ್ಥಾನ, ಮುಕ್ಕುಂದಿ



ಮುರಹರಿ ದೇವಸ್ಥಾನದ ಬಲಭಾಗದ ನೋಟ, ಮುಕ್ಕುಂದಿ




ಸೋಮಲಿಂಗೇಶ್ವರ ದೇವಸ್ಥಾನದ ಮುಂಭಾಗ, ಮುಕ್ಕುಂದಿ



ಸೋಮಲಿಂಗೇಶ್ವರ ದೇವಸ್ಥಾನದ ಬಲಭಾಗದ ಪಾರ್ಶ್ವನೋಟ, ಮುಕ್ಕುಂದಿ




ಸೋಮಲಿಂಗೇಶ್ವರ ದೇವಸ್ಥಾನದ ಗೋಡೆಯಲ್ಲಿರುವ
ವಿಷ್ಣು ಮತ್ತು ಶಿಲಾಬಾಲಕಿಯರು, ಮುಕ್ಕುಂದಿ



ರಾಮಲಿಂಗೇಶ್ವರ ದೇವಸ್ಥಾನ, ಮುಕ್ಕುಂದಿ



ಪಾಪನಾಥೇಶ್ವರ ದೇವಸ್ಥಾನ, ಮುಕ್ಕುಂದಿ



ಸಂಜೀವ ರೆಡ್ಡಿ ಅವರ ತೋಟದಲ್ಲಿರುವ ಮಂಟಪ, ಮುಕ್ಕುಂದಿ



ಅರಳಹಳ್ಳಿಯಲ್ಲಿರುವ ಮಂಟಪ, ಮುಕ್ಕುಂದಿ



ಕುರ್ತಕೋಟೆಯ ಭಂಡಾರಖಾನೆ, ಮುಕ್ಕುಂದಿ




ಪಾಪನಾಥೇಶ್ವರ ದೇವಾಲಯದ
ಪ್ರಕಾರದಲ್ಲಿರುವ ವೀರಗಲ್ಲು, ಮುಕ್ಕುಂದಿ



ವೀರಭದ್ರೇಶ್ವರ ದೇವಾಲಯದಲ್ಲಿರುವ
ವೀರಗಲ್ಲು, ಮುಕ್ಕುಂದಿ



ಮುರಹರಿ ದೇವಾಲಯದ
ಗರ್ಭಗೃಹದಲ್ಲಿರುವ ಮುರಹರಿ ಶಿಲ್ಪ,
ಮುಕ್ಕುಂದಿ



ಸೋಮಲಿಂಗೇಶ್ವರ ದೇವಾಲಯದ ಗರ್ಭಗೃಹದಲ್ಲಿರುವ ಈಶ್ವರಲಿಂಗ, ಮುಕ್ಕುಂದಿ




ಸೋಮಲಿಂಗೇಶ್ವರ ದೇವಾಲಯದಲ್ಲಿ
ಬಸವಣ್ಣನ ಮೂರ್ತಿ, ಮುಕ್ಕುಂದಿ



ಉಡೇದ ಶರಣಪ್ಪನವರ ಹೊಲದಲ್ಲಿರುವ ನಂದಿಶಿಲ್ಪ, ಮುಕ್ಕುಂದಿ




ವೀರಭದ್ರ ದೇವಸ್ಥಾನದ
ಗರ್ಭಗೃಹದಲ್ಲಿರುವ, ವೀರಭದ್ರೇಶ್ವರ
ಮೂರ್ತಿ, ಮುಕ್ಕುಂದಿ



ಕೋಟೆಯ ಪ್ರವೇಶದ್ವಾರ, ಮುಕ್ಕುಂದಿ



ಕೋಟೆಯ ಬಲಭಾಗದ ಒಂದು ನೋಟ, ಮುಕ್ಕುಂದಿ



ಕೋಟೆಯ ಹಿಂಭಾಗದ ಪ್ರವೇಶದ್ವಾರ (ಉತ್ತರ ಭಾಗ), ಮುಕ್ಕುಂದಿ




ವಿಜಯನಗರ ಕಾಲದ ಆಣೆಕಟ್ಟು, ಮುಕ್ಕುಂದಿ



ಏತ ನೀರಾವರಿಗಾಗಿ ಬಳಕೆಯ ನೀರಿನ ನೋಟ, ಮುಕ್ಕುಂದಿ

ತಳವಿನ್ಯಾಸಗಳು

ಮುರಹರಿ ದೇವಸ್ಥಾನದ ತಳವಿನ್ಯಾಸ




೧. ಗರ್ಭಗೃಹ

೨. ಪ್ರಣಾಳಿಕೆ

೩. ಸಭಾಮಂಟಪ

೪. ಪ್ರವೇಶದ್ವಾರ

ಸೋಮಲಿಂಗೇಶ್ವರ ದೇವಸ್ಥಾನದ ತಳವಿನ್ಯಾಸ



೧. ಗರ್ಭಗೃಹ


೨. ಅಂತರಾಳ

೩. ಸಭಾಮಂಟಪ

೪. ಪ್ರವೇಶದ್ವಾರ

▬ ಕಂಬಗಳು

ಮುಕ್ಕುಂದಿ ಕೋಟೆ



೧. ಗಂಗಮ್ಮ ಅಗಸೆ

೩. ಕಾವಲುಗಾರ ಮಂಟಪ

೫. ವೀರಭದ್ರಗುಡಿ ಅಗಸೆ

೭. ಮುರಹರಿ ದೇವಸ್ಥಾನ

೨. ಕೆಳಗಡೆ ಅಗಸೆ

೪. ಮೇಲುಗಡೆ ಅಗಸೆ

೬. ಸೋಮಲಿಂಗೇಶ್ವರ ದೇವಸ್ಥಾನ